ಗುರುವಾರ, ನವೆಂಬರ್ 16, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 316 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸ್ಪರ್ಧಾ ವಾಣಿ
ಖನಿಜ ಭದ್ರತಾ ಪಾಲುದಾರಿಕೆಯ ಒಪ್ಪಂದವು ಖನಿಜಗಳ ಉತ್ಪಾದನೆ, ಸಂಸ್ಕರಣೆ, ಮರುಬಳಕೆಯನ್ನು ಉತ್ತೇಜಿಸುತ್ತದೆ. ಭಾರತವು ಈ ಪಾಲುದಾರಿಕೆಯ ಭಾಗವಾಗಿದೆ.

ಆಳ–ಅಗಲ ಮಹಾ ಗಡಿಪಾರು

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,676	19,675	₹62,300 (ಬೆಂಗಳೂರು)	₹73,700 (ಬೆಂಗಳೂರು)	83.09



ಆಶ್ರಯ ಪಡೆದಿದ್ದ ನವಜಾತ ಶಿಶುಗಳು, ಸಾವಿರಾರು ರೋಗಿಗಳ ಜೀವಕ್ಕೆ ಅಪಾಯ

ಆಸ್ಪತ್ರೆಗೆ ನುಗ್ಗಿದ ಇಸ್ರೇಲ್ ಸೇನೆ

ಜೆರುಸಲೇಂ (ಎಪಿ/ಎಎಫ್‌ಪಿ): ಗಾಜಾ ಪಟ್ಟಿಯ ಅತಿದೊಡ್ಡ ಆಸ್ಪತ್ರೆಯಾದ ಅಲ್ ಶಿಫಾದ ನೆಲಮಾಳಿಗೆಯಲ್ಲಿ ಹಮಾಸ್ ಬಂಡುಕೋರರು ಕಮಾಂಡೊ ನೆಲೆ ನಿರ್ಮಿಸಿಕೊಂಡಿದ್ದಾರೆ ಎಂದು ಆರೋಪಿಸಿರುವ ಇಸ್ರೇಲ್ ಸೇನೆಯು, ಬುಧವಾರ ಆಸ್ಪತ್ರೆಯ ಮೇಲೆ ದಾಳಿ ನಡೆಸಿದೆ.

ಸೂಕ್ತ ಚಿಕಿತ್ಸಾ ಸೌಲಭ್ಯ ಇಲ್ಲದೆ ಪರದಾಡುತ್ತಿರುವ ರೋಗಿಗಳು ಸೇರಿದಂತೆ ಆಸ್ಪತ್ರೆಯೊಳಗೆ ಆಶ್ರಯ ಪಡೆದಿರುವ 2,300ಕ್ಕೂ ಹೆಚ್ಚು ಪ್ಯಾಲೆಸ್ಟೀನ್ ಜನರಲ್ಲಿ ಇಸ್ರೇಲ್ ಯೋಧರ ಪ್ರವೇಶದಿಂದಾಗಿ ಆತಂಕ ಮಡುಗಟ್ಟಿದೆ. ನವಜಾತ ಶಿಶುಗಳನ್ನೂ ಈ ಆಸ್ಪತ್ರೆಯಲ್ಲಿ ಆರೈಕೆ ಮಾಡಲಾಗುತ್ತಿದೆ.

ಆಸ್ಪತ್ರೆಯಲ್ಲಿ ಸ್ಮಶಾನ ಸದೃಶ ವಾತಾವರಣ ನಿರ್ಮಾಣವಾಗಿದೆ. ಭೀಕರ ಹೋರಾಟದಿಂದಾಗಿ ಜನರು ಸುರಕ್ಷಿತವಾಗಿ ಹೊರಗೆ ಬರಲು ಸಾಧ್ಯವಾಗುತ್ತಿಲ್ಲ ಎಂದು ವಿಶ್ವಸಂಸ್ಥೆ ಹೇಳಿದೆ.

'ಇಸ್ರೇಲ್‌ನ ಯುದ್ಧ ಟ್ಯಾಂಕರ್‌ಗಳು ಆಸ್ಪತ್ರೆಯ ಆವರಣ ಪ್ರವೇಶಿಸಿವೆ.

7ನೇ ಪುಟ ನೋಡಿ

40 ಜನರ ಸಾವು

ಇಂಧನ ಪೂರೈಕೆ ಇಲ್ಲದೆ ಆಸ್ಪತ್ರೆಯ ತುರ್ತು ಜನರೇಟರ್ ಸ್ಥಗಿತಗೊಂಡಿದೆ. ಹಾಗಾಗಿ, ಶನಿವಾರದಿಂದ ಇಲ್ಲಿಯವರೆಗೆ ಮೂರು ಶಿಶುಗಳು ಸೇರಿದಂತೆ 40 ರೋಗಿಗಳು ಮೃತಪಟ್ಟಿದ್ದಾರೆ. ಇನ್‌ಕ್ಯೂಬೇಟರ್‌ನಲ್ಲಿರುವ 36 ಶಿಶುಗಳು ಅಪಾಯಕ್ಕೆ ಸಿಲುಕಿವೆ ಎಂದು ಗಾಜಾ ಪಟ್ಟಿಯ ಆರೋಗ್ಯ ಸಚಿವಾಲಯ ಹೇಳಿದೆ.

'ಆಸ್ಪತ್ರೆಯೊಳಗಿನ ಪರಿಸ್ಥಿತಿ ಚಿಂತಾಜನಕವಾಗಿದೆ. ಅರಿವಳಿಕೆ ಚುಚ್ಚುಮದ್ದು ಇಲ್ಲದೆ ರೋಗಿಗಳು ಚಿಕಿತ್ಸೆ ಪಡೆಯುವಂತಹ ಸ್ಥಿತಿ ಸೃಷ್ಟಿಯಾಗಿದೆ. ಕುಡಿಯುವ ನೀರು ಹಾಗೂ ಆಹಾರ ಪೂರೈಕೆ ಇಲ್ಲ. ಆಸ್ಪತ್ರೆಯ ಕಾರಿಡಾರ್‌ನಲ್ಲಿಯೇ ಶವಗಳನ್ನು ಹಾಕಲಾಗಿದ್ದು, ದುರ್ನಾತ ಬೀರುತ್ತಿವೆ' ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ.

'ಶವಾಗಾರಗಳಲ್ಲಿ ವಿದ್ಯುತ್ ಪೂರೈಕೆ ಇಲ್ಲ. ಹಾಗಾಗಿ, ಆಸ್ಪತ್ರೆಯ ಸಂಕೀರ್ಣದಲ್ಲಿಯೇ ಶವಗಳನ್ನು ಇಡಲಾಗಿದೆ' ಎಂದು ಅಲ್ ಶಿಫಾ ಆಸ್ಪತ್ರೆಯ ನಿರ್ದೇಶಕ ಮೊಹಮ್ಮದ್ ಅಬು ಸಲ್ಮಿಯಾ ಹೇಳಿದ್ದಾರೆ.

ಬಂಡುಕೋರರ ನೆಲೆ ಪತ್ತೆ: ಇಸ್ರೇಲ್

ಜೆರುಸಲೇಂ (ರಾಯಿಟರ್ಸ್): 'ಅಲ್ ಶಿಫಾ ಆಸ್ಪತ್ರೆಯಲ್ಲಿ ಹಮಾಸ್ ಬಂಡುಕೋರರ ನೆಲೆ ಹಾಗೂ ಶಸ್ತ್ರಾಸ್ತ್ರಗಳನ್ನು ಪತ್ತೆಹಚ್ಚಲಾಗಿದೆ' ಎಂದು ಇಸ್ರೇಲ್‌ನ ಹಿರಿಯ ಮಿಲಿಟರಿ ಅಧಿಕಾರಿಯೊಬ್ಬರು ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಆಸ್ಪತ್ರೆಯ ನಿರ್ದಿಷ್ಟ ಪ್ರದೇಶದಲ್ಲಷ್ಟೇ ಕಾರ್ಯಾಚರಣೆ ನಡೆಸಲಾಗಿದೆ. ಯೋಧರು ಆಸ್ಪತ್ರೆಯೊಳಗೆ ಪ್ರವೇಶಿಸಿದ್ದಾರೆ. ಅಲ್ಲಿ ಯಾವುದೇ ಕಾದಾಟ ನಡೆದಿಲ್ಲ. ವೈದ್ಯಕೀಯ ಸಿಬ್ಬಂದಿ, ರೋಗಿಗಳ ನಡುವೆ ಯೋಧರ ತಿಕ್ಕಾಟ ನಡೆದಿಲ್ಲ' ಎಂದು ಹೇಳಿದ್ದಾರೆ.

'ಬಂಡುಕೋರರು ಶಿಫಾವನ್ನು ತಮ್ಮ ಉಗ್ರ ಚಟುವಟಿಕೆಯ ಕೇಂದ್ರ ನೆಲೆಯಾಗಿ ಬಳಸಿಕೊಳ್ಳುತ್ತಿದ್ದಾರೆ. ಈ ಬಗ್ಗೆ ನಮಗೆ ಸೂಕ್ತ ಪುರಾವೆಗಳು ದೊರೆತಿವೆ' ಎಂದು ಹೇಳಿದ ಅವರು ಹೆಸರು ಬಹಿರಂಗಪಡಿಸಿಲ್ಲ.

ಆಸ್ಪತ್ರೆಯ ಯಾವ ಸ್ಥಳದಲ್ಲಿ ಯೋಧರು ಶೋಧ ನಡೆಸಿದ್ದಾರೆ ಹಾಗೂ ಏನನ್ನು ವಶಪಡಿಸಿಕೊಳ್ಳಲಾಗಿದೆ ಎಂಬ ಬಗ್ಗೆ ಅವರು ಖಚಿತವಾಗಿ ಹೇಳಲಿಲ್ಲ. 'ಆದರೆ, ಸೂಕ್ತ ಸಂದರ್ಭದಲ್ಲಿ ಪುರಾವೆಗಳನ್ನು ಬಹಿರಂಗಪಡಿಸಲಾಗುವುದು' ಎಂದು ಹೇಳಿದ್ದಾರೆ.


ಆಸ್ಪತ್ರೆಯ ಒಳಗೆ ಯೋಧರು ಪ್ರವೇಶಿಸುವ ವೇಳೆ ಹೊರಭಾಗದಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಹಮಾಸ್‌ನ ನಾಲ್ವರು ಬಂಡುಕೋರರು ಮೃತಪಟ್ಟಿದ್ದಾರೆ ಎಂದು ತಿಳಿಸಿದ್ದಾರೆ.

> ಇಸ್ರೇಲ್ ದಾಳಿಯಿಂದ ನನಗೆ ಗಾಬರಿಯಾಗಿದೆ. ಆಸ್ಪತ್ರೆಯೊಳಗಿರುವ ಜನರ ರಕ್ಷಣೆಗೆ ತೊಂದರೆಯಾಗಿದೆ
>
> **ಮಾರ್ಟಿನ್ ಗ್ರಿಫಿತ್ಸ್**, ಮುಖ್ಯಸ್ಥ, ವಿಶ್ವಸಂಸ್ಥೆಯ ನೆರವು ವಿಭಾಗ

ಫೈನಲ್‌ಗೆ ಭಾರತ

ಫಿಫ್ಟಿ–50 ಕ್ರಿಕೆಟ್:

ಶತಕಗಳ 'ಕಿಂಗ್' ಕೊಹ್ಲಿ



ಮುಂಬೈ: ಭಾರತದ ವಿರಾಟ್ ಕೊಹ್ಲಿ ಅವರು ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ನಲ್ಲಿ 50 ಶತಕಗಳನ್ನು ದಾಖಲಿಸಿದ ಮೊದಲ ಬ್ಯಾಟರ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ವಾಂಖೆಡೆ ಕ್ರೀಡಾಂಗಣದಲ್ಲಿ ಬುಧವಾರ ನಡೆದ ವಿಶ್ವಕಪ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಅವರು ಈ ಸಾಧನೆ ಮಾಡಿದರು. ಈ ಹಾದಿಯಲ್ಲಿ ಸಚಿನ್ ತೆಂಡೂಲ್ಕರ್ ದಾಖಲೆ ಮೀರಿದರು. ವಿರಾಟ್ ಶತಕ ಪೂರೈಸಿದಾಗ ಗಣ್ಯರ ಗ್ಯಾಲರಿಯಲ್ಲಿದ್ದ ಸಚಿನ್ ಎದ್ದು ನಿಂತು ಚಪ್ಪಾಳೆ ತಟ್ಟಿ ಅಭಿನಂದಿಸಿದರು. ಈ ಪಂದ್ಯ ಗೆದ್ದ ಭಾರತ ತಂಡವು ಫೈನಲ್ ಪ್ರವೇಶಿಸಿದೆ.

117 ರನ್
113 ಎಸೆತ
9 ಬೌಂಡರಿ
2 ಸಿಕ್ಸರ್

50* ವಿರಾಟ್	49 ಸಚಿನ್
279 ಇನಿಂಗ್ಸ್	452 ಇನಿಂಗ್ಸ್

ವಿವರ ಪುಟ 13



51
ರೋಹಿತ್ ಶರ್ಮಾ ವಿಶ್ವಕಪ್ ಕ್ರಿಕೆಟ್‌ನಲ್ಲಿ ಗಳಿಸಿದ ಸಿಕ್ಸರ್‌ಗಳು. ವೆಸ್ಟ್ ಇಂಡೀಸ್‌ನ ಕ್ರಿಸ್ ಗೇಲ್ (49) ದಾಖಲೆಯನ್ನು ಅವರು ಮುರಿದರು.

ಫಲಿತಾಂಶ: ಭಾರತಕ್ಕೆ 70 ರನ್‌ಗಳ ಜಯ

ಮೊಹಮ್ಮದ್ ಶಮಿಗೆ 7 ವಿಕೆಟ್

ಕ್ರಿಕೆಟ್ ವಿಶ್ವಕಪ್ ಭಾರತ 2023

4 ಕ್ಕೆ 397 50 ಓವರ್ ಭಾರತ

327 48.5 ಓವರ್‌ಗಳಲ್ಲಿ ನ್ಯೂಜಿಲೆಂಡ್

ಚಿನಕುರಳಿ

ಪ್ರಕಾಶ್ ಶೆಟ್ಟಿ



ಬಸ್ ಕಣಿವೆಗೆ ಬಿದ್ದು 38 ಸಾವು

ಪ್ರಜಾವಾಣಿ ವಾರ್ತೆ

ದೋಡಾ (ಜಮ್ಮು–ಕಾಶ್ಮೀರ): ದೋಡಾ ಜಿಲ್ಲೆಯ ಬಟೋತ್–ಕಿಸ್ತವಾರ್ ರಾಷ್ಟ್ರೀಯ ಹೆದ್ದಾರಿಯಲ್ಲಿ ಬುಧವಾರ ಬಸ್‌ವೊಂದು 300 ಅಡಿ ಆಳದ ಕಣಿವೆಗೆ ಬಿದ್ದ ಪರಿಣಾಮ ಕನಿಷ್ಠ 38 ಮಂದಿ ಮೃತಪಟ್ಟಿದ್ದು, 17 ಜನರು ಗಾಯಗೊಂಡಿದ್ದಾರೆ. ಬಸ್‌ನಲ್ಲಿ 55 ಪ್ರಯಾಣಿಕರಿದ್ದರು.

ರಾಷ್ಟ್ರೀಯ ಹೆದ್ದಾರಿಯ ತ್ರುಂಗಲ್–ಅಸ್ಸಾರ್ ಬಳಿ ಬಸ್ ನಿಯಂತ್ರಣ ತಪ್ಪಿ ಕಣಿವೆಗೆ ಬಿದ್ದಿದೆ. ಗಾಯಗೊಂಡವರನ್ನು ಸಮೀಪದ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ ಎಂದು ಜಮ್ಮು ಜಿಲ್ಲಾಧಿಕಾರಿ ರಮೇಶ್ ಕುಮಾರ್ ತಿಳಿಸಿದ್ದಾರೆ.



ಜಮ್ಮು–ಕಾಶ್ಮೀರದ ದೋಡಾ ಜಿಲ್ಲೆಯಲ್ಲಿ ಕಣಿವೆಗೆ ಬುಧವಾರ ಬಸ್ ಬಿದ್ದಿದ್ದು ರಕ್ಷಣಾ ಕಾರ್ಯ ಕೈಗೊಳ್ಳಲಾಯಿತು –ಪಿಟಿಐ ಚಿತ್ರ

ಪರಿಹಾರ: ಅಪಘಾತ ಕುರಿತು ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಶೋಕ ವ್ಯಕ್ತಪಡಿಸಿದ್ದಾರೆ. ಮೃತರ ಕುಟುಂಬಕ್ಕೆ ತಲಾ ₹2 ಲಕ್ಷ ಹಾಗೂ ಗಾಯಗೊಂಡವರಿಗೆ ತಲಾ ₹50 ಸಾವಿರ ಪರಿಹಾರ ನೀಡುವುದಾಗಿ ಪ್ರಧಾನಿ ಮೋದಿ ಘೋಷಿಸಿದ್ದಾರೆ.

ಅಪಘಾತ ಹೆಚ್ಚು: ಗುಡ್ಡಗಾಡು ಪ್ರದೇಶಗಳಿಂದ ಕೂಡಿರುವ ದೋಡಾ–ಕಿಸ್ತವಾರ್ ಪ್ರದೇಶದಲ್ಲಿ (ಚೆನಾಬ್ ಕಣಿವೆ) ಪದೇಪದೇ ಅಪಘಾತಗಳು ಸಂಭವಿಸುವುದಕ್ಕೆ ಕಾರಣ ಗುರುತಿಸುವುದಕ್ಕಾಗಿ ತಜ್ಞರ ಸಮಿತಿಯನ್ನು ರಚಿಸುವಂತೆ ಜಮ್ಮು–ಕಾಶ್ಮೀರ ಹೈಕೋರ್ಟ್ ಕಳೆದ ವರ್ಷ ಡಿಸೆಂಬರ್‌ನಲ್ಲಿ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು.

ಹೈಕೋರ್ಟ್ ಆದೇಶದ ಹೊರತಾಗಿಯೂ, ಈ ಕಣಿವೆಯಲ್ಲಿ ಅಪಘಾತಗಳನ್ನು ತಡೆಯುವುದಕ್ಕಾಗಿ ಸೂಕ್ತ ಕ್ರಮಗಳನ್ನು ಕೈಗೊಳ್ಳುವಲ್ಲಿ ಸರ್ಕಾರ ವಿಫಲವಾಗಿದೆ ಎಂಬ ಆರೋಪಗಳು ಕೇಳಿಬರುತ್ತಿವೆ.

ಒಳ ಪುಟಗಳು



ಬಾಕಿ ವೇತನಕ್ಕಾಗಿ 88ರ ವಯಸ್ಸಿನಲ್ಲೂ ಹೋರಾಟ!

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಂದೆಯ ಬಾಕಿ ವೇತನ ಪಡೆಯಲು 88 ವರ್ಷದ ವೃದ್ಧರೊಬ್ಬರು ದಶಕಗಳ ಕಾಲ ಕಾನೂನು ಹೋರಾಟ ನಡೆಸುವಂತೆ ಮಾಡಿರುವ ಅಧಿಕಾರಿಶಾಹಿಯ ನಡೆ ಸಮರ್ಥನೀಯವಲ್ಲ. ಸರ್ಕಾರಿ ಅಧಿಕಾರಿಗಳು ಔಪಚಾರಿಕ ನಿಯಮಗಳಿಗೆ ಜೋತು ಬಿದ್ದು ಸಂವೇದನಾಶೂನ್ಯರಾಗಿ ವರ್ತಿಸುವಂತಾಗಬಾರದು' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

'ನನ್ನ ತಂದೆಯ ಬಾಕಿ ವೇತನ ಬಿಡುಗಡೆಗೆ ನಿರ್ದೇಶಿಸಬೇಕು' ಎಂದು ಕೋರಿ ರಾಜಾಜಿನಗರದ 88 ವರ್ಷದ ಟಿ.ಎಸ್.ರಾಜನ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪಿ.ಎಸ್.ದಿನೇಶ್‌ಕುಮಾರ್ ಮತ್ತು ನ್ಯಾಯಮೂರ್ತಿ ಟಿ.ಜಿ.ಶಿವಶಂಕರೇಗೌಡ ಅವರಿದ್ದ ವಿಭಾಗೀಯ ನ್ಯಾಯಪೀಠವು, 'ತಂದೆಗೆ ದೊರೆಯಬೇಕಿದ್ದ ನ್ಯಾಯಕ್ಕಾಗಿ, ವಯಸ್ಸಾದ ಪುತ್ರ ಕೋರ್ಟ್–ಕಚೇರಿ ಅಲೆಯುವಂತಾಗಿ ಬಂದದ್ದು ದುರದೃಷ್ಟಕರ ಸಂಗತಿ' ಎಂದು ಬೇಸರ ವ್ಯಕ್ತಪಡಿಸಿದೆ.

'ಅನುಕಂಪದ ಭತ್ಯೆ ಮಂಜೂರು ಮಾಡದ ಕಾರಣ ಮುಂದುಮಾಡಿ ಅರ್ಜಿದಾರರ ತಂದೆ ಪರಿಹಾರ ಪಡೆಯಲು ಅರ್ಹರಲ್ಲ ಎಂಬ ನಿಲುವು ಪ್ರಕಟಿಸಿದ ಸರ್ಕಾರದ ನಡೆ ಸಮರ್ಥನೀಯವಲ್ಲ. 1979ರಿಂದ 1990ರ ಅವಧಿಯಲ್ಲಿ ಗ್ರಾಮ ಅಧಿಕಾರಿಯಾಗಿ (ಪಟೇಲ್) ಸೇವೆ ಸಲ್ಲಿಸಿದ್ದ ಅರ್ಜಿದಾರ ರಾಜನ್ ಅವರ ತಂದೆಗೆ ನೀಡಬೇಕಾಗಿರುವ ₹ 37 ಸಾವಿರ ಬಾಕಿ ವೇತನ ಬಿಡುಗಡೆ ಮಾಡಿ' ಎಂದು ರಾಜ್ಯ ಸರ್ಕಾರಕ್ಕೆ ತಾಕೀತು ಮಾಡಿದೆ. ಅರ್ಜಿದಾರರ ಪರ ಹಿರಿಯ ವಕೀಲ ಆರ್.ಗುರುರಾಜ್ ವಾದ ಮಂಡಿಸಿದ್ದರು. ವಕೀಲ ವಿಘ್ನೇಶ್ವರ ಎಸ್. ಶಾಸ್ತ್ರಿ ವಕಾಲತ್ತು ವಹಿಸಿದ್ದರು.

ವಿಜಯೇಂದ್ರ ಅಧಿಕಾರ ಸ್ವೀಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹೀನಾಯ ಸೋಲಿನ ಬಳಿಕ ಕಳಾಹೀನ-ವಾಗಿದ್ದ ಬಿಜೆಪಿಯಲ್ಲಿ ಬುಧವಾರ ಹೊಸ 'ಪರ್ವ' ಆರಂಭಗೊಂಡಿದೆ.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾಗಿ ಬಿ.ವೈ. ವಿಜಯೇಂದ್ರ ಪದಗ್ರಹಣದ ವೇಳೆಯಲ್ಲಿ ಕಾರ್ಯಕರ್ತರು, ಶಾಸಕರು ಮತ್ತು ಸಂಸದರಲ್ಲಿ ಉತ್ಸಾಹ ಮುಗಿಲು ಮುಟ್ಟಿತ್ತು.

ಪಕ್ಷದ ರಾಜ್ಯ ಘಟಕದ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಬೆಳಿಗ್ಗೆ ಪಕ್ಷದ ಧ್ವಜವನ್ನು ಹಸ್ತಾಂತರ ಮಾಡುವ ಮೂಲಕ ನಿರ್ಗಮಿತ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ವಿಜಯೇಂದ್ರ ಅವರಿಗೆ ಅಧ್ಯಕ್ಷ ಸ್ಥಾನದ ಹೊಣೆಯನ್ನು ಹಸ್ತಾಂತರಿಸಿದರು.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ಹಿರಿಯ ನಾಯಕರಾದ ಡಿ.ಎಚ್. ಶಂಕರಮೂರ್ತಿ, ರಾಮಚಂದ್ರಗೌಡ, ಕೆ.ಎಸ್. ಈಶ್ವರಪ್ಪ, ಶಾಸಕ ಬಸವರಾಜ ಬೊಮ್ಮಾಯಿ, ಮಾಜಿ ಸಚಿವ ಗೋವಿಂದ ಕಾರಜೋಳ ಸೇರಿ ಬಿಜೆಪಿ ಪ್ರಮುಖ ನಾಯಕರು ಈ ಕ್ಷಣಗಳಿಗೆ ಸಾಕ್ಷಿಯಾದರು.

ಕಚೇರಿ ಆವರಣದಲ್ಲಿ ಪೂರ್ಣ ಕುಂಭ ಸ್ವಾಗತ ಮತ್ತು ಕಲಾ ತಂಡಗಳ ಪ್ರದರ್ಶನ ಸಂಭ್ರಮದ ವಾತಾವರಣಕ್ಕೆ ಮತ್ತಷ್ಟು ಮೆರುಗು ನೀಡಿತ್ತು. ಅಧಿಕಾರ ಸ್ವೀಕಾರಕ್ಕೂ ಮುನ್ನ ಪಕ್ಷದ ಕಚೇರಿಯಲ್ಲಿ ನಡೆದ ಹೋಮದಲ್ಲಿ ವಿಜಯೇಂದ್ರ ಮತ್ತು ನಳಿನ್‌ಕುಮಾರ್ ಕಟೀಲ್ ಅವರು ಭಾಗವಹಿಸಿದ್ದರು.



ಬಿಜೆಪಿ ರಾಜ್ಯ ಘಟಕದ ನೂತನ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ನಳಿನ್‌ಕುಮಾರ್ ಕಟೀಲ್ ಪಕ್ಷದ ಧ್ವಜ ನೀಡಿ ಅಧಿಕಾರ ಹಸ್ತಾಂತರಿಸಿದರು. ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಇದ್ದರು

ಇನ್ನಷ್ಟು ಸುದ್ದಿಗಳು 10

ವಿದ್ಯುತ್ ಕಳವು ಮಾಡಿದ ಆರೋಪ

ಕುಮಾರಸ್ವಾಮಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆ.ಪಿ. ನಗರದ ಮೂರನೇ ಹಂತದಲ್ಲಿರುವ ತಮ್ಮ ಮನೆಗೆ ದೀಪಾವಳಿ ಹಬ್ಬದ ಸಂದರ್ಭದಲ್ಲಿ ದೀಪಾಲಂಕಾರ ಮಾಡಲು ವಿದ್ಯುತ್ ಕಳವು ಮಾಡಿದ ಆರೋಪದ ಮೇಲೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

ಕುಮಾರಸ್ವಾಮಿ ಅವರ ಮನೆಗೆ ದೀಪಾಲಂಕಾರ ಮಾಡಲು ನೇರವಾಗಿ ವಿದ್ಯುತ್ ಕಂಬದಿಂದ ಸಂಪರ್ಕ ಕಲ್ಪಿಸಿರುವುದನ್ನು ಪತ್ತೆ ಹಚ್ಚಿದ್ದ ಕೆಲವರು, ಸಾಮಾಜಿಕ ಮಾಧ್ಯಮಗಳ ಮೂಲಕ ಈ ವಿಷಯ ಬಹಿರಂಗಪಡಿಸಿದ್ದರು. ಬೆಸ್ಕಾಂನ ಸಹಾಯಕ ಕಾರ್ಯನಿರ್ವಾ-ಹಕ ಎಂಜಿನಿಯರ್ ವಿ. ಪ್ರಶಾಂತ್ ಕುಮಾರ್ ಈ ಕುರಿತು ಬೆಸ್ಕಾಂ ಜಾಗೃತ ದಳದ ಬೆಂಗಳೂರು ವೃತ್ತದ ವ್ಯಾಪ್ತಿಯ ಜಯನಗರ ಠಾಣೆಗೆ ದೂರು ಸಲ್ಲಿಸಿದ್ದರು.

'ವಿದ್ಯುಚ್ಛಕ್ತಿ ಕಾಯ್ದೆ–2003ರ ಸೆಕ್ಷನ್ 135ರ ಅಡಿಯಲ್ಲಿ ಕುಮಾರಸ್ವಾಮಿ ವಿರುದ್ಧ ಎಫ್‌ಐಆರ್ ದಾಖಲು ಮಾಡಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಅವರಿಗೆ ನೋಟಿಸ್ ಜಾರಿ ಮಾಡಲಾಗಿದೆ' ಎಂದು ಮೂಲಗಳು ತಿಳಿಸಿವೆ. ಬೆಸ್ಕಾಂ ಜಾಗೃತ ದಳದ ಡಿವೈಎಸ್‌ಪಿ ಅನುಷಾ ಭೇಟಿ ಪರಿಶೀಲಿಸಿದ್ದರು. ಇನ್‌ಸ್ಪೆಕ್ಟರ್ ಎಸ್. ಪ್ರದೀಪ್ ನೇತೃತ್ವದಲ್ಲಿ ತನಿಖೆ ನಡೆಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ವಿದ್ಯುತ್ ಮಾರ್ಗದಿಂದ ವಿದ್ಯುತ್ ಕಳವು ಮಾಡಿರುವುದು ಸಾಬೀತಾದರೆ ಮೂರು ವರ್ಷ ಜೈಲು ಅಥವಾ ದಂಡ ವಿಧಿಸಬಹುದಾಗಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಜೆಡಿಎಸ್ ಕಚೇರಿಗೆ ಭಿತ್ತಿಪತ್ರ

ಎಚ್.ಡಿ. ಕುಮಾರಸ್ವಾಮಿ ಅವರ ಭಾವಚಿತ್ರದೊಂದಿಗೆ 'ವಿದ್ಯುತ್ ಕಳ್ಳ ಕುಮಾರಸ್ವಾಮಿ' ಎಂಬ ಬರಹವುಳ್ಳ ಭಿತ್ತಿಪತ್ರವೊಂದನ್ನು ನಗರದ ಶೇಷಾದ್ರಿಪುರದಲ್ಲಿರುವ ಜೆಡಿಎಸ್ ಪ್ರಧಾನ ಕಚೇರಿಯ ಗೋಡೆಗೆ ಅಂಟಿಸಿರುವುದು ಬುಧವಾರ ಪತ್ತೆಯಾಗಿದೆ.

ಈ ಕುರಿತು ತಮ್ಮ 'ಎಕ್ಸ್' ಖಾತೆಯಲ್ಲಿ ತೀವ್ರ ವಾಗ್ದಾಳಿ ನಡೆಸಿರುವ ಕುಮಾರಸ್ವಾಮಿ, 'ಕಾಂಗ್ರೆಸ್ ಪಕ್ಷವು ನಪುಂಸಕನಂತೆ ವರ್ತಿಸುತ್ತಿದೆ. ಕಳ್ಳತನದಿಂದ ಭಿತ್ತಿಪತ್ರ ಅಂಟಿಸುವ ಕೆಲಸ ಮಾಡುತ್ತಿದೆ' ಎಂದಿದ್ದಾರೆ.

'ಜೆಡಿಎಸ್ ಹತಾಶೆಯಿಂದ ಈ ರೀತಿ ಟೀಕಿಸುತ್ತಿದೆ. ಇದು ಸರಿಯಲ್ಲ' ಎಂದು ಡಿ.ಕೆ. ಶಿವಕುಮಾರ್ ಪ್ರತಿಕ್ರಿಯಿಸಿದರು.



> ನಾನು ದೇಶ ಲೂಟಿ ಮಾಡಿಲ್ಲ. ದೊಡ್ಡ ಅಪರಾಧವನ್ನೂ ಮಾಡಿಲ್ಲ. ನನ್ನ ಬಗ್ಗೆ ಮಾತನಾಡುವವರು ಏನೇನು ಮಾಡಿದ್ದಾರೆ ಎನ್ನುವುದು ಗೊತ್ತಿದೆ
>
> **ಎಚ್.ಡಿ. ಕುಮಾರಸ್ವಾಮಿ**
> ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಜೆಡಿಎಸ್– ಕಾಂಗ್ರೆಸ್ ಮಧ್ಯೆ ವಾಕ್ಸಮರ 10

ವೈದ್ಯಕೀಯ ಸೀಟು ಮಿತಿ ನಿರ್ಧಾರಕ್ಕೆ ತಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದಕ್ಷಿಣ ರಾಜ್ಯಗಳಲ್ಲಿರುವ ವೈದ್ಯಕೀಯ ಕಾಲೇಜುಗಳಲ್ಲಿ ಹೊಸ ವೈದ್ಯಕೀಯ ಸೀಟುಗಳ ಸಂಖ್ಯೆ ಮೇಲೆ ಮಿತಿ ಹೇರುವ ಕುರಿತ ತನ್ನ ನಿರ್ಧಾರವನ್ನು ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ಬುಧವಾರ ತಡೆಹಿಡಿದಿದೆ. ಹೀಗಾಗಿ, ಕರ್ನಾಟಕ, ತಮಿಳುನಾಡು ಮತ್ತಿತರ ರಾಜ್ಯಗಳಿಗೆ ಮುಂದಿನ ಶೈಕ್ಷಣಿಕ ವರ್ಷದಲ್ಲಿ ವೈದ್ಯಕೀಯ ಸೀಟುಗಳ ಸಂಖ್ಯೆಯನ್ನು ಹೆಚ್ಚಿಸುವ ಆಯ್ಕೆ ಲಭಿಸಿದಂತಾಗಿದೆ.

'ಪ್ರತಿ 10 ಲಕ್ಷ ಜನಸಂಖ್ಯೆಗೆ 100 ಎಂಬಿಬಿಎಸ್ ಸೀಟುಗಳು ಇರಬೇಕು ಎಂಬ ತನ್ನ ಈ ಹಿಂದಿನ ನಿರ್ಧಾರವನ್ನು 2025–26ನೇ ಶೈಕ್ಷಣಿಕ ವರ್ಷದಿಂದ ಅನುಷ್ಠಾನಗೊಳಿಸಲಾಗುತ್ತದೆ' ಎಂದು ಆಯೋಗವು ತನ್ನ ಆದೇಶದಲ್ಲಿ ತಿಳಿಸಿದೆ.



ವೈದ್ಯಕೀಯ ಸೀಟುಗಳ ಸಂಖ್ಯೆ ಮೇಲೆ ಮಿತಿ ಹೇರುವ ಆಯೋಗದ ನಿಲುವನ್ನು ಖಂಡಿಸಿ ದಕ್ಷಿಣ ರಾಜ್ಯಗಳಲ್ಲಿ ವ್ಯಾಪಕ ಪ್ರತಿಭಟನೆಗಳು ನಡೆದಿದ್ದವು. ಈ ಹಿನ್ನೆಲೆಯಲ್ಲಿ ಆಯೋಗ ತನ್ನ ನಿರ್ಧಾರವನ್ನು ತಡೆಹಿಡಿದಿದೆ ಎಂದು ಮೂಲಗಳು ಹೇಳಿವೆ.

'ವೈದ್ಯಕೀಯ ಸೀಟುಗಳ ಸಂಖ್ಯೆ ಮೇಲೆ ಮಿತಿ ಹೇರುವ ಎನ್‌ಎಂಸಿಯ ಪ್ರಸ್ತಾವಿತ ನಡೆಯು ರಾಜ್ಯಗಳ ಹಕ್ಕುಗಳ ಉಲ್ಲಂಘನೆ ಯಾಗುತ್ತದೆ ಎಂಬುದಾಗಿ ಆಕ್ರೋಶ ಹೊರಹಾಕಿದ್ದ ದಕ್ಷಿಣದ ರಾಜ್ಯಗಳು, ಈ ಕುರಿತು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದವು. ಈ ಹಿನ್ನೆಲೆಯಲ್ಲಿ ಕೇಂದ್ರ ಮಾಡಿದ್ದ ಮನವಿ ಮೇರೆಗೆ ಆಯೋಗವು ತನ್ನ ನಿರ್ಧಾರವನ್ನು ತಡೆಹಿಡಿದಿದೆ' ಎಂದು ತಿಳಿಸಿವೆ.

ಆಯೋಗದ ಮಿತಿಯ ಪ್ರಕಾರ, ತಮಿಳುನಾಡು ಮತ್ತು ಕರ್ನಾಟಕ ಕ್ರಮವಾಗಿ 7,600 ಹಾಗೂ 6,700 ವೈದ್ಯಕೀಯ ಸೀಟುಗಳನ್ನು ಹೊಂದಬೇಕಿತ್ತು. ಆದರೆ, ಈ ರಾಜ್ಯಗಳಲ್ಲಿ ಕ್ರಮವಾಗಿ 11,600 ಹಾಗೂ 11,695 ಸೀಟುಗಳು ಇವೆ.

ಪ್ರತಿ ಜಿಲ್ಲೆಯಲ್ಲಿ ಕನಿಷ್ಠ ಒಂದು ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸಬೇಕು ಎಂದು ಕರ್ನಾಟಕ ಹಾಗೂ ತಮಿಳುನಾಡು ಯೋಜಿಸಿವೆ. ಆದರೆ, ಆಯೋಗದ ಉದ್ದೇಶಿತ ಪ್ರಸ್ತಾವನೆಯು ಇದಕ್ಕೆ ಅಡ್ಡಿಯಾಗಿತ್ತು.

ಕೆಲವೇ ರಾಜ್ಯಗಳಲ್ಲಿ ವೈದ್ಯಕೀಯ ಕಾಲೇಜುಗಳು ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪನೆಯಾಗುವುದನ್ನು ತಡೆಯುವುದಕ್ಕಾಗಿ ಸೀಟುಗಳ ಸಂಖ್ಯೆ ಮೇಲೆ ಮಿತಿ ಹೇರುವ ತೀರ್ಮಾನವನ್ನು ತೆಗೆದುಕೊಳ್ಳಲಾಗಿತ್ತು ಎಂದು ಆಯೋಗದ ಮೂಲಗಳು ಹೇಳಿವೆ.

ಹಲಸೂರು ಕೆರೆಯಲ್ಲಿ ಸೂರ್ಯ ಆರಾಧನೆಗೆ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ನ.19 ಹಾಗೂ 20ರಂದು ಸೂರ್ಯದೇವರ ಆರಾಧನೆ (ಛತ್ ಪೂಜೆ) ನಡೆಯಲಿದ್ದು, ಬಿಬಿಎಂಪಿ ಹಲಸೂರು ಕೆರೆಯಲ್ಲಿ ಪೂಜೆಗೆ ವ್ಯವಸ್ಥೆ ಕಲ್ಪಿಸಿದೆ.

ಕೆರೆಯ ಉತ್ತರ ದಿಕ್ಕಿನ ಅಣ್ಣಾಸ್ವಾಮಿ ಮೊದಲಿಯಾರ್ ರಸ್ತೆಯ ಮುಖ್ಯದ್ವಾರದ ಮೂಲಕ ಬಂದು ಹಲಸೂರು ಕೆರೆಯ ಕಲ್ಯಾಣಿಯಲ್ಲಿ (ಗಣಪತಿ ವಿಸರ್ಜನಾ ಕಲ್ಯಾಣಿ) ಮಾತ್ರವೇ ಪೂಜೆ ಕೈಗೊಳ್ಳುವಂತೆ ಸೂಚಿಸಲಾಗಿದೆ.

ಪ್ಲಾಸ್ಟಿಕ್ ಪೇಪರ್ ಮುಂತಾದ ವಿಷಯುಕ್ತ ವಸ್ತುಗಳನ್ನು ಕೆರೆಯ ಅಂಗಳಕ್ಕೆ ತರಬಾರದೆಂದು ಸೂಚಿಸಲಾಗಿದೆ. ಹಲಸೂರು ಕೆರೆಯ ಬೇರೆ ದಿಕ್ಕಿನ ದ್ವಾರಗಳು ಮುಚ್ಚಿರುತ್ತವೆ. ಪೂರ್ವ ವಲಯದ ಇನ್ನಾವುದೇ ಸ್ಥಳದಲ್ಲಿ 'ಛತ್ ಪೂಜೆ'ಗೆ ವ್ಯವಸ್ಥೆ ಕಲ್ಪಿಸಿರುವುದಿಲ್ಲ ಎಂದು ವಲಯ ಆಯುಕ್ತೆ ಆರ್. ಸ್ನೇಹಲ್ ತಿಳಿಸಿದ್ದಾರೆ.

ಸಾಹಿತಿ ಕೆ. ಮರುಳಸಿದ್ದಪ್ಪ ಅಭಿನಂದನಾ ಸಮಾರಂಭದಲ್ಲಿ ಸಿದ್ದರಾಮಯ್ಯ ಭರವಸೆ

'ಪುರಭವನದ ಮುಂದೆ ಪ್ರತಿಭಟನೆಗೆ ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಮಾಜ ಮತ್ತು ಸರ್ಕಾರವನ್ನು ಎಚ್ಚರಿಸಲು ಅಭಿವ್ಯಕ್ತಿ ಸ್ವಾತಂತ್ರ್ಯ ಅಗತ್ಯ. ಆದ್ದರಿಂದ ಪುರಭವನದ (ಟೌನ್‌ಹಾಲ್) ಮುಂದೆ ಪ್ರತಿಭಟನೆಗೆ ಅವಕಾಶ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಕೆ.ಎಂ.ಎಸ್. ಅಭಿಮಾನಿಗಳ ಬಳಗ ನಗರದಲ್ಲಿ ಬುಧವಾರ ಹಮ್ಮಿಕೊಂಡ ಅಭಿನಂದನಾ ಸಮಾರಂಭದಲ್ಲಿ ಸಾಹಿತಿ ಕೆ. ಮರುಳಸಿದ್ದಪ್ಪ ಅವರನ್ನು ಸನ್ಮಾನಿಸಿ, ಅಭಿನಂದನಾ ಗ್ರಂಥ 'ಎದೆಯ ದನಿ...' ಬಿಡುಗಡೆ ಮಾಡಿದರು.

ಈ ವೇಳೆ ಸಾಹಿತಿಗಳಾದ ಜಿ. ರಾಮಕೃಷ್ಣ ಹಾಗೂ ಮರುಳಸಿದ್ದಪ್ಪ ಅವರು ಪುರಭವನದ ಮುಂದೆ ಪ್ರತಿಭಟನೆಗೆ ಅವಕಾಶ ಕಲ್ಪಿಸಲು ಕ್ರಮ ಕೈಗೊಳ್ಳುವಂತೆ ಮನವಿ ಮಾಡಿಕೊಂಡರು.

ಈ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಸಿದ್ದರಾಮಯ್ಯ, 'ಜನಪರ ಚಳವಳಿಗಳು ಸಮಾಜಕ್ಕೆ ಅತ್ಯಗತ್ಯ. ಇಂತಹ ಪ್ರತಿಭಟನೆ, ಚಳವಳಿಗಳನ್ನು ನಾನು ಬೆಂಬಲಿಸುತ್ತೇನೆ. ಕೋರ್ಟ್ ಆದೇಶದ ಅನುಸಾರ ಟೌನ್ ಹಾಲ್ ಸೇರಿ ವಿವಿಧ ಸಾರ್ವಜನಿಕ ಸ್ಥಳಗಳಲ್ಲಿ ಪ್ರತಿಭಟನೆಗೆ ಅವಕಾಶ ನಿರಾಕರಿಸಲಾಗುತ್ತಿದೆ. ಈ ಸಂಬಂಧ ಆದಷ್ಟು ಶೀಘ್ರ ಅಡ್ವೋಕೇಟ್ ಜನರಲ್ ಜತೆ ಚರ್ಚಿಸಿ, ಅವಕಾಶ ನೀಡುವ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು' ಎಂದು ಹೇಳಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಕೆ. ಮರುಳಸಿದ್ದಪ್ಪ, 'ಈ ದೇಶ ಹಾಗೂ ಸಮಾಜ ತೀವ್ರ ಅಸಮಾನತೆಯಿಂದ ಕೂಡಿದೆ. ಈ ವೇಳೆ ನ್ಯಾಯ ಕಂಡುಕೊಳ್ಳುವುದು ನಮ್ಮ ಕೈಯಲ್ಲಿ ಇದೆ. ಪ್ಯಾಲೆಸ್ಟೀನ್‌ನಲ್ಲಿ ಚಿಕ್ಕ ಮಕ್ಕಳ ಮೇಲೆ ದಾಳಿ ನಡೆಸಿ, ಕೊಲ್ಲಲಾಗಿದೆ. ನಮ್ಮಲ್ಲಿಯೂ ವಿವಿಧೆಡೆ ಅನೇಕ ದಾಳಿಗಳು ಆಗಾಗ ನಡೆಯುತ್ತಿವೆ. ಇವುಗಳ ವಿರುದ್ಧ ಹೋರಾಡಲು ನಮಗೆ ಇರುವ ಏಕೈಕ ದಾರಿ ಪ್ರತಿಭಟನೆ. ಆದ್ದರಿಂದ ಸಾರ್ವಜನಿಕ ಸ್ಥಳವನ್ನು ಪ್ರತಿಭಟನೆಗೆ ಬಿಟ್ಟುಕೊಡಬೇಕು' ಎಂದು ಆಗ್ರಹಿಸಿದರು.

ಜಿ. ರಾಮಕೃಷ್ಣ, 'ಪ್ರತಿಭಟನೆಗೂ ಅವಕಾಶ ಇರದ ಸಂದರ್ಭದಲ್ಲಿ ನಾವಿದ್ದೇವೆ. ಒಂದು ಕಾಲದಲ್ಲಿ ಎಲ್ಲಿಯೂ ಭೇಟಿ ಆಗದಿದ್ದರೆ ಪುರಭವನದ ಮುಂಭಾಗ ಭೇಟಿಗೆ ಅವಕಾಶ ಸಿಗುತ್ತಿತ್ತು. ಆದರೆ, ಈಗ ಪುರಭವನದ ಕಡೆ ಹೋಗುವುದೇ ಕಷ್ಟವಾಗುತ್ತಿದೆ. ಸ್ವಾತಂತ್ರ್ಯ ಉದ್ಯಾನದಲ್ಲಿಯೂ ಪ್ರತಿಭಟನೆಗೆ ಅಷ್ಟಾಗಿ ಅವಕಾಶವಿಲ್ಲ. ಪ್ರಜಾತಂತ್ರದ ಉಳಿವು, ಚಳವಳಿಗಳಿಗೆ ಪುರಭವನದ ಮುಂದೆ ಪ್ರತಿಭಟನೆಗೆ ಅವಕಾಶ ಮಾಡಿಕೊಡಬೇಕು' ಎಂದು ಒತ್ತಾಯಿಸಿದರು.



ಕಾರ್ಯಕ್ರಮದಲ್ಲಿ ಮರುಳಸಿದ್ದಪ್ಪ ಮತ್ತು ಜಯಂತಿ ಮರುಳಸಿದ್ದಪ್ಪ ದಂಪತಿಯನ್ನು ಸಿದ್ದರಾಮಯ್ಯ ಅಭಿನಂದಿಸಿದರು. ಜಿ. ರಾಮಕೃಷ್ಣ ಇದ್ದಾರೆ –ಪ್ರಜಾವಾಣಿ ಚಿತ್ರ


ಸುದ್ದಿ 2 ನಿಮಿಷ

ಆದಾಯ ಮೀರಿದ ಆಸ್ತಿ: ಡಿಕೆಶಿ ಅರ್ಜಿ ವಿಚಾರಣೆ 22ಕ್ಕೆ

ಬೆಂಗಳೂರು: 'ಆದಾಯ ಮೀರಿದ ಆಸ್ತಿ ಗಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ಸಿಬಿಐ ತನಿಖೆಗೆ ಆದೇಶಿಸಿದ್ದ ಈ ಹಿಂದಿನ ಸರ್ಕಾರದ ಆದೇಶ ರದ್ದುಪಡಿಸಬೇಕು' ಎಂದು ಕೋರಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಲ್ಲಿಸಿರುವ ಮೇಲ್ಮನವಿ ವಿಚಾರಣೆಯನ್ನು ಹೈಕೋರ್ಟ್ ಇದೇ 22ಕ್ಕೆ ನಿಗದಿಪಡಿಸಿದೆ.

'ಈ ಹಿಂದಿನ ಬಿಜೆಪಿ ರಾಜ್ಯ ಸರ್ಕಾರ ಸಿಬಿಐ ತನಿಖೆಗೆ ಅನುಮತಿ ನೀಡಿ 2021ರ ಸೆಪ್ಟೆಂಬರ್ 25ರಂದು ಹೊರಡಿಸಿರುವ ಆದೇಶ ರದ್ದುಪಡಿಸಬೇಕು' ಎಂದು ಕೋರಿ ಶಿವಕುಮಾರ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಹೈಕೋರ್ಟ್ ಏಕಸದಸ್ಯ ನ್ಯಾಯಪೀಠವು 2023ರ ಏಪ್ರಿಲ್‌ನಲ್ಲಿ ವಜಾಗೊಳಿಸಿತ್ತು.

ಇದನ್ನು ಪ್ರಶ್ನಿಸಿ ಶಿವಕುಮಾರ್ ವಿಭಾಗೀಯ ನ್ಯಾಯಪೀಠಕ್ಕೆ ಮೇಲ್ಮನವಿ ಸಲ್ಲಿಸಿದ್ದರು. ಮೇಲ್ಮನವಿ ವಿಚಾರಣೆ ನಡೆಸಿದ್ದ ಮುಖ್ಯ ನ್ಯಾಯಮೂರ್ತಿ ನೇತೃತ್ವದ ವಿಭಾಗೀಯ ನ್ಯಾಯಪೀಠ, ಏಕಸದಸ್ಯ ನ್ಯಾಯಪೀಠದ ಆದೇಶ ಮತ್ತು ಸಿಬಿಐ ತನಿಖೆಗೆ ಮಧ್ಯಂತರ ತಡೆ ನೀಡಿತ್ತು.



ಇದಕ್ಕೆ ಪ್ರತಿಯಾಗಿ ಸಿಬಿಐ; ತನಿಖೆಗೆ ನೀಡಿರುವ ತಡೆ ತೆರವುಗೊಳಿಸುವಂತೆ ಕೋರಿ ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಸಲ್ಲಿಸಿತ್ತು. ಇದರ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, 'ತನಿಖೆಗೆ ನೀಡಿರುವ ತಡೆ ತೆರವು ಕೋರಿ ಸಿಬಿಐ ಸಲ್ಲಿಸಿರುವ ಮಧ್ಯಂತರ ಅರ್ಜಿ ಹಾಗೂ ಡಿ.ಕೆ.ಶಿವಕುಮಾರ್ ಸಲ್ಲಿಸಿರುವ ಮೇಲ್ಮನವಿಯನ್ನು ಎರಡು ವಾರಗಳಲ್ಲಿ ಇತ್ಯರ್ಥಪಡಿಸಿ' ಎಂದು ಹೈಕೋರ್ಟ್‌ಗೆ ನಿರ್ದೇಶಿಸಿತ್ತು.

ಸುಪ್ರೀಂ ಕೋರ್ಟ್‌ನ ಈ ಆದೇಶವನ್ನು ಸಿಬಿಐ ಪರ ವಕೀಲ ಪಿ.ಪ್ರಸನ್ನ ಕುಮಾರ್ ಅವರು, ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಹಾಗೂ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠಕ್ಕೆ ಬುಧವಾರ ಮೆಮೊ ಮೂಲಕ ಸಲ್ಲಿಸಿದರು. ಇದನ್ನು ದಾಖಲಿಸಿಕೊಂಡ ನ್ಯಾಯಪೀಠ ವಿಚಾರಣೆಯನ್ನು ಇದೇ 22ಕ್ಕೆ ನಿಗದಿಪಡಿಸಿತು.

ತ್ರಿಪಕ್ಷೀಯ ಒಪ್ಪಂದಕ್ಕೆ ಸಹಿ

ಬೆಂಗಳೂರು: ಬೆಂಗಳೂರು ಉಪನಗರ ರೈಲು ಯೋಜನೆ (ಬಿಎಸ್‌ಆರ್‌ಪಿ) ಕಾರ್ಯಗತಗೊಳಿಸಲು ರಾಜ್ಯ ಸರ್ಕಾರ, ಕೇಂದ್ರ ರೈಲ್ವೆ ಸಚಿವಾಲಯ ಮತ್ತು ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ(ಕೆ–ರೈಡ್) ಅಧಿಕಾರಿಗಳು ತ್ರಿಪಕ್ಷೀಯ ಒಪ್ಪಂದಕ್ಕೆ ಬುಧವಾರ ಸಹಿ ಹಾಕಿದರು.

2018ರಲ್ಲಿ ರಾಷ್ಟ್ರೀಯ ಉಪನಗರ ರೈಲು ನೀತಿ ಜಾರಿಗೊಳಿಸಿದ ಬಳಿಕ ದೇಶದ ಮೊದಲ ಯೋಜನೆಯಾಗಿ ಬಿಎಸ್‌ಆರ್‌ಪಿಯನ್ನು ರೂಪಿಸಲಾಗಿತ್ತು. 2022ರಲ್ಲಿ ಪ್ರಧಾನಿ ನರೇಂದ್ರ ಮೋದಿ ಶಂಕುಸ್ಥಾಪನೆ ನೆರವೇರಿಸಿದ್ದರು. ಬಳಿಕ ನಾಲ್ಕು ಕಾರಿಡಾರ್‌ಗಳಲ್ಲಿ ಎರಡನೇ ಕಾರಿಡಾರ್ ಕಾಮಗಾರಿ ಆರಂಭವಾಗಿತ್ತು.

ಬಾಹ್ಯ ಹಣಕಾಸು ಸಂಸ್ಥೆಗಳಿಂದ ಸಾಲದ ಒಪ್ಪಂದ ಸಹಿತ ಹಲವು ಕಾರ್ಯಗಳನ್ನು ಕೈಗೊಳ್ಳಲು ಈ ತ್ರಿಪಕ್ಷೀಯ ಒಪ್ಪಂದ ಅವಶ್ಯಕವಾಗಿತ್ತು ಎಂದು ಕೆ–ರೈಡ್ ಅಧಿಕಾರಿಗಳು ತಿಳಿಸಿದ್ದಾರೆ.



ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ 40 ವರ್ಷಗಳಿಂದ ₹ 50 ಸಂಬಳದಿಂದ ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ಶುಚಿಗಾರರನ್ನು ಕಾಯಂಗೊಳಿಸುವಂತೆ ಇಂಧನ ಸಚಿವ ಕೆ.ಜೆ. ಜಾರ್ಜ್ ಅವರಿಗೆ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಒಳಗುತ್ತಿಗೆ ನೌಕರರ ಸಂಘದ ಕಾರ್ಯಾಧ್ಯಕ್ಷ ಕರಣ್ ಶೀಲ ಟಿ. ಮೌರ್ಯ, ಸಲಹೆಗಾರ ಎ.ಆರ್. ಗೋವಿಂದಸ್ವಾಮಿ ಅವರು ಬುಧವಾರ ವಿಧಾನಸೌಧದಲ್ಲಿ ಮನವಿ ಸಲ್ಲಿಸಿದರು

ಹಬ್ಬದ ಅವಧಿಯಲ್ಲಿ ಹೆಚ್ಚಿದ ಮಾಲಿನ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀಪಾವಳಿ ಹಬ್ಬದ ಮೂರು ದಿನಗಳಲ್ಲಿ ಗಾಳಿಯ ಗುಣಮಟ್ಟ ಕಳಪೆಯಾಗಿದೆ ಎಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ(ಕೆಎಸ್‌ಪಿಸಿಬಿ) ತಿಳಿಸಿದೆ.

ದೀಪಾವಳಿಗಿಂತ ಮೊದಲು ಸಾಣೆಗುರುವನಹಳ್ಳಿ, ಹೆಬ್ಬಾಳ, ಜಯನಗರ, ಸೆಂಟ್ರಲ್ ಸಿಲ್ಕ್ ಬೋರ್ಡ್, ಕವಿಕಾ ಲೇಔಟ್, ನಗರ ರೈಲು ನಿಲ್ದಾಣದ ಸುತ್ತಮುತ್ತಲಿನ ಪ್ರದೇಶದಲ್ಲಿ ಗಾಳಿಯ ಗುಣಮಟ್ಟದ ಸೂಚ್ಯಂಕ (ಎಕ್ಯುಐ) 100ರ ಒಳಗಿದ್ದವು. ಬಹುತೇಕ ಕಡೆಗಳಲ್ಲಿ ಎಕ್ಯುಐ 'ಉತ್ತಮ' ಅಂದರೆ 50ರ ಒಳಗಿತ್ತು. ಪಟಾಕಿಯ ಮಾಲಿನ್ಯಕಾರಕ ಹೊಗೆಯಿಂದಾಗಿ ಸೂಚ್ಯಂಕದಲ್ಲಿ ದಿಢೀರ್ ಏರಿಕೆ ಆಗಿದೆ. ಪಿಎಂ 10 ಹಾಗೂ ಪಿಎಂ 2.5 ಕಣಗಳಲ್ಲಿ ಭಾರಿ ವ್ಯತ್ಯಾಸ ಉಂಟಾಗಿದೆ. ನಗರದ ಬಹುತೇಕ ಕಡೆ ಒಂದು ಸಾವಿರ ಲೀಟರ್ ಗಾಳಿಯಲ್ಲಿ ಪಿಎಂ 10ರ ಪ್ರಮಾಣ 100 ಮೈಕ್ರೊ ಗ್ರಾಂ ಹಾಗೂ ಪಿಎಂ 2.5ರ ಪ್ರಮಾಣ 60 ಮೈಕ್ರೊ ಗ್ರಾಂ ಮೀರಿದೆ.

ವಾತಾವರಣದಲ್ಲಿ ತೇವಾಂಶ ಹೆಚ್ಚಾದರೆ ದೂಳಿನ ಕಣಗಳು ತಳಮಟ್ಟದಲ್ಲಿಯೇ ಗಾಳಿಯಲ್ಲಿ ತೇಲಾಡುತ್ತಿರುತ್ತವೆ. ಪಟಾಕಿಯ ವಿಷಕಾರಿ ಹೊಗೆ ಈ ಗಾಳಿಯನ್ನು ಸೇರಿದಾಗ ಮಲಿನಕಾರಕ ಕಣಗಳು ಗಾಳಿಯಲ್ಲಿ ಉಳಿಯುತ್ತವೆ ಎಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ (ಕೆಎಸ್‌ಪಿಸಿಬಿ) ಅಧಿಕಾರಿ ತಿಳಿಸಿದ್ದಾರೆ.

ಶಬ್ದವೂ ಹೆಚ್ಚಳ: ದೀಪಾವಳಿಗಿಂತ ಮೊದಲ ದಿನಗಳಿಗೆ ಹೋಲಿಸಿದರೆ ಹಬ್ಬದ ಸಮಯದಲ್ಲಿ ಶಬ್ದ ಮಾಲಿನ್ಯವೂ ಹೆಚ್ಚಾಗಿದೆ. ಬಿಟಿಎಂ ಲೇಔಟ್, ಬಸವೇಶ್ವರ ನಗರ, ಚರ್ಚ್ ಸ್ಟ್ರೀಟ್, ವಿಜಯನಗರ, ಜಯನಗರ, ಇಂದಿರಾನಗರ ಸೇರಿ ನಗರದ ವಿವಿಧೆಡೆ 14 ಮಾಪನ ಕೇಂದ್ರಗಳಿವೆ. ಸಾಮಾನ್ಯ ದಿನಗಳಲ್ಲಿ ಶಬ್ದದ ಡೆಸಿಬಲ್ಸ್ ಪ್ರಮಾಣ 55ರ ಆಸುಪಾಸಿನಲ್ಲಿ ಇದ್ದರೆ, ಹಬ್ಬದ ದಿನಗಳಲ್ಲಿ ಬಹುತೇಕ ಕಡೆ 65ರ ಗಡಿ ದಾಟಿದೆ.

ಗಾಳಿ ಗುಣಮಟ್ಟ ಸೂಚ್ಯಂಕ

ಕೇಂದ್ರಗಳು	ದೀಪಾವಳಿ ಪೂರ್ವ ಎಕ್ಯುಐ	ದೀಪಾವಳಿ ಸಮಯದ ಎಕ್ಯುಐ
ಜಯನಗರ	43	234
ಸೆಂಟ್ರಲ್ ಸಿಲ್ಕ್ ಬೋರ್ಡ್	35	224
ಕವಿಕಾ ಲೇಔಟ್	42	212
ಹೆಬ್ಬಾಳ	31	172
ನಿಮ್ಹಾನ್ಸ್	20	171
ಪೀಣ್ಯ	21	115
ಸಿಟಿ ರೈಲ್ವೆ ನಿಲ್ದಾಣ	76	113
ಸಾಣೆಗುರುವನಹಳ್ಳಿ	36	94

ಗಾಳಿಯ ಗುಣಮಟ್ಟದ ಸೂಚ್ಯಂಕದ (ಎಕ್ಯುಐ) ಮಾಪನ

00-50	ಉತ್ತಮ
51-100	ಸಮಾಧಾನಕರ
101-200	ಮಧ್ಯಮ
201-300	ಕಳಪೆ
301-400	ಅಧಿಕ ಕಳಪೆ
401 ಮೇಲ್ಪಟ್ಟು	ತೀವ್ರ

ನಿಲ್ಲದ ಪಟಾಕಿ ಅವಘಡ

ಬೆಂಗಳೂರು: ದೀಪಾವಳಿ ಹಬ್ಬ ಮುಗಿದರೂ ನಗರದಲ್ಲಿ ಪಟಾಕಿ ಅವಘಡಗಳು ನಿಂತಿಲ್ಲ. ಮಕ್ಕಳು ಸೇರಿ ವಿವಿಧ ವಯೋಮಾನದ 100ಕ್ಕೂ ಅಧಿಕ ಮಂದಿಯ ಕಣ್ಣಿಗೆ ಪಟಾಕಿ ಕಿಡಿ ಹಾನಿ ಮಾಡಿದೆ.

ಗಾಯಗೊಂಡವರಲ್ಲಿ ಹೆಚ್ಚಿನವರು ಲಕ್ಷ್ಮಿ ಬಾಂಬ್, ಬಿಜಲಿ ಪಟಾಕಿ ಹಾಗೂ ಹೂ ಕುಂಡ ಸಿಡಿಸಿದವರಾಗಿದ್ದಾರೆ.

ಮಿಂಟೊ ಕಣ್ಣಿನ ಆಸ್ಪತ್ರೆಯಲ್ಲಿ ನಾಲ್ಕು ದಿನಗಳ ಅವಧಿಯಲ್ಲಿ ಪಟಾಕಿ ಸಂಬಂಧಿ ಗಾಯಕ್ಕೆ 32 ಮಂದಿ ಚಿಕಿತ್ಸೆ ಪಡೆದಿದ್ದಾರೆ. ಅವರಲ್ಲಿ 15 ಮಂದಿಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದು, ಆರು ಮಂದಿಗೆ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಇಬ್ಬರು ಶಾಶ್ವತವಾಗಿ ದೃಷ್ಟಿ ಕಳೆದುಕೊಂಡಿದ್ದಾರೆ. ಐವರು ಒಳರೋಗಿಗಳಾಗಿ ಚಿಕಿತ್ಸೆ ಪಡೆಯುತ್ತಿದ್ದು, ಉಳಿದವರು ಚಿಕಿತ್ಸೆ ಪಡೆದು ಮನೆಗೆ ತೆರಳಿದ್ದಾರೆ.

ಶಂಕರ ಕಣ್ಣಿನ ಆಸ್ಪತ್ರೆಯಲ್ಲಿ 15 ಮಂದಿಗೆ ಚಿಕಿತ್ಸೆ ನೀಡಲಾಗಿದೆ. ಪಟಾಕಿ ಸಿಡಿಸುವಾಗ ಕೈ ಮತ್ತು ಮುಖ ಸುಟ್ಟುಕೊಂಡ ಇಬ್ಬರು ವಿಕ್ಟೋರಿಯಾ ಆಸ್ಪತ್ರೆಯ ಸುಟ್ಟಗಾಯಗಳ ವಿಭಾಗದಲ್ಲಿ ಚಿಕಿತ್ಸೆ ಪಡೆದಿದ್ದಾರೆ.

ನಾರಾಯಣ ನೇತ್ರಾಲಯದಲ್ಲಿ 58 ಮಂದಿ ಚಿಕಿತ್ಸೆ ಪಡೆದುಕೊಂಡಿದ್ದಾರೆ. ಇವರಲ್ಲಿ 25 ಮಂದಿ 3ರಿಂದ 9 ವರ್ಷದೊಳಗಿನ ಮಕ್ಕಳಾಗಿದ್ದಾರೆ. ಗಾಯಗೊಂಡವರಲ್ಲಿ 25 ಮಂದಿ ಪಟಾಕಿ ಸಿಡಿಸದಿದ್ದರೂ ವೀಕ್ಷಿಸುವ ವೇಳೆ ಕಿಡಿ ತಾಕಿದೆ. ಆಂಧ್ರಪ್ರದೇಶದ 40 ವರ್ಷದ ಮಹಿಳೆಯೊಬ್ಬರು ಆಟೊ ರಿಕ್ಷಾದಲ್ಲಿ ಪ್ರಯಾಣಿಸುತ್ತಿರುವ ವೇಳೆ ಪಟಾಕಿ ಕಿಡಿ ಸಿಡಿದು, ಗಾಯಗೊಂಡಿದ್ದಾರೆ. ಅವರಿಗೆ ನಾರಾಯಣ ನೇತ್ರಾಲಯದಲ್ಲಿ ಚಿಕಿತ್ಸೆ ನೀಡಲಾಗಿದೆ.

'ನಾರಾಯಣ ನೇತ್ರಾಲಯದಲ್ಲಿ 2019ರಲ್ಲಿ 35 ಮಂದಿ, 2020ರಲ್ಲಿ 24 ಮಂದಿ, 2021ರಲ್ಲಿ 17 ಮಂದಿ ಹಾಗೂ 2022ರಲ್ಲಿ 45 ಮಂದಿ ಪಟಾಕಿ ಗಾಯಕ್ಕೆ ಚಿಕಿತ್ಸೆ ಪಡೆದಿದ್ದರು. ಆದರೆ, ಈ ಬಾರಿ ಅಧಿಕ ಸಂಖ್ಯೆಯಲ್ಲಿ ಗಾಯಾಳುಗಳು ಚಿಕಿತ್ಸೆ ಪಡೆದಿದ್ದಾರೆ. ಪಟಾಕಿ ಹಚ್ಚದವರೇ ಹೆಚ್ಚಾಗಿ ತೊಂದರೆಗೊಳಗಾಗಿದ್ದು, ಈ ಬಗ್ಗೆ ಜನರಲ್ಲಿ ಇನ್ನೂ ಹೆಚ್ಚಿನ ಜಾಗೃತಿ ಮೂಡಿಸಬೇಕಿದೆ' ಎಂದು ನಾರಾಯಣ ನೇತ್ರಾಲಯದ ಅಧ್ಯಕ್ಷ ರೋಹಿತ್ ಶೆಟ್ಟಿ ತಿಳಿಸಿದರು.

ಮೋಡ ಕವಿದ ವಾತಾವರಣ: ಚಳಿ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಳೆ ತಗ್ಗಿದ ಬೆನ್ನಲ್ಲಿಯೇ ತಾಪಮಾನ ದಿನೇ ದಿನೇ ಕುಸಿಯುತಿದ್ದು, ಇದರಿಂದಾಗಿ ಚಳಿಯೂ ಹೆಚ್ಚಾಗುತ್ತಿದೆ.

ಸಂಜೆ ಅವಧಿಯಲ್ಲಿ ಮೋಡ ಕವಿದ ವಾತಾವರಣ ಇದ್ದರೆ, ಮುಂಜಾನೆ ಅವಧಿಯಲ್ಲಿ ಮಂಜು ಮುಸುಕುತ್ತಿದೆ. ಹೀಗಾಗಿ, ಕೆಲ ದಿನಗಳಿಂದ ನಗರದಲ್ಲಿ ಗರಿಷ್ಠ ಹಾಗೂ ಕನಿಷ್ಠ ಉಷ್ಣಾಂಶ ತಗ್ಗಿದೆ. ಮುಂಜಾನೆ ಹಾಗೂ ಸಂಜೆ ಅವಧಿಯಲ್ಲಿ ನಗರದ ವಿವಿಧೆಡೆ ಚಳಿಯ ವಾತಾವರಣ ಕಾಣಿಸಿಕೊಳ್ಳುತ್ತಿದೆ. ವಾರದಿಂದ ಗರಿಷ್ಠ ಉಷ್ಣಾಂಶ ಸರಾಸರಿ 28 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶ 16 ಡಿಗ್ರಿ ಸೆಲ್ಸಿಯಸ್ ದಾಖಲಾಗುತ್ತಿದೆ. ಮೋಡ ಕವಿದ ವಾತಾವರಣ ಸಹಿತ ಆಗಾಗ ಸುರಿಯುತ್ತಿರುವ ಜಿಟಿಜಿಟಿ ಮಳೆಯಿಂದಾಗಿ ತಾಪಮಾನ ಕುಸಿಯುತ್ತಿದೆ. ಕಳೆದೊಂದು ವಾರ ಹಲವು ಸ್ಥಳಗಳಲ್ಲಿ ಕನಿಷ್ಠ ತಾಪಮಾನದಲ್ಲೂ ಇಳಿಕೆಯಾಗಿದೆ. ರಾತ್ರಿಯಲ್ಲೂ ತಾಪಮಾನ ಮತ್ತಷ್ಟು ಕಡಿಮೆಯಾಗಿ, ಥಂಡಿಯ ಅನುಭವವಾಗುತ್ತಿದೆ.

ಹವಾಮಾನ ಇಲಾಖೆಯ ಪ್ರಕಾರ ನಗರದಲ್ಲಿ ಬುಧವಾರ ಗರಿಷ್ಠ ಉಷ್ಣಾಂಶ 27 ಡಿಗ್ರಿ ಸೆಲ್ಸಿಯಸ್ ದಾಖಲಾದರೆ, ಕನಿಷ್ಠ 18 ಡಿಗ್ರಿ ಸೆಲ್ಸಿಯಸ್ ವರದಿಯಾಗಿದೆ. ನಗರದಲ್ಲಿ ಮುಂದಿನ ಒಂದು ವಾರ ಮೋಡ ಕವಿದ ವಾತಾವರಣ ಇರಲಿದ್ದು, ಗರಿಷ್ಠ ಉಷ್ಣಾಂಶ 28 ಡಿಗ್ರಿ ಸೆಲ್ಸಿಯಸ್ ಆಸುಪಾಸು ಹಾಗೂ ಕನಿಷ್ಠ ಉಷ್ಣಾಂಶ 18 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿ ಇರಲಿದೆ ಎಂದು ಇಲಾಖೆ ತಿಳಿಸಿದೆ.

ವಿರಾಸತ್‌ನಲ್ಲಿ ವನ್ಯಜೀವಿ ಛಾಯಾಗ್ರಹಣ ಸ್ಪರ್ಧೆ

ಮಂಗಳೂರು: ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಸಂಸ್ಥೆಯಲ್ಲಿ ಡಿ 14ರಿಂದ 17ರವರೆಗೆ ನಡೆಯಲಿರುವ ಆಳ್ವಾಸ್ ವಿರಾಸತ್ ಭಾಗವಾಗಿ ಅಂತರರಾಷ್ಟ್ರೀಯ ಮಟ್ಟದ ವನ್ಯಜೀವಿ ಛಾಯಾಗ್ರಹಣ ಸ್ಪರ್ಧೆ ಹಾಗೂ ಛಾಯಾಚಿತ್ರ ಪ್ರದರ್ಶನ ಆಯೋಜಿಸಲಾಗಿದೆ. ಮಾಹಿತಿಗೆ ವೆಬ್ ವಿಳಾಸ: alvasvirasat2023photoexhibition.com

ನಗರದಲ್ಲಿ ಇಂದು

ಕನ್ನಡ ಹಬ್ಬ: ಅಧ್ಯಕ್ಷತೆ: ಗೀತಾ ರಾಜಾರಾಂ, ಅತಿಥಿಗಳು: ಅಪ್ಪಗೆರೆ ತಿಮ್ಮರಾಜು, ಎಂ.ಎಸ್. ಆಶಾದೇವಿ, ಉಪಸ್ಥಿತಿ: ಎಚ್.ಎಸ್. ದೇವಾಡಿಗ, ಎಸ್. ಚಿನ್ನರಾಜು, ಆಯೋಜನೆ ಮತ್ತು ಸ್ಥಳ: ಗ್ಲೋಬಲ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸಸ್, ರಾಜರಾಜೇಶ್ವರಿನಗರ, ಬೆಳಿಗ್ಗೆ 10

'ದಲಿತರ ಸಾಮಾಜಿಕ, ಆರ್ಥಿಕ, ರಾಜಕೀಯ ದಿಕ್ಕು ದೆಸೆ' ರಾಜ್ಯಮಟ್ಟದ ಶೃಂಗಸಭೆ–2023: ಉದ್ಘಾಟನೆ: ಸುಖದೇವ್ ಥೋರಟ್, ಅತಿಥಿಗಳು: ಬರಗೂರು ರಾಮಚಂದ್ರಪ್ಪ, ಮಲ್ಲಪಲ್ಲಿ ಲಕ್ಷ್ಮಯ್ಯ, ಮನೋಜ್ ಮಂಜಿಲ್, ಬಿ. ವೆಂಕಟ್, ಸಿದ್ಧನಗೌಡ ಪಾಟೀಲ, ಬಿ. ಮಾಳಮ್ಮ, ರೇಣುಕಮ್ಮ, ಮಹೇಶ ಕುಮಾರ ರಾಠೋಡ, ಗೋಪಾಲಕೃಷ್ಣ ಹರಳಹಳ್ಳಿ, ಮಾವಳ್ಳಿ ಶಂಕರ್, ಶೇಖಮ್ಮ, ಬಿ. ರಾಜಶೇಖರಮೂರ್ತಿ, ಸಮಾರೋಪ ಭಾಷಣ: ಎಚ್.ಎನ್. ನಾಗಮೋಹನ ದಾಸ್, ಸ್ಥಳ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಅರಮನೆ ರಸ್ತೆ, ಬೆಳಿಗ್ಗೆ 10ರಿಂದ




ಬರಗೂರು ರಾಮಚಂದ್ರಪ್ಪ

'ಮಹಿಳಾ ಉದ್ಯಮಶೀಲತೆ ದಿನ': ಅತಿಥಿಗಳು: ಗುಂಜನ್ ಕೃಷ್ಣ, ಕಾರ್ತಿಕ್ ತಲ್ಲಂ, ಪಿ.ಎಲ್. ಶ್ರೀದೇವಿ, ಅಧ್ಯಕ್ಷತೆ: ರೂಪಾ ರಾಣಿ, ಆಯೋಜನೆ: ಮಹಿಳಾ ಉದ್ಯಮಿಗಳ ವೇದಿಕೆ, ಸ್ಥಳ: ಎಫ್‌ಕೆಸಿಸಿಐ, ಕೆ.ಜಿ. ರಸ್ತೆ, ಬೆಳಿಗ್ಗೆ 10ರಿಂದ

'ಕೃತಕ ಬುದ್ಧಿಮತ್ತೆಯ ಕಾಲಘಟ್ಟದಲ್ಲಿ ಮಾಧ್ಯಮಗಳು' ವಿಚಾರಸಂಕಿರಣ: ಉದ್ಘಾಟನೆ: ಕೆ.ವಿ. ಪ್ರಭಾಕರ್, ಜಯರಾಮ್ ಎನ್., ಅಧ್ಯಕ್ಷತೆ: ಹೇಮಂತ್ ಎಂ. ನಿಂಬಾಳ್ಕರ್, ಉಪನ್ಯಾಸ: ಟಿ.ಜಿ. ಶ್ರೀನಿಧಿ, ಕಾವ್ಯಶ್ರೀ ತಿಮ್ಮಯ್ಯ, ಆಯೋಜನೆ ಮತ್ತು ಸ್ಥಳ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸುಲೋಚನ ಸಭಾಂಗಣ, ಇನ್ಫೆಂಟ್ರಿ ರಸ್ತೆ, ಬೆಳಿಗ್ಗೆ 11.30

'ರಮಣಶ್ರೀ ಶರಣ ಪ್ರಶಸ್ತಿ' ಪ್ರದಾನ, ಎಸ್. ಷಡಕ್ಷರಿ ಅವರ 'ಕ್ಷಣ ಹೊತ್ತು ಆಣಿಮುತ್ತು ಭಾಗ–12, ಭಾಗ–13' ಪುಸ್ತಕಗಳ ಬಿಡುಗಡೆ: ಸಿದ್ದರಾಮಯ್ಯ, ಅಧ್ಯಕ್ಷತೆ: ಬಸವರಾಜ ಬೊಮ್ಮಾಯಿ, ಪುಸ್ತಕಗಳ ಬಿಡುಗಡೆ: ಡಾ.ಎಂ. ಸಿ. ಸುಧಾಕರ್, ವಿ. ಸೋಮಣ್ಣ, ಪ್ರಶಸ್ತಿ ಪುರಸ್ಕೃತರು: ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ, ವೀಣಾ ಬನ್ನಂಜೆ, ಬಸವರಾಜ ಸಾದರ, ನಾಗರಾಜ್ ರಾವ್ ಹವಾಲ್ದಾರ್, ಎ.ಜೆ. ಶಿವಕುಮಾರ್, ದೇವರಾಜು ಪಿ. ಚಿಕ್ಕಹಳ್ಳಿ, ಕುಮಾರ ಕಣವಿ, ಜೆ.ಎಸ್. ಖಂಡೇರಾವ್, ಸ್ನೇಹ ಕಪ್ಪಣ್ಣ, ಆಯೋಜನೆ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಹೋಟೆಲ್ ರಮಣಶ್ರೀ ರಿಚ್ಮಂಡ್, ರಿಚ್ಮಂಡ್ ವೃತ್ತ, ಬೆಳಿಗ್ಗೆ 11.30



ವಿಜಯಲಕ್ಷ್ಮಿ ಬಾಳೇಕುಂದ್ರಿ

'ನಾಲ್ವಡಿ ಕೃಷ್ಣರಾಜ ಒಡೆಯರ್ ದತ್ತಿ ಪ್ರಶಸ್ತಿ' ಪ್ರದಾನ, ಪುಸ್ತಕ ಬಿಡುಗಡೆ: ಎಚ್.ಕೆ. ಪಾಟೀಲ, ಅಧ್ಯಕ್ಷತೆ: ಮಹೇಶ ಜೋಶಿ, ಪ್ರಶಸ್ತಿ ಪುರಸ್ಕೃತರು: ತೇಜಸ್ವಿ ವೆಂಕಪ್ಪ ಕಟ್ಟೀಮನಿ, ಉಪಸ್ಥಿತಿ: ಬಿ. ಶಿವಲಿಂಗೇಗೌಡ, ಅಜಯ್ ಕುಮಾರ್ ಸಿಂಗ್, ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಚಾಮರಾಜಪೇಟೆ, ಸಂಜೆ 5.30

'ಕನ್ನಡದ ವೈವಿಧ್ಯಮಯ' ಹಾಡುಗಳ ಗಾಯನ: ಪ್ರಸ್ತುತಿ: ಎಂ. ಶಿವಸ್ವಾಮಿ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ನೃತ್ಯೋತ್ಸವ–2023: ಅತಿಥಿಗಳು: ಸಿದ್ಧರಾಜು, ಬಾಲಕೃಷ್ಣ, ಜಯರಾಜ್, ರಾಮಚಂದ್ರ, ಆಯೋಜನೆ: ಗಂಧರ್ವ ಸಾಂಸ್ಕೃತಿಕ ಕಲಾವೇದಿಕೆ, ಸ್ಥಳ: ಲಾಸ್ಯ ರಂಜನಿ ಕಲಾಕ್ಷೇತ್ರ, ಲಿಂಗರಾಜಪುರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಪ್ರಜಾವಾಣಿ

ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ (ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)

ಸಂಪರ್ಕಕ್ಕೆ: 8147623791 | 080 45557204 | readerservicecell@deccanherald.co.in

ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ bit.ly/40dPCqy

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)
(ಕರ್ನಾಟಕ ಸರ್ಕಾರ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಆಡಳಿತ ಕಛೇರಿ, ರಾ.ಹೆ–75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ–563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ.
ಇ–ಮೇ: eemidklr@rediffmail.com, eemigwddkolar@gmail.com
ದೂರವಾಣಿ ಸಂಖ್ಯೆ: 08152–200049
ಸಂಖ್ಯೆ:ಕಾ.ಪಾ.ಇಂ/ಸ.ನೀ.ವಿ/ಕೋ/ತಾಂ.ಶಾ/ಟೆಂಡರ್ ಪ್ರಕಟಣೆ/1889/2023–24/ದಿನಾಂಕ:10–11–2023

ಟೆಂಡರ್ ಪ್ರಕಟಣೆ ಸಂಖ್ಯೆ: 03/2023–24/ದಿನಾಂಕ:10–11–2023

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರಿಂದ "Consultancy services for preparation of master plan of south pennar Basin comprising of data integration preparation of different schematic maps and reports" ಕಾಮಗಾರಿಗೆ ಕೆ.ಸಿ–6 (ಎಲ್.ಸಿ.ಎಸ್) ಟೆಂಡರ್ ಡಾಕ್ಯುಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮವಳಿ ಅನ್ವಯ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದೆ. ನಿಗಧಿತ ಇ.ಎಂ.ಡಿ ಮೊತ್ತವನ್ನು ಕೆಪಿಪಿ–ಪೋರ್ಟಲ್‌ನಲ್ಲಿ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆಪಿಪಿ–ಪ್ರಕ್ಯೂರ್‌ಮೆಂಟ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ (www.kppp.karnataka.gov.in) ಮೂಲಕ ದಿನಾಂಕ: ದಿನಾಂಕ:15/11/2023ರ ಸಂಜೆ 04:00 ಗಂಟೆಯಿಂದ ಪಡೆಯಬಹುದು (Download). ಪ್ರೀ ಬಿಡ್ ಸಭೆಯ ದಿನಾಂಕ:18/11/2023, 11:00 ಗಂಟೆಗೆ **ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ, ರಾ.ಹೆ–75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ–563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ.** ಡಾಕ್ಯುಮೆಂಟ್‌ಗಳನ್ನು ಸಲ್ಲಿಸಬೇಕಾಗಿರುವ (Upload) ಕೊನೆಯ ದಿನಾಂಕ:28/11/2023ರ ಸಂಜೆ 04:00 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ:29/11/2023ರ ಸಂಜೆ 04:30 ಗಂಟೆಯ ನಂತರ. ಉಳಿದಂತೆ ಸದರಿ ಪ್ರಕಟಣೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಮೇಲಿನ ವಿವರಗಳನ್ನು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ www.kppp.karnataka.gov.in ಅಂತರ್ಜಾಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.

ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ.

Dr.AMBEDKAR INSTITUTE OF TECHNOLOGY
(An Autonomous Institution, affiliated to VTU Belagavi and Aided by GoK)
Outer Ring Road, Mallathahalli, Bengaluru – 560 056
Phone No: 080-23211232, Mail Id: principal@drait.edu.in

Dr.AIT/EST/ 2023-24 Date:15.11.2023

WALK IN INTERVIEW

Dr. Ambedkar Institute of Technology Invites dynamic and eligible candidates to attend the WALK IN INTERVIEW on **23.11.2023** for the following posts:

Professor - Civil/Aeronautical/CSBS
Associate Professor - Civil/Aeronautical/EEE/CSBS/AI&ML
Assistant Professor - Aeronautical/EEE/CSE/E&C/ETE/ISE/CSBS/AI&ML/MBA/Maths
Adjunct Professor - EEE/MBA
Computer Maintenance Engineer, Computer Operator, Electrician & Plumber

Qualification & Experience: As per AICTE Norms. For more details visit institute's **website: www.drait.edu.in**

Venue and Time: Interview is scheduled at **10.00 AM - 3.30 PM on 23.11.2023 at Board Room of Dr. Ambedkar Institute of Technology, Bangalore-560 056.** Interested candidates should bring their copy of application form along with resume, two sets of self-attested copies of testimonials, experience certificates and recent passport size colour photograph along with all original documents at the time of interview.

Sd/- Principal Sd/- Secretary/Managing Trustee

ನಗರಸಭಾ ಕಾರ್ಯಾಲಯ, ನೆಲಮಂಗಲ
ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ–562123
ದೂರವಾಣಿ : 080–27722135, ಸಹಾಯವಾಣಿ : 080–27723627
Email : itstaff_ulb_nelamangala@yahoo.com
ಸಂಖ್ಯೆ: ನಸನೆ/ತಾಂ.ಶಾ(ವಿ)ಟೆಂಡರ್/160/2023–24 ದಿನಾಂಕ: 13.11.2023

ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)
(ಸ್ಟಾಂಡರ್ಡ್ ಡಾಕ್ಯುಮೆಂಟ್ KW 1&2ರ ನಿಬಂಧನೆಗಳಂತೆ ಅರ್ಜಿ ಆಹ್ವಾನಿಸಲಾಗಿದೆ)

ಮೇಲ್ಕಂಡ ವಿಷಯ ಸಂಬಂಧಿಸಿದಂತೆ, 2023–24ನೇ ಸಾಲಿನ ನೆಲಮಂಗಲ ನಗರಸಭೆಯ ಅನುದಾನದಲ್ಲಿ ರಸ್ತೆ ಹಾಗೂ ಚರಂಡಿ, ಹಾಗೂ ಇತರೆ ಸಮಗ್ರ ಅಭಿವೃದ್ಧಿ ನಿಟ್ಟಿನಲ್ಲಿ ಸಿವಿಲ್ ಕಾಮಗಾರಿಗಳನ್ನು ಹಾಗೂ ಕುಡಿಯುವ ನೀರು ವಿಭಾಗಕ್ಕೆ ಸಾಮಗ್ರಿಗಳನ್ನು ಸರಬರಾಜು ಮಾಡಲು ಕೈಗೊಳ್ಳುವ ಕಾಮಗಾರಿಗಳ **ಒಟ್ಟು ಮೊತ್ತ ರೂ: 541.94 ಲಕ್ಷಗಳಿಗೆ** ಐಟಂವಾರು ಮತ್ತು ಕೆಪಿಪಿಪಿ ಪೋರ್ಟಲ್‌ನ ಏಕ ಲಕೋಟೆ ಪದ್ಧತಿಯಲ್ಲಿ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.in ಮೂಲಕ ಟೆಂಡರ್ ಸಲ್ಲಿಸುವುದು.

ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ **ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: (As per KPPP Portal ಗಂಟೆಯವರೆಗೆ)** ಟೆಂಡರ್ ತೆರೆಯುವ **ದಿನಾಂಕ:(As per KPPP Portal)** ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸಹಿ/–	ಸಹಿ/–	ಸಹಿ/–	ಸಹಿ/–
ಮಾನ್ಯ ಅಧ್ಯಕ್ಷರು ನಗರಸಭೆ, ನೆಲಮಂಗಲ	ಮಾನ್ಯ ಉಪಾಧ್ಯಕ್ಷರು ನಗರಸಭೆ, ನೆಲಮಂಗಲ	ಮಾನ್ಯ ಸ್ಥಾಯಿ ಸಮಿತಿ ಅಧ್ಯಕ್ಷರು ನಗರಸಭೆ, ನೆಲಮಂಗಲ	ಪೌರಾಯುಕ್ತರು ನಗರಸಭೆ, ನೆಲಮಂಗಲ

ವಾಸಾಸಂಇ/ವಾಪ್ರ/ಎಸ್‌ಎಸ್‌ಸಿ/2098/2023–24

ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ನಂಎಫ್.ಬಿ.8, 1ನೇ ಮಹಡಿ, ಜಿಲ್ಲಾಡಳಿತ ಭವನ, ಶಿಡ್ಲಘಟ್ಟ ರಸ್ತೆ, ಚಿಕ್ಕಬಳ್ಳಾಪುರ
ದೂರವಾಣಿ ಸಂಖ್ಯೆ:08156-277113, ಇಮೇಲ್:dcpocbpur@gmail.com
ಸಂಖ್ಯೆ: ಜಿಮರಘ/ಚಿಪುರ/ಅ.ಮ.ಪ.ಪ್ರ/2023–24 ದಿನಾಂಕ:06.11.2023

ಪೋಷಕರ ಪತ್ತೆಗಾಗಿ ನೆರವು ನೀಡಿ



(1) **ಮಗುವಿನ ಹೆಸರು:** ಅಂಜಿ. (2) **ವಯಸ್ಸು:** 10 ವರ್ಷ. (3) **ತಂದೆ ಅಥವಾ ತಾಯಿ ಹೆಸರು:** ತಂದೆ: ಲೇ ಶ್ರೀರಾಮುಲು, ತಾಯಿ: ಈಶ್ವರಮ್ಮ. (4) **ಸ್ವಂತ ವಿಳಾಸ:** ಗಂದೋಡಳಪಲ್ಲಿ ಗ್ರಾಮ, ತೋಬುಲ ಬಳಿ, ಆಂಧ್ರ ಪ್ರದೇಶ ರಾಜ್ಯ. (5) **ಧರ್ಮ ಮತ್ತು ಜಾತಿ:** ಹಿಂದು ಧರ್ಮ, ಯೊನಾದಿ ಜನಾಂಗ. (6) **ತಿಳಿದಿರುವ ಭಾಷೆ:** ಕನ್ನಡ ಮತ್ತು ತೆಲುಗು. (7) **ದೇಹದ ಬಣ್ಣ ಮತ್ತು ಎತ್ತರ:** ಕಂದು ಬಣ್ಣ, ಎತ್ತರ: 50.5 ಸೆ.ಮೀ. (8) **ತೂಕ:** 25 ಕೆ.ಜಿ. ಸದರಿ ಮಗುವಿನ ಸಂಬಂಧಿಕರು ಯಾರಾದರೂ ಇದ್ದಲ್ಲಿ ಸೂಕ್ತ ದಾಖಲಾತಿಗಳೊಂದಿಗೆ 60 ದಿವಸಗಳ ಒಳಗಡೆ ಸಂಪರ್ಕಿಸಬೇಕಾದ ಕಛೇರಿ: **ಎಫ್.ಬಿ.8, 1ನೇ ಮಹಡಿ, ಜಿಲ್ಲಾಡಳಿತ ಭವನ, ಶಿಡ್ಲಘಟ್ಟ ರಸ್ತೆ, ಚಿಕ್ಕಬಳ್ಳಾಪುರ–562101. ದೂ.ಸಂ:08156–277113, ಇಮೇಲ್– dcpocbpur@gmail.com**

ಸಹಿ/– ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:142/ಕೆಎಸ್‌ಎಂ.ಸಿ.ಎ/2023–24

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ CENTUM

CIN: L85110KA1993PLC013869
ನೋಂದಾಯಿತ ಕಛೇರಿ: ನಂ.44 ಕೆ.ಎಚ್.ಬಿ. ಕೈಗಾರಿಕಾ ಪ್ರದೇಶ, ಯಲಹಂಕ ನ್ಯೂ ಟೌನ್, ಬೆಂಗಳೂರು – 560 106
Tel: 080 - 4143 6000 Fax: 080 - 4143 6005
Email: investors@centumelectronics.com Website: www.centumelectronics.com

ಹೂಡಿಕೆದಾರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿಗೆ ಇಕ್ವಿಟಿ ಷೇರುಗಳ ವರ್ಗಾವಣೆ ಕುರಿತು ಇಕ್ವಿಟಿ ಷೇರುದಾರರಿಗೆ ಸೂಚನೆ

ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 124ರ ನಿಯಮಗಳನ್ನು ಹೂಡಿಕೆದಾರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿ ಪ್ರಾಧಿಕಾರ (ಅಕೌಂಟಿಂಗ್, ಆಡಿಟ್, ಟ್ರಾನ್ಸ್‌ಫರ್ & ರಿಫಂಡ್) ನಿಯಮಗಳು, 2016 ರೊಂದಿಗೆ ಮತ್ತು ಅದಕ್ಕೆ ಮಾಡಲಾದ ತಿದ್ದುಪಡಿಗಳೊಂದಿಗೆ ಓದಿಕೊಂಡಂತೆ ಪ್ರದತ್ತವಾದ ನಿಯಮಗಳನುಸಾರ, ಹೂಡಿಕೆದಾರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿ (ಐಇಪಿಎಫ್) ಇವರಲ್ಲಿ ಕ್ಲೇಮ್ ಆಗದಿರುವ ಡಿವಿಡೆಂಡ್‌ಗೆ ಸಂಬಂಧಿತ ಕಂಪನಿಯ ಇಕ್ವಿಟಿ ಷೇರುಗಳ ವರ್ಗಾವಣೆ ಕುರಿತು ಇಕ್ವಿಟಿ ಷೇರುದಾರರಿಗೆ ಈ ಮಾಹಿತಿ.

ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 125ರ ನಿಯಮಗಳು ಮತ್ತು ಮೇಲೆ ತಿಳಿಸಲಾಗಿರುವ ನಿಯಮಾವಳಿಗಳ ಪ್ರಕಾರ, ನಿರಂತರವಾಗಿ ಏಳು ವರ್ಷಗಳಿಂದ ಅಥವಾ ಅದಕ್ಕಿಂತ ಹೆಚ್ಚಿನ ವರ್ಷಗಳಿಂದ ಡಿವಿಡೆಂಡ್ ಕ್ಲೇಮ್ ಆಗದಿರುವ ಎಲ್ಲಾ ಷೇರುಗಳನ್ನು ಐಇಪಿಎಫ್ ಪ್ರಾಧಿಕಾರದ ಡಿಮ್ಯಾಟ್ ಅಕೌಂಟ್‌ಗೆ ವರ್ಗಾವಣೆ ಮಾಡಬೇಕಾಗುತ್ತದೆ. ಕಂಪನಿಯು ತನ್ನ ಹಣಕಾಸು ವರ್ಷ 2016-17ನೇ ಸಾಲಿಗೆ ಘೋಷಿಸಿರುವ ಮಧ್ಯಂತರ ಡಿವಿಡೆಂಡ್‌ಗೆ ಸಂಬಂಧಿಸಿದಂತೆ, ಕಾಯ್ದೆ ಮತ್ತು ಐಇಪಿಎಫ್ ನಿಯಮಾವಳಿಗಳ ಪ್ರಕಾರ ಷೇರುಗಳ ವರ್ಗಾವಣೆಗೆ ಅಂತಿಮ ದಿನಾಂಕ 26ನೇ ಫೆಬ್ರವರಿ, 2024 ಆಗಿರುತ್ತದೆ. ಐಇಪಿಎಫ್ ನಿಯಮಾವಳಿಗಳಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯ ಪ್ರಕಾರ, ಹೀಗೆ ಕ್ಲೇಮ್ ಆಗದಿರುವ ಡಿವಿಡಂಡ್‌ಗೆ ಸಂಬಂಧಿತ ಅನುಕ್ರಮ ಷೇರುಗಳನ್ನು ಕೂಡ ವರ್ಗಾವಣೆ ಮಾಡಲಾಗುತ್ತದೆ.

ಡಿವಿಡಂಡ್‌ನ ಕ್ಲೇಮ್‌ಗಾಗಿ ಸೂಕ್ತ ಕ್ರಮ ಕೈಗೊಳ್ಳಲೆಂದು, ಯಾರ ಷೇರುಗಳ ವರ್ಗಾವಣೆಗೊಳ್ಳುವ ಸಾಧ್ಯತೆ ಇದೆಯೊ ಅಂತಹ ಷೇರುದಾರರಿಗೆ ಕಂಪನಿಯು ವೈಯಕ್ತಿಕವಾಗಿ ಮಾಹಿತಿ ರವಾನಿಸಿದೆ. ಕಂಪನಿಯು ಇಂತಹ ಷೇರುದಾರರ ಸಂಪೂರ್ಣ ವಿವರವನ್ನು ತನ್ನ ವೆಬ್‌ಸೈಟ್ https://www.centumelectronics.com/unclaimed-dividends/ ನಲ್ಲಿ ಕೂಡ ಪ್ರಕಟಿಸಿರುತ್ತದೆ.

ನಿರಂತರವಾಗಿ 7 ವರ್ಷಗಳ ಅವಧಿಗೆ ಕ್ಲೇಮ್ ಆಗದಿರುವ ಡಿವಿಡಂಡ್‌ಗೆ ಸಂಬಂಧಿತ ಷೇರುಗಳು:

- ಡಿಮ್ಯಾಟ್ ರೂಪದ ಷೇರುಗಳಾಗಿದ್ದಲ್ಲಿ, ಅಂತಹವುಗಳನ್ನು ನೇರವಾಗಿ ನ್ಯಾಷನಲ್ ಸೆಕ್ಯೂರಿಟೀಸ್ ಡೆಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್) ಇವರೊಂದಿಗೆ ನಿರ್ವಹಿಸಲಾಗುತ್ತಿರುವ ಐಇಪಿಎಫ್ ಡಿಮ್ಯಾಟ್ ಅಕೌಂಟ್‌ಗೆ ವರ್ಗಾವಣೆ ಮಾಡಲಾಗುತ್ತದೆ.
- ಭೌತಿಕ ರೂಪದ ಷೇರುಗಳು ಯಾವುದಾದರೂ ಇದ್ದಲ್ಲಿ, ಅಂತಹ ಷೇರುಗಳನ್ನು ಐಇಪಿಎಫ್‌ಗೆ ವರ್ಗಾಯಿಸಲು ಮೂಲ ಷೇರು ಪ್ರಮಾಣಪತ್ರಗಳು ರದ್ದುಗೊಳಿಸುವ ಜೊತೆಗೆ ಹೊಸ ಫೋಲಿಯೊ ಮತ್ತು ಪ್ರಮಾಣಪತ್ರ ಸಂಖ್ಯೆಗಳನ್ನು ನೀಡಲಾಗುತ್ತದೆ. ಸದರಿ ಷೇರುಗಳನ್ನು ಡಿಮ್ಯಾಟ್ ರೂಪದಲ್ಲಿ ಮಾರ್ಪಡಿಸಲು ಮತ್ತು ಐಇಪಿಎಫ್ ಪರವಾಗಿ ವರ್ಗಾಯಿಸಲು ವ್ಯವಹಾರಿಕ ಕ್ರಮ ಕೈಗೊಳ್ಳುವ ಮೂಲಕ ಕಂಪನಿಯು ಎನ್‌ಎಸ್‌ಡಿಎಲ್ ಇವರಿಗೆ ಮಾಹಿತಿ ನೀಡಬಹುದಾಗಿರುತ್ತದೆ.

ಒಂದು ವೇಳೆ ಸಂಬಂಧಿತ ಷೇರುದಾರರಿಂದ ಕಂಪನಿಗೆ 15ನೇ ಫೆಬ್ರವರಿ, 2024 ರೊಳಗೆ ಯಾವುದೇ ರೀತಿಯ ಪ್ರತಿಕ್ರಿಯೆ ಲಭಿಸದಿದ್ದಲ್ಲಿ, ಐಇಪಿಎಫ್ ನಿಯಮಗಳ ಪ್ರಕಾರ ಕಂಪನಿಯಿಂದ ಅಂತಹ ಕ್ಲೇಮ್ ಆಗದಿರುವ ಡಿವಿಡಂಡ್‌ನ್ನು ನಿಗದಿತ ದಿನಾಂಕದಂದು ಅಥವಾ ಮೊದಲು ವರ್ಗಾವಣೆ ಮಾಡಲಾಗುತ್ತದೆ. ಅನುಕ್ರಮವಾದ ಷೇರುಗಳನ್ನು ಕೂಡ ಷೇರುದಾರರಿಗೆ ಯಾವುದೇ ಮುನ್ಸೂಚನೆ ನೀಡದೆಯೇ ವರ್ಗಾವಣೆ ಮಾಡಲಾಗುತ್ತದೆ.

ಮೇಲೆ ತಿಳಿಸಿರುವಂತೆ, ಕಂಪನಿಯಿಂದ ಒಂದು ಬಾರಿ ಡಿವಿಡಂಡ್ ಮತ್ತು ಇಕ್ವಿಟಿ ಷೇರುಗಳನ್ನು ವರ್ಗಾವಣೆ ಮಾಡಿದ ನಂತರ, ಷೇರುದಾರರು ತಮ್ಮ ಕ್ಲೇಮ್ ಆಗದಿರುವ ಡಿವಿಡೆಂಡ್ ಅನ್ನು ಮತ್ತು ಇಕ್ವಿಟಿ ಷೇರುಗಳನ್ನು ಐಇಪಿಎಫ್ ನಿಯಮಾವಳಿಗಳ ಪ್ರಕಾರ ಐಇಪಿಎಫ್ ಪ್ರಾಧಿಕಾರಿಯಿಂದ ಮಾತ್ರ ಕ್ಲೇಮ್ ಮಾಡಿಕೊಳ್ಳಬಹುದಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಕಂಪನಿಗೆ ಪ್ರತಿಯಾಗಿ ಯಾವುದೇ ಕ್ಲೇಮ್ ಮಾಡಲು ಅವಕಾಶವಿರುವುದಿಲ್ಲ ಎಂಬುದು ದಯವಿಟ್ಟು ಗಮನದಲ್ಲಿರಲಿ.


ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಷೇರುದಾರರಿಗೆ ಯಾವುದೇ ವಿಚಾರಣೆಗಳಿದ್ದಲ್ಲಿ, ನಮ್ಮ ರಜಿಸ್ಟ್ರಾರ್ ಮತ್ತು ಷೇರು ಟ್ರಾನ್ಸ್‌ಫರ್ ಏಜೆಂಟ್ಸ್ ಕೇಫಿನ್ ಟೆಕ್ನಾಲಜೀಸ್ ಲಿಮಿಟೆಡ್ ಇವರನ್ನು ಕೆಳಗಿನ ವಿಳಾಸದಲ್ಲಿ ಸಂಪರ್ಕಿಸಬೇಕೆಂದು ಕೋರಲಾಗಿದೆ:

ಘಟಕ: ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್
ಸೆಲೆನಿಯಮ್ ಟವರ್ ಬಿ, ಪ್ಲಾಟ್ ಸಂಖ್ಯೆ 31 ಮತ್ತು 32,
ಹಣಕಾಸು ಜಿಲ್ಲೆ, ನಾನಕ್ರಮಗುಡ, ಸೆರಿಲಿಂಗಂಪಲ್ಲಿ ಮಂಡಲ್,
ಹೈದರಾಬಾದ್ - 500 032, ಫೋನ್ ಸಂಖ್ಯೆ: +91 40 6716 2222,
ಇಮೇಲ್: einward.ris@kfintech.com

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ಪರವಾಗಿ
ಸಹಿ/–
ಇಂದು ಎಚ್ ಎಸ್
ಕಂಪನಿ ಸೆಕ್ರೆಟರಿ ಮತ್ತು ಕಂಪ್ಲಾಯೆನ್ಸ್ ಆಫೀಸರ್

ಬೆಂಗಳೂರು
16ನೇ ನವೆಂಬರ್, 2023

ಪ್ರಜಾವಾಣಿ ಸ್ಪರ್ಧಾವಾಣಿ MASTERMIND
ಸ್ಪರ್ಧಾತ್ಮಕ ಪರೀಕ್ಷೆಯ ಆಕಾಂಕ್ಷಿಗಳಿಗಾಗಿ ವಿಶೇಷವಾಗಿ ವಿನ್ಯಾಸಗೊಳಿಸಲಾದ ಮಾಸಿಕ ಪತ್ರಿಕೆ
UPSC, KAS, PDO, PSI, SDA, FDA, Group C, PC ಇತ್ಯಾದಿ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿರುವ ಆಕಾಂಕ್ಷಿಗಳೇ, ನಿಮ್ಮ ಪ್ರತಿಯನ್ನು ಇಂದೇ ಖರೀದಿಸಿ
ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: 9606966128



ವಂದೇ ಭಾರತ್ ಬೆಳಗಾವಿಗೆ ವಿಸ್ತರಣೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕೆಎಸ್‌ಆರ್ ಬೆಂಗಳೂರು–ಧಾರವಾಡ ನಡುವೆ ಇರುವ 'ವಂದೇ ಭಾರತ್' ಎಕ್ಸ್‌ಪ್ರೆಸ್ ರೈಲನ್ನು ಬೆಳಗಾವಿವರೆಗೆ ವಿಸ್ತರಿಸಿ ರೈಲ್ವೆ ಮಂಡಳಿ ಆದೇಶ ಹೊರಡಿಸಿದೆ.

'ವಂದೇ ಭಾರತ್'ಗೆ ಪ್ರಯಾಣಿಕರಿಂದ ಉತ್ತಮ ಸ್ಪಂದನೆ ದೊರಕಿದ್ದರಿಂದ ಮತ್ತು ವಿಸ್ತರಿಸಲು ಬೇಡಿಕೆ ಬಂದಿದ್ದರಿಂದ ದೇಶದ ಮೂರು ವಂದೇ ಭಾರತ್ ಎಕ್ಸ್‌ಪ್ರೆಸ್‌ಗಳನ್ನು ವಿಸ್ತರಿಸಿ ಮಂಗಳವಾರ ರೈಲ್ವೆ ಬೋರ್ಡ್ ಆದೇಶ ಹೊರಡಿಸಿತ್ತು. ಅದರಲ್ಲಿ ಕರ್ನಾಟಕದ ಒಂದು ರೈಲು ಸೇರಿದೆ.

ಕೆಎಸ್‌ಆರ್ ಬೆಂಗಳೂರು–ಧಾರವಾಡ ಜೂನ್‌ನಲ್ಲಿ 'ವಂದೇ ಭಾರತ್' ಆರಂಭಿಸಲಾಗಿತ್ತು. ನಿತ್ಯ ಶೇ 93ರಿಂದ ಶೇ 96ರಷ್ಟು ಆಸನಗಳು ಭರ್ತಿಯಾಗುತ್ತಿದ್ದವು. ಬೆಳಗಾವಿಗೆ ವಿಸ್ತರಿಸಬೇಕು ಎಂದು ಕೂಗು ಎದ್ದಿತ್ತು.

ಕೆಎಸ್‌ಆರ್ ನಿಲ್ದಾಣದಿಂದ ಬೆಳಿಗ್ಗೆ 5.45ಕ್ಕೆ ಹೊರಡಲಿದೆ. ಹುಬ್ಬಳ್ಳಿಗೆ 10.50ಕ್ಕೆ ತಲುಪಲಿದೆ. ಅಲ್ಲಿಂದ 10.55ಕ್ಕೆ ಹೊರಟು 11.20ಕ್ಕೆ ಧಾರವಾಡ, ಮಧ್ಯಾಹ್ನ 1.30ಕ್ಕೆ ಬೆಳಗಾವಿ ತಲುಪಲಿದೆ. ಬೆಳಗಾವಿಯಿಂದ ಮಧ್ಯಾಹ್ನ 2ಕ್ಕೆ ವಾಪಸ್ ಹೊರಡಲಿದೆ. ಸಂಜೆ 4.15ಕ್ಕೆ ಧಾರವಾಡ, 4.45ಕ್ಕೆ ಹುಬ್ಬಳ್ಳಿ, ರಾತ್ರಿ 10.10ಕ್ಕೆ ಬೆಂಗಳೂರು ತಲುಪಲಿದೆ.

'ಮುಂದಿನ ಸೋಮವಾರ ಅಥವಾ ಮಂಗಳವಾರ ಪ್ರಾಯೋಗಿಕ ಸಂಚಾರ ನಡೆಸಲಾಗುವುದು. ಬಳಿಕ ಪೂರ್ಣಪ್ರಮಾಣದಲ್ಲಿ ಸಂಚಾರ ಆರಂಭಗೊಳ್ಳಲಿದೆ. ಮಧ್ಯೆ ಲೋಂಡಾ ರೈಲು ನಿಲ್ದಾಣದಲ್ಲಿಯೂ ನಿಲುಗಡೆ ಇರಲಿದೆ' ಎಂದು ನೈರುತ್ಯ ರೈಲ್ವೆ ಬೆಂಗಳೂರು ವಿಭಾಗೀಯ ಹೆಚ್ಚುವರಿ ವ್ಯವಸ್ಥಾಪಕಿ (ಆಡಳಿತ) ಕುಸುಮಾ ಹರಿಪ್ರಸಾದ್ 'ಪ್ರಜಾವಾಣಿ'ಗೆ ತಿಳಿಸಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ಪ್ರತಿಭಟನೆ

ಹಕ್ಕುಪತ್ರ ವಿತರಣೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಯಲ್ಲಿ ನಮೂನೆ 50 ಹಾಗೂ 53 ಅಡಿ ಅರ್ಜಿ ಸಲ್ಲಿಸಿರುವ ಬಗರ್‌ಹುಕುಂ ಸಾಗುವಳಿದಾರರಿಗೆ ತಕ್ಷಣ ಹಕ್ಕುಪತ್ರ ವಿತರಣೆ ಮಾಡುವುದು ಸೇರಿದಂತೆ ಹಲವು ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ, ಕರ್ನಾಟಕ ದಲಿತ ಸಂಘರ್ಷ ಸಮಿತಿ-(ಅಂಬೇಡ್ಕರ್ ವಾದ)ಯಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಯಿತು.

ಹಲವು ಬಾರಿ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿದ್ದರೂ ಬೇಡಿಕೆ ಈಡೇರಿಸಿಲ್ಲ ಎಂದು ಪ್ರತಿಭಟನಕಾರರು ಆಕ್ರೋಶ ಹೊರಹಾಕಿದರು. ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು.

'ಬಿಬಿಎಂಪಿಯಲ್ಲಿ ಲಭ್ಯವಿರುವ ಅನುದಾನವನ್ನು ಬಡ ಜನರ ಅಭ್ಯುದಯಕ್ಕೆ ಬಳಕೆ ಮಾಡಬೇಕು. ಆಶ್ರಯ ಮನೆಗಳಿಗೆ ಹಕ್ಕುಪತ್ರ ವಿತರಣೆ ಮಾಡಬೇಕು. ಬಡವರಿಗೆ ಸಂವಿಧಾನಬದ್ಧವಾಗಿ ನಾಗರಿಕ ಸೌಲಭ್ಯ ತಲುಪಿಸಬೇಕು' ಎಂದು ಒತ್ತಾಯಿಸಿದರು.

'ಸರ್ಕಾರಿ ಜಮೀನಿಗೆ ರಿಯಲ್ ಎಸ್ಟೇಟ್ ಉದ್ಯಮಿಗಳು ಬೇಲಿ ಹಾಕಿಕೊಂಡು ಕಬಳಿಸುತ್ತಿದ್ದಾರೆ. ಸರ್ಕಾರಿ ಯೋಜನೆಗಳು ಹಾಗೂ ಜನಕಲ್ಯಾಣಕ್ಕೆ ಮೀಸಲಿಟ್ಟ ಹಣ ಲೂಟಿಕೋರರ ಪಾಲಾಗುತ್ತಿದೆ. ಅನುದಾನವನ್ನು ಜನಕಲ್ಯಾಣ ಯೋಜನೆಗಳಿಗೆ ಬಳಸಲಾಗಿದೆ ಎಂಬುದನ್ನು ಕಾಗದದಲ್ಲಿ ತೋರಿಸಲಾಗುತ್ತಿದೆ' ಎಂದು ಸಮಿತಿ ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ದೂರಿದರು.

ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದೆ. ಬಡವರಿಗೆ ಪೌಷ್ಟಿಕ ಆಹಾರ ಲಭಿಸುತ್ತಿಲ್ಲ. ನಿವೇಶನ, ವಸತಿ ಸೌಲಭ್ಯವಿಲ್ಲದೇ ಬಡವರು ಬೀದಿ ಬದಿಯಲ್ಲಿ ಆಶ್ರಯ ಪಡೆಯುವ ಸ್ಥಿತಿಯಿದೆ ಎಂದು ಹೇಳಿದರು.

'ಜನರ ತೆರಿಗೆ ಹಣವು ಭ್ರಷ್ಟರ ಪಾಲಾಗುತ್ತಿದೆ. ಬಡವರಿಗೆ ಸೌಲಭ್ಯ ಕಲ್ಪಿಸುವಂತೆ ಹೋರಾಟ ನಡೆಸಿದರೆ ಹೋರಾಟಗಾರರ ಮೇಲೆ ದೌರ್ಜನ್ಯ ಎಸಗಲಾಗುತ್ತಿದೆ' ಎಂದು ದೂರಿದರು.

ಪ್ರತಿಭಟನೆಯಲ್ಲಿ ಸಮಿತಿಯ ಮಣಿಪಾಲ್ ರಾಜಪ್ಪ, ಧನಮ್ಮ, ಮಂಜುನಾಥ್ ಇದ್ದರು.



ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ವಕೀಲ ಅಮಿತ್ ಕೊಲೆ ಪ್ರಕರಣ: ರಾಜೇಶ್ ದೋಷಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೆಲಮಂಗಲದ ಖ್ಯಾತ ವಕೀಲ ಕೇಶವಮೂರ್ತಿ ಅವರ ಪುತ್ರ ವಕೀಲ ಅಮಿತ್ ಕೇಶವಮೂರ್ತಿ ಕೊಲೆ ಪ್ರಕರಣದಲ್ಲಿ ಆರೋಪಿ ರಾಜೇಶ್ ಗೌಡ ದೋಷಿ ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ತೀರ್ಮಾನಿಸಿದೆ.

ವಿಚಾರಣೆ ಪೂರ್ಣಗೊಳಿಸಿ ಈ ಕುರಿತಂತೆ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಾಧೀಶ ಹೊಸಮನಿ ಪುಂಡಲೀಕ ಅವರು ಬುಧವಾರ ತೆರೆದ ನ್ಯಾಯಾಲಯದಲ್ಲಿ ಪ್ರಕಟಿಸಿ, ಶಿಕ್ಷೆಯ ಪ್ರಮಾಣವನ್ನು ಗುರುವಾರ (ನ.16) ಘೋಷಿಸುವುದಾಗಿ ತಿಳಿಸಿದರು. ಪ್ರಾಸಿಕ್ಯೂಷನ್ ಪರ ಹಿರಿಯ ವಕೀಲ ಸಿ.ಎಚ್. ಹನುಮಂತರಾಯ ವಾದ ಮಂಡಿಸಿದ್ದರು.



ಏನಿದು ಘಟನೆ?: 'ಸೋಲದೇವನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ಆಚಾರ್ಯ ಎಂಜಿನಿಯರಿಂಗ್ ಕಾಲೇಜು ಬಳಿ 2017ರ ಜನವರಿ 13ರಂದು ಮಧ್ಯಾಹ್ನ 3.15ರ ಸಮಯದಲ್ಲಿ ಅಮಿತ್ ಕೇಶವಮೂರ್ತಿ ಅವರು ಆರೋಪಿ ರಾಜೇಶ್ ಅವರ ಪತ್ನಿ ಪಿಡಿಒ ಶ್ರುತಿಗೌಡ ಅವರೊಂದಿಗೆ ಸ್ವಿಫ್ಟ್ ಕಾರಿನಲ್ಲಿ ಕುಳಿತಿದ್ದರು. ಶ್ರುತಿ ಗೌಡ ಅವರಿಗೆ ಸೇರಿದ ಈ ಕಾರನ್ನು ಹಿಂಬಾಲಿಸಿಕೊಂಡು ಬಂದಿದ್ದ ರಾಜೇಶ್, ಕಾರಿನ ಬಾಗಿಲು ತೆರೆದು ತಮ್ಮ ಬಳಿ ಇದ್ದ ಪಿಸ್ತೂಲಿನಿಂದ ಅಮಿತ್ ಮೇಲೆ ಏಕಾಏಕಿ ಗುಂಡು ಹಾರಿಸಿ ಕೊಂದಿದ್ದರು. ಶ್ರುತಿ ಗೌಡ ಅವರ ನಡೆ ಮತ್ತು ಚಟುವಟಿಕೆಗಳ ಮೇಲೆ ಸದಾ ಸಂಶಯ ವ್ಯಕ್ತಪಡಿಸುತ್ತಿದ್ದ ರಾಜೇಶ್, ಶ್ರುತಿ ಬಳಸುವ ಕಾರಿಗೆ ಜಿಪಿಎಸ್ ಅಳವಡಿಸಿ ಅದರ ಮುಖಾಂತರ ಅವರಿದ್ದ ಸ್ಥಳಕ್ಕೆ ಹಿಂಬಾಲಿಸಿಕೊಂಡು ಬಂದಿದ್ದರು. ಅಮಿತ್ ಮೃತಪಟ್ಟ ಸುದ್ದಿ ತಿಳಿದ ನಂತರ ಶ್ರುತಿಗೌಡ ಲಾಡ್ಜ್‌ನಲ್ಲಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದರು' ಎಂದು ದೋಷಾರೋಪ ಪಟ್ಟಿಯಲ್ಲಿ ವಿವರಿಸಲಾಗಿದೆ. ಈ ಪ್ರಕರಣದ ಮತ್ತೊಬ್ಬ ಆರೋಪಿಯಾಗಿದ್ದ ರಾಜೇಶ್ ತಂದೆ ಗೋಪಾಲಕೃಷ್ಣ (82) ವಿಚಾರಣೆಗೂ ಮುನ್ನವೇ ಸಾವನ್ನಪ್ಪಿದ್ದರು.

ಅಮಿತ್ ಕೇಶವಮೂರ್ತಿ ಅಮೆರಿಕದಲ್ಲಿ ಎಲ್‌ಎಲ್‌ಎಂ ಸ್ನಾತಕೋತ್ತರ ಪದವಿ ಪಡೆದಿದ್ದರು. ನೆಲಮಂಗಲ ಮತ್ತು ಬೆಂಗಳೂರು ನಗರದಲ್ಲಿ ವಕೀಲಿಕೆ ನಡೆಸುತ್ತಿದ್ದರು.

ಮುಂಬೈ, ಚೆನ್ನೈ ನಂತರ ಬೆಂಗಳೂರಿಗೆ ಕರಡು ರಚನೆ

ಹವಾಮಾನ ಕ್ರಿಯಾಯೋಜನೆಗೆ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪ್ರಥಮ ಹವಾಮಾನ ಕ್ರಿಯಾಯೋಜನೆ (ಸಿಎಪಿ) ಕರಡು ಸಿದ್ಧಪಡಿಸಲು ಬಿಬಿಎಂಪಿ ಸಜ್ಜಾಗಿದೆ.

ಮುಂಬೈ, ಚೆನ್ನೈ ನಂತರ ಬೆಂಗಳೂರು ಸಿಎಪಿ ಕರಡು ಸಿದ್ಧಪಡಿಸಲಿದ್ದು, 2050ರ ವೇಳೆಗೆ 'ತಟಸ್ಥ ಇಂಗಾಲ(ಕಾರ್ಬನ್ ನ್ಯೂಟ್ರಲ್)' ಸಾಧಿಸುವ ನಗರವಾಗಿಸುವ ನೀಲನಕ್ಷೆ ತಯಾರಾಗಲಿದೆ. 269 ಕ್ರಿಯೆಗಳನ್ನು ಒಳಗೊಂಡಿರುವ ಯೋಜನೆಯನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಬುಧವಾರ ನಡೆದ ಸಭೆಯಲ್ಲಿ ಅಂತಿಮಗೊಳಿಸಲಾಯಿತು.

ಹವಾಮಾನ ವೈಪರೀತ್ಯ ಎದುರಿಸುವ 'ಸಿ40 ನಗರಗಳ ಜಾಗತಿಕ ಸಂಪರ್ಕ ಜಾಲ'ದಲ್ಲಿ ಬೆಂಗಳೂರು ಸಹ–ನಾಯಕತ್ವವನ್ನು ಹೊಂದಿದೆ. ಈ ನಗರಗಳ ಪಟ್ಟಿಯಲ್ಲಿ ಮುಂಬೈ, ದೆಹಲಿ, ಕೊಲ್ಕತ್ತ, ಚೆನ್ನೈ, ಅಹಮದಾಬಾದ್ ನಗರಗಳೂ ಇವೆ.

ಗ್ಲೋಬಲ್ ಕನ್‌ಸ್ಟಲ್ಟೆಂಟ್ ಆಗಿರುವ ವರ್ಲ್ಡ್ ರಿಸೋರ್ಸ್ ಇನ್‌ಸ್ಟಿಟ್ಯೂಟ್ (ಡಬ್ಲ್ಯುಆರ್‌ಐ) 269 ಕ್ರಿಯೆಗಳ ಯೋಜನೆಗಳನ್ನು ಪ್ರಸ್ತುತಪಡಿಸಿತ್ತು. ಇಂಧನ, ಕಟ್ಟಡ, ಸಾರಿಗೆ, ಘನತ್ಯಾಜ್ಯ ನಿರ್ವಹಣೆ, ವಾಯು ಗುಣಮಟ್ಟ, ನೀರು, ನಗರ ಯೋಜನೆ, ಹಸಿರೀಕರಣ, ಜೀವವೈವಿಧ್ಯ ಮತ್ತು ವಿಪತ್ತು ನಿರ್ವಹಣೆ ಸೇರಿದಂತೆ ಹಲವು ಕ್ರಿಯೆಗಳನ್ನು ಈ ಯೋಜನೆ ಒಳಗೊಂಡಿದೆ. ಈ 269 ಕ್ರಿಯೆಗಳಲ್ಲಿ 143 ಕ್ರಿಯೆಗಳಿಗೆ ಬಿಬಿಎಂಪಿ 'ಪ್ರಾಥಮಿಕವಾಗಿ' ಜವಾಬ್ದಾರಿಯನ್ನು ಹೊಂದಿದೆ.

ನಗರದಲ್ಲಿ ಗ್ರೀನ್‌ಹೌಸ್ ಗ್ಯಾಸ್ (ಜಿಎಚ್‌ಜಿ) ಹೊರಸೂಸುವಿಕೆಯನ್ನು ಕಡಿತಗೊಳಿಸುವುದು, ಹವಾಮಾನ ಬದಲಾವಣೆಯಿಂದ ಉಂಟಾಗುವ ವೈಪರೀತ್ಯಗಳ ವಿರುದ್ಧ ಸ್ಥಿತಿಸ್ಥಾಪಕವನ್ನು ನಿರ್ಮಿಸುವುದು 'ಬೆಂಗಳೂರು ಹವಾಮಾನ ಕ್ರಿಯಾಯೋಜನೆ'ಯ ಪ್ರಮುಖ ಉದ್ದೇಶವಾಗಿದೆ. 30 ವರ್ಷಗಳ ಹವಾಮಾನವನ್ನು ವಿಮರ್ಶಿಸಿ ಡಬ್ಲ್ಯುಆರ್‌ಐ ನಗರಗಳ ಜಿಎಚ್‌ಜಿ ಮಟ್ಟವನ್ನು 2019ರಲ್ಲಿ ಸಿದ್ಧಪಡಿಸಿದೆ ಎಂದು ಅಧಿಕಾರಿಗಳು ತಿಳಿಸಿದರು.

ಪ್ರಮುಖ ಉದ್ದೇಶಗಳು

- ನಗರವನ್ನು ಶೇ 90ರಷ್ಟು ಸಾರಿಗೆ ಆಧಾರಿತ ಅಭಿವೃದ್ಧಿ ಪ್ರದೇಶವನ್ನಾಗಿಸುವುದು.
- ಶೇ 75ರಷ್ಟು ಬಸ್‌ಗಳು, ಶೇ 90ರಷ್ಟು ಕಾರುಗಳು ಮತ್ತು ಬೈಕ್‌ಗಳು, ಶೇ 50ರಷ್ಟು ಸಾಗಣೆ ವಾಹನಗಳು 2050ರ ವೇಳೆಗೆ ಎಲೆಕ್ಟ್ರಿಕ್ ಅಥವಾ ಹೈಡ್ರೋಜನ್‌ನಿಂದ ಚಲಿಸಬೇಕು
- ಆರ್‌ಎಂಪಿ 2041 ಅನ್ನು ಸಿದ್ಧಪಡಿಸಿ, ಅಳವಡಿಸಿಕೊಳ್ಳುವುದು. ಇದಕ್ಕಾಗಿ ಮಾಸ್ಟರ್ ಪ್ಲಾನ್ ಸಮಿತಿಯನ್ನು 2025ರೊಳಗೆ ರಚಿಸುವುದು.
- ನಗರದಲ್ಲಿ 'ಹಸಿರು ಹೊದಿಕೆ'ಯನ್ನು 2030ರ ವೇಳೆಗೆ ಶೇ 10 ಹಾಗೂ 2040ರ ವೇಳೆಗೆ ಶೇ 20ರಷ್ಟು ವೃದ್ಧಿಸುವುದು.
- ಹಸಿರೀಕರಣವನ್ನು ಶೇ 40ರಷ್ಟು ವೃದ್ಧಿಸಿಕೊಂಡು, ನಗರವನ್ನು 2040ರ ವೇಳೆಗೆ 'ಸ್ಪಾಂಜ್ ಸಿಟಿ'ಯನ್ನಾಗಿಸುವುದು.
- ನಗರದಲ್ಲಿ ಪ್ರಸ್ತುತ ಪ್ರತಿ ವ್ಯಕ್ತಿಗೆ ಸಾರ್ವಜನಿಕ ಬಳಕೆಯ ಪ್ರದೇಶ 2.2 ಚದರ ಮೀಟರ್ ಇದ್ದು, ಅದನ್ನು 2050ರ ವೇಳೆಗೆ 6 ಚದರ ಮೀಟರ್‌ಗೆ ವೃದ್ಧಿಸುವುದು.
- ನಗರದಲ್ಲಿ ವಿದ್ಯುತ್ ಉತ್ಪಾದನೆ ಗ್ರಿಡ್‌ಗಳನ್ನು 2050ರ ವೇಳೆಗೆ ಶೇ 90ರಷ್ಟು ಹೆಚ್ಚಿಸುವುದು.
- 2030ರ ವೇಳೆಗೆ ಶೇ 42ರಷ್ಟು ಹೊಸ ವಸತಿ ಕಟ್ಟಡಗಳು, ಶೇ 48ರಷ್ಟು ಹೊಸ ವಾಣಿಜ್ಯ ಕಟ್ಟಡಗಳು, ಮೇಲ್ಛಾವಣಿ ನಿರ್ಮಾಣಕ್ಕೆ ಇನ್ಸುಲೇಟೆಡ್ ತಂತ್ರಜ್ಞಾನ ಬಳಸುವುದು.
- ವಾರ್ಡ್ ಮಟ್ಟದಲ್ಲಿ ಘನತ್ಯಾಜ್ಯ ನಿರ್ವಹಣೆಯ ಮೈಕ್ರೊ ಪ್ಲಾನ್ ಅನ್ನು 2025ಕ್ಕೆ ಅನುಷ್ಠಾನಗೊಳಿಸುವುದು.
- 2027ರ ವೇಳೆಗೆ ಶೇ 100ರಷ್ಟು ತ್ಯಾಜ್ಯ ವಿಂಗಡಣೆ, ತ್ಯಾಜ್ಯ ಸುರಿಯುವುದರಿಂದ ಮುಕ್ತವಾಗುವುದು.
- ಮುಚ್ಚಿಹೋಗಿರುವ ಭೂಭರ್ತಿ ಸ್ಥಳಗಳನ್ನು 2030ರೊಳಗೆ 'ಹಸಿರು ತಾಣ ಅಥವಾ ಉದ್ಯಾನ'ಗಳನ್ನಾಗಿ ಪರಿವರ್ತಿಸುವುದು.
- 2026ರ ವೇಳೆಗೆ ವಾಯು ಮಾಲಿನ್ಯ ಮಟ್ಟವನ್ನು ಶೇ 40ರಷ್ಟು ಕಡಿತಗೊಳಿಸುವುದು.
- 2025ರ ವೇಳೆಗೆ ಎಲ್ಲರಿಗೂ ನೀರು ಮತ್ತು ಒಳಚರಂಡಿ ಸೌಲಭ್ಯ ಕಲ್ಪಿಸುವುದು.
- ಶೇ 60ರಷ್ಟು ತ್ಯಾಜ್ಯ ನೀರನ್ನು ಸಂಸ್ಕರಣೆ ಮಾಡಲು ತಂತ್ರಜ್ಞಾನ ಅಳವಡಿಸಿಕೊಳ್ಳುವುದು. 2050ರ ವೇಳೆಗೆ ಶೇ 35ರಷ್ಟು ನೀರನ್ನು ಮರುಬಳಕೆ ಮಾಡಿಕೊಳ್ಳುವುದು.
- 2030ರ ವೇಳೆಗೆ ಎಲ್ಲ ಕೆರೆಗಳು ಮತ್ತು ಜಲ ಮೂಲಗಳನ್ನು ಪುನರುಜ್ಜೀವನಗೊಳಿಸುವುದು.
- ವಿಪತ್ತು ಸಂಕಷ್ಟ ಕಡಿತ ಯೋಜನೆಯನ್ನು ಅಳವಡಿಸಿಕೊಂಡು ನಗರಮಟ್ಟದ ವಿಪತ್ತು ನಿರ್ವಹಣೆ ಯೋಜನೆಯನ್ನು 2025ರೊಳಗೆ ಸದೃಢಗೊಳಿಸುವುದು.



ಇಂದು ಚಿತ್ರಕಲಾ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಾವಿದರಾದ ಶಾಂತಿ ಸೂರಜ್ ಮತ್ತು ಜೋಶೀಲಾ ಎಸ್.ವಿ. ಅವರು 'ಜೋಷಾ' ಶೀರ್ಷಿಕೆಯಡಿ ಮೈಸೂರು ಸಾಂಪ್ರದಾಯಿಕ ವರ್ಣಚಿತ್ರಗಳ ಪ್ರದರ್ಶನವನ್ನು ಇದೇ 16ರಿಂದ 19ರವರೆಗೆ ಕುಮಾರಕೃಪಾ ರಸ್ತೆಯಲ್ಲಿರುವ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಹಮ್ಮಿಕೊಂಡಿದ್ದಾರೆ.



ಗುರುವಾರ ಬೆಳಿಗ್ಗೆ 11.30ಕ್ಕೆ ಉದ್ಘಾಟನೆ ಸಮಾರಂಭ ನಡೆಯಲಿದೆ. ಕಲಾವಿದರಾದ ಗೋವಿಂದರಾಜು ಜೀಯರ್, ಎಂ.ಜೆ. ಕಮಲಾಕ್ಷಿ ಹಾಗೂ ಶ್ಯಾಮಲಾ ರಮಾನಂದ ಅವರು ಗೌರವ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಪ್ರತಿನಿತ್ಯ ಬೆಳಿಗ್ಗೆ 10.30ರಿಂದ ಸಂಜೆ 5.30ರವರೆಗೆ ಚಿತ್ರಕಲಾ ಪ್ರದರ್ಶನ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

SIR M. VISWESWARAYA LAYOUT WELFARE ASSOCIATION (R) (1-9 BLOCKS)
No. 536, 3rd Block, Sir.M. Visweswaraya Layout, Ullalu Main Road Bangalore-560056. | email : sirmvisweswarayalayout@gmail.com
RECREATION CENTRE MEMBERSHIP
Association Offering Recreation Centre (Social, Cultural and Sports) Membership exclusively for Sir M. Visweswaraya Layout BDA properties owners only, we are developing Recreation Centre in 1.5 acres BDA CA Site with all modern amenities, only few membership available.
For more details Contact Association : 9632377119, 8431204501

ರನ್‌ವೇನಲ್ಲಿ ಬೀದಿ ನಾಯಿ: ವಿಮಾನ ವಾಪಸ್!

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಗೋವಾಗೆ ಸೋಮವಾರ ಮಧ್ಯಾಹ್ನ 12.55ರ ಸುಮಾರಿಗೆ 180 ಪ್ರಯಾಣಿಕರನ್ನು ಹೊತ್ತು ಹೊರಟ ವಿಸ್ತಾರ ವಿಮಾನ, ಗೋವಾ ವಿಮಾನ ನಿಲ್ದಾಣದ ರನ್‌ವೇಯಲ್ಲಿ ಬೀದಿನಾಯಿ ಕಾಣಿಸಿಕೊಂಡಿದ್ದರಿಂದ ವಾಪಸ್ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದಿದೆ.

ಲ್ಯಾಂಡ್ ಮಾಡಲು ಅನುಮತಿ ಕೇಳಿದಾಗ; ರನ್ ವೇ ಮೇಲೆ ಬೀದಿನಾಯಿ ಓಡಾಡುತ್ತಿದ್ದ ದೃಶ್ಯ ಕಂಡು ಬಂದಿದೆ. ತಕ್ಷಣವೇ ವಿಮಾನದ ಸುರಕ್ಷತೆ ದೃಷ್ಟಿಯಿಂದ ಅವಕಾಶ ನಿರಾಕರಿಸಲಾಗಿದೆ.



ಇದರಿಂದಾಗಿ ಕೆಐಎ ವಿಮಾನ ನಿಲ್ದಾಣಕ್ಕೆ ಮಧ್ಯಾಹ್ನ 3.05ಕ್ಕೆ ವಾಪಸ್ ಬರಬೇಕಾಯಿತು ಎಂದು ಏರ್‌ಲೈನ್ಸ್ ಮೂಲಗಳು ತಿಳಿಸಿವೆ. ನಂತರ ಸಂಜೆ 4.55ಕ್ಕೆ ತೆರಳಿದ ವಿಮಾನ, ಯಾವುದೇ ಅಡಚಣೆ ಇಲ್ಲದೆ ಗೋವಾವನ್ನು 6.15ಕ್ಕೆ ತಲುಪಿದೆ.

ಶಾಸಕ ಮುನಿರತ್ನಗೆ ಗೃಹ ಸಚಿವ ಜಿ.ಪರಮೇಶ್ವರ್ ಸಲಹೆ

'ಅನುದಾನಕ್ಕಾಗಿ ಬೇಡಿಕೆ ಸಲ್ಲಿಸಲಿ'

ಪ್ರಜಾವಾಣಿ ವಾರ್ತೆ

ಕೆಂಗೇರಿ: ಶಾಸಕ ಮುನಿರತ್ನ ಆರೋಪ ಮಾಡುವ ಬದಲು ಅನುದಾನಕ್ಕಾಗಿ ಬೇಡಿಕೆ ಸಲ್ಲಿಸಿದರೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಗೃಹ ಸಚಿವ ಜಿ.ಪರಮೇಶ್ವರ್ ತಿಳಿಸಿದರು.

ಬೆಂಗಳೂರು - ಮೈಸೂರು ರಸ್ತೆಯಲ್ಲಿ ನಿರ್ಮಾಣವಾಗಿರುವ ಸುಮಾರು ₹ 3.5 ಕೋಟಿ ವೆಚ್ಚದ ಕುಂಬಳಗೋಡು ನೂತನ ಪೊಲೀಸ್ ಠಾಣೆ ಕಟ್ಟಡವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಯಶವಂತಪುರ ಕ್ಷೇತ್ರದ ಅಭಿವೃದ್ದಿಗೆ ಸ್ಥಳೀಯ ಶಾಸಕರು ಅನುದಾನದ ಬೇಡಿಕೆ ಇಟ್ಟಿದ್ದರು. ಹೀಗಾಗಿ ಅನುದಾನ ಬಿಡುಗಡೆ ಮಾಡಲಾಗಿದೆ. ಎಸ್.ಟಿ. ಸೋಮಶೇಖರ್ ಮೂಲತಃ ಕಾಂಗ್ರೆಸಿಗ. ಅವರಿಗೂ ನನಗೆ ವಿಶೇಷ ಸಂಬಂಧ. ಹಾಗಾಗಿ ಅವರ ಕ್ಷೇತ್ರದ ಕಾರ್ಯಕ್ರಮಗಳಿಗೆ ಹಾಜರಾಗಿದ್ದೇನೆ. ಈ ಭೇಟಿಗೆ ವಿಶೇಷ ಅರ್ಥ ಕಲ್ಪಿಸಬೇಕಿಲ್ಲ' ಎಂದರು.

'ಎಸ್.ಟಿ.ಎಸ್ ಅವರನ್ನು ತೆರೆಮರೆಯಿಂದ ಕಾಂಗ್ರೆಸ್ಸಿಗೆ ಸೆಳೆಯುವ ಪ್ರಶ್ನೆಯಿಲ್ಲ. ಮಾಧ್ಯಮದವರ ಉಪಸ್ಥಿತಿ ನಡುವೆ ಆ ಘೋಷಣೆ ಮಾಡಲಾಗುವುದು' ಎಂದು ಹಾಸ್ಯ ಚಟಾಕಿ ಹಾರಿಸಿದರು.

'ಬಿ.ವೈ. ವಿಜಯೇಂದ್ರ ನೇಮಕಾತಿ ಬಿಜೆಪಿಯ ಆಂತರಿಕ ವಿಷಯ. ಈ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ. ಗೌರಿ ಶಂಕರ್ ಅವರು ಕಾಂಗ್ರೆಸ್ ಸೇರಿರುವುದರಿಂದ ತುಮಕೂರು ಭಾಗದಲ್ಲಿ ಪಕ್ಷಕ್ಕೆ ಮತ್ತಷ್ಟು ಮುನ್ನಡೆ ದೊರಕಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಶಾಸಕ ಎಸ್.ಟಿ. ಸೋಮಶೇಖರ್ ಮಾತನಾಡಿ, 'ಪೊಲೀಸ್ ಠಾಣೆ ಉದ್ಘಾಟನೆ ದಿನಾಂಕ ಮೊದಲೇ ನಿಗದಿಯಾಗಿತ್ತು. ಹೀಗಾಗಿ ಬಿ.ವೈ. ವಿಜಯೇಂದ್ರ ಅವರ ಅಧಿಕಾರ ಸ್ವೀಕಾರ ಕಾರ್ಯಕ್ರಮಕ್ಕೆ ಹಾಜರಾಗಲು ಸಾಧ್ಯವಾಗಲಿಲ್ಲ' ಎಂದು ಸ್ಪಷ್ಟನೆ ನೀಡಿದರು.

'ನೂತನ ಅಧ್ಯಕ್ಷರಾಗಿ ಬಿ.ವೈ. ವಿಜಯೇಂದ್ರ ಆಯ್ಕೆ ಸರಿಯಾಗಿದೆ. ಸಂಘಟನಾ ಚಾತುರ್ಯ ಹೊಂದಿರುವ ವಿಜಯೇಂದ್ರ ಪಕ್ಷವನ್ನು ಬಲಪಡಿಸಲಿದ್ದಾರೆ. ಮುಂಬರುವ ಲೋಕಸಭಾ ಚುನಾವಣೆ ಎದುರಿಸಲು ಅನುಕೂಲವಾಗಲಿದೆ' ಎಂದು ತಿಳಿಸಿದರು.

ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ, ಕುಂಬಳಗೋಡು ಗ್ರಾಮ ಪಂಚಾಯಿತಿ ಅಧ್ಯಕ್ಷ ಸಿ. ರಾಮಕೃಷ್ಣ, ಉಪಾಧ್ಯಕ್ಷ ಗೋಪಾಲಕೃಷ್ಣ, ಮುಖಂಡರಾದ ಚಿಕ್ಕರಾಜು, ನಂಜಪ್ಪ, ವಿ. ವೇಣುಗೋಪಾಲ್, ಕದರಪ್ಪ, ಮೋಹನ್ ಕುಮಾರ್, ಶಿವಮಾದಯ್ಯ, ಆರ್ಯ ಶ್ರೀನಿವಾಸ್, ಟಿ. ಪ್ರಭಾಕರ್, ಅನುಪಮಾ ಪಂಚಾಕ್ಷರಿ, ಪೊಲೀಸ್ ಇಲಾಖೆಯ ಕಾರ್ತಿಕ್ ರೆಡ್ಡಿ, ಟಿ.ವಿ. ಸುರೇಶ್, ಎಂ. ಪ್ರವೀಣ್, ವಿ. ಶಿವಾರೆಡ್ಡಿ ಇದ್ದರು.



ಕುಂಬಳಗೋಡು ನೂತನ ಪೊಲೀಸ್ ಠಾಣೆಯನ್ನು ಗೃಹ ಸಚಿವ ಜಿ.ಪರಮೇಶ್ವರ್ ಉದ್ಘಾಟಿಸಿದರು. ಶಾಸಕ ಎಸ್‌.ಟಿ.ಸೋಮಶೇಖರ್, ವಿಧಾನ ಪರಿಷತ್ ಸದಸ್ಯ ಟಿ.ಎ.ಶರವಣ, ಕುಂಬಳಗೋಡು ಗ್ರಾಪಂ ಅಧ್ಯಕ್ಷ ರಾಮಕೃಷ್ಣ, ಮಾಜಿ ಅಧ್ಯಕ್ಷ ಚಿಕ್ಕರಾಜು, ವಿ.ವೇಣುಗೋಪಾಲ್ ಮತ್ತಿತರರು ಇದ್ದಾರೆ



ಲಕ್ಕಸಂದ್ರ ಸ್ಕೈವಾಕ್: ವಿದ್ಯಾರ್ಥಿಗಳು, ರೋಗಿಗಳು, ವೃದ್ಧರಿಗೆ ಸಂಕಷ್ಟ

ತ್ಯಾಜ್ಯ, ಮದ್ಯ ಸೇವನೆ, ದರೋಡೆ ತಾಣ

• ಆರ್. ಮಂಜುನಾಥ್







ಹೊಸೂರು ಮುಖ್ಯರಸ್ತೆಯ ಲಕ್ಕಸಂದ್ರದಲ್ಲಿ ಸ್ಕೈ ವಾಕ್ ಸಮೀಪವೇ ವಾಹನಗಳ ನಡುವೆ ರಸ್ತೆ ದಾಟುತ್ತಿರುವ ಪ್ರಯಾಣಿಕರು (ಮೊದಲ ಚಿತ್ರ). ಹೊಸೂರು ಮುಖ್ಯರಸ್ತೆಯಲ್ಲಿ ಡಿವೈಡರ್ ದಾಟುತ್ತಿರುವ ಆಸ್ಪತ್ರೆ ಸಿಬ್ಬಂದಿ (ಮಧ್ಯದ ಚಿತ್ರ). ಲಕ್ಕಸಂದ್ರ ಸ್ಕೈವಾಕ್ ಲಿಫ್ಟ್‌ನಲ್ಲಿ ಮದ್ಯದ ಬಾಟಲ್‌ಗಳು, ತ್ಯಾಜ್ಯವನ್ನು ಸುರಿದಿರುವುದು
—ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಬೆಂಗಳೂರು: ಮಣ್ಣು ತುಂಬಿ ತುಕ್ಕು ಹಿಡಿದಿರುವ ಮೆಟ್ಟಿಲುಗಳು, ಆರಂಭದಲ್ಲೇ ಉಗುಳು, ತ್ಯಾಜ್ಯದ ಕೊಳಕು, ನೆಲ ಅಂತಸ್ತಿನಲ್ಲಿ ಬಾಗಿಲು ತೆರೆಯದ ಲಿಫ್ಟ್, ಮೇಲಸ್ತಿನಲ್ಲಿ ಮದ್ಯ ಸೇವನೆಯ ತಾಣವಾಗಿರುವ ಲಿಫ್ಟ್ ಸ್ಥಳ, ರಾತ್ರಿಯಾದರೆ ಕಳ್ಳಕಾಕರ ಭಯ...

ಇದು ಲಕ್ಕಸಂದ್ರದ ಬಳಿ ಇರುವ ಸ್ಕೈವಾಕ್ ಚಿತ್ರಣ. ಲಕ್ಕಸಂದ್ರ ನಿವಾಸಿಗಳು, ಬೆಂಗಳೂರು ದಂತ ವಿಜ್ಞಾನ ಸಂಸ್ಥೆ, ನಿಮ್ಹಾನ್ಸ್, ಕ್ರೈಸ್ಟ್ ಕಾಲೇಜಿಗೆ ಹೋಗುವ ವಿದ್ಯಾರ್ಥಿಗಳು, ರೋಗಿಗಳು, ವೃದ್ಧರಿಗೆ ರಸ್ತೆ ದಾಟಲು ಇರುವ ಏಕೈಕ ಮಾರ್ಗ ಈ ಸ್ಕೈವಾಕ್. ಅವ್ಯವಸ್ಥೆಯ ತಾಣವಾಗಿರುವ ಇದನ್ನೇ ಜನರು ಅನಿವಾರ್ಯವಾಗಿ ಉಪಯೋಗಿಸಬೇಕಾಗಿದೆ.

ಹೊಸೂರು ಮುಖ್ಯರಸ್ತೆಯ ಲಕ್ಕಸಂದ್ರದ ಬಳಿ ಇರುವ ಈ ಸ್ಕೈವಾಕ್ ನಿರ್ಮಾಣವಾಗಿ ಕೆಲವು ವರ್ಷಗಳಾಗಿವೆ. ಅಂದಿನಿಂದಲೂ ಲಿಫ್ಟ್/ ಎಲಿವೇಟರ್ ಕಾರ್ಯಾರಂಭ ಮಾಡಿಲ್ಲ. ಹೀಗಾಗಿ, ಲಿಫ್ಟ್ ತ್ಯಾಜ್ಯ ಹಾಗೂ ಮದ್ಯ ಸೇವಿಸುವ ತಾಣವಾಗಿದೆ. ಎಲ್ಲ ರೀತಿಯ ಕಸವನ್ನು ಲಿಫ್ಟ್ ಒಳಭಾಗಕ್ಕೆ ತುಂಬಲಾಗಿದೆ. ಇದು ದುರ್ವಾಸನೆ ಬೀರುವ ತಾಣವಾಗಿದೆ.

ಸ್ಕೈವಾಕ್ ಹತ್ತುವ ಜಾಗದಲ್ಲಿ ಉಗುಳುತ್ತಾರೆ. ಜತೆಗೆ ಎಲ್ಲ ತರಹದ ತ್ಯಾಜ್ಯವನ್ನೂ ಸುರಿಯಲಾಗುತ್ತಿದೆ. ಮೆಟ್ಟಿಲುಗಳ ಮೇಲೂ ಇದೇ ಅವಸ್ಥೆ. ಹೀಗಾಗಿ ಜನರಿಗೆ ಮೆಟ್ಟಿಲುಗಳ ಮೇಲೆ ಹೆಜ್ಜೆ ಇಡಲೂ ಸಮಸ್ಯೆಯಾಗುತ್ತಿದೆ. ಜೋರು ಮಳೆಬಂದಾಗ ಮಾತ್ರ ಈ ಮೆಟ್ಟಿಲುಗಳು ಸ್ವಚ್ಛವಾಗುತ್ತವೆ. ಇಲ್ಲದಿದ್ದರೆ ಮಣ್ಣು–ತ್ಯಾಜ್ಯವೇ ತುಂಬಿಕೊಂಡಿರುತ್ತದೆ ಎಂಬುದು ಸ್ಥಳೀಯರ ಮಾತು.

ಕತ್ತಲು ಆವರಿಸಿಕೊಳ್ಳುತ್ತಿದ್ದಂತೆಯೇ ಲಕ್ಕಸಂದ್ರದ ಸ್ಕೈವಾಕ್ ಕಳ್ಳಕಾಕರ ತಾಣವಾಗುತ್ತದೆ. ದೀಪದ ವ್ಯವಸ್ಥೆ ಇಲ್ಲದ್ದರಿಂದ, ಮದ್ಯಪಾನ, ಧೂಮಪಾನ ಮಾಡುವ ಗುಂಪು ಇಲ್ಲಿರುತ್ತದೆ. ಧೈರ್ಯ ಮಾಡಿ ನಾಗರಿಕರು ಸ್ಕೈವಾಕ್ ಹತ್ತಿದರೆ ಅವರನ್ನು ಬೆದರಿಸಿ, ಸುಲಿಗೆ ಮಾಡುವವರೂ ಇರುತ್ತಾರೆ. ಮೊಬೈಲ್, ಪರ್ಸ್, ಚೈನ್‌ನಂತಹ ವಸ್ತುಗಳನ್ನು ಸುಲಿಗೆ ಮಾಡಿರುವ ಪ್ರಕರಣಗಳು ದಾಖಲಾಗಿವೆ ಎಂದು ಸ್ಥಳೀಯ ನಿವಾಸಿ ರಂಜನ್ ಹೇಳಿದರು.

ಡಿವೈಡರ್ ದಾಟುವ ಸಾಹಸ: ಲಕ್ಕಸಂದ್ರದ ಸ್ಕೈವಾಕ್‌ನ ದುಃಸ್ಥಿತಿಯಿಂದ ವಿದ್ಯಾರ್ಥಿಗಳು ಹಾಗೂ ಆಸ್ಪತ್ರೆ ಸಿಬ್ಬಂದಿ ರಸ್ತೆಯ ಡಿವೈಡರ್ ಅನ್ನೇ ಹತ್ತಿ ರಸ್ತೆ ದಾಟುವ ಸಾಹಸವನ್ನು ಪ್ರತಿ ನಿತ್ಯವೂ ಇಲ್ಲಿ ಮಾಡುತ್ತಲೇ ಇರುತ್ತಾರೆ. ವಾಹನ ದಟ್ಟಣೆಯಲ್ಲಿ ಅಪಾಯವನ್ನೂ ಲೆಕ್ಕಿಸದೆ ಡಿವೈಡರ್ ದಾಟುವುದನ್ನು ತಡೆಯಲೂ ಇಲ್ಲಿ 'ಯಾರೂ' ಇರುವುದಿಲ್ಲ.

ಸ್ಕೈವಾಕ್‌ನ ದುಃಸ್ಥಿತಿ ಬಗ್ಗೆ ಸ್ಥಳೀಯ ಜನಪ್ರತಿನಿಧಿಗಳು, ಬಿಬಿಎಂಪಿಗೆ ಸಾಕಷ್ಟು ಬಾರಿ ದೂರು ನೀಡಿದ್ದರೂ ಯಾರೂ ಕ್ರಮ ಕೈಗೊಂಡಿಲ್ಲ. ಅಪಾಯ, ಅಪಘಾತಗಳು ಹೆಚ್ಚಾಗುವ ಮೊದಲು ರಸ್ತೆ ದಾಟಲು ನಾಗರಿಕರಿಗೆ ಸುರಕ್ಷಿತ ಮಾರ್ಗ ಕಲ್ಪಿಸಲು ಕೊಡಬೇಕೆಂದು ಸ್ಥಳೀಯರು ಒತ್ತಾಯಿಸುತ್ತಿದ್ದಾರೆ.

ನಿಮ್ಮಲ್ಲೂ ಸ್ಕೈವಾಕ್ ಸಮಸ್ಯೆಗಳಿದ್ದರೆ ಬರೆದು ಕಳಿಸಿ
9606038256

ರಾಜಧಾನಿ ಜನರ ಧ್ವನಿ

ದೂರು ನೀಡಿದರೂ ಪ್ರಯೋಜನ ಇಲ್ಲ

ವರ್ಷಗಳ ಹಿಂದೆ ಲಕ್ಕಸಂದ್ರದ ಸ್ಕೈವಾಕ್ ನಿರ್ಮಿಸಲಾಗಿದೆ. ಆದರೆ ಇದು ಈಗ ಶೌಚಾಲಯದಂತಾಗಿದೆ. ಸ್ವಚ್ಛಗೊಳಿಸುವವರೇ ಇಲ್ಲ. ಮೆಟ್ಟಿಲುಗಳು ಹತ್ತಲು ಸುರಕ್ಷಿತವಾಗಿಲ್ಲ. ಎರಡು ಎಲಿವೇಟರ್‌ಗಳಿದ್ದರೂ ಕಾರ್ಯನಿರ್ವಹಿಸುತ್ತಿಲ್ಲ. ಹಲವು ಬಾರಿ ಬಿಬಿಎಂಪಿಗೆ ದೂರು ನೀಡಲಾಗಿದೆ. ಕನಿಷ್ಠ ಸ್ವಚ್ಛತೆ ಕಾರ್ಯವನ್ನೂ ನಡೆಸಿಲ್ಲ. ಸ್ಥಳೀಯ ಜನಪ್ರತಿನಿಧಿಗಳಿಗೂ ದೂರು ನೀಡಿದ್ದರೂ ಯಾರೂ ಇತ್ತ ಕಡೆ ಸುಳಿದಿಲ್ಲ. ಸದಾ ವಾಹನ ದಟ್ಟಣೆಯಿಂದಿರುವ ರಸ್ತೆಯನ್ನು ದಾಟಲು ಸ್ಕೈವಾಕ್ ಅಲ್ಲದೆ ಬೇರೆ ದಾರಿ ಇಲ್ಲ. ಅಂಚೆ ಕಚೇರಿ, ಬ್ಯಾಂಕ್, ಆಸ್ಪತ್ರೆಗೆ ತೆರಳಲು ನಿವಾಸಿಗಳು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ. ವೃದ್ಧರು, ಅಂಗವಿಕಲರು, ರೋಗಿಗಳು ಸ್ಕೈವಾಕ್ ಬಳಸುವುದಾದರೂ ಹೇಗೆ?'


ಡಾ. ಆಶಾ ಕೃಷ್ಣಸ್ವಾಮಿ, ಲಕ್ಕಸಂದ್ರ

ಕೆ.ಎಚ್. ರಸ್ತೆಯಲ್ಲೂ ಲಿಫ್ಟ್ ಬಂದ್!

ಕೆಂಗಲ್ ಹನುಮಂತಯ್ಯ ರಸ್ತೆಯಲ್ಲಿರುವ (ಡಬಲ್ ರೋಡ್) ಸ್ಕೈವಾಕ್‌ನ ಲಿಫ್ಟ್ ಕೂಡ ಕಾರ್ಯನಿರ್ವಹಿಸುತ್ತಿಲ್ಲ. 'ನಾಲ್ಕಾರು ವರ್ಷಗಳ ಹಿಂದೆ ನಿರ್ಮಿಸಲಾಗಿರುವ ಈ ಸ್ಕೈವಾಕ್‌ನ ಲಿಫ್ಟ್ ಕಾರ್ಯನಿರ್ವಹಿಸಿರುವುದನ್ನು ನೋಡಿಯೇ ಇಲ್ಲ' ಎಂದು ಸ್ಥಳೀಯರು ಹೇಳುತ್ತಾರೆ. ಸ್ಕೈವಾಕ್ ನಿರ್ವಹಣೆಯನ್ನೂ ಯಾರೂ ಮಾಡುತ್ತಿಲ್ಲ. ಆದರೆ, ಜಾಹೀರಾತು ಫಲಕಗಳು ಮಾತ್ರ ರಾರಾಜಿಸುತ್ತಿವೆ.

'ಸ್ಕೈವಾಕ್‌ನ ಲಿಫ್ಟ್ ಚಾಲನೆಯಲ್ಲಿ ಇಲ್ಲ. ಹೀಗಾಗಿ ವೃದ್ಧರು, ಮಹಿಳೆಯರು ಹಾಗೂ ಮಕ್ಕಳು ದುಃಸ್ಥಿತಿಯಲ್ಲಿರುವ ಮೆಟ್ಟಿಲುಗಳಲ್ಲೇ ಓಡಾಡುತ್ತಾರೆ. ಹಲವರು ಡಿವೈಡರ್‌ಗಳನ್ನು ಹತ್ತಿ, ಅಪಾಯದಲ್ಲಿಯೇ ರಸ್ತೆ ದಾಟುತ್ತಾರೆ. ಈ ಸಂದರ್ಭದಲ್ಲಿ ಹಲವು ಅಪಘಾತಗಳೂ ಸಂಭವಿಸಿವೆ ' ಎಂದು ಸ್ಥಳೀಯ ಅಂಗಡಿ ಮಾಲೀಕ ರಂಗನಾಥ್ ಹೇಳಿದರು.

ಕಾಲಿಡಲೂ ಅಸಹ್ಯ



ಬಸ್ ಇಳಿದು ಮತ್ತೊಂದು ಭಾಗದಲ್ಲಿರುವ ಕಾಲೇಜಿಗೆ ಹೋಗಲು ಇಲ್ಲಿ ಇರುವುದೇ ಒಂದು ಸ್ಕೈವಾಕ್. ಆದರೆ, ಇಲ್ಲಿ ಕಸ ತುಂಬಿದ್ದು ಕಾಲಿಡಲೂ ಅಸಹ್ಯವಾಗುತ್ತದೆ. ಮೂಗು ಮುಚ್ಚಿಕೊಂಡು ಅನಿವಾರ್ಯವಾಗಿ ಓಡಾಡುತ್ತಿದ್ದೇವೆ

ಸುಹಾಸ್, ವಿದ್ಯಾರ್ಥಿ

ಮೆಟ್ಟಿಲುಗಳಲ್ಲಿ ತ್ಯಾಜ್ಯ



ಲಿಫ್ಟ್ ಕಾರ್ಯಾಚರಣೆ ನಡೆಸಿದ್ದು ನಾನಂತೂ ನೋಡಿಲ್ಲ. ವರ್ಷಗಳಿಂದ ಹೀಗೆಯೇ ದೂಳು ತುಂಬಿಕೊಂಡು ನಿಂತಿದೆ. ಸ್ಕೈವಾಕ್ ಮೆಟ್ಟಿಲುಗಳು ಕಿರಿದಾಗಿರುವ ಜತೆಗೆ ತ್ಯಾಜ್ಯದಿಂದ ಕೂಡಿವೆ. ಸ್ವಚ್ಛತೆಯನ್ನಾದರೂ ಕಾಪಾಡಬೇಕಿದೆ

ವಸಂತಾ, ಬೆಂಗಳೂರು ಡೇರಿ ಕಾರ್ಮಿಕರು

ದುರ್ವಾಸನೆಯ ತಾಣ



ಸ್ಕೈವಾಕ್‌ನಲ್ಲಿ ಹತ್ತಿ, ಇಳಿಯುವವರೆಗೂ ದುರ್ವಾಸನೆ. ಕಸ ಹಾಕುವ ಜೊತೆಗೆ ಮದ್ಯ ಕುಡಿಯುವ ತಾಣವೂ ಇದಾಗಿದ್ದು, ಓಡಾಡಲು ಕಷ್ಟವಾಗಿದೆ.

ಸಿಮ್ನಿ, ಐಟಿ ಉದ್ಯೋಗಿ

ಸುದ್ದಿ 2 ನಿಮಿಷ

ನಾಯಿ ಕಚ್ಚಿದ ಪ್ರಕರಣ: ನಟ ದರ್ಶನ್ ವಿಚಾರಣೆ

ಬೆಂಗಳೂರು: ಮಹಿಳಾ ವಕೀಲರೊಬ್ಬರಿಗೆ ನಾಯಿ ಕಚ್ಚಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ನಟ ದರ್ಶನ್ ಅವರು ರಾಜರಾಜೇಶ್ವರಿನಗರ ಪೊಲೀಸ್ ಠಾಣೆಗೆ ಬುಧವಾರ ವಿಚಾರಣೆಗೆ ಹಾಜರಾಗಿದ್ದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ದರ್ಶನ್ ಅವರಿಂದ ಪೊಲೀಸರು ಹೇಳಿಕೆ ದಾಖಲಿಸಿಕೊಂಡು ಕಳುಹಿಸಿದರು ಎಂದು ಮೂಲಗಳು ತಿಳಿಸಿವೆ.

ಖುದ್ದು ವಿಚಾರಣೆಗೆ ಹಾಜರಾಗುವಂತೆ ನ.11ರಂದು ದರ್ಶನ್ ಅವರಿಗೆ ಪೊಲೀಸರು ನೋಟಿಸ್ ಜಾರಿ ಮಾಡಿದ್ದರು. ಆದರೆ, ಅವರು ವಿಚಾರಣೆಗೆ ಹಾಜರಾಗಿರಲಿಲ್ಲ. ಎರಡನೇ ಬಾರಿಗೆ ನೋಟಿಸ್ ಜಾರಿ ಮಾಡಿದ್ದರಿಂದ ವಿಚಾರಣೆಗೆ ಹಾಜರಾಗಿದ್ದರು ಎಂದು ಮೂಲಗಳು ತಿಳಿಸಿವೆ.

'ಅ.28ರಂದು ಸ್ಪರ್ಶ ಆಸ್ಪತ್ರೆಯಲ್ಲಿ ಪಾರ್ಶ್ವವಾಯು ದಿ ನಾ ಚ ರ ಣೆ ನಿಮಿತ್ತ ಆಯೋಜಿಸಿದ್ದ ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಬಿಇಎಂಎಲ್ 5ನೇ ಹಂತದ ನಿವಾಸಿಯಾದ ಅಮಿತಾ ಜಿಂದಾಲ್ ಅವರು ಕಾರಿನಲ್ಲಿ ತೆರಳಿದ್ದರು. ದರ್ಶನ್ ಮನೆ ಎದುರಿನ ಖಾಲಿ ಪ್ರದೇಶದಲ್ಲಿ ತಮ್ಮ ಕಾರು ನಿಲುಗಡೆ ಮಾಡಿದ್ದರು. ದರ್ಶನ್ ಅವರ ಮನೆಯ ಶ್ವಾನಗಳು ದಾಳಿ ನಡೆಸಿ ಗಾಯಗೊಳಿಸಿದ್ದವು. ಘಟನೆ ಸಂಬಂಧ ಅಮಿತಾ ಅವರು ದೂರು ನೀಡಿದ್ದರು. ದರ್ಶನ್ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿತ್ತು'

'ದೂರಿನ ಅನ್ವಯ ಕಾನೂನು ಪ್ರಕ್ರಿಯೆ ನಡೆಸಲಾಗುತ್ತಿದೆ. ಘಟನೆ ನಡೆದ ಸಂದರ್ಭದ ಸಿಸಿ ಟಿವಿ ದೃಶ್ಯಾವಳಿಗಳು ಲಭ್ಯವಾಗಿಲ್ಲ. ಅದನ್ನು ನೀಡುವಂತೆ ದರ್ಶನ್ ಅವರಿಗೆ ತಿಳಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಶ್ವಾನ ನೋಡಿಕೊಳ್ಳುತ್ತಿದ್ದ ಯುವಕ ನನ್ನ ಅಭಿಮಾನಿ. ಆತನಿಗೆ ಎಚ್ಚರಿಕೆ ವಹಿಸುವಂತೆ ಸೂಚನೆ ನೀಡಿದ್ದೆ. ಆದರೆ, ಆತ ನಿರ್ಲಕ್ಷ್ಯ ವಹಿಸಿದ್ದರಿಂದ ಈ ಅಚಾತುರ್ಯವಾಗಿದೆ. ಮನೆಯ ಸುತ್ತ ಹೊಸದಾಗಿ ಹಾಕಿರುವ ಸಿಸಿ ಟಿವಿ ಕ್ಯಾಮೆರಾದ ದೃಶ್ಯಾವಳಿ ನೀಡುವುದಾಗಿ ದರ್ಶನ್ ವಿಚಾರಣೆ ವೇಳೆ ತಿಳಿಸಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.



ಅಪಘಾತ: ಯುವಕ ಸಾವು

ಬೆಂಗಳೂರು: ಎಚ್‌ಎಎಲ್ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯ ಮಾರತ್‌ಹಳ್ಳಿಯ ಕಾಡಬೀಸನಹಳ್ಳಿ ಸೇವಾ ರಸ್ತೆಯಲ್ಲಿ ಮಿನಿಬಸ್–ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಬಿ.ಟೆಕ್ ಪದವೀಧರ ಮೃತಪಟ್ಟಿದ್ದಾರೆ.

ಒಡಿಶಾದ ಬಿಸ್ವಾಸ್ ದಾಲ್ (26) ಮೃತಪಟ್ಟವರು.

'ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಅವರು ಇತ್ತೀಚೆಗೆ ಕೆಲಸ ಬಿಟ್ಟಿದ್ದರು. ಬೇರೆ ಕೆಲಸ ಹುಡುಕುತ್ತಿದ್ದರು. ಬುಧವಾರ ಬೆಳಿಗ್ಗೆ ಬೈಕ್‌ನಲ್ಲಿ ತನ್ನ ಇಬ್ಬರು ಸ್ನೇಹಿತರನ್ನು ಕೂರಿಸಿಕೊಂಡು ಸೇವಾ ರಸ್ತೆಯಲ್ಲಿ ತೆರಳುತ್ತಿದ್ದಾಗ ಎದುರಿನಿಂದ ಬಂದ ಮಿನಿಬಸ್ ಡಿಕ್ಕಿ ಹೊಡೆದಿದೆ. ಗಂಭೀರವಾಗಿ ಗಾಯಗೊಂಡಿದ್ದ ಬಿಸ್ವಾಸ್ ಅವರು ಸ್ಥಳದಲ್ಲೇ ಮೃತಪಟ್ಟರು. ಗಾಯಗೊಂಡ ಉಳಿದ ಇಬ್ಬರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಅಪಾಯದಿಂದ ಪಾರಾಗಿದ್ದಾರೆ' ಎಂದು ಪೊಲೀಸರು ತಿಳಿಸಿದ್ಧಾರೆ.

ಡಿಜಿಟಲ್ ನಕ್ಷೆ: ರಾಜ್ಯದ ಮೊದಲ ಪ್ರಯೋಗ

ಕನಕಪುರ: ಬ್ರಿಟಿಷರ ಕಾಲದ ನಕ್ಷೆಗೆ ಪರ್ಯಾಯವಾಗಿ ಡಿಜಿಟಲ್ ನಕ್ಷೆ ತಯಾರಿಸಲು ರಾಜ್ಯದಲ್ಲೇ ಮೊದಲ ಬಾರಿಗೆ ಪ್ರಾಯೋಗಿಕ ಪರೀಕ್ಷೆ ನಡೆದ ಚಿಕ್ಕೊಪ್ಪ ಗ್ರಾಮಕ್ಕೆ ಕಂದಾಯ ಸಚಿವ ಕೃಷ್ಣಬೈರೇಗೌಡ ಬುಧವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಗ್ರಾಮದಲ್ಲಿ ಡಿಜಿಟಲ್ ತಂತ್ರಜ್ಞಾನ ಆಧಾರಿತ ಮರು ಭೂಮಾಪನ ಸರ್ವೆ ಕಾರ್ಯ ನಡೆಯುತ್ತಿದ್ದು ಈ ಬಗ್ಗೆ ಮಾಹಿತಿ ಪಡೆದರು.

ತಂತ್ರಜ್ಞಾನ ಆಧಾರಿತ ಮರು ಭೂಮಾಪನ ಸರ್ವೆ ಮಾಡಿಸಿ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಲಾವುದು. ಇದರಿಂದ ರೈತರಿಗೆ ಕರಾರು ದಾಖಲೆಗಳನ್ನು ನೀಡಲು ಸಾಧ್ಯವಾಗಲಿದೆ ಎಂದರು.

ವಾಹನ ಡಿಕ್ಕಿ: ಅಪರಿಚಿತ ವ್ಯಕ್ತಿ ಸಾವು

ಬೆಂಗಳೂರು: ಬಾಣಸವಾಡಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವ್ಯಕ್ತಿಗೆ ವಾಹನವೊಂದು ಡಿಕ್ಕಿ ಹೊಡೆದು, ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮೃತರ ಹೆಸರು ಹಾಗೂ ಊರು ಪತ್ತೆಯಾಗಿಲ್ಲ. ಬಾಣಸವಾಡಿ ಮುಖ್ಯರಸ್ತೆಯ ಚೌಡೇಶ್ವರಿ ಫುಡ್ ಕೋರ್ಟ್ ಎದುರಿನ ರಸ್ತೆ ದಾಟುವಾಗ ವಾಹನ ಡಿಕ್ಕಿಯಾಗಿದೆ. ಚಾಲಕ ವಾಹನ ನಿಲ್ಲಸದೇ ತೆರಳಿದ್ದಾನೆ ಎಂದು ಮೂಲಗಳು ಹೇಳಿವೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

ITI CENTRAL SCHOOL
Dooravaninagar, Bengaluru – 560016
Affiliated to CBSE New Delhi
REQUIRES: Dynamic, Self-Motivated, Result-oriented academicians with requisite qualification for the post of
PRINCIPAL
Qualifications: Post Graduate preferably in Science/Math stream with B.Ed. / M.Ed. (All First Class). Age: 50 to 55 years (Relaxation as per norms)
Experience: Trained and Experienced Post Graduate with at least 20 years of teaching experience out of which 3 years as Principal / Vice-principal of a reputed CBSE School with proven academic and administrative record.
The aspirant must be:
• Of Good communication skills preferably in English, Kannada & Hindi and other languages. • Good in academics as well as non-academics. • An able Human Resource Management personnel. • With good knowledge of CBSE Bye-Laws and rules & regulations as well as Karnataka School Education Rules & Regulations. • With Good Leadership Qualities, • With Good Knowledge of Computers and Accounts.
Salary with allowances as per Karnataka State Govt. pay scale.
A detailed comprehensive resume and a passport size photograph along with format and necessary supporting documents to be sent to: The Secretary, ITI Education Committee, Dooravaninagar, Bengaluru-560016. Softcopy to be sent to: admin@iticentralschool.edu.in
Last date of receiving soft/hard copy of resume: On or before 07th December 2023.
Note: Only Shortlisted candidates will be called for interview.

General

JOB OPPORTUNITY for Retired, Homemaker, Defence Banker's, Business People Fixed Salary 75K Per Month & Incentives. Locations:- Koramangala, Jayanagar, Rajajinagar. Contact:- 9108282236, 9108282237

BUS DRIVER: For Educational Institution at Nagarabhavi/ Vishweshwariah Layout. Attractive Salary. Food & Accommodation provided. Mobile: 9008542044. Apply: info@mccn.in; mountcarmelcollegeof nursing@gmail.com;

KISHORA VIDYA BHAVANA
Chintamani, Chikkaballapur District.
Over 50 years old reputed School requires
RESIDENTIAL PRINCIPAL
Post Graduate Candidates having brilliant academic record and over 15 years teaching experience and 5 years of administrative experience are preferred. They should be proficient in English with sound knowledge of state curriculum.
Benefits and Remuneration: befitting the experience and qualification.
Apply to:
Secretary, Kishora Vidya Bhavana, Chintamani - 563125
OR kishoravidyabhavana@gmail.com
Applications end on 30th November 2023

Marketing & Sales

CRESCENTS REALTORS & Interiors looking for female Sales Coordinator office manyata gate- 5, candidate must know good English & Excel call: 8088887878.

Multiple Vacancy

V3 MOULDING PVT LTD (Injection Moulding Company) requires Store/ Purchase Assistant and Quality line Inspector with 2 to 3 Yrs Experience for Bangalore location and Quality manager with 10+yrs experience for Shoolagiri location (TN) Please send resume to hr@v3moulding.com.

Security & Detectives

WANTED SECURITY Field Officer / Marketing Officer / Security Guards Contact: 9986569896 / 8951205667

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

PUBLIC NOTICE

PUBLIC NOTICE
ESTATE NOT FOR RESALE
Notice is hereby given to public that The Alageswar Estates Limited, having its Registered Office at New No. 41, Chockalingapuram 1st Street, Rayavaram, Pudukkottai, Tamil Nadu - 622506 with CIN U01131TN1943PLC000158 and Estate office at Alageswar Post,Koppa, Jayapura, Chikkamagaluru District, Karnataka-577148, is owning the Coffee and Tea Estate known as Alageswar Estates owning around 1,400 acres and the same is NOT FOR RESALE.
It is believed that some unscrupulous persons are misrepresenting, without authority, to the public and negotiating to sell the said estate ignoring the existing ownership, investments and encumbrance and the possession with the investing Directors who are owing the majority interest in the company shares and the estate.
Public are hereby informed that, any person dealing with any Director or other persons/agents are doing so at their own risk and liability and such agreements or arrangements will not be binding on the company or the existing investor purchaser, directors.
For, ALAGESWAR ESTATES LIMITED
GOUTHAM CHAND,
INVESTOR, PURCHASER & DIRECTOR

NOTICE
FMS
ಪೂರೈಕೆದಾರರಿಂದ ಪ್ರಸ್ತಾವನೆಗಳನ್ನು ವಿನಂತಿಸುವುದು (ಭದ್ರತೆ, ನಿರ್ವಹಣೆ, ಗೃಹ ನಿರ್ವಹಣೆ, STP/WTP ಇತ್ಯಾದಿ,) ಬೇಟಿನೀಡಿ
welworthcity.in/tenders

KARNATAKA REDDYJANA SANGHA
No.1, Mahayogi Vemana Road, 3rd Block, Koramangala, Bengaluru-560 034.
TENDER NOTICE
Tenders are invited from reputed Suppliers for supply of IOT Hardware Kits for Ability Enhancement Course Laboratory to ECE dept.- Vemana Institute of Technology. Approximate Cost: Rs.5,00,000/-
Last date for submitting sealed quotations: 23-11-2023 at 3.00pm
For more details, Visit our website: www.reddyjanasangha.org or Contact: 9742417857
President General Secretary

PUBLIC NOTICE
To Place your Classified Ads Contact
9731810277

PERSONAL

Lost

ದಾಖಲಾತಿ ಕಳೆದಿವೆ
ದಕ್ಷಿಣ ಮಗರಪಟ್ಟಾ ನಗರದ ಫೈನಲ್ ಎಂಪಿಟಿ–4 & 5 ಹೊಂದಿರುವ ಸುಮಾರು 74,112.29 ಚ.ಮೀ. ವಿಸ್ತೀರ್ಣ ಪ್ರದೇಶದಲ್ಲಿ ನಿರ್ಮಿಸಲಾಗಿರುವ ಸ್ಕೀಮ್–ಕಾಸ್ಮೋಸ್ ಎಂಬ ಕಟ್ಟಡದ ಬಿಲ್ಡಿಂಗ್ ನಂ. 5ರ ಒಂಬತ್ತನೇ ಮಹಡಿಯಲ್ಲಿರುವ, ಫ್ಲ್ಯಾಟ್ ನಂ. 906 ಹೊಂದಿರುವ, 909 ಚ.ಅ. ಬಿಲ್ಟಪ್ ಪ್ರದೇಶವುಳ್ಳ ಮತ್ತು 94 ಚ.ಅ. ವಿಸ್ತೀರ್ಣದ ಅಟ್ಯಾಚ್ಡ್ ಟೆರೇಸ್ ಹೊಂದಿರುವ ಮತ್ತು 956 ಚ.ಅ. ಚಾರ್ಜೆಬಲ್ ಕ್ಷೇತ್ರಫಲವುಳ್ಳ ಹಾಗೂ ನೆಲಮಡಿಯಲ್ಲಿ ಒಂದು ಕವರ್ಡ್ ಕಾರ್ ಪಾರ್ಕಿಂಗ್ ಸೌಲಭ್ಯವುಳ್ಳ, ಟೈಪ್–2 ಬಿಹೆಚ್‌ಕೆ ವಸತಿಯೋಗ್ಯ ಪ್ರಾಂಗಣಕ್ಕೆ ಸಂಬಂಧಿತ, ದಿನಾಂಕ 14/10/2005 ರಂದು (ಕ್ರ.ಸಂ. ಹೆಚ್‌ವಿಎಲ್–3/6140/2005) ಉಪ ನೋಂದಣಾಧಿಕಾರಿ ಕಚೇರಿ, ಹವೇಲಿ ನಂ. 3, ಪುಣೆ ಇವರಲ್ಲಿ ನೋಂದಾಯಿತ ಮೂಲ ಒಪ್ಪಂದಪತ್ರ, ನೋಂದಣಿಗೆ ಪಾವತಿಸಲಾದ ಇಂಡೆಕ್ಸ್–2 ಎಕ್ಸ್‌ಟ್ರ್ಯಾಕ್ಟ್ ರಸೀದಿ, 2021–2022ನೇ ಸಾಲಿಗೆ ಪಿಎಂಸಿ ಇವರಿಂದ ಪಡೆದಿರುವ ತೆರಿಗೆ ಬಿಲ್‌ಗಳು ಮತ್ತು ಪೇಮೆಂಟ್ ಬಿಲ್‌ಗಳು, ಷೇರು ಸರ್ಟಿಫಿಕೇಟ್‌ಗಳು, ಪ್ರಮೋಟರ್ ನೀಡಿರುವ ಸ್ವಾಧೀನತಾ ಪತ್ರ ಹಾಗೂ ನೋ ಡ್ಯೂಸ್ ಸರ್ಟಿಫಿಕೇಟ್, ಮಗರಪಟ್ಟಾ ಪ್ರಾಪರ್ಟಿ ಯೂನಿಟ್ ಹೋಲ್ಡರ್ ಲಿಮಿಟೆಡ್ ರವರು ನೀಡಿರುವ ನೋ ಡ್ಯೂಸ್ ಮತ್ತು ನೋ ಆಬ್ಜೆಕ್ಷನ್ ಸರ್ಟಿಫಿಕೇಟ್‌ಗಳು ದಿನಾಂಕ 30/03/2019 ರಂದು 17.30 ಮತ್ತು 18.30 ರೊಳಗೆ ಕಳೆದುಹೋಗಿದ್ದು, ಇದಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರದ ಪುಲಿಕೇಶಿನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿರುತ್ತದೆ ಮತ್ತು ಕ್ರೈಮ್ ನಂ. 0052/2019 ಅಡಿಯಲ್ಲಿ ಎಫ್‌ಐಆರ್ ದಾಖಲಾಗಿರುತ್ತದೆ. ಯಾರಿಗಾದರೂ ಮೇಲ್ಕಂಡ ದಾಖಲೆ ಪತ್ರಗಳು ಸಿಕ್ಕಿದ್ದರೆ, ದಯವಿಟ್ಟು ಈ ನೋಟಿಸ್ ದಿನಾಂಕದಿಂದ 7 ದಿನಗಳೊಳಗೆ ನನಗೆ ಮಾಹಿತಿ ನೀಡಿರಿ ಮತ್ತು ಸದರಿ ದಾಖಲಾತಿಗಳನ್ನು ಕೆಳಕಂಡ ವಿಳಾಸದಲ್ಲಿ ನನಗೆ ಹಿಂದಿರುಗಿಸಿರಿ. ಆಕಸ್ಮಾತ್ ಯಾರಾದರೂ ಈ ದಾಖಲಾತಿಗಳನ್ನು ದುರುಪಯೋಗ ಮಾಡಿಕೊಂಡಲ್ಲಿ, ಅವರ ತಪ್ಪುಗಳಿಗೆ ನಾನು ಜವಾಬ್ದಾರಿ ಯಾಗಿರುವುದಿಲ್ಲ.
ಎಂ. ಇಂದ್ರಬಾಲನ್
ಎಂ.ಇ.ಜಿ ಆಫೀಸರ್ ಮೆಸ್,
ಹಲಸೂರು ಮುಖ್ಯರಸ್ತೆ, ಬೆಂಗಳೂರು ನಗರ, ಕರ್ನಾಟಕ – 560005.
(ಮೊಬೈಲ್: 8606868825)

Change of Name

I, KUMARASWAMY Alias Kumaraswamy S L Son OfLaxmeesha Aged around 23 years, presently residing at Ward Number 34, FourthCross, Christian Colony, Channapattana, Hassan-573201 have changed my name as KumaraswamyS L (Kumaraswamy Sakleshpur Laxmeesha) by virtue of affidavit sworn by me on 05thJuly 2023.

I, ADITHYA Panambur S/o Panambur Vasudeva Udaya aged 27 years residing at No. 24 , 3rd Cross, Munishwara Block, Palace Guttahalli, Bengaluru 560003 have changed my name to Aditya Hebbar Panambur. Vide affidavit dated 31/10/2023 Sworn before notary B.R. Shashikala.

BANDU THAKRE, Father/o 6499022X, SEP/ASH, THAKRE AMIT BANDU, Vill- Gahu Hiwara, Kanhan, Parseoni, Nagpur, Maharashtra changed name BANDU THAKRE to BANDU SHYAMRAO THAKARE, 14/11/2023, Notary K.V. Mani, Bangalore

MANDA, MOTHER/O 6499022X, SEP/ASH, THAKRE AMIT BANDU, Vill- Gahu Hiwara, Kanhan, Parseoni, Nagpur, Maharashtra changed name MANDA to MANDA BANDU THAKRE, 13/11/2023, Notary K.V. Mani, Bangalore

VALLILYAMMAL, MOTHER/O 14833258L, HAV/MT, KARTHI J, Vill- Kattalai, Kaveripakkam, Arakkonam, Vellore, Tamil Nadu changed name VALLILYAMMAL to VALLI J, 13/11/2023, Notary K.V. Mani, Bangalore

P VAYARAMAN, Father/o 14833258L, HAV/MT, KARTHI J, Vill- Kattalai, Kaveripakkam, Arakkonam, Vellore, Tamil Nadu changed name P VAYARAMAN to P JAYARAMAN, 13/11/2023, Notary K.V. Mani, Bangalore

BUSINESS

Business to Business

Business

ANY CENTRAL/ New Delhi work done with high level Contacts. Quick Service. Vamshadhara Project Services: 9342247637.

Business Offers

Finance

WANTED BUSINESS Partners Saree Business 10 Lakhs Investment Monthly Income 1 Lakhs Contact: 8892501007/ 9606701007

ರಸ್ತೆ ಕಾಮಗಾರಿ: ಗಂಭೀರ ಲೋಪ

ವಿಶೇಷ ತನಿಖಾ ತಂಡದಿಂದ ತನಿಖೆ; ನವೆಂಬರ್ ಅಂತ್ಯಕ್ಕೆ ಮಧ್ಯಂತರ ವರದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸರ್ಕಾರದ ಅವಧಿಯಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ ನಡೆದ ರಸ್ತೆ ಕಾಮಗಾರಿ ಯೋಜನೆಗಳ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ), ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ನಿಯಮಗಳ ಉಲ್ಲಂಘನೆ ಸೇರಿದಂತೆ ಗಂಭೀರ ಲೋಪಗಳನ್ನು ಪತ್ತೆಹಚ್ಚಿದೆ.

ಪರಿಶೀಲನಾ ತಂಡದ ಒಪ್ಪಿಗೆ ಇಲ್ಲದೆ ಬಿಬಿಎಂಪಿ ಹಲವು ಕಾಮಗಾರಿಗೆ ಬಿಲ್ ಪಾವತಿ ಮಾಡಿದೆ ಎಂಬುದೂ ತಿಳಿದುಬಂದಿದೆ.

ಅಮ್ಲಾನ್ ಆದಿತ್ಯ ಬಿಸ್ವಾಸ್ ನೇತೃತ್ವದ ತನಿಖಾ ತಂಡ ನ.7ರಂದು ನಡೆಸಿದ ಪ್ರಥಮ ಸಭೆಯಲ್ಲಿ ಮೂರು ಆರ್ಥಿಕ ವರ್ಷಗಳಲ್ಲಿ ನಡೆದ ರಸ್ತೆ ಕಾಮಗಾರಿಗಳಲ್ಲಿ ಹಲವು ಲೋಪಗಳನ್ನು ಪತ್ತೆ ಹೆಚ್ಚಿದೆ.

73 ಪ್ಯಾಕೇಜ್‌ಗಳಲ್ಲಿ 58 ಪ್ಯಾಕೇಜ್‌ಗಳ ಪರಿಶೀಲನೆಯನ್ನು ಎಸ್‌ಐಟಿ ನಡೆಸಿದ್ದು, ಉಳಿದ ನಾಲ್ಕು ಪ್ಯಾಕೇಜ್‌ಗಳ ಪರಿಶೀಲನೆ ನಡೆಯಬೇಕಿದೆ. ಇನ್ನುಳಿದ 11 ಪ್ಯಾಕೇಜ್‌ಗಳ ವಿವರಗಳನ್ನು ಬಿಬಿಎಂಪಿ ತನಿಖಾ ತಂಡಕ್ಕೆ ಸಲ್ಲಿಸಬೇಕಿದೆ. ಪ್ರತಿಯೊಂದು ಪ್ಯಾಕೇಜ್‌ನಲ್ಲಿ ನಾಲ್ಕರಿಂದ ಐದು ಕಾಮಗಾರಿಗಳಿವೆ. ಎಲ್ಲ ಕಾಮಗಾರಿಗಳ ಅಂದಾಜು ವೆಚ್ಚ ₹2 ಸಾವಿರ ಕೋಟಿಯಾಗಿದೆ ಎಂದು ತಿಳಿದುಬಂದಿದೆ.

ಕೆಟಿಪಿಪಿ ನಿಯಮಗಳ ಉಲ್ಲಂಘನೆ, ಗುತ್ತಿಗೆದಾರರಿಗೆ ಪರವಾನಗಿ ಸಮ್ಮತಿ, ಅಳತೆ ಪುಸ್ತಕದಲ್ಲಿ ತಪ್ಪು ಇತ್ಯಾದಿ ಲೋಪಗಳನ್ನು ಎಸ್‌ಐಟಿ ಪರಿಶೀಲಿಸುತ್ತಿದೆ. ಮುಂದಿನ ಹಂತದಲ್ಲಿ, ಭೌತಿಕವಾಗಿ ಕಾಮಗಾರಿಗಳನ್ನು ಎಸ್‌ಐಟಿ ಪರಿಶೀಲಿಸಲಿದೆ.

'ನಾಲ್ಕು ಪ್ಯಾಕೇಜ್‌ಗಳ ಭೌತಿಕ ಪರಿಶೀಲನೆಯನ್ನು ನಾಲ್ವರು ತಂತ್ರಜ್ಞರ ತಂಡ ಪೂರ್ಣಗೊಳಿಸಿದೆ. ಇದರಲ್ಲಿ ರಸ್ತೆಯ ಉದ್ದ, ಅಗಲದ ಅಳತೆ ಸೇರಿದೆ. ಕಾಮಗಾರಿಗಳ ಅಧ್ಯಯನಕ್ಕೆ ಖಾಸಗಿ ಏಜೆನ್ಸಿಯೊಂದರ ನೆರವು ಪಡೆಯಲಾಗಿದ್ದು, ನವೆಂಬರ್ ಅಂತ್ಯದ ವೇಳೆಗೆ ಮಧ್ಯಂತರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಿದ್ದೇವೆ' ಎಂದು ಎಸ್‌ಐಟಿ ತಂಡದ ಮುಖ್ಯಸ್ಥ ಅಮ್ಲಾನ್ ಆದಿತ್ಯ ಬಿಸ್ವಾಸ್ ತಿಳಿಸಿದರು.

ಸಾಮಾಜಿಕ ಮಾಧ್ಯಮದಲ್ಲಿ ಅವಹೇಳನಕಾರಿ ಪೋಸ್ಟ್: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಮಾಧ್ಯಮದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಂಸದ ಡಿ.ಕೆ. ಸುರೇಶ್ ವಿರುದ್ಧ ಅವಹೇಳನಕಾರಿ ಪೋಸ್ಟ್ ಹಾಕಿದ್ದ ಪ್ರಕರಣ ಸಂಬಂಧ ಆರೋಪಿಯನ್ನು ಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಖಾಸಗಿ ಕಂಪನಿ ನೌಕರ ರಂಜಿತ್ ಬಂಧಿತ ಆರೋಪಿ.

ಆರೋಪಿ ಫೇಸ್‌ಬುಕ್ ಹಾಗೂ ಎಕ್ಸ್ ಖಾತೆಯಲ್ಲಿ ಕಿಲ್ ಡಿಕೆ ಬ್ರದರ್ಸ್ ಎಂದು ಪೋಸ್ಟ್ ಮಾಡಿದ್ದ. ಅಲ್ಲದೆ, ಸರ್ಕಾರ ಮತ್ತು ಡಿ.ಕೆ ಸಹೋದರರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡುತ್ತಿದ್ದ. ಪ್ರಚೋದನಾಕಾರಿ ಪೋಸ್ಟ್ ಹಾಕುತ್ತಿದ್ದ ಎಂದು ಆರೋಪಿಸಿ ಜಯನಗರ ಯೂತ್ ಕಾಂಗ್ರೆಸ್ ಉಪಾಧ್ಯಕ್ಷ ಶರತ್ ದೂರು ನೀಡಿದ್ದರು.

ಆರೋಪಿಯ ವಿಚಾರಣೆ ನಡೆಸಲಾಗಿದೆ. ತಾನೂ ಸೈಬರ್ ಅಪರಾಧದ ಡಿಟೆಕ್ಟಿವ್ ಎಂದು ಹೇಳಿಕೊಂಡು ಓಡಾಟ ನಡೆಸುತ್ತಿದ್ದ ಎಂಬುದು ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು.

ವೀಲಿ: 6 ಮಂದಿ ಬಂಧನ

ಬೈಕ್‌ನಲ್ಲಿ ವೀಲಿ ನಡೆಸಿ ಸಾರ್ವಜನಿಕರಿಗೆ ಕಿರಿಕಿರಿ ಉಂಟು ಮಾಡುತ್ತಿದ್ದವರ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಿದ ಕಾಮಾಕ್ಷಿಪಾಳ್ಯ ಠಾಣೆಯ ಪೊಲೀಸರು ಆರು ಮಂದಿಯನ್ನು ಬಂಧಿಸಿದ್ದಾರೆ.

ನಾಗರಬಾವಿಯ ಹೊರವರ್ತುಲ ರಸ್ತೆಗಳಲ್ಲಿ ವೀಲಿ ನಡೆಸುತ್ತಿದ್ದರು. ಕರ್ಕಶ ಶಬ್ದ ಮಾಡುತ್ತಾ ಸುಮನಹಳ್ಳಿ ಮೇಲ್ಸೇತುವೆಯಲ್ಲಿ ಸಾರ್ವಜನಿಕರಿಗೆ ತೊಂದರೆ ಕೊಡುತ್ತಿದ್ದರು. ಪ್ರತಿನಿತ್ಯ ತಡರಾತ್ರಿ ವೀಲಿ ನಡೆಸುತ್ತಿದ್ದರು. ಈ ಕುರಿತು ಸಾಕಷ್ಟು ದೂರುಗಳು ಬಂದಿದ್ದವು. ವಿಜಯನಗರ ಸಂಚಾರ ಉಪ ವಿಭಾಗದ ಎಸಿಪಿ ಜಿ.ಆರ್. ರಮೇಶ್, ಕಾಮಾಕ್ಷಿಪಾಳ್ಯ ಸಂಚಾರ ಠಾಣೆ ಇನ್‌ಸ್ಪೆಕ್ಟರ್ ಎಸ್.ಟಿ. ಯೋಗೇಶ್ ನೇತೃತ್ವದ ತಂಡ ಮಂಗಳವಾರ ವಿಶೇಷ ಕಾರ್ಯಾಚರಣೆ ನಡೆಸಿ 10 ಪ್ರಕರಣಗಳಲ್ಲಿ ಆರು ಮಂದಿಯನ್ನು ಬಂಧಿಸಿದೆ. ಉಳಿದವರ ಬಂಧನಕ್ಕೆ ಕಾರ್ಯ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಎಐಇ: 2 ವಿಮಾನ ಸಂಚಾರ ಆರಂಭ

ಮಂಗಳೂರು: ಮಂಗಳೂರು– ಬೆಂಗಳೂರು ನಡುವೆ ಏರ್ ಇಂಡಿಯಾ ಎಕ್ಸ್‌ಪ್ರೆಸ್ ನಿತ್ಯ ಎರಡು ವಿಮಾನಗಳ ಸೇವೆ ಆರಂಭಿಸಿದೆ.

ಕಣ್ಣೂರು-ಬೆಂಗಳೂರು-ಮಂಗಳೂರು ಮಧ್ಯೆ ಸಂಚರಿಸುವ ವಿಮಾನ, ಕಣ್ಣೂರಿನಿಂದ ಸಂಜೆ 4.30ಕ್ಕೆ ಹೊರಟು, ಬೆಂಗಳೂರಿಗೆ ಸಂಜೆ 5.50ಕ್ಕೆ ತಲುಪುತ್ತದೆ. ಬೆಂಗಳೂರಿನಿಂದ 6.35ಕ್ಕೆ ಹೊರಟು ಸಂಜೆ 7.35ಕ್ಕೆ ಮಂಗಳೂರು ತಲುಪುತ್ತದೆ. ಇಲ್ಲಿಂದ ರಾತ್ರಿ 8.15ಕ್ಕೆ ಹೊರಟು ರಾತ್ರಿ 9.30ಕ್ಕೆ ಬೆಂಗಳೂರು ತಲುಪುತ್ತದೆ. ಬೆಂಗಳೂರಿನಿಂದ ರಾತ್ರಿ 10.20ಕ್ಕೆ ಹೊರಟು ರಾತ್ರಿ 11.25ಕ್ಕೆ ಕಣ್ಣೂರು ತಲುಪುತ್ತದೆ.

'ಕಲ್ಯಾಣ'ದ 7 ಸ್ಮಾರಕ ಖಾಸಗಿ ವ್ಯಕ್ತಿಗಳಿಗೆ ದತ್ತು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೊದಲ ಹಂತದ 'ನಮ್ಮ ಸ್ಮಾರಕ ದರ್ಶನ ಮತ್ತು ಸಂರಕ್ಷಣೆಗಾಗಿ ಪ್ರವಾಸ' ಕಾರ್ಯಕ್ರಮ ಯಶಸ್ವಿಯಾಗಿದ್ದು, ಸ್ಮಾರಕಗಳ ದತ್ತು ಯೋಜನೆಗೆ ಹಲವು ಸಂಸ್ಥೆಗಳು ಸ್ವಯಂಪ್ರೇರಿತವಾಗಿ ಸ್ಪಂದಿಸಿವೆ' ಎಂದು ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮೂರು ದಿನದ ಮೊದಲ ಹಂತದ ಪ್ರವಾಸದಲ್ಲಿ ಬೀದರ್, ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯ ಸ್ಮಾರಕಗಳ ದರ್ಶನ ಮಾಡಲಾಯಿತು. ಕಲ್ಯಾಣ ಕರ್ನಾಟಕದ ಏಳು ಸ್ಮಾರಕಗಳ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಖಾಸಗಿ ವ್ಯಕ್ತಿಗಳಿಗೆ ದತ್ತು ನೀಡಲಾಗಿದೆ' ಎಂದರು.

'ಬೀದರ್ ಜಿಲ್ಲೆಯ ನರಸಿಂಹ ಝರಣಾ ದೇಗುಲ ದರ್ಶನದೊಂದಿಗೆ ಆರಂಭವಾದ ಪ್ರವಾಸ, ಬೀದರ್‌ನ ಅಷ್ಟಕೋನಾಕಾರದ ಬಾವಿಯ ವೀಕ್ಷಣೆ ಮಾಡಲಾಯಿತು. ಬಳಿಕ ಇರಾನ್ ದೇಶದ ಸುರಂಗ ಕಾಲುವೆಗಳನ್ನು ಹೋಲುವ ನೀರಿನ ಕರೇಜ್ ಅನ್ನು ತಂಡ ವೀಕ್ಷಿಸಿತು' ಎಂದು ಹೇಳಿದರು.

'ಬಸವಕಲ್ಯಾಣದಲ್ಲಿ ನಿರ್ಮಾಣ ಹಂತದಲ್ಲಿರುವ ಅನುಭವ ಮಂಟಪಕ್ಕೆ, ಬಸವಕಲ್ಯಾಣ ಕೋಟೆಯಲ್ಲಿ ಅಳವಡಿಸಿರುವ 'ಲೇಸರ್ ಶೋ' ವೀಕ್ಷಿಸಿ, ಕೋಟೆಯ ದತ್ತು ಪತ್ರವನ್ನು ಬೀದರ್ ಜಿಲ್ಲೆಯ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ವಿತರಿಸಿದರು. ಕಲಬುರಗಿ ಜಿಲ್ಲೆಯ ನಾಗಾವಿ ಯಲ್ಲಮ್ಮ ದೇವಿ ದೇವಸ್ಥಾನ, ಮಾನ್ಯಖೇಟಕ್ಕೆ ಭೇಟಿ ಕೊಟ್ಟು ಕೋಟೆಯನ್ನು ಸಂರಕ್ಷಣೆ ಮತ್ತು ನಿರ್ವಹಣೆಗಾಗಿ ಕಲುಬುರಗಿ ಮೂಲದ ವ್ಯಕ್ತಿಯ ಮಾಲೀಕತ್ವದ ಖಾಸಗಿ ಕಂಪನಿ ಕೃಷ್ಣಕೃಪಾ ಫೌಂಡೇಶನ್‌ಗೆ ವಹಿಸಲಾಗಿದೆ' ಎಂದು ತಿಳಿಸಿದರು.

'ಯಾದಗಿರಿ ಜಿಲ್ಲೆಯ ಶಿರವಾಳ ಗ್ರಾಮದಲ್ಲಿ ಶಿಲ್ಪಕಲಾ ವೈಭವ ವೀಕ್ಷಿಸಲಾಯಿತು. ಶಹಾಪುರದ ದಿಡ್ಡಿ ಬಾಗಿಲು ವೀಕ್ಷಿಸಿದ್ದು, ಅದರ ದುರಸ್ತಿಗಾಗಿ ನೆರವು ನೀಡುವ ಭರವಸೆ ನೀಡಲಾಗಿದೆ' ಎಂದರು.

ಹಾಸನದ 61 ಎಕರೆ ಅರಣ್ಯ ಭೂಮಿ ಅಕ್ರಮವಾಗಿ ಮಾರ್ಪಾಡು

ವರದಿ ನೀಡಿ: ರಾಜ್ಯಕ್ಕೆ ಕೇಂದ್ರ ನಿರ್ದೇಶನ

ಪ್ರಜಾವಾಣಿ ವಾರ್ತೆ

ನವದೆಹಲಿ: 61.32 ಎಕರೆ ಅರಣ್ಯ ಭೂಮಿಯನ್ನು ಕಂದಾಯ ಭೂಮಿಗೆ ಅಕ್ರಮವಾಗಿ ಮಾರ್ಪಡಿಸಿದ ಕುರಿತು ಹಾಸನದ ಉಪವಿಭಾಗಾಧಿಕಾರಿ ಬಿ.ಎ.ಜಗದೀಶ್ ವಿರುದ್ಧ ಮಾಡಿರುವ ಆರೋಪಗಳ ಕುರಿತು ವರದಿ ಸಲ್ಲಿಸುವಂತೆ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ಕರ್ನಾಟಕ ಅರಣ್ಯ ಇಲಾಖೆಗೆ ಸೂಚಿಸಿದೆ.

ಈ ಸಂಬಂಧ ನವೆಂಬರ್ 6ರಂದು ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಅರಣ್ಯ ಪಡೆಯ ಮುಖ್ಯಸ್ಥರಿಗೆ (ಪಿಸಿಸಿಎಫ್) ಅವರಿಗೆ ಪತ್ರ ಬರೆದಿರುವ ಸಚಿವಾಲಯದ ಉಪ ಮಹಾನಿರೀಕ್ಷಕ ಎಂ.ಕೆ. ಶಂಭು, 'ಅರಣ್ಯ ಸಂರಕ್ಷಣಾ ಕಾಯ್ದೆ ಉಲ್ಲಂಘನೆ ಹಾಗೂ ಭೂ ಅಕ್ರಮದ ಬಗ್ಗೆ ಹಾಸನದ ಡಿಸಿಎಫ್ ವರದಿ ನೀಡಿದ್ದಾರೆ. ಈ ಸಂಬಂಧ ಒಂದು ತಿಂಗಳ ಒಳಗೆ ವಾಸ್ತವಾಂಶದ ವರದಿ ಸಲ್ಲಿಸಬೇಕು. ಇಲ್ಲದಿದ್ದರೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು' ಎಂದು ಎಚ್ಚರಿಸಿದ್ದಾರೆ.

'ಈ ಅಕ್ರಮದ ಬಗ್ಗೆ ವರದಿ ಸಲ್ಲಿಸುವಂತೆ ಅರಣ್ಯ ಇಲಾಖೆಗೆ 2022ರ ಮಾರ್ಚ್ 4ರಂದು ಸಚಿವಾಲಯ ಸೂಚಿಸಿತ್ತು. ಆದರೆ, ಅರಣ್ಯ ಇಲಾಖೆ ಯಾವುದೇ ವರದಿ ಸಲ್ಲಿಸಿರಲಿಲ್ಲ. ಮತ್ತೊಮ್ಮೆ ಜ್ಞಾಪನಾ ಪತ್ರವನ್ನೂ ಕಳುಹಿಸಲಾಗಿತ್ತು' ಎಂದು ಅವರು ಹೇಳಿದ್ದಾರೆ.

ಅರಣ್ಯ ಭೂಮಿಯನ್ನು ಅನಧಿಕೃತವಾಗಿ ಕಂದಾಯ ಭೂಮಿಯನ್ನಾಗಿ ಪರಿವರ್ತಿಸಿದ ಈ ಪ್ರಕರಣವನ್ನು ಹಾಸನದಲ್ಲಿ ಎಸಿಎಫ್ ಆಗಿ (ಅರಣ್ಯ ಸಂಚಾರಿ ದಳ) ಕಾರ್ಯನಿರ್ವಹಿಸುತ್ತಿದ್ದ ಎನ್.ರವೀಂದ್ರ ಕುಮಾರ್ ಅವರು 2022ರ ಫೆಬ್ರುವರಿಯಲ್ಲಿ ಪತ್ತೆ ಹಚ್ಚಿದ್ದರು. ಹಾಸನದ ತ್ಯಾವಿಹಳ್ಳಿಯ ಸರ್ವೆ ನಂಬರ್ 22ರಲ್ಲಿ ಹರಡಿರುವ 61.32 ಎಕರೆ ಅರಣ್ಯ ಭೂಮಿಗೆ ಸಂಬಂಧಿಸಿದ ಪ್ರಕರಣ ಇದಾಗಿದೆ.

ಐದು ಹೊಸ ತಳಿಗಳ ಬಿಡುಗಡೆ, ಚೊಚ್ಚಲ ಬೀಜ ಸಂತೆ, ಸಿರಿಧಾನ್ಯ ಆಹಾರ ಮೇಳ ಆಕರ್ಷಣೆ

ನಾಲ್ಕು ದಿನ ಕೃಷಿ ಮೇಳ ನಾಳೆಯಿಂದ

ಪ್ರಜಾವಾಣಿ ವಾರ್ತೆ


ಎಸ್.ವಿ. ಸುರೇಶ

ಬೆಂಗಳೂರು: 'ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಆಶ್ರಯದಲ್ಲಿ ನ. 17ರಿಂದ 20ರವರೆಗೆ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ 'ಆಹಾರ, ಆರೋಗ್ಯ, ಆದಾಯಕ್ಕಾಗಿ ಸಿರಿಧಾನ್ಯಗಳು' ಎಂಬ ಘೋಷವಾಕ್ಯದಡಿ ಕೃಷಿ ಮೇಳ ಆಯೋಜಿಸಲಾಗಿದೆ' ಎಂದು ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಬಾರಿಯ ಮೇಳದಲ್ಲಿ ವಿಶ್ವವಿದ್ಯಾಲಯದ ಸಂಶೋಧಕರು ಅಭಿವೃದ್ಧಿಪಡಿಸಿರುವ, 5 ಹೊಸ ತಳಿಗಳಾದ ಸಾಮೆ– ಜಿಪಿಯುಎಲ್ 11, ಬರಗು– ಜಿಪಿಯುಪಿ 32, ರಾಗಿ– ಎಂ.ಎಲ್ 22, ಸೂರ್ಯಕಾಂತಿ ಕೆಬಿಎಸ್‌ಎಚ್–85 ಮತ್ತು ಕೆಂಪು ಹಲಸು ತಳಿಗಳು ಬಿಡುಗಡೆಯಾಗಲಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಳಿಗಳನ್ನು ಬಿಡುಗಡೆ ಮಾಡಲಿದ್ದಾರೆ' ಎಂದು ಮಾಹಿತಿ ನೀಡಿದರು.

ಮೇಳ ವಿಶೇಷ : 'ಬಾಡಲ್ ಬದನೆ, ಚೆರ್ರಿ ಟೊಮೆಟೊ ತರಕಾರಿಗಳು ಮತ್ತು ಅಲಂಕಾರಿಕ (ಆರ್ನಮೆಂಟಲ್) ಸೂರ್ಯಕಾಂತಿ ಹೂವಿನ ಪ್ರಾತ್ಯಕ್ಷಿಕೆಗಳ ಪ್ರದರ್ಶನ ಈ ಬಾರಿಯ ವಿಶೇಷ. ಜತೆಗೆ, ಬರಗಾಲದಲ್ಲಿ ಸೂಕ್ಷ್ಮ ನೀರಾವರಿ ತಂತ್ರಜ್ಞಾನದ ಮೂಲಕ ಸಿರಿಧಾನ್ಯಗಳನ್ನು ಬೆಳೆದು ಆದಾಯ ಹೆಚ್ಚಿಸಿಕೊಳ್ಳುವ ಬಗ್ಗೆ ರೈತರಿಗೆ ತಿಳಿವಳಿಕೆ ನೀಡಲಾಗುವುದು' ಎಂದರು.

ಬೀಜ ಸಂತೆ: ಕೃಷಿ ಮೇಳದ ಇತಿಹಾಸದಲ್ಲಿ ಮೊದಲ ಬಾರಿಗೆ 'ಬೀಜ ಸಂತೆ' ಆಯೋಜಿಸಲಾಗುತ್ತಿದೆ. ಈವರೆಗೆ ಮೇಳದಲ್ಲಿ ಐಐಎಚ್‌ಆರ್, ಕರ್ನಾಟಕ ರಾಜ್ಯ ಬೀಜ ನಿಗಮ ಸೇರಿದಂತೆ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಬಿತ್ತನೆ ಬೀಜಗಳನ್ನು ಪ್ರದರ್ಶನಕ್ಕಷ್ಟೇ ಇಡುತ್ತಿದ್ದವು. ಆದರೆ ಈ ಬಾರಿ ಪ್ರದರ್ಶನದ ಜೊತೆಗೆ ಬಿತ್ತನೆ ಬೀಜಗಳ ಮಾರಾಟಕ್ಕೂ ಅವಕಾಶ ಕಲ್ಪಿಸಲಾಗಿದೆ' ಎಂದರು.

ಸಿರಿಧಾನ್ಯ ಆಹಾರ ಮೇಳ: ಸಿರಿಧಾನ್ಯಗಳ ಬಳಕೆ ಪ್ರಮಾಣವನ್ನು ಹೆಚ್ಚಿಸುವ ಉದ್ದೇಶದಿಂದ ಈ ಬಾರಿಯ ಕೃಷಿ ಮೇಳದಲ್ಲಿ ವಿಶೇಷವಾಗಿ 'ಸಿರಿಧಾನ್ಯಗಳ ಆಹಾರ ಮೇಳ'ವನ್ನು ಆಯೋಜಿಸಲಾಗುತ್ತಿದೆ. ಇದಕ್ಕಾಗಿ ಮೇಳದಲ್ಲಿ ಪ್ರತ್ಯೇಕ ಸಿರಿಧಾನ್ಯಗಳ ಫುಡ್‌ಕೋರ್ಟ್ ತೆರೆಯಲಾಗುತ್ತದೆ. ವಿಶ್ವವಿದ್ಯಾಲಯದ ಆಹಾರ ವಿಜ್ಞಾನ ವಿಭಾಗದಿಂದ ಸಿರಿಧಾನ್ಯ ಖಾದ್ಯಗಳ ರೆಸಿಪಿಗಳನ್ನು ಮೇಳದಲ್ಲಿ ಪರಿಚಯಿಸಲಿದ್ದಾರೆ' ಎಂದು ಮಾಹಿತಿ ನೀಡಿದರು.

'ಮೇಳದಲ್ಲಿ 625 ಮಳಿಗೆಗೆ ವ್ಯವಸ್ಥೆ ಮಾಡಲಾಗಿದೆ. ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ. ಕೃಷಿ ಮೇಳದ ಬಗ್ಗೆ ಸಂಪೂರ್ಣ ಮಾಹಿತಿ ನೀಡಲು ಪ್ರತ್ಯೇಕ ಆ್ಯಪ್ ಸಿದ್ಧಪಡಿಸಲಾಗಿದ್ದು, ಗುರುವಾರ ಬೆಳಿಗ್ಗೆ ಬಿಡುಗಡೆ ಮಾಡಲಾಗುವುದು' ಎಂದರು.


ಕೃಷಿಮೇಳದ ಸಿದ್ಧತೆಯಲ್ಲಿ ತೊಡಗಿರುವ ಕಾರ್ಮಿಕರು –ಪ್ರಜಾವಾಣಿ ಚಿತ್ರ

ಅಂಕಿ–ಅಂಶಗಳು

- ₹1.5 ಕೋಟಿ ಒಟ್ಟು ವೆಚ್ಚ
- 400 ಭದ್ರತೆಗೆ ನಿಯೋಜಿಸಿರುವ ಪೊಲೀಸರು
- 20 ಸಿ.ಸಿ. ಟಿವಿ ಕ್ಯಾಮೆರಾಗಳು
- 625 ಮಳಿಗೆಗಳು



ಜಿಕೆವಿಕೆ ಕೆಂಪು ಹಲಸಿನ ತಳಿ: ಶ್ಯಾಮಲಮ್ಮ

ಕೃಷಿ ವಿವಿ ಗುರುತಿಸಿ, ಅಭಿವೃದ್ಧಿಪಡಿಸಿರುವ ಕೆಂಪು ತೊಳೆಗಳಿರುವ 'ಜಿಕೆವಿಕೆ ಕೆಂಪು ಹಲಸು' ತಳಿಯನ್ನು ಕೃಷಿ ಮೇಳದಲ್ಲಿ ಬಿಡುಗಡೆ ಮಾಡಲಾಗುತ್ತದೆ. ಇದು ನಾಟಿ ಮಾಡಿದ ಮೂರೂವರೆ ವರ್ಷಕ್ಕೆ ಫಸಲು ಆರಂಭವಾಗುತ್ತದೆ' ಎಂದು ವಿಜ್ಞಾನಿ ಶ್ಯಾಮಲಮ್ಮ ಮಾಹಿತಿ ನೀಡಿದರು.

'ವರ್ಷದಿಂದ ವರ್ಷಕ್ಕೆ ಹೆಚ್ಚು ಇಳುವರಿ ನೀಡುತ್ತದೆ. ಅಧ್ಯಯನದ ಪ್ರಕಾರ ಹತ್ತು ವರ್ಷದ ಒಂದು ಮರ ವರ್ಷಕ್ಕೆ 120 ರಿಂದ 150 ಹಣ್ಣುಗಳನ್ನು ಕೊಡುತ್ತದೆ. ಪ್ರತಿ ತೊಳೆ 25 ರಿಂದ 35 ಗ್ರಾಂ ತೂಕವಿರುತ್ತದೆ. ಆರಂಭದಲ್ಲಿ ರೆಂಬೆಗಳಲ್ಲಿ ಬಿಡುವ ಉದ್ದ ಆಕಾರದ ಹಣ್ಣುಗಳು ಮಧ್ಯಮ ಗಾತ್ರದಲ್ಲಿರುತ್ತವೆ. ಪ್ರತಿ ಹಣ್ಣು 5.5ಕೆಜಿಯಿಂದ 10 ಕೆಜಿ ತೂಕವಿರುತ್ತದೆ. ಅಂಟು ರಹಿತ, ರುಚಿಕರವಾದ ವಿಶಿಷ್ಟ ಕೆಂಪು ತೊಳೆಯ ಈ ಹಣ್ಣನ್ನು ವಾಣಿಜ್ಯವಾಗಿಯೂ ಬೆಳೆಯಬಹುದು. ತಿನ್ನುವುದಕ್ಕೆ ಹಾಗೂ ಮೌಲ್ಯವರ್ಧನೆಗೂ ಎರಡಕ್ಕೂ ಸೂಕ್ತವಾಗುತ್ತದೆ' ಎಂದರು.

ಐವರಿಗೆ ರಾಜ್ಯಮಟ್ಟದ ಕೃಷಿ ಪ್ರಶಸ್ತಿ

ಉತ್ತಮ ಸಾಧನೆ ಮಾಡಿದ ಐವರು ರೈತರಿಗೆ ರಾಜ್ಯಮಟ್ಟದ 'ಕೃಷಿ ಪ್ರಶಸ್ತಿ'ಗಳನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಪ್ರಕಟಿಸಿದೆ.

'ಎಚ್.ಡಿ.ದೇವೇಗೌಡ ರಾಜ್ಯಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿ'ಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ಬೀಡಿಗಾನಹಳ್ಳಿಯ ಬಿ.ಆರ್. ಮಂಜುನಾಥ, 'ಎಂ.ಎಚ್.ಮರೀಗೌಡ ರಾಜ್ಯಮಟ್ಟದ ಅತ್ಯುತ್ತಮ ತೋಟಗಾರಿಕಾ ರೈತ ಪ್ರಶಸ್ತಿ'ಗೆ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಹೊಸಹಳ್ಳಿಯ ಎಚ್.ಟಿ. ರಾಜೇಂದ್ರ ಅವರನ್ನು ಆಯ್ಕೆ ಮಾಡಲಾಗಿದೆ.

'ಕ್ಯಾನ್ ಬ್ಯಾಂಕ್ ರಾಜ್ಯಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿ'ಗೆ ರಾಮನಗರ ಜಿಲ್ಲೆಯ ಬಿಳಗುಂಬದ ಬಿ.ಪಿ. ವಾಸು, 'ಕ್ಯಾನ್ ಬ್ಯಾಂಕ್ ರಾಜ್ಯಮಟ್ಟದ ಅತ್ಯುತ್ತಮ ರೈತ ಮಹಿಳೆ ಪ್ರಶಸ್ತಿ'ಗೆ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ಗುಂಡಮನತ್ತದ ಎ.ವಿ. ರತ್ನಮ್ಮ ಮತ್ತು 'ಆರ್.ದ್ವಾರಕೀನಾಥ್ ಅತ್ಯುತ್ತಮ ರೈತ ಪ್ರಶಸ್ತಿ'ಗೆ ಹಾಸನ ಜಿಲ್ಲೆಯ ಚನ್ನರಾಯಪಟ್ಟಣದ ಬಳದರೆಯ ಬಿ.ಜಿ. ಮಂಜೇಗೌಡ ಆಯ್ಕೆಯಾಗಿದ್ದಾರೆ.

'ಕೃಷಿ ಮೇಳದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ' ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕ ವಿ.ಎಲ್. ಮಧುಪ್ರಸಾದ್ ತಿಳಿಸಿದ್ದಾರೆ.

ಕೆಲಸಕ್ಕೆ ಮತ್ತೆ ಸೇರಿಸಿಕೊಳ್ಳದ ಟಿಸಿಎಸ್: ಹುಸಿ ಬಾಂಬ್ ಕರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲಸಕ್ಕೆ ಮತ್ತೆ ಸೇರಿಸಿಕೊಳ್ಳದ ಕಾರಣಕ್ಕೆ ಸಿಟ್ಟಿಗೆದ್ದು ಎಲೆಕ್ಟ್ರಾನಿಕ್ ಸಿಟಿಯ ಟಿಸಿಎಸ್ ಕಂಪನಿಗೆ ಹುಸಿ ಬಾಂಬ್ ಕರೆ ಮಾಡಿದ್ದ ಕಂಪನಿಯ ಮಾಜಿ ಉದ್ಯೋಗಿಯನ್ನು ಪರಪ್ಪನ ಅಗ್ರಹಾರ ಪೊಲೀಸ್ ಬಂಧಿಸಿ, ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ.

ಬೆಳಗಾವಿಯ ಶ್ರುತಿ ಶೆಟ್ಟಿ(26) ಹುಸಿ ಬಾಂಬ್ ಕರೆ ಮಾಡಿದ್ದ ಮಾಜಿ ಉದ್ಯೋಗಿ.

ಬಿಬಿಎಂ ಪದವಿ ಪಡೆದಿದ್ದ ಶ್ರುತಿ ಶೆಟ್ಟಿ ಅವರು, ಟಿಸಿಎಸ್ ಕಂಪನಿಯಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದರು. 2017ರಲ್ಲಿ ಎಂಬಿಎ ವ್ಯಾಸಂಗಕ್ಕಾಗಿ ಕೆಲಸ ಬಿಟ್ಟಿದ್ದರು. ಎಂಬಿಎ ವ್ಯಾಸಂಗ ಮುಗಿದ ಮೇಲೆ ಬೆಳಗಾವಿ ಹಾಗೂ ಬೆಂಗಳೂರಿನ ವಿವಿಧೆಡೆ ಕೆಲಸಕ್ಕೆ ಸೇರಲು ಹುಡುಕಾಟ ನಡೆಸಿದ್ದರು. ಯಾವ ಕಂಪನಿಯಲ್ಲೂ ಕೆಲಸ ಸಿಕ್ಕಿರಲಿಲ್ಲ. ನಂತರ, ಈ ಹಿಂದೆ ಕೆಲಸ ಮಾಡುತ್ತಿದ್ದ ಟಿಸಿಎಸ್ ಸಂಸ್ಥೆಗೇ ಅರ್ಜಿ ಹಾಕಿದ್ದರು. ಆದರೆ, ಕಂಪನಿ ಎರಡನೇ ಬಾರಿ ಕೆಲಸಕ್ಕೆ ಸೇರಿಸಿಕೊಳ್ಳಲು ನಿರಾಕರಿಸಿತ್ತು. ಅದರಿಂದ ಸಿಟ್ಟಿಗೆದ್ದ ಅವರು ಮಂಗಳವಾರ ಬೆಳಿಗ್ಗೆ ಕಂಪನಿಗೆ ಕರೆ ಮಾಡಿ, ಸಂಸ್ಥೆಯ 'ಬಿ' ಬ್ಲಾಕ್‌ನಲ್ಲಿ ಬಾಂಬ್ ಇಟ್ಟಿರುವುದಾಗಿ ಕರೆ ಮಾಡಿದ್ದರು ಎಂದು ಪೊಲೀಸರು ಹೇಳಿದರು.

'ಮಾಹಿತಿ ತಿಳಿದ ತಕ್ಷಣವೇ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಲಾಗಿತ್ತು. ಶ್ವಾನದಳ, ಬಾಂಬ್ ನಿಷ್ಕ್ರಿಯ ದಳ ಕಂಪನಿಯ ಎಲ್ಲೆಡೆ ತಪಾಸಣೆ ನಡೆಸಿತು. ಯಾವುದೇ ಸ್ಫೋಟಕ ವಸ್ತು ಪತ್ತೆಯಾಗಿರಲಿಲ್ಲ. ಹೀಗಾಗಿ ಇದೊಂದು ಹುಸಿ ಬಾಂಬ್ ಕರೆ ಎಂಬುದು ತಿಳಿದು ಬಂದಿತ್ತು' ಎಂದು ಪೊಲೀಸರು ಹೇಳಿದರು.

'ಕಂಪನಿಯ ಆಡಳಿತ ಮಂಡಳಿ ನೀಡಿದ ದೂರು ಆಧರಿಸಿ ತನಿಖೆ ನಡೆಸಲಾಗಿತ್ತು. ಬೆಳಗಾವಿಯಿಂದ ಕರೆ ಬಂದಿರುವುದು ಗೊತ್ತಾಗಿತ್ತು. ಶ್ರುತಿ ಶೆಟ್ಟಿಗೆ ಕರೆ ಮಾಡಿ ಠಾಣೆಗೆ ಬರುವಂತೆ ಸೂಚನೆ ನೀಡಲಾಗಿತ್ತು. ಪೋಷಕರ ಜತೆಗೆ ಅವರು ಬುಧವಾರ ಠಾಣೆ ಬಂದಿದ್ದರು'

'ಎಲ್ಲಿಯೂ ಕೆಲಸ ಸಿಕ್ಕಿರಲಿಲ್ಲ. ಹಿಂದೆ ಕೆಲಸ ಮಾಡಿದ್ದ ಕಂಪನಿ ಸಹ ಕೆಲಸ ಕೊಡಲಿಲ್ಲ. ಇದರಿಂದ ಮಾನಸಿಕ ಖಿನ್ನತೆಗೆ ಒಳಗಾಗಿದ್ದೆ. ಕೆಲಸ ಕೊಡದ ಕಾರಣಕ್ಕೆ ಬೆದರಿಕೆ ಹಾಕಿದ್ದೆ. ಬೇರೆ ಉದ್ದೇಶ ಇರಲಿಲ್ಲ ಎಂದು ಹೇಳಿಕೆ ನೀಡಿದ್ದಾರೆ' ಎಂದು ಪೊಲೀಸರು ಹೇಳಿದರು.

20 ಮಂದಿಗೆ ಕಚ್ಚಿದ ಬೀದಿ ನಾಯಿ

ದೊಡ್ಡಬಳ್ಳಾಪುರ: ನಗರದ ವಿವಿಧ ಭಾಗಗಳಲ್ಲಿ ಬೀದಿನಾಯಿ ಕಡಿತದಿಂದ 20 ಮಂದಿ ವಿವಿಧ ಆಸ್ಪತ್ರೆಗೆ ದಾಖಲಾಗಿರುವ ಪ್ರಕರಣ ಮಂಗಳವಾರ ನಡೆದಿದೆ. ಸೋಮವಾರ ರಾತ್ರಿ 9 ಮಂದಿ ಹಾಗೂ ಮಂಗಳವಾರ ಬೆಳಿಗ್ಗೆ 11 ಮಂದಿ ನಾಯಿ ಕಡಿತಕ್ಕೆ ಒಳಗಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ನಗರದ ಕೋರ್ಟ್ ರಸ್ತೆ, ಜಿ.ರಾಮೇಗೌಡ ವೃತ್ತ, ಡಿ.ಕ್ರಾಸ್ ಬಸ್ ನಿಲ್ದಾಣ ಹೀಗೆ ವಿವಿಧ ಕಡೆ ನಡೆದು ಹೋಗುತ್ತಿದ್ದ ಸಾರ್ವಜನಿಕರಿಗೆ ನಾಯಿ ಕಚ್ಚಿದೆ.

ಜೆಡಿಎಸ್ ಕಚೇರಿ ಮುಂದೆ ಅವಹೇಳನಕಾರಿ ಪೋಸ್ಟರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಶೇಷಾದ್ರಿಪುರದ ಜೆ.ಪಿ. ಭವನದ ಕಾಂಪೌಂಡ್‌ಗೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರ ವಿರುದ್ಧ ಕಿಡಿಗೇಡಿಗಳು ಅವಹೇಳನಕಾರಿ ಪೋಸ್ಟರ್ ಅಂಟಿಸಿದ್ದಾರೆ ಎಂದು ಆರೋಪಿಸಿ ದೂರು ನೀಡಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರ ವಿರುದ್ಧ ಶ್ರೀರಾಂಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಜೆಡಿಎಸ್ ನಗರ ಘಟಕದ ಅಧ್ಯಕ್ಷ ಎಚ್.ಎಂ.ರಮೇಶ್‌ಗೌಡ ಅವರು ನೀಡಿದ ದೂರಿನ ಮೇರೆಗೆ ಬಿಂದು, ನವೀನ್‌ಗೌಡ ಸೇರಿದಂತೆ ಮೂವರ ವಿರುದ್ಧ ಪ್ರಕರಣ ದಾಖಲಾಗಿದೆ.

'ನವೆಂಬರ್ 14ರಂದು ರಾತ್ರಿ 10 ಗಂಟೆ ಸುಮಾರಿಗೆ ಆಟೊದಲ್ಲಿ ಬಂದ ನಾಲ್ವರು ಜೆಡಿಎಸ್ ಪಕ್ಷ ಹಾಗೂ ಪಕ್ಷದ ಮುಖಂಡರ ವಿರುದ್ಧ ಘೋಷಣೆ ಕೂಗಿದ್ದಾರೆ. ಪ್ರಶ್ನಿಸಲು ಮುಂದಾದ ಭದ್ರತಾ ಸಿಬ್ಬಂದಿ ಮಹಾದೇವ್ ರುವಾನಿ ಅವರನ್ನು ನಿಂದಿಸಿ ಹಲ್ಲೆ ನಡೆಸಿ ಪರಾರಿಯಾಗಿದ್ದಾರೆ. ರುವಾನಿಗೆ ಪ್ರಾಣ ಬೆದರಿಕೆ ಹಾಕಿದ್ದಾರೆ. ನವೀನ್‌ಗೌಡ ಹಾಗೂ ಬಿಂದು ಸಾಮಾಜಿಕ ಜಾಲತಾಣದಲ್ಲೂ ಕೀಳು ರೀತಿಯಲ್ಲಿ ಪೋಸ್ಟ್ ಹರಿಯಬಿಡುತ್ತಿದ್ದಾರೆ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಮಾಹಿತಿ ತಿಳಿದು ಸ್ಥಳಕ್ಕೆ ತೆರಳಿದ್ದ ಪೊಲೀಸರು ಮಂಗಳವಾರ ರಾತ್ರಿಯೇ ಪೋಸ್ಟರ್ ತೆರವುಗೊಳಿಸಿದ್ದರು.

ಕಾನ್‌ಸ್ಟೆಬಲ್ ಮೇಲೆ ಹಲ್ಲೆ: ರೌಡಿಶೀಟರ್ ಬಂಧನ

ಅಪರಾಧ ಸುದ್ದಿ

ಬೆಂಗಳೂರು: ಕಾನ್‌ಸ್ಟೆಬಲ್ ಮೇಲೆ ಹಲ್ಲೆ ನಡೆಸಿದ್ದ ರೌಡಿಶೀಟರ್‌ನನ್ನು ಚಾಮರಾಜಪೇಟೆ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಅಬ್ದುಲ್ ಸುಲೇಮಾನ್ ಬಂಧಿತ ಆರೋಪಿ.

ಚಿಕ್ಕಪೇಟೆ ಸಂಚಾರ ಠಾಣೆಯ ಕಾನ್‌ಸ್ಟೆಬಲ್ ಮಂಜು ಅವರ ಮೇಲೆ ಆರೋಪಿ ಹಲ್ಲೆ ನಡೆಸಿದ್ದ.

'ಚಿಕ್ಕಪೇಟೆಯ ಬಿ.ಬಿ.ರಸ್ತೆಯಲ್ಲಿ ಮಂಜು ಅವರು ಕರ್ತವ್ಯ ನಿರ್ವಹಿಸುತ್ತಿದ್ದಾಗ ಆಟೊ ಹಿಂದಿಕ್ಕುವ ವಿಚಾರಕ್ಕೆ ಆಟೊ ಚಾಲಕ ಹಾಗೂ ಬೈಕ್‌ನಲ್ಲಿದ್ದ ಅಬ್ದುಲ್ ನಡುವೆ ಗಲಾಟೆ ನಡೆದಿತ್ತು. ಆಗ ಸ್ಥಳಕ್ಕೆ ತೆರಳಿದ್ದ ಮಂಜು ಅವರು ಜಗಳ ಬಿಡಿಸಿ ಇಬ್ಬರಿಗೂ ಬುದ್ಧಿಮಾತು ಹೇಳಿದ್ದರು. ಇದರಿಂದ ಸಿಟ್ಟಿಗೆದ್ದ ಅಬ್ದುಲ್, ಕಾನ್‌ಸ್ಟೆಬಲ್‌ಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದು ಅಲ್ಲದೇ ಅವರನ್ನು ಹಿಂಬಾಲಿಸಿ ಥಳಿಸಿದ್ದ. ಮಂಜು ನೀಡಿದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಆರೋಪಿ ವಿರುದ್ಧ ವಿಜಯನಗರ, ಜೆ.ಜೆ.ನಗರ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸರು ಹೇಳಿದರು.

ಚಿನ್ನಾಭರಣ ಕಳವು: ಕೆಲಸದ ಮಹಿಳೆ ಸೆರೆ

ಬೆಂಗಳೂರು: ಕೆಲಸ ಮಾಡುತ್ತಿದ್ದ ಮನೆಯಲ್ಲೇ ಚಿನ್ನಾಭರಣ ಕಳವು ಮಾಡಿದ್ದ ಮಹಿಳೆಯನ್ನು ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೀನಾಕ್ಷಿನಗರದ ನಿವಾಸಿ ಲಕ್ಷ್ಮಮ್ಮ (53) ಬಂಧನಕ್ಕೆ ಒಳಗಾದ ಆರೋಪಿ.

ಆರೋಪಿಯಿಂದ ₹ 20.98 ಲಕ್ಷ ಮೌಲ್ಯದ 374 ಗ್ರಾಂ ಚಿನ್ನಾಭರಣ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಮೀನಾಕ್ಷಿನಗರದ ನಿವಾಸಿ, ಬಟ್ಟೆ ವ್ಯಾಪಾರಿ ರಂಜಿತಾ ಅವರ ಮನೆಯಲ್ಲಿ ಒಂದು ವರ್ಷದಿಂದ ಆರೋಪಿ ಮಹಿಳೆ ಮನೆ ಕೆಲಸ ಮಾಡುತ್ತಿದ್ದರು. ರಂಜಿತಾ ತಮ್ಮ ಮಾವ ಲಕ್ಷ್ಮಣ್‌ಗೆ ಚಿನ್ನದ ಚೈನು ಕೊಡಲು ಕಬೋರ್ಡ್ ತೆರೆದಾಗ ಕೆಲವು ಆಭರಣಗಳ ಕಣ್ಮರೆಯಾಗಿದ್ದವು. ಲಕ್ಷ್ಮಮ್ಮನ ಮೇಲೆ ಅನುಮಾನಗೊಂಡು ಕೆಲಸದಿಂದ ತೆಗೆದುಹಾಕಿದ್ದರು. ಅಲ್ಲದೇ ಪೊಲೀಸರಿಗೆ ದೂರು ನೀಡಿದ್ದರು.

'ಲಕ್ಷ್ಮಮ್ಮನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಪ್ರತಿ ದಿನ ಒಂದೊಂದು ಚಿನ್ನಾಭರಣ ಕಳವು ಮಾಡುತ್ತಿದ್ದಾಗಿ ತಪ್ಪೊಪ್ಪಿಕೊಂಡಿದ್ದಾಳೆ' ಎಂದು ಪೊಲೀಸರು ಹೇಳಿದರು.

ಬೈಕ್ ಕಳ್ಳನ ಬಂಧನ: ಪಾರ್ಕಿಂಗ್ ಸ್ಥಳಗಳಲ್ಲಿ ನಿಲುಗಡೆ ಮಾಡಿದ ಬೈಕ್‌ಗಳ ಲಾಕ್ ಮುರಿದು ಬೈಕ್ ಕಳವು ಹಾಗೂ ಮನೆಗಳಿಗೆ ನುಗ್ಗಿ ಚಿನ್ನಾಭರಣ ಕಳವು ಮಾಡುತ್ತಿದ್ದ ಆರೋಪಿಯನ್ನು ಕೆಂಗೇರಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಪುಟ್ಟೇನಹಳ್ಳಿ ನಿವಾಸಿ ಕಾರ್ತಿಕ್ ಅಲಿಯಾಸ್ ಹಂದಿ ಅಲಿಯಾಸ್ ತುಕಡಿ (24) ಬಂಧಿತ.

ಆರೋಪಿಯಿಂದ ₹ 2.85 ಲಕ್ಷ ಮೌಲ್ಯದ 51 ಗ್ರಾಂ ಚಿನ್ನಾಭರಣ ಹಾಗೂ ಒಂದು ದ್ವಿಚಕ್ರ ವಾಹನ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಕೊಲೆ: ಆರೋಪಿ ಬಂಧನ



ತಬ್ರೇಜ್ ಪಾಷಾ

ಬೆಂಗಳೂರು: ತಿಲಕನಗರದ ನಿವಾಸಿ ತಬ್ರೇಜ್ ಪಾಷಾ(37) ಎಂಬಾತನನ್ನು ಕೊಲೆ ಮಾಡಲಾಗಿದ್ದು ಆರೋಪಿಯನ್ನು ಬಂಧಿಸಲಾಗಿದೆ. ಶಬೀರ್ ಕೃತ್ಯ ಎಸಗಿದ ಆರೋಪಿ.

'ತಬ್ರೇಜ್ ಪಾಷಾ ಮತ್ತು ಶಬೀರ್ ಸಂಬಂಧಿಗಳು. ತಬ್ರೇಜ್ ಪಾಷಾ ಅಂಗಡಿಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಶಬೀರ್ ಖಾಸಗಿ ಕಂಪನಿಯಲ್ಲಿ ಉದ್ಯೋಗದಲ್ಲಿದ್ದ. ಇಬ್ಬರ ನಡುವೆ ಪ್ರಕರಣವೊಂದರ ವಿಚಾರಕ್ಕೆ ಗಲಾಟೆ ನಡೆಯುತ್ತಿತ್ತು. ಬುಧವಾರ ಮಧ್ಯಾಹ್ನ ಎಸ್. ಆರ್.ಕೆ. ಗಾರ್ಡನ್ ಬಳಿ ತಬ್ರೇಜ್ ಪಾಷಾನನ್ನು ಅಡ್ಡಗಟ್ಟಿದ ಆರೋಪಿ, ಮಾರಕಾಸ್ತ್ರದಿಂದ ಹಲ್ಲೆ ನಡೆಸಿದ್ದ. ತಬ್ರೇಜ್ ಸ್ಥಳದಲ್ಲೇ ಮೃತಪಟ್ಟಿದ್ದರು. ಮೃತನ ಪತ್ನಿ ನೀಡಿದ ದೂರಿನ ಮೇರೆಗೆ ಕೊಲೆ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ. ಅಕ್ರಮ ಸಂಬಂಧದ ವಿಚಾರದಲ್ಲಿ ಈ ಕೊಲೆ ನಡೆದಿದೆ' ಎಂದು ಪೊಲೀಸರು ಹೇಳಿದರು.

ದೊಡ್ಡಣ್ಣ, ಜ್ಞಾನಮೂರ್ತಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ


ದೊಡ್ಡಣ್ಣ


ಜ್ಞಾನಮೂರ್ತಿ

ಬೆಂಗಳೂರು: ವಿಭೂತಿಪುರ ವೀರಸಿಂಹಾಸನ ಸಂಸ್ಥಾನ ಮಠ ನೀಡುವ 2023ನೇ ಸಾಲಿನ 'ಸುವರ್ಣಶ್ರೀ ಪ್ರಶಸ್ತಿ'ಗೆ ಚಲನಚಿತ್ರ ನಟ ದೊಡ್ಡಣ್ಣ ಹಾಗೂ 'ಜಾನಪದ ವಿಭೂತಿ ಪ್ರಶಸ್ತಿ'ಗೆ ಕೋಲಾರದ ಕೀರ್ತನ ಕಲಾವಿದ ಎನ್.ಆರ್. ಜ್ಞಾನಮೂರ್ತಿ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಯು ಕ್ರಮವಾಗಿ ₹ 50 ಸಾವಿರ ಹಾಗೂ ₹ 25 ಸಾವಿರ ನಗದು ಒಳಗೊಂಡಿದೆ. ಡಿ.10ರಂದು ಸಂಜೆ 6 ಗಂಟೆಗೆ 'ಜಾನಪದ ವಿಭೂತಿ ಪ್ರಶಸ್ತಿ' ಹಾಗೂ ಡಿ.11ರಂದು ಬೆಳಿಗ್ಗೆ 11 ಗಂಟೆಗೆ 'ಸುವರ್ಣಶ್ರೀ ಪ್ರಶಸ್ತಿ' ಪ್ರದಾನ ಸಮಾರಂಭವು ಮಠದ ಜಗದ್ಗುರು ಪಂಚಾಚಾರ್ಯ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ ಎಂದು ಮಠದ ಕಾರ್ಯದರ್ಶಿ ಸಿ. ಬಸವರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಲ್ವರ ಕೊಂದ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ


ಪ್ರವೀಣ್ ಅರುಣ್ ಚೌಗಲೆ

ಉಡುಪಿ: ಹಂಪನಕಟ್ಟೆ ಸಮೀಪದ ನೇಜಾರಿನ ತೃಪ್ತಿ ಲೇಔಟ್‌ನಲ್ಲಿ ನ.12ರಂದು ಒಂದೇ ಕುಟುಂಬದ ನಾಲ್ವರನ್ನು ಕೊಲೆ ಮಾಡಿ ಪರಾರಿಯಾಗಿದ್ದ ಆರೋಪಿಯನ್ನು ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ ಕುಡಚಿಯಲ್ಲಿ ಪೊಲೀಸರು ಬಂಧಿಸಿದ್ದಾರೆ.

ಮಹಾರಾಷ್ಟ್ರದ ಸಾಂಗ್ಲಿ ಮೂಲದ ಪ್ರವೀಣ್ ಅರುಣ್ ಚೌಗಲೆ (39) ಬಂಧಿತ ಆರೋಪಿ. ಬುಧವಾರ ಬೆಳಗಾವಿಯಿಂದ ಇಲ್ಲಿಗೆ ಆರೋಪಿಯನ್ನು ಕರೆತಂದ ಪೊಲೀಸರು ವಿಚಾರಣೆ ನಡೆಸಿ, ಇಲ್ಲಿನ ಒಂದನೇ ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿದರು. ಹೆಚ್ಚಿನ ವಿಚಾರಣೆಗೆ ಆರೋಪಿಯನ್ನು 14 ದಿನಗಳ ಕಾಲ ಪೊಲೀಸ್ ವಶಕ್ಕೆ ಒಪ್ಪಿಸಿ ನ್ಯಾಯಾಧೀಶರು ಆದೇಶಿಸಿದರು.

ತಪ್ಪೊಪ್ಪಿಕೊಂಡ ಆರೋಪಿ: 'ಹಸೀನಾ (48), ಮಕ್ಕಳಾದ ಅಫ್ನಾನ್ (23), ಅಯ್ನಾಜ್ (20) ಹಾಗೂ ನದೀಮ್ (14)ನನ್ನು ಕೊಲೆ ಮಾಡಿರುವುದಾಗಿ ಆರೋಪಿ ತನಿಖೆಯಲ್ಲಿ ತಪ್ಪೊಪ್ಪಿಕೊಂಡಿದ್ದು ಕೊಲೆಗೆ ಮೂರು ಕಾರಣಗಳನ್ನು ನೀಡಿದ್ದಾನೆ' ಎಂದು ಜಿಲ್ಲಾ ಎಸ್‌ಪಿ ಕೆ.ಅರುಣ್ ಸ್ಪಷ್ಟಪಡಿಸಿದರು.

ಕೊಲೆಗೆ ದ್ವೇಷ ಕಾರಣ: 'ಆರೋಪಿ ಏರ್ ಇಂಡಿಯಾ ಸಂಸ್ಥೆಯಲ್ಲಿ ಕ್ಯಾಬಿನ್ ಕ್ರೂ ಆಗಿ ಹಲವು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದು ಮಂಗಳೂರಿನಲ್ಲಿ ನೆಲೆಸಿದ್ದ. ಮೃತ ಯುವತಿ ಅಯ್ನಾಜ್ ಸಹ ಅದೇ ಸಂಸ್ಥೆಯಲ್ಲಿ ಗಗನಸಖಿಯಾಗಿ ಕೆಲಸ ಮಾಡುತ್ತಿದ್ದರು. ಯುವತಿ ಜತೆಗಿನ ಸ್ನೇಹ ದ್ವೇಷಕ್ಕೆ ತಿರುಗಿದ್ದು ಕೊಲೆಗೆ ಕಾರಣ ಎಂದು ಶಂಕಿಸಲಾಗಿದೆ. ಅಯ್ನಾಜ್ ಅವರನ್ನು ಕೊಲ್ಲಲು ಆತ ಬಂದಿದ್ದ. ಕುಟುಂಬದ ಸದಸ್ಯರು ಪ್ರತಿರೋಧ ತೋರಿದಾಗ ಸಾಕ್ಷ್ಯ ನಾಶಪಡಿಸುವ ಹಾಗೂ ತಪ್ಪಿಸಿಕೊಳ್ಳುವ ಉದ್ದೇಶದಿಂದ ಎಲ್ಲರಿಗೂ ಚೂರಿಯಿಂದ ಇರಿದು ಕೊಲೆ ಮಾಡಿದ್ದಾನೆ' ಎಂದು ಎಸ್.ಪಿ ಹೇಳಿದರು.

ಆರೋಪಿ ವಿವಾಹಿತ: 'ಆರೋಪಿ ಪ್ರವೀಣ್ ಅರುಣ್ ಚೌಗಲೆಗೆ ಈಗಾಗಲೇ ಮದುವೆಯಾಗಿದ್ದು ಮಗು ಇದೆ. ಆತ ಈ ಹಿಂದೆ ಸಿಆರ್‌ಪಿಎಫ್, ಸಿಐಎಸ್‌ಎಫ್‌ನಲ್ಲಿ ಕಾರ್ಯ ನಿರ್ವಹಿಸಿದ ಬಗ್ಗೆ ಮಾಹಿತಿ ಲಭ್ಯವಾಗಿಲ್ಲ, ಆದರೆ, ಕೆಲವು ತಿಂಗಳ ಕಾಲ ಮಹಾರಾಷ್ಟ್ರ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸಿರುವ ಬಗ್ಗೆ ಪ್ರಾಥಮಿಕ ಮಾಹಿತಿ ಲಭ್ಯವಿದೆ. ಏರ್ ಇಂಡಿಯಾದಲ್ಲಿ ಕೆಲಸ ಸಿಕ್ಕ ಬಳಿಕ ಅದಕ್ಕೆ ರಾಜೀನಾಮೆ ನೀಡಿದ್ದ' ಎಂದರು.

ನಕ್ಸಲರು–ಪೊಲೀಸರ ನಡುವೆ ಗುಂಡಿನ ಚಕಮಕಿ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಇಲ್ಲಿನ ಕೇರಳ ಗಡಿಭಾಗದಿಂದ 5 ಕಿ.ಮೀ ದೂರದಲ್ಲಿ ನಕ್ಸಲರು ತಂಗಿದ್ದ ಶಿಬಿರದ ಮೇಲೆ ಕೇರಳ ನಕ್ಸಲ್ ನಿಗ್ರಹ ಪಡೆ ಸೋಮವಾರ ದಾಳಿ ನಡೆಸಿದೆ. ಆ ವೇಳೆ ನಕ್ಸಲರಿಗೂ, ಪೊಲೀಸರಿಗೂ ತೀವ್ರತರವಾದ ಗುಂಡಿನ ಚಕಮಕಿ ನಡೆದಿದ್ದು, ಎಲ್ಲ ನಕ್ಸಲರೂ ಪರಾರಿಯಾಗಿದ್ದಾರೆ. ಶಿಬಿರದಲ್ಲಿ ರಕ್ತದ ಕಲೆಗಳು ಪತ್ತೆಯಾಗಿದ್ದು, ಒಬ್ಬ ನಕ್ಸಲ್ ಗಾಯಗೊಂಡಿರಬಹುದು ಎಂದು ಶಂಕಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ನಕ್ಸಲರ ವಿರುದ್ಧ ನಡೆದ ಭಾರಿ ಗುಂಡಿನ ಚಕಮಕಿ ಇದು.

3 ರೈಫಲ್, 1 ಲ್ಯಾಪ್‌ಟಾಪ್, 4 ಮೊಬೈಲ್‌ಫೋನ್, 8 ಟೆಂಟ್‌ಗಳನ್ನು ವಶಪಡಿಸಿಕೊಂಡಿದ್ದು, ಶಿಬಿರದಲ್ಲಿ ಒಟ್ಟು 9 ಮಂದಿ ಇದ್ದರೆಂದು ಅಂದಾಜಿಸಲಾಗಿದೆ. 'ಅವರು ನಕ್ಸಲರ 'ಕಬಿನಿ' ಗುಂಪಿನ ಸದಸ್ಯರಾಗಿದ್ದು, ಮೊಯಿದ್ದೀನ್ ಎಂಬುವರ ನೇತೃತ್ವದಲ್ಲಿ ತಂಗಿದ್ದರು' ಎಂದು ಮೂಲಗಳು ತಿಳಿಸಿವೆ.


ಕೊಡಗಿನ ಕೇರಳ ಗಡಿ ಭಾಗಕ್ಕೆ ಮಂಗಳವಾರ ಕೊಡಗು ಜಿಲ್ಲಾ ಎಸ್‌ಪಿ ಕೆ.ರಾಮರಾಜನ್ ಭೇಟಿ ನೀಡಿದ್ದರು

ರಾಜ್ಯ ನಕ್ಸಲ್ ನಿಗ್ರಹ ಪಡೆಯು ಕೂಂಬಿಂಗ್ ಅನ್ನು ಚುರುಕುಗೊಳಿಸಿದೆ. ಹೆಚ್ಚುವರಿ ಪಡೆಗಳು ಮಂಗಳವಾರ ಕಾರ್ಯಾಚರಣೆ ತಂಡವನ್ನು ಸೇರಿಕೊಂಡಿವೆ. ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಗಡಿ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

ಆಸ್ಪತ್ರೆ, ಔಷಧ ಅಂಗಡಿಗಳ ಮೇಲೆ ನಿಗಾ: ಗಾಯಾಳು ನಕ್ಸಲರನ್ನು ಚಿಕಿತ್ಸೆಗಾಗಿ ಗಡಿಭಾಗದ ಕರೆತರಬಹುದೆಂಬ ಶಂಕೆಯಿಂದ ಜಿಲ್ಲಾ ಪೊಲೀಸರು ಗಡಿಭಾಗದ ಎಲ್ಲ ಆರೋಗ್ಯ ಕೇಂದ್ರಗಳು ಹಾಗೂ ಔಷಧ ಅಂಗಡಿಗಳ ಮೇಲೆ ತೀವ್ರ ನಿಗಾ ಇರಿಸಿದ್ದಾರೆ. ಮಫ್ತಿಯಲ್ಲಿ ಅನೇಕ ಕಡೆ ಕಣ್ಗಾವಲು ಇರಿಸಿದ್ದು, ಶಂಕಾಸ್ಪದ ವ್ಯಕ್ತಿಗಳ ಚಲನವಲನಗಳ ಪತ್ತೆಗೆ ಶ್ರಮ ವಹಿಸಿದ್ದಾರೆ. ಯಾವುದೇ ಸುಳಿವು ಪತ್ತೆಯಾಗಿಲ್ಲ.

'ನಕ್ಸಲರನ್ನು ಬೆಂಬಲಿಸುವ ಕೇರಳ ಭಾಗದ ಜನರ ನೆರವು ಪಡೆದು ವಾಹನದಲ್ಲಿ ಅವರನ್ನೆಲ್ಲ ಮೈಸೂರು ಅಥವಾ ದೂರದೂರುಗಳಿಗೆ ಕರೆದೊಯ್ದಿರುವ ಸಾಧ್ಯತೆಯ ಬಗ್ಗೆಯೂ ಪರಿಶೀಲನೆ ನಡೆದಿದೆ' ಎಂದು ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ನ.7ರಂದು ಕೇರಳದ ವಯನಾಡಿನಲ್ಲಿ ಶ್ರೀಮತಿ ಅಲಿಯಾಸ್ ಉನ್ನಿಮಾಯ ಹಾಗೂ ಚಂದ್ರು ಎಂಬ ಇಬ್ಬರು ಶಂಕಿತ ನಕ್ಸಲರನ್ನು ಅಲ್ಲಿನ ಪೊಲೀಸರು ಬಂಧಿಸಿದ್ದರು.


ಪಥಸಂಚಲನ ಯಲಹಂಕದ ಗಡಿಭದ್ರತಾ ಪಡೆಯ ತರಬೇತಿ ಕೇಂದ್ರದಲ್ಲಿ ರೇಡಿಯೊ ಆಪರೇಟರ್ ತರಬೇತಿ ಪಡೆದ 804 ಹೆಡ್‌ಕಾನ್‌ಸ್ಟೆಬಲ್‌ಗಳು ನಿರ್ಗಮನ ಪಥಸಂಚಲನದಲ್ಲಿ ಭಾಗವಹಿಸಿದ್ದರು

ಮುರುಘಾ ಶರಣರ ಬಿಡುಗಡೆಗೆ ಆದೇಶ

ಪ್ರಜಾವಾಣಿ ವಾರ್ತೆ


ಶಿವಮೂರ್ತಿ ಮುರುಘಾ ಶರಣರು

ಚಿತ್ರದುರ್ಗ: ಪೋಕ್ಸೊ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಇಲ್ಲಿನ ಮುರುಘಾ ಮಠದ ಪೀಠಾಧಿಪತಿ ಶಿವಮೂರ್ತಿ ಶರಣರನ್ನು ಕಾರಾಗೃಹದಿಂದ ಬಿಡುಗಡೆ ಮಾಡಲು 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಬುಧವಾರ ಆದೇಶಿಸಿದೆ. ನ್ಯಾಯಾಲಯದ ಆದೇಶ ಪ್ರತಿಯು ಕಾರಾಗೃಹ ತಲುಪುವುದು ವಿಳಂಬವಾಗಿದ್ದರಿಂದ ಶರಣರು ಹೊರಬರಲಿಲ್ಲ.

ಶಿವಮೂರ್ತಿ ಶರಣರಿಗೆ ಹೈಕೋರ್ಟ್ ನೀಡಿದ್ದ ಜಾಮೀನಿನ ಷರತ್ತುಗಳನ್ನು ಇಲ್ಲಿನ ಸೆಷನ್ಸ್ ನ್ಯಾಯಾಲಯ ಪರಿಶೀಲಿಸಿತು. ಇಬ್ಬರ ಭದ್ರತಾ ಖಾತರಿ ದೃಢಪಡಿಸಿಕೊಂಡು ಬಿಡುಗಡೆ ಆದೇಶ ನೀಡಲಾಯಿತು. ಆದೇಶದ ಪ್ರತಿ ಕಾರಾಗೃಹ ತಲುಪುವ ಹೊತ್ತಿಗೆ ಸಂಜೆ 7.20 ಆಗಿತ್ತು. ಇದಕ್ಕೂ ಮೊದಲೇ ಪೊಲೀಸರು 2ನೇ ಪೋಕ್ಸೊ ಪ್ರಕರಣದ ಬಾಡಿ ವಾರಂಟ್ ಅನ್ನು ಕಾರಾಗೃಹಕ್ಕೆ ಮುಟ್ಟಿಸಿದ್ದರು.

'ನ್ಯಾಯಾಲಯದ ಆದೇಶವನ್ನು ಕಾರಾಗೃಹಕ್ಕೆ ತಲುಪಿಸಲಾಯಿತು. ಕಾರಾಗೃಹದ ಸಮಯ ಮೀರಿದ್ದರಿಂದ ಬಿಡುಗಡೆ ಪ್ರಕ್ರಿಯೆ ಪೂರ್ಣಗೊಳ್ಳಲಿಲ್ಲ. ಗುರುವಾರ ಅವರು ಜೈಲಿನಿಂದ ಬಿಡುಗಡೆಯಾಗಲಿದ್ದಾರೆ. 2ನೇ ಪ್ರಕರಣದ ಬಾಡಿ ವಾರಂಟ್ ಮೇಲೆ ಶರಣರನ್ನು ಕಾರಾಗೃಹದಲ್ಲಿ ಇಟ್ಟುಕೊಳ್ಳುವಂತಿಲ್ಲ' ಎಂದು ಶರಣರ ಪರ ವಕೀಲ ಉಮೇಶ್ ಮಾಧ್ಯಮಗಳಿಗೆ ಮಾಹಿತಿ ನೀಡಿದರು.

ನ್ಯಾಯಾಲಯದ ಆದೇಶ ಹೊರಬಿದ್ದ ತಕ್ಷಣ ಕಾರಾಗೃಹದ ಎದುರು ಭಕ್ತರು ಸೇರಿದ್ದರು. ಶರಣರು ಬುಧವಾರ ಬಿಡುಗಡೆಯಾಗುವುದು ಖಾತರಿಯಿಲ್ಲ ಎಂಬುದು ಸ್ಪಷ್ಟವಾಗುತ್ತಿದ್ದಂತೆಯೇ ಎಲ್ಲರೂ ಅಲ್ಲಿಂದ ಮರಳಿದರು.

ಪ್ರೌಢಶಾಲೆಯ ಇಬ್ಬರು ಬಾಲಕಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ಶರಣರ ವಿರುದ್ಧ ದಾಖಲಾಗಿದ್ದ ಪೋಕ್ಸೊ ಪ್ರಕರಣದಲ್ಲಿ ಹೈಕೋರ್ಟ್ ನ.8ರಂದು ಷರತ್ತುಬದ್ಧ ಜಾಮೀನು ನೀಡಿತ್ತು. ಶರಣರ ಪರ ವಕೀಲರು ಬಿಡುಗಡೆ ಆದೇಶ ಕೋರಿ ನ.10ರಂದು ಸೆಷನ್ಸ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ವಿಚಾರಣೆ ಗುರುವಾರಕ್ಕೆ ಮುಂದೂಡಿಕೆ

ಪೋಕ್ಸೊ ಅಡಿ ದಾಖಲಾಗಿದ್ದ 2ನೇ ಪ್ರಕರಣದಲ್ಲಿ ಶರಣರ ವಿರುದ್ಧ ಹೊರಡಿಸಿದ ಬಾಡಿ ವಾರಂಟ್ ಅನ್ನು ನ್ಯಾಯಾಂಗ ಬಂಧನದ ಆದೇಶವಾಗಿ ಪರಿವರ್ತಿಸುವಂತೆ ಪ್ರಾಸಿಕ್ಯೂಷನ್ ಪರವಾಗಿ ಸರ್ಕಾರಿ ವಕೀಲರು ಮಾಡಿದ ಮನವಿಗೆ ಶರಣರ ಪರ ವಕೀಲರು ಬುಧವಾರ ತಕರಾರು ಸಲ್ಲಿಸಿದರು. ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶೆ ಬಿ.ಕೆ. ಕೋಮಲಾ ಗುರುವಾರ(ನ.16)ಕ್ಕೆ ಮುಂದೂಡಿದರು.

'2ನೇ ಪ್ರಕರಣದ ಬಾಡಿ ವಾರೆಂಟ್ ಕುರಿತ ವಿಚಾರಣೆ ನಡೆಯುತ್ತಿರುವುದರಿಂದ ಶರಣರನ್ನು ಬಿಡುಗಡೆ ಮಾಡಲು ಸಾಧ್ಯವಿಲ್ಲ. ಅವರನ್ನು ಕಾರಾಗೃಹದಲ್ಲಿಯೇ ಇರಿಸಲು ಕೋರಿಕೆ ಸಲ್ಲಿಸಲು ಪ್ರಾಸಿಕ್ಯೂಷನ್ ಸಿದ್ಧತೆ ಮಾಡಿಕೊಂಡಿದೆ' ಎಂದು ಸರ್ಕಾರಿ ವಕೀಲ ಎಚ್.ಆರ್. ಜಗದೀಶ್ ತಿಳಿಸಿದರು.

ಉದ್ಯೋಗಾಕಾಂಕ್ಷಿಯ ಮೀಸಲಿಗೆ ಕೊಕ್

ಕೆಎಂಎಫ್ ಕ್ರಮಕ್ಕೆ ಹೈಕೋರ್ಟ್ ಅತೃಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೀಸಲಾತಿಯಡಿ ದೊರಕಬೇಕಾಗಿದ್ದ ಉದ್ಯೋಗಿಯ ಕನಸಿಗೆ ಭಗ್ನವುಂಟು ಮಾಡಿದ್ದ ಕರ್ನಾಟಕ ಹಾಲು ಮಾರಾಟ ಮಹಾಮಂಡಳದ (ಕೆಎಂಎಫ್) ಕ್ರಮಕ್ಕೆ ಬೇಸರ ವ್ಯಕ್ತಪಡಿಸಿರುವ ಹೈಕೋರ್ಟ್, 'ಅರ್ಹ ಉದ್ಯೋಗ ಆಕಾಂಕ್ಷಿಗೆ ಅವಕಾಶ ನಿರಾಕರಿಸುವುದು ಕಲ್ಯಾಣ ರಾಜ್ಯದಲ್ಲಿ ಘಟಿಸುವ ಉತ್ತಮ ಬೆಳವಣಿಗೆಯಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

ಈ ಸಂಬಂಧ ಬೆಂಗಳೂರಿನ ಪಿ.ಆರ್. ದೇವರಾಜು ಸಲ್ಲಿಸಿದ್ದ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಪುರಸ್ಕರಿಸಿದ್ದು, 'ಅರ್ಜಿದಾರರ ಮೂಲ ಜಾತಿ ಅಥವಾ ಸಾಮಾಜಿಕ ಸ್ಥಿತಿಗತಿಯ ಪ್ರಮಾಣ ಪತ್ರವನ್ನು ಪಡೆದು ನಾಲ್ಕು ವಾರಗಳ ಒಳಗಾಗಿ ಸೂಪರ್ ನ್ಯೂಮರರಿ ಹುದ್ದೆ ಸೃಷ್ಟಿಸಿ ಅವರನ್ನು ಲೆಕ್ಕ ಸಹಾಯಕ ಗ್ರೇಡ್–1 ಹುದ್ದೆಗೆ ನೇಮಕ ಮಾಡಿಕೊಳ್ಳಬೇಕು' ಎಂದು ಕೆಎಂಎಫ್‌ಗೆ ನಿರ್ದೇಶಿಸಿದೆ.

ಅಮೆರಿಕದ ಸುಪ್ರೀಂ ಕೋರ್ಟ್‌ನ ಸಹಯೋಗಿ ನ್ಯಾಯಮೂರ್ತಿಯಾಗಿದ್ದ ಒಲಿವರ್ ವೆಂಡೆಲ್ ಹೋಮ್ಸ್ ಅವರ, 'ಸಂವಿಧಾನಗಳ ಉದ್ದೇಶವು ನಾಗರಿಕರ ಪ್ರಾಯೋಗಿಕ ಮತ್ತು ಗಣನೀಯ ಹಕ್ಕುಗಳ ರಕ್ಷಣೆಗಾಗಿ ಇದೆಯೇ ಹೊರತು ಸಿದ್ಧಾಂತಗಳನ್ನು ನಿರ್ವಹಿಸಲು ಅಲ್ಲ' ಎಂಬ ವಾಕ್ಯವನ್ನು ಆದೇಶದಲ್ಲಿ ಉಲ್ಲೇಖಿಸಿರುವ ನ್ಯಾಯಪೀಠವು, 'ಅರ್ಜಿದಾರರು ಆನ್‌ಲೈನ್ ಮೂಲಕ ತಮ್ಮ ಜಾತಿಪ್ರಮಾಣ ಪತ್ರ ಅಪ್‌ಲೋಡ್ ಮಾಡುವಲ್ಲಿ ಎಸಗಿರುವ ದೋಷವನ್ನು ಸರಿಪಡಿಸುವಂತೆ ಸೂಚಿಸಿದ್ದರೆ ಕೆಎಂಎಫ್ ತಲೆಯ ಮೇಲೆ ಆಕಾಶವೇನೂ ಕಳಚಿ ಬೀಳುತ್ತಿರಲಿಲ್ಲ' ಎಂದು ಕುಟುಕಿದೆ.

'ಆಗಿದ್ದ ಪ್ರಮಾದವನ್ನು ಸಣ್ಣ ಸೂಚನೆ ಮೂಲಕ ಸರಿಪಡಿಸಿ, ನೈಸರ್ಗಿಕ ನ್ಯಾಯ ಪಾಲನೆ ಮಾಡಬಹುದಿತ್ತು. ಆದರೆ, ಅಂತಹ ಕ್ರಮಕ್ಕೆ ಮುಂದಾಗದೆ ಇರುವ ಕೆಎಂಎಫ್ ಕ್ರಮವನ್ನು ಒಪ್ಪಲಾಗದು. ಇದು ಅನ್ಯಾಯದ ಪರಮಾವಧಿ' ಎಂದು ಹೇಳಿದೆ. ಅರ್ಜಿದಾರರ ಪರ ವಕೀಲ ಜೆ.ಪ್ರಶಾಂತ್ ವಾದ ಮಂಡಿಸಿದ್ದರು.

ಪ್ರಕರಣವೇನು?: ಲೆಕ್ಕ ಸಹಾಯಕರ ನೇಮಕಕ್ಕೆ ಕೆಎಂಎಫ್ 2022ರ ಅಕ್ಟೋಬರ್ 20ರಂದು ಅಧಿಸೂಚನೆ ಹೊರಡಿಸಿತ್ತು. ಅರ್ಜಿದಾರ ದೇವರಾಜು ದಾಖಲೆಗಳನ್ನು ಆನ್‌ಲೈನ್ ಮೂಲಕ ಅಪ್‌ಲೋಡ್ ಮಾಡಿದ್ದರು ಮತ್ತು ಪರೀಕ್ಷೆಗೆ ಹಾಜರಾಗಿದ್ದರು. ಆದರೆ, ಅವರು ಅಪ್‌ಲೋಡ್ ಮಾಡಿದ ಜಾತಿ ಪ್ರಮಾಣ ಪತ್ರ ಅಸ್ಪಷ್ಟವಾಗಿದೆ ಎಂಬ ಕಾರಣಕ್ಕೆ ಅವರನ್ನು ಸಾಮಾನ್ಯ ಅಭ್ಯರ್ಥಿ ಎಂದು ಪರಿಗಣಿಸಲಾಗಿತ್ತು. ಇದನ್ನು ಆಕ್ಷೇಪಿಸಿದ್ದ ದೇವರಾಜು, 'ಜಾತಿ ಪ್ರಮಾಣ ಪತ್ರ ಅಸ್ಪಷ್ಟವಾಗಿದೆ ಎಂಬ ಕಾರಣ ನೀಡಿ ನನ್ನನ್ನು ಸಾಮಾನ್ಯ ವರ್ಗದಲ್ಲಿ ನೇಮಕ ಮಾಡಿಕೊಳ್ಳಲಾಗಿದೆ' ಎಂದು ಹೈಕೋರ್ಟ್ ಮೆಟ್ಟಿಲೇರಿದ್ದರು. ಏಕಸದಸ್ಯ ನ್ಯಾಯಪೀಠ ಈ ಅರ್ಜಿ ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದರು.

'ಬೀದಿನಾಯಿ ನಿಯಂತ್ರಣ ಅರಿವು ಮೂಡಿಸಿ'



ಬೆಂಗಳೂರು: 'ಪ್ರಾಣಿಗಳ ಜನನ ನಿಯಂತ್ರಣ (ನಾಯಿ) ಅಧಿನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಗ್ರಾಮೀಣ ಅಥವಾ ಸ್ಥಳೀಯ ಮಟ್ಟದಲ್ಲಿ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶಿಸಬೇಕು' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ.

ಈ ಸಂಬಂಧ ಎಲ್.ರಮೇಶ್ ನಾಯಕ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಸರ್ಕಾರಿ ವಕೀಲರು, 'ಬೀದಿನಾಯಿಗಳ ದಾಳಿಗೆ ತುತ್ತಾಗಿ ಗಾಯಗೊಂಡವರಿಗೆ ₹ 5 ಸಾವಿರ ಹಾಗೂ ಜೀವ ಕಳೆದುಕೊಂಡವರಿಗೆ ₹ 5 ಲಕ್ಷ ಪರಿಹಾರ ನೀಡುವ ಬಗ್ಗೆ 2023ರ ಅಕ್ಟೋಬರ್ 6ರಂದು ರಾಜ್ಯ ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ನೇತೃತ್ವದ ಸಭೆಯಲ್ಲಿ ಚರ್ಚಿಸಲಾಗಿದೆ' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಮಾರ್ಗಸೂಚಿಗಳ ಮಾಹಿತಿ ಒಳಗೊಂಡ ಕಿರುಚಿತ್ರ ಪ್ರಸಾರ ಮಾಡುವಂತೆ ಪ್ರಾದೇಶಿಕ ಟಿವಿ ಮಾಧ್ಯಮ ಮತ್ತು ಚಿತ್ರಮಂದಿರಗಳ ಮಾಲೀಕರಿಗೆ ಮನವಿ ಮಾಡಿ. ಮುಂದಿನ ನಾಲ್ಕು ವಾರಗಳಲ್ಲಿ ಮತ್ತೊಂದು ಸಭೆ ನಡೆಸಿ ವರದಿ ತಯಾರಿಸಿ' ಎಂದು ಸೂಚಿಸಿ ವಿಚಾರಣೆಯನ್ನು ಆರು ವಾರಗಳ ಕಾಲ ಮುಂದೂಡಿತು.

ಸ್ಪರ್ಧಾ ವಾಣಿ

EXAM DH ಪ್ರಜಾವಾಣಿ MASTERMIND™

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

ಮತ್ತಷ್ಟು 'ಪ್ರಚಲಿತ'ಕ್ಕಾಗಿ..

ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಚಲಿತ ವಿದ್ಯಮಾನಗಳು ಸೇರಿದಂತೆ ನಾಗರಿಕ ಸೇವಾ ಪರೀಕ್ಷೆಗಳಿಗೆ ಪೂರಕವಾದ ಲೇಖನ, ವಿಡಿಯೊಗಳಿಗಾಗಿ ಪ್ರಜಾವಾಣಿ- ಡೆಕ್ಕನ್‌ಹೆರಾಲ್ಡ್ ಎಕ್ಸಾಮ್ 'ಮಾಸ್ಟರ್‌ಮೈಂಡ್' ಇ-ಪೇಪರ್‌ಗೆ ಚಂದಾದಾರರಾಗಿ. ಚಂದಕ್ಕಾಗಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ.



ಖನಿಜ ಭದ್ರತಾ ಪಾಲುದಾರಿಕೆ (MSP)

ಯು.ಟಿ. ಆಯಿಶ ಫರ್ಝಾನ

ಇತ್ತೀಚೆಗೆ ಭಾರತವು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಪ್ರಾಬಲ್ಯವಿರುವ ಯುಎಸ್ ನೇತೃತ್ವದ ಒಕ್ಕೂಟವಾದ ಖನಿಜ ಭದ್ರತಾ ಪಾಲುದಾರಿಕೆಗೆ (ಮಿನರಲ್ಸ್ ಸೆಕ್ಯುರಿಟಿ ಪಾರ್ಟ್‌ನರ್‌ಶಿಪ್ -MSP) ಸೇರಿಕೊಂಡಿತು. ಆ ಮೂಲಕ ಭಾರತವು ಪಾಲುದಾರಿಕೆಯ ಭಾಗವಾಗುತ್ತಿರುವ ಏಕೈಕ ಅಭಿವೃದ್ಧಿಶೀಲ ರಾಷ್ಟ್ರವಾಗಿದೆ.

- 2022ರಲ್ಲಿ ಯುನೈಟೆಡ್ ಸ್ಟೇಟ್ಸ್ ಮತ್ತು ಪ್ರಮುಖ ಪಾಲುದಾರ ರಾಷ್ಟ್ರಗಳು ಖನಿಜಗಳ ಭದ್ರತಾ ಪಾಲುದಾರಿಕೆಯನ್ನು (MSP) ಘೋಷಿಸಿದವು. ಇದು ಖನಿಜಗಳ ಪೂರೈಕೆಯನ್ನು ಜಾಗತಿಕ ಮಟ್ಟದಲ್ಲಿ ನಿರ್ಣಾಯಕ ರೀತಿಯಲ್ಲಿ ಹೆಚ್ಚಿಸಲು ಕೈಗೊಂಡ ಒಂದು ಮಹತ್ವಾಕಾಂಕ್ಷೆಯ ಒಪ್ಪಂದವಾಗಿದೆ. ಟೊರೊಂಟೊದಲ್ಲಿ ನಡೆದ ಪ್ರಾಸ್ಪೆಕ್ಟರ್ಸ್ ಮತ್ತು ಡೆವಲಪರ್ಸ್ ಅಸೋಸಿಯೇಶನ್ ಆಫ್ ಕೆನಡಾ ಸಮಾವೇಶದಲ್ಲಿ ಈ ಬಗ್ಗೆ ಘೋಷಣೆ ಮಾಡಲಾಗಿದೆ. ಇದನ್ನು ವಿಶ್ವದ ಅತಿದೊಡ್ಡ ಗಣಿಗಾರಿಕೆಗೆ ಸಂಬಂಧಿಸಿದ ಬೆಳವಣಿಗೆ ಎಂದೂ ಪರಿಗಣಿಸಲಾಗಿದೆ.

ಪಾಲುದಾರರಲ್ಲಿ ಆಸ್ಟ್ರೇಲಿಯಾ, ಕೆನಡಾ, ಫಿನ್‌ಲೆಂಡ್, ಫ್ರಾನ್ಸ್, ಜರ್ಮನಿ, ಜಪಾನ್, ರಿಪಬ್ಲಿಕ್ ಆಫ್ ಕೊರಿಯಾ, ಸ್ವೀಡನ್, ಯುಕೆ, ಅಮೆರಿಕ, ದಿ ಯುರೋಪಿಯನ್ ಕಮಿಷನ್, ಇಟಲಿ ದೇಶಗಳಿವೆ. ಈಗ ಭಾರತವೂ ಸೇರಿದೆ.

ಗುರಿಯೇನು?

- ದೇಶಗಳು ನಿರ್ಣಾಯಕ ಪ್ರಮಾಣದಲ್ಲಿ ಖನಿಜಗಳನ್ನು ಉತ್ಪಾದಿಸುವುದು, ಸಂಸ್ಕರಿಸುವುದು ಮತ್ತು ಮರುಬಳಕೆ ಮಾಡುವುದನ್ನು ಉತ್ತೇಜಿಸುವುದು. ಆ ಮೂಲಕ ಖನಿಜ ನಿಧಿಗಳನ್ನು ಸಂಪೂರ್ಣವಾಗಿ ಬಳಸಿಕೊಂಡು ಆರ್ಥಿಕ ಅಭಿವೃದ್ಧಿ ಹೊಂದುವಂತೆ ಬೆಂಬಲಿಸುವುದು.
- ಇದು ಖನಿಜ ಪೂರೈಕೆ ಸರಪಳಿಗಳಲ್ಲಿ ಸಾರ್ವಜನಿಕ ಮತ್ತು ಖಾಸಗಿ ಹೂಡಿಕೆಯನ್ನು ಜಾಗತಿಕ ಮಟ್ಟದಲ್ಲಿ ಹೆಚ್ಚಿಸುವ ಗುರಿ ಹೊಂದಿದೆ.
- ಖನಿಜಗಳ ಸಂಗ್ರಹಣೆಯ ವಿಚಾರದಲ್ಲಿ ಚೀನಾದ ಮೇಲೆ ಜಾಗತಿಕ ಅವಲಂಬನೆಯನ್ನು ಕಡಿಮೆ ಮಾಡುವುದು ಈ ಪಾಲುದಾರಿಕೆಯ ಪ್ರಮುಖ ಗುರಿಯಾಗಿದೆ.
- ಈ ಒಪ್ಪಂದವು ಒತ್ತು ನೀಡುವ ಪ್ರಮುಖ ಖನಿಜಗಳಲ್ಲಿ ಕೋಬಾಲ್ಟ್, ನಿಕ್ಕಲ್ ಮತ್ತು ಲಿಥಿಯಂ ಸೇರಿವೆ. ಇವು ವಿದ್ಯುತ್ ಚಾಲಿತ ವಾಹನಗಳ ಬ್ಯಾಟರಿಗಳು ಹಾಗೂ ವಿಂಡ್ ಟರ್ಬೈನ್‌ಗಳಲ್ಲಿ ಬಳಕೆಯಾಗುತ್ತವೆ. ಹಾಗೆಯೇ ಈ ಒಪ್ಪಂದಗಳಲ್ಲಿ ಸೆಮಿಕಂಡಕ್ಟರ್‌ಗಳಲ್ಲಿ ಬಳಕೆಯಾಗುವ 17 ಅಪರೂಪದ ಭೂಮಿಯ ಖನಿಜಗಳು ಸೇರಿವೆ.

ಅಪರೂಪದ ಭೂಖನಿಜಗಳ ಬಳಕೆ


- ಏರೋಸ್ಪೇಸ್ ಉದ್ಯಮ, ರಕ್ಷಣಾ ಉದ್ಯಮ, ಎಲೆಕ್ಟ್ರಾನಿಕ್ಸ್ (ಮೊಬೈಲ್ ಫೋನ್‌ಗಳು, ಟಿ.ವಿ, ಲ್ಯಾಪ್‌ಟಾಪ್‌ಗಳು), ಎಲೆಕ್ಟ್ರಿಕ್ ವಾಹನಗಳು, ಸೌರ ಫಲಕಗಳು, ಸೆಮಿಕಂಡಕ್ಟರ್‌ಗಳು, ವಿಂಡ್ ಟರ್ಬೈನ್‌ಗಳು, ಹೈಟೆಕ್ ಕೈಗಾರಿಕೆಗಳು, ದೂರಸಂಪರ್ಕ, ಭದ್ರತಾ ತಂತ್ರಜ್ಞಾನಗಳು ಇತ್ಯಾದಿಗಳಲ್ಲಿ ಬಳಸಲಾಗುತ್ತದೆ.

ಉದ್ದೇಶಗಳು

- ಪಾಲುದಾರ ರಾಷ್ಟ್ರಗಳ ನಡುವೆ ಉಪಯುಕ್ತ ಮಾಹಿತಿ ಹಂಚಿಕೆ
- ಸುರಕ್ಷಿತ ನಿರ್ಣಾಯಕ ಖನಿಜಗಳ ಪೂರೈಕೆ ಸರಪಳಿಗಳಲ್ಲಿ ಹೂಡಿಕೆ ಹೆಚ್ಚಳ ಮಾಡುವುದು.
- ಮರುಬಳಕೆ ತಂತ್ರಜ್ಞಾನಗಳ ಅಭಿವೃದ್ಧಿಪಡಿಸುವಿಕೆ

ನಿಮಗಿದು ಗೊತ್ತೆ ?

- 2022ರಲ್ಲಿ ಪ್ರಪಂಚದಾದ್ಯಂತ ಕೋಬಾಲ್ಟ್ ಗಣಿ ಉತ್ಪಾದನೆಯಲ್ಲಿ ಪ್ರಥಮ ಸ್ಥಾನದಲ್ಲಿದ್ದ ದೇಶ ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿದೆ. ಇದು ವಿಶ್ವದಲ್ಲೇ ಅತಿ ದೊಡ್ಡ ಕೋಬಾಲ್ಟ್ ನಿಕ್ಷೇಪಗಳನ್ನು ಹೊಂದಿದೆ.
- 2022ರಲ್ಲಿ ಲಿಥಿಯಂ ಉತ್ಪಾದನೆಯ ವಿಷಯದಲ್ಲಿ ಆಸ್ಟ್ರೇಲಿಯಾವು ವಿಶ್ವದ ಮುಂಚೂಣಿಯಲ್ಲಿತ್ತು. ಚಿಲಿ ದೇಶವು ವಿಶ್ವದ ಅತಿದೊಡ್ಡ ಲಿಥಿಯಂ ನಿಕ್ಷೇಪಗಳನ್ನು ಹೊಂದಿದೆ ಮತ್ತು ವಿಶ್ವದ ಎರಡನೇ ಅತಿದೊಡ್ಡ ಉತ್ಪಾದಕ ದೇಶವಾಗಿದೆ.
- ವಿಶ್ವದಲ್ಲಿ ನಿಕ್ಕಲ್ ಉತ್ಪಾದನೆಯಲ್ಲಿ ಇಂಡೋನೇಷ್ಯಾ ಪ್ರಮುಖ ದೇಶವಾಗಿದೆ. ಇಂಡೋನೇಷ್ಯಾ ಮತ್ತು ಆಸ್ಟ್ರೇಲಿಯಾವು 2022ರಲ್ಲಿ ವಿಶ್ವದ ಅತಿದೊಡ್ಡ ನಿಕ್ಷೇಪಗಳನ್ನು ಹೊಂದಿದ್ದವು.
- 2022ರಲ್ಲಿ ಚೀನಾವು ವಿಶ್ವದಾದ್ಯಂತ ಗ್ರ್ಯಾಫೈಟ್ ಉತ್ಪಾದಿಸುವ ಪ್ರಮುಖ ದೇಶವಾಗಿದೆ. ಟರ್ಕಿಯು 2022ರಲ್ಲಿ ವಿಶ್ವದ ಅತಿದೊಡ್ಡ ನೈಸರ್ಗಿಕ ಗ್ರ್ಯಾಫೈಟ್ ಅನ್ನು ಹೊಂದಿತ್ತು.



ಇದರ ಮಹತ್ವ

- ಅಪರೂಪದ ಭೂಮಿಯ ಖನಿಜಗಳ ಜಾಗತಿಕ ಉತ್ಪಾದನೆಯಲ್ಲಿ ಚೀನಾದ ಪ್ರಾಬಲ್ಯ ಶೇ 60ರಷ್ಟಿದೆ. ಖನಿಜ ಸಂಸ್ಕರಣಾ ಮೂಲಸೌಕರ್ಯವನ್ನು ಈ ದೇಶವು ಉತ್ತಮವಾಗಿ ಅಭಿವೃದ್ಧಿಪಡಿಸಿರುವುದರಿಂದ ಮತ್ತು ಆಫ್ರಿಕಾದ ಗಣಿಗಳಿಂದ ಕೋಬಾಲ್ಟ್ ಗಣಿಗಾರಿಕೆಯ ಹಕ್ಕುಗಳನ್ನು ಪಡೆದುಕೊಂಡಿರುವುದರಿಂದ ಹೆಚ್ಚಿನ ದೇಶಗಳು ಅಪರೂಪದ ಭೂ ಖನಿಜಗಳಿಗಾಗಿ (Rare Earth Elements)ಗಾಗಿ ಚೀನಾವನ್ನೆ ಅವಲಂಬಿಸಿವೆ.
- ಭೌಗೋಳಿಕ ರಾಜಕೀಯ ಅನಿಶ್ಚಿತತೆಗಳು, ಅಸಮಂಜಸ ದರ ಏರಿಕೆ, ಕೋವಿಡ್ 19ರಿಂದ ಉಂಟಾದ ತೊಂದರೆಗಳು, ರಷ್ಯಾ-ಉಕ್ರೇನ್ ಸಂಘರ್ಷಗಳು ಜಾಗತಿಕ ಖನಿಜ ಪೂರೈಕೆ ಸರಪಳಿಗೆ ಅಡ್ಡಿಯಾಗಿವೆ. ಪಾಲುದಾರಿಕೆಯು ಇಂಥ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಪ್ರಯತ್ನ ಮಾಡುತ್ತದೆ.
- ಶುದ್ಧ ಶಕ್ತಿ ಮತ್ತು ಇತರ ತಂತ್ರಜ್ಞಾನಗಳಿಗೆ ಅಗತ್ಯವಿರುವ ಖನಿಜಗಳಿಗಿರುವ ಬೇಡಿಕೆಯನ್ನು ಮುಂಬರುವ ದಶಕಗಳಲ್ಲಿ ಗಮನಾರ್ಹವಾಗಿ ವಿಸ್ತರಿಸುವ ನಿರೀಕ್ಷೆಯಿದೆ. ಪರಿಸರ, ಸಾಮಾಜಿಕ ಹಾಗೂ ಆಡಳಿತ ನಿಯಮಗಳಿಗೆ ಬದ್ಧವಾಗಿದ್ದುಕೊಂಡು, ಸರ್ಕಾರ ಹಾಗೂ ಖಾಸಗಿ ವಲಯದಲ್ಲಿ ಹೆಚ್ಚಿನ ಹೂಡಿಕೆಯನ್ನು ನಿರೀಕ್ಷಿಸಲು ಈ ಪಾಲುದಾರಿಕಾ ಒಪ್ಪಂದ ಸಹಾಯ ಮಾಡುತ್ತದೆ.

❖

ರಾಷ್ಟ್ರೀಯ ವಿದ್ಯಮಾನಗಳು

ಗುರುಶಂಕರ್

ಗೋಧಿ ಹಿಟ್ಟಿನ ದರ ನಿಯಂತ್ರಣಕ್ಕೆ ಕ್ರಮ

ಕೇಂದ್ರ ಸರ್ಕಾರ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಗೋಧಿ ಹಿಟ್ಟು ವಿತರಿಸಲು ಪ್ರತಿ ಕೆಜಿಗೆ ₹ 27.50 ಗರಿಷ್ಠ ಬೆಲೆಯನ್ನು ನಿಗದಿಪಡಿಸಿ 'ಭಾರತ್ ಆಟಾ' ಗೋಧಿ ಹಿಟ್ಟಿನ ಮಾರಾಟಕ್ಕೆ ಮುಂದಾಗಿದೆ.

- ಗೋಧಿ ಹಿಟ್ಟಿನ ರಾಷ್ಟ್ರೀಯ ಸರಾಸರಿ ದರ ₹ 35.93 ಪ್ರತಿ ಕೆಜಿ ಇದೆ. ಈ ದರಕ್ಕಿಂತ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡಲು ನಿರ್ಧರಿಸಿದೆ.
- ಗೋಧಿ ಹಿಟ್ಟನ್ನು ಕೇಂದ್ರೀಯ ಭಂಡಾರ, ರಾಷ್ಟ್ರೀಯ ಕೃಷಿ ಸಹಕಾರಿ ಮಾರುಕಟ್ಟೆ ಒಕ್ಕೂಟ ಮತ್ತು ರಾಷ್ಟ್ರೀಯ ಸಹಕಾರಿ ಗ್ರಾಹಕ ಒಕ್ಕೂಟದಿಂದ ಮಾರುಕಟ್ಟೆಗೆ ಪೂರೈಸುವ ಯೋಜನೆಯನ್ನು ಹಮ್ಮಿಕೊಂಡಿದೆ.

ಕೇಂದ್ರೀಯ ಭಂಡಾರ

- ಕೇಂದ್ರ ಸರ್ಕಾರಿ ನೌಕರರ ಗ್ರಾಹಕ ಸಹಕಾರ ಸಂಘ ಲಿಮಿಟೆಡ್ ಸಂಸ್ಥೆಯನ್ನು 1963ರಲ್ಲಿ ಸ್ಥಾಪಿಸಿದ್ದು, ಈ ಸಂಸ್ಥೆಯನ್ನು ಕೇಂದ್ರೀಯ ಭಂಡಾರ ಎಂದು ಕರೆಯಲಾಗುತ್ತದೆ.
- ಕೇಂದ್ರ ಸರ್ಕಾರದ ನೌಕರರಿಗೆ ಮತ್ತು ಸಾರ್ವಜನಿಕರಿಗೆ ದೈನಂದಿನ ಅಗತ್ಯಗಳಿಗೆ ಅನುಗುಣವಾಗಿ ಗುಣಮಟ್ಟದ ಸರಕುಗಳನ್ನು ಕಡಿಮೆ ಬೆಲೆಯಲ್ಲಿ ಒದಗಿಸುವ ಕಾರ್ಯವನ್ನು ನಿರ್ವಹಿಸುತ್ತಿದೆ. ಕೇಂದ್ರ ಸಿಬ್ಬಂದಿ ಮತ್ತು ತರಬೇತಿ ಇಲಾಖೆಯ ಅಡಿಯಲ್ಲಿ ಇದು ಕಾರ್ಯನಿರ್ವಹಿಸುತ್ತಿದೆ. ಕೇಂದ್ರೀಯ ಭಂಡಾರ ಕೋವಿಡ್ ಕಾಲದಲ್ಲಿ ಅವಶ್ಯಕ ಆಹಾರ ಧಾನ್ಯಗಳನ್ನು ಮತ್ತು ಕಿಟ್‌ಗಳನ್ನು ಬಡವರಿಗೆ ವಿತರಿಸಿತ್ತು.

ರಾಷ್ಟ್ರೀಯ ಕೃಷಿ ಸಹಕಾರಿ ಮಾರುಕಟ್ಟೆ ಒಕ್ಕೂಟ

- ಭಾರತದಲ್ಲಿ ಉತ್ಪಾದನೆಯಾಗುವ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ಕಲ್ಪಿಸುವ ಸಹಕಾರಿ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ.
- ಈ ಸಂಸ್ಥೆಯನ್ನು ಅಕ್ಟೋಬರ್ 2, 1958ರಲ್ಲಿ ಸ್ಥಾಪಿಸಲಾಗಿದ್ದು ಬಹುರಾಜ್ಯ ಸಹಕಾರ ಸಂಘಗಳ ಕಾಯ್ದೆ 2002ರ ಅನ್ವಯ ನೋಂದಣಿಯಾಗಿದೆ.

ಒಂದು ರಾಷ್ಟ್ರ, ಒಂದು ನೋಂದಣಿ ವೇದಿಕೆ

- ವೈದ್ಯರ ನೋಂದಣಿ ಪ್ರಕ್ರಿಯೆಯನ್ನು ಸರಳೀಕರಿಸಲು ರಾಷ್ಟ್ರೀಯ ವೈದ್ಯಕೀಯ ಆಯೋಗ ಒಂದು ರಾಷ್ಟ್ರ, ಒಂದು ನೋಂದಣಿ ವೇದಿಕೆಯನ್ನು ಜಾರಿಗೆ ತರಲು ನಿರ್ಧರಿಸಿದೆ.
- ನಕಲಿ ವೈದ್ಯರ ಹಾವಳಿ ಹೆಚ್ಚುತ್ತಿದ್ದು, ಇದನ್ನು ತಡೆಗಟ್ಟಲು ರಾಷ್ಟ್ರೀಯ ವೈದ್ಯಕೀಯ ಆಯೋಗ ಈ ನಿರ್ಧಾರವನ್ನು ಕೈಗೊಂಡಿದೆ. ಇದಲ್ಲದೆ ಅಧಿಕಾರಿ ವರ್ಗದ ಸಮಸ್ಯೆಗಳು ಮತ್ತು ವಿಳಂಬ ನೀತಿಯನ್ನು ತೊಡೆದುಹಾಕಲು ಈ ಕ್ರಮವನ್ನು ಕೈಗೊಂಡಿದೆ, ದೇಶದೆಲ್ಲೆಡೆ ಕಾರ್ಯನಿರ್ವಹಿಸುತ್ತಿರುವ ವೈದ್ಯರಿಗೆ ವಿನೂತನ ಗುರುತಿನ ಸಂಖ್ಯೆಯನ್ನು ನೀಡಲಾಗುತ್ತದೆ.
- ದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವೈದ್ಯರ ದತ್ತಾಂಶವನ್ನು ಕೇಂದ್ರೀಕೃತವಾಗಿ ನಿರ್ವಹಿಸಲು ಈ ಕ್ರಮ ಕೈಗೊಳ್ಳಲಾಗಿದೆ. ವೈದ್ಯರ ಅರ್ಹತೆ, ನೋಂದಣಿಯಾದ ವರ್ಷ, ವೈದ್ಯರ ಪರಿಣತಿ ಕ್ಷೇತ್ರವನ್ನು ಕೂಡ ದಾಖಲಿಸಲಾಗುತ್ತದೆ.

ರಾಷ್ಟ್ರೀಯ ವೈದ್ಯಕೀಯ ಆಯೋಗ

- ರಾಷ್ಟ್ರೀಯ ವೈದ್ಯಕೀಯ ಆಯೋಗವನ್ನು ವೈದ್ಯಕೀಯ ಆಯೋಗ ಕಾಯ್ದೆ 2019ರ ಅನ್ವಯ ಸ್ಥಾಪಿಸಲಾಯಿತು.
- ಈ ಆಯೋಗವು ಭಾರತದ ವೈದ್ಯಕೀಯ ಶಿಕ್ಷಣ ಮತ್ತು ವೃತ್ತಿಗೆ ಸಂಬಂಧಿಸಿದಂತೆ ಪ್ರಮುಖ ನಿಯಂತ್ರಣ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ.
- ಭಾರತದಾದ್ಯಂತ ಉನ್ನತ ಮಟ್ಟದ ವೈದ್ಯಕೀಯ ಶಿಕ್ಷಣವನ್ನು ಮತ್ತು ತರಬೇತಿಯನ್ನು ಕಲ್ಪಿಸಲು ಈ ಸಂಸ್ಥೆಯನ್ನು ಸ್ಥಾಪಿಸಲಾಯಿತು.

❖

ಕೃಷಿ 24/7

- ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಇಲಾಖೆ, ವಾದ್ವಾನಿ ಇನ್‌ಸ್ಟಿಟ್ಯೂಟ್ ಫಾರ್ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಸಂಸ್ಥೆಯ ಸಹಭಾಗಿತ್ವದಲ್ಲಿ ಕೃಷಿ 24/7 ಕೃತಕ ಬುದ್ಧಿಮತ್ತೆ ಆಧಾರಿತ ಮಾಹಿತಿ ನೀಡುವ ವ್ಯವಸ್ಥೆಯನ್ನು ಜಾರಿಗೆ ತಂದಿದೆ.



- ಈ ಯೋಜನೆಗೆ ಗೂಗಲ್ ಸಂಸ್ಥೆಯು ಬೆಂಬಲ ನೀಡುತ್ತಿದ್ದು, ಕೃಷಿ ಸಂಬಂಧಿತ ವಾರ್ತೆಯನ್ನು ತ್ವರಿತಗತಿಯಲ್ಲಿ ರೈತ ಸಮುದಾಯಕ್ಕೆ ಕಲ್ಪಿಸಲು ಮತ್ತು ಕೃಷಿ ಚಟುವಟಿಕೆಗಳಿಗೆ ಸಂಬಂಧಪಟ್ಟ ಮಾಹಿತಿಯನ್ನು ರೈತ ಸಮುದಾಯಕ್ಕೆ ಒದಗಿಸಲು ಸ್ವಯಂ ಚಾಲಿತ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.
- ಹವಾಮಾನದಲ್ಲಿ ಉಂಟಾಗುತ್ತಿರುವ ಬದಲಾವಣೆಗಳು, ಮಳೆಯ ಪ್ರವೃತ್ತಿ, ರೈತರಿಗೆ ಬೇಕಾದ ತಾಂತ್ರಿಕ ಮಾಹಿತಿ ಸೇರಿದಂತೆ ಇರುವ ಸವಲತ್ತುಗಳ ಬಗ್ಗೆ ಸ್ವಯಂಚಾಲಿತ ವ್ಯವಸ್ಥೆಯಲ್ಲಿ ಮಾಹಿತಿ ಕಲ್ಪಿಸಲಾಗುತ್ತದೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ENGLISH

ಎಸ್‌ಎಸ್‌ಎಲ್‌ಸಿ – ಕನ್ನಡ ಮಾಧ್ಯಮ

Second Language ENGLISH

Unit-2 PROSE

There's a Girl by the Tracks!

Task 2: Work in pairs and write a letter to the editor column focusing on the problems of your locality

S. Venkatesh
3, Veera Sadana
7^{th} Cross, 12^{th} Main
Vijaynagar Bangalore
11^{th} March, 2023

To,
The Editor
English Daily, Bangalore

Dear Sir

Sub: Murderous Stubs of tree trunks and electric Poles

The BBMP has recently completed widening of 12^{th} main road, Vijaynagar, Bangalore. It is appreciated as solution to heavy traffic. But unfortunately slipshod work has resulted in a loss of young life two days back.

On 9 March 2023, the day after road was asphalted after widening, at 1130pm a motorcyclist was slightly touched by a BMTC bus and the rider fell and hit a stub of electric pole which broke his helmet to seriously injured the brain tissue after piercing the skull. He was taken to NIMHANS but could not survive.

A young life was snuffed out by slipshod work of BBMP. We request you to campaign against such killer stubs being left by BBMP / other (PWD) agencies elsewhere and prevent further such deaths, which can be liberally termed as state murders. We hope BBMP will immediately remove killer stubs from the 12^{th} main road, Vijaynagar, Bangalore

Thank you

Yours faithfully
XXXXX
(Signature)

Task 3: Prepare a questionnaire.

Imagine you are a correspondent of English daily and you have to interview the following persons on the issue 'Safety measures taken with regard to traffic and the public response'.

1.Superintendent of police
2.Traffic Inspector and
3. Local MLA

Prepare a set of questions to interview each one of the above. One example is done for you.

Note: Only questions for the interview are given, not the reply.

1.Good morning Sir / Madam. I'm Kumar. I'm a reporter from English daily.

Sir/Madam, I've some questions. Could you spare some time for me, please?

1. In recent days, traffic is usually heavy. Accidents are on the increase. May I know what measures have been taken in this regard?
2. There are pot holes on roads almost everywhere. How do you think we can prevent accidents?
3. Well, Sir / Madam, what do you suggest to the public to maintain road safety?
4. Banners, buntings and advertisements are a nuisance in maintaining safety on road. Your comments please.
5. Youths, especially teens drive erratically. What advice would you like to give them?

Sir / Madam on behalf of our media I'm highly thankful to you.

1) Superintendent of police:

Good morning Sir / Madam. I'm Shekhar. I'm a reporter from English daily. Let me thank you for giving my media your appointment for interview from 9am to 9.45am today on the issue of 'Safety measures taken with regard to traffic and the public response'.

Let me begin with my first question.

1. Why do you think average traffic speed vehicles even on main trunk routes connecting eight directions of city is one of the lowest in India?
2. Why vehicles are being parked now even on the carriage width indicating B Track white lines, which results in slow traffic and traffic jams?
3. Why is the system of outsourcing of clearance parking in no parking zones is not functioning effectively?
4. Do you have right number of police personnel to enforce traffic discipline with respect to number of vehicles, traffic junctions?
5. Why do police get involved in RTO work like checking payment of road tax or insurance instead of focusing on enforcing traffic discipline?
6. Why are you not serious about cameras at traffic junctions of which only 25% are serviceable?

Sir / Madam on behalf of our media I'm highly thankful to you.

2) Traffic Inspector:

Good morning Sir / Madam. I'm Shekhar. I'm a reporter from English daily. Let me thank you for giving my media your appointment for interview from 9am to 9.45am today on the issue of 'Safety measures taken with regard to traffic and the public response'.

Let me begin with my first question.

(Contd……..)

II PUC BIOLOGY

ಎಸ್ಸೆಸ್ಸೆಲ್ಸಿ- ಸಮಾಜ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

REPRODUCTION

Human Reproduction

Short Answer type questions:-

1. A human female experiences two major changes, menarche and menopause during her life. Mention the significance of both the events.

Ans:- ***Menarche*** – is the first menstruation that occurs in the life of a young girl. It is the indication of the attainment of sexual maturity and beginning of fertile period.

Menopause- It is the cessation of menstruation in the life of a women that marks the end of fertile period due to non-release of ova.

2. Why do doctors recommend breast feeding during initial period of infant growth?

Ans:- Doctors recommend breast feeding during initial period of infant growth because

i) Mother's milk has antibodies (IgA, IgG) and several biochemicals for providing resistance against several pathogens.

(ii) Mother provides phagocytes to the baby for killing germs.

(iii) Breast feeding is a natural method for preventing another pregnancy soon after.

(iv) Mother's milk is a perfect diet for neonates and young infants.

3. What is foetal ejection reflex? Explain how it leads to parturition?

Ans:- Foetal ejection reflex is the origin of signals from the fully formed foetus and placenta. Mild uterine contractions develop. There is a positive feedback or cascade effect. Both mother and foetus secrete oxytocin. Uterine contractions become stronger and stronger. Head of the baby is pushed to cervix which gets dilated and stretched. A similar dilation occurs in vagina. Intensity of uterine and abdominal contractions increases. Amniotic membrane ruptures. Amniotic fluid passes out. Soon it is followed by expulsion of the baby.

4. Except endocrine function, What are the other functions of placenta?

Ans:- Placenta is foetomaternal connective that supports the foetus during its development. Its nonendocrine functions are –

(i) **Nutrition** or supply of nutrients by the mother to the foetus.

(ii) **Exchange of Gases** through placenta, the mother supplies O_2 to foetus and takes away Co_2 produced by the foetus.

(iii) **Excretion** - foetus eliminates its nitrogenous and other wastes through placenta.

(iv) **Antibodies** - Mother's antibodies enter foetal blood through placenta and protect it from several diseases.

(v) **Barrier** - Placenta does not allow passage of pathogens and toxins from entering the foetus.

Answer the following questions:-


1. Mention some of the differences between Sperm and Ovum.

Ans:-

	Sperm	*Ovum*
1	It is the male gamete.	It is the female gamete.
2	Produced inside the testes.	Ova develop inside the ovaries.
3	Maturation of sperms requires about 64 days.	Maturation of ova requires several years.
4	Millions of sperms are produced per day	Only one ovum matures every 28 days
5	It is dart-like.	Rounded outline.
6	60µm in length.	100µm in dia.
7	It is motile.	It is non-motile.
8	Reserve food is little.	Reserve food is sufficient.
9	contains special cap, acrosome.	Acrosome-like structure is absent.
10	Golgi complex is obliterated.	Golgi complex is present and functional.
11	It contains only a small amount of cytoplasm.	A large amount of cytoplasm is present.
12	Is differentiated into four parts.	Is not differen-tiated into parts.
13	Centrioles are present.	Centrioles are not distinct.
14	Flagellum present	Flagellum- absent
15	Nucleus has dense chromatin.	Nucleus contains dispersed chromatin
16	Extra coatings are absent.	Has 2 extra coatings, zona pellucida & corona radiate.
17	Mitochondria are spirally arranged in the area of middle piece.	Mitochondria are scattered throughout the cytoplasm.

2. Draw the structure of the Ovum.

Ans:-



ಕೆಐಎಡಿಬಿ: ಗುತ್ತಿಗೆ ಅವಧಿ 10 ವರ್ಷಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಅಭಿವೃದ್ಧಿಪಡಿಸಿದ ಕೈಗಾರಿಕಾ ಪ್ರದೇಶಗಳಲ್ಲಿ ನಾಗರಿಕ ಸೌಲಭ್ಯಕ್ಕೆ (ಸಿ.ಎ) ಮೀಸಲಿರಿಸಿದ ನಿವೇಶನಗಳನ್ನು 99 ವರ್ಷಗಳ ಗುತ್ತಿಗೆ ಬದಲಿಗೆ 10 ವರ್ಷಗಳ ಅವಧಿಯ ಗುತ್ತಿಗೆ ಕಂ ಕ್ರಯದ ಆಧಾರದಲ್ಲಿ ಹಂಚಿಕೆ ಮಾಡಲು ಆದೇಶ ಹೊರಡಿಸಲಾಗಿದೆ.

ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅಧ್ಯಕ್ಷತೆಯಲ್ಲಿ ಅ.10ರಂದು ನಡೆದ ಮಂಡಳಿಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಿ.ಎ ನಿವೇಶನಗಳ ಹಂಚಿಕೆ ಮಾರ್ಗಸೂಚಿ ಬದಲಾವಣೆಗೆ ನಿರ್ಧರಿಸಲಾಗಿತ್ತು. ಅದರ ಅನುಸಾರ ಮಾರ್ಗಸೂಚಿಗಳನ್ನು ಪರಿಷ್ಕರಿಸಿ ನ.10ರಂದು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಆದೇಶ ಹೊರಡಿಸಿದೆ.

ಕೆಐಎಡಿಬಿಯ ಎಲ್ಲ ಕೈಗಾರಿಕಾ ಪ್ರದೇಶಗಳಲ್ಲಿ ಸಿ.ಎ ನಿವೇಶನ ಕಾಯ್ದಿರಿಸಬೇಕು. ಸಿ.ಎ ನಿವೇಶನ ಲಭ್ಯವಿರುವ ಕುರಿತು ದಿನಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟಿಸಬೇಕು. ನಿವೇಶನಗಳ ಸ್ಥಳ, ಮೀಸಲಿರಿಸಿದ ಉದ್ದೇಶ, ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ, ಹಂಚಿಕೆಯ ಮಾನದಂಡಗಳ ಕುರಿತು ಜಾಹೀರಾತಿನಲ್ಲಿ ಸ್ಪಷ್ಟ ಮಾಹಿತಿ ಒದಗಿಸಬೇಕು ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ಕೆಐಎಡಿಬಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯ ಅಧ್ಯಕ್ಷತೆಯ ಸಮಿತಿಯು ಅರ್ಜಿಗಳನ್ನು ಪರಿಶೀಲಿಸಿ ರಾಜ್ಯ ಮಟ್ಟದ ಏಕಗವಾಕ್ಷಿ ವಿಲೇವಾರಿ ಸಮಿತಿಯ ಮುಂದೆ ಮಂಡಿಸಬೇಕು. ಸಮಿತಿಯು ಆಯ್ಕೆ ಮಾಡಿದವರಿಗೆ ಹತ್ತು ವರ್ಷಗಳ ಅವಧಿಗೆ ಸಿ.ಎ ನಿವೇಶನಗಳನ್ನು ಗುತ್ತಿಗೆ ಕಂ ಕ್ರಯದ ಆಧಾರದಲ್ಲಿ ಹಂಚಿಕೆ ಮಾಡಬೇಕು. ಅದರ ಅನ್ವಯ ನಿಗದಿತ ಕಾಲಾವಧಿಯ ಬಳಿಕ ಶುದ್ಧ ಕ್ರಯಪತ್ರ ಮಾಡಿಕೊಡಬೇಕು. ಹಾಲಿ ಅಸ್ತಿತ್ವದಲ್ಲಿರುವ ನಿವೇಶನಗಳ ಗುತ್ತಿಗೆಗೂ ಈ ಮಾರ್ಗಸೂಚಿ ಅನ್ವಯಿಸಲಿದೆ ಎಂದು ಇಲಾಖೆ ಹೇಳಿದೆ.

ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳು, ಆವಿಷ್ಕಾರಕ್ಕೆ ಸಂಬಂಧಿಸಿದ ಅತ್ಯುನ್ನತ ಸಂಸ್ಥೆಗಳು, ತಾಂತ್ರಿಕ ಸಂಸ್ಥೆಗಳು, ಕೌಶಲಾಭಿವೃದ್ಧಿ ತರಬೇತಿ, ತರಬೇತಿ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ಸರ್ಕಾರದ ಇಲಾಖೆ ಮತ್ತು ಸಾರ್ವಜನಿಕ ಉದ್ದಿಮೆಗಳ ಕಚೇರಿಗಳು, ಬ್ಯಾಂಕ್, ಆಸ್ಪತ್ರೆ, ಔಷಧಾಲಯ, ಹೋಟೆಲ್, ಪೆಟ್ರೋಲ್ ಬಂಕ್, ಗ್ಯಾಸ್ ಬಂಕ್, ಕ್ಯಾಂಟೀನ್ ಮತ್ತು ಕೈಗಾರಿಕಾ ಕ್ಷೇತ್ರಕ್ಕೆ ಪೂರಕವಾದ ವಸತಿ ಯೋಜನೆಗಳಿಗೆ ಸಿ.ಎ ನಿವೇಶನ ಹಂಚಿಕೆ ಮಾಡಲು ಅವಕಾಶ ಕಲ್ಪಿಸಿ ಪ್ರತ್ಯೇಕ ಆದೇಶ ಹೊರಡಿಸಲಾಗಿದೆ.

ಬಿಗ್ ಬಾಸ್ ಸ್ಪರ್ಧಿ ತನಿಷಾ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ



ತನಿಷಾ ಕುಪ್ಪಂಡ

ರಾಮನಗರ: ಕಲರ್ಸ್ ಕನ್ನಡ ವಾಹಿನಿಯ ಬಿಗ್ ಬಾಸ್ ರಿಯಾಲಿಟಿ ಷೋ ಸ್ಪರ್ಧಿ ತನಿಷಾ ಕುಪ್ಪಂಡ ಅವರು, ಬೋವಿ ಸಮುದಾಯ ಕುರಿತು ಮಾತನಾಡುವ ಮೂಲಕ ಅವಮಾನ ಮಾಡಿದ್ದಾರೆ ಎಂಬ ಆರೋಪದ ಮೇಲೆ ಕುಂಬಳಗೋಡು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಅಖಿಲ ಕರ್ನಾಟಕ ಬೋವಿ ಸಮಾಜದ ಮಹಿಳಾ ಘಟಕದ ರಾಜ್ಯ ಘಟಕದ ಅಧ್ಯಕ್ಷೆ ಪಿ.ಪದ್ಮಾ ನ.12ರಂದು ನೀಡಿದ್ದ ದೂರಿನ ಮೇರೆಗೆ, ತನಿಷಾ ವಿರುದ್ಧ ಪರಿಶಿಷ್ಟ ಜಾತಿ, ಪಂಗಡದ ದೌರ್ಜನ್ಯ ತಡೆ ಕಾಯ್ದೆಯಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ನ.8ರಂದು ತನಿಷಾ ಅವರು ಮತ್ತೊಬ್ಬ ಸ್ಪರ್ಧಿ ಡ್ರೋನ್ ಪ್ರತಾಪ್ ಅವರೊಂದಿಗೆ ಮಾತನಾಡುವಾಗ, 'ವಡ್ಡನಾ ನೀನು? ವಡ್ಡನ ತರ ಆ್ಯಕ್ಟ್ ಮಾಡ್ತಿಯಾ?' ಎಂದಿದ್ದಾರೆ. ಆ ಮೂಲಕ, ಬೋವಿ ಸಮುದಾಯ ಕುರಿತು ಅವಹೇಳನಕಾರಿಯಾಗಿ ಮಾತನಾಡಿದ್ದಾರೆ ಎಂದು ಪದ್ಮಾ ಅವರು ದೂರಿನಲ್ಲಿ ಆರೋಪಿಸಿದ್ದಾರೆ.

ಸಮುದಾಯಕ್ಕೆ ಅವಮಾನವಾಗುವಂತೆ ಮಾತನಾಡಿರುವ ಅವರ ವಿರುದ್ಧ ಪ್ರಕರಣ ದಾಖಲಿಸಿ ತಕ್ಷಣ ಬಂಧಿಸಬೇಕು. ಸ್ಪರ್ಧೆಯಿಂದ ಹೊರ ಹಾಕಬೇಕು ಎಂದು ಒತ್ತಾಯಿಸಿದ್ದಾರೆ.

ಆಮ್ಲಜನಕ ಪೂರೈಸಿ ನಾಗರಹಾವು ರಕ್ಷಣೆ

ಹಟ್ಟಿಚಿನ್ನದಗಣಿ: ಮೂರ್ಛೆ ಹೋದ ನಾಗರಹಾವಿಗೆ ಕೃತಕ ಆಮ್ಲಜನಕ ಪೂರೈಸಿ ರಕ್ಷಣೆ ಮಾಡಿ ಕಾಡಿಗೆ ಬಿಡಲಾಗಿದೆ.



ನಾಗರಹಾವಿಗೆ ಆಮ್ಲಜನಕ ನೀಡಲಾಯಿತು

ಪಟ್ಟಣದ ಹೊರವಲಯದ ಪಾಮನಕಲ್ಲೂರು ಕ್ರಾಸ್ ಬಳಿ ಇನೋವಾ ವಾಹನದಲ್ಲಿ ನಾಗರಹಾವು ಪತ್ತೆಯಾಗಿತ್ತು. ಅದನ್ನು ಹೊರತೆಗೆಯಲು ಸಾಕಷ್ಟು ಪ್ರಯತ್ನ ಮಾಡಿದರೂ ಆಗಲಿಲ್ಲ. ನಂತರ ಹಟ್ಟಿಚಿನ್ನದಗಣಿ ಕಂಪನಿ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ, ಅರವಳಿಕೆ ತಜ್ಞ ಡಾ.ರವೀಂದ್ರನಾಥ ಅವರು ಹಾವು ಹಿಡಿಯಲು ಯತ್ನಿಸಿದರೂ ಸಾಧ್ಯವಾಗಿರಲಿಲ್ಲ. ಬಳಿಕ ಹಾವನ್ನು ಹೊರಬರುವಂತೆ ಮಾಡಲು ಫಿನಾಯಿಲ್ ಸಿಂಪಡಣೆ ಮಾಡಲಾಯಿತು. ಇದರ ವಾಸನೆಗೆ ನಾಗರಹಾವು ಮೂರ್ಛೆ ಹೋಗಿತ್ತು. ಕೂಡಲೇ ವೈದ್ಯಾಧಿಕಾರಿ ಹಾಗೂ ಲಿಂಗಸುಗೂರು ಉರಗತಜ್ಞ ಖಾಲಿದ್ ಚಾವೂಸ್ ಅವರು ಆಸ್ಪತ್ರೆಗೆ ತಂದು ಕೃತಕ ಆಮ್ಲಜನಕ ಪೂರೈಸಿದ್ದಾರೆ. ಬಳಿಕ ಹಾವನ್ನು ಅರಣ್ಯ ಪ್ರದೇಶಕ್ಕೆ ಬಿಟ್ಟು ಬರಲಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ.

ಹಲ್ಲೆ: ಪರಿಶಿಷ್ಟ ಜಾತಿ ವ್ಯಕ್ತಿ ಸಾವು



ಜಗದೇವಪ್ಪ

ಕಮಲಾಪುರ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಹರಕಂಚಿ ಗ್ರಾಮದಲ್ಲಿ 20 ದಿನದ ಹಿಂದೆ ಹಲ್ಲೆಗೆ ಒಳಗಾಗಿ ಆಸ್ಪತ್ರೆಗೆ ದಾಖಲಾಗಿದ್ದ ಪರಿಶಿಷ್ಟ ಜಾತಿಯ ಜಗದೇವಪ್ಪ ಶಂಕರ ಕ್ವಾಟನೂರ (52) ಚಿಕಿತ್ಸೆಗೆ ಸ್ಪಂದಿಸದೆ ಮಂಗಳವಾರ ಮೃತಪಟ್ಟರು.

ಸಂತ್ರಸ್ತನ ಕುಟುಂಬಕ್ಕೆ ಪರಿಹಾರ ಮತ್ತು ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸುವಂತೆ ಆಗ್ರಹಿಸಿ ದಲಿತ ಸೇನೆ ಮುಖಂಡರು ಜಗದೇವಪ್ಪ ಅವರ ಶವವನ್ನು ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಇರಿಸಿ ಬುಧವಾರ ಪ್ರತಿಭಟಿಸಿದರು.

ಹಲ್ಲೆ ಮಾಡಿದ ಆರೋಪದಡಿ ಹರಕಂಚಿ ಗ್ರಾಮದ ಏಳು ಮಂದಿ ವಿರುದ್ಧ ಮಹಾಗಾಂವ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ರೌಡಿ ಶೀಟರ್ ಶಂಕರ ಪರಮೇಶ್ವರ ನಾಯಕೋಡಿ, ದೇವರಾಜ ಗುಂಡಪ್ಪ ನಾಯಕೋಡಿ, ಮಾಣಿಕ ಶಾಮರಾವ ನಾಯಕೋಡಿ ಮತ್ತು ಸುನೀಲ್ ಶಿವಶರಣಪ್ಪ ನಾಯಕೋಡಿ ಬಂಧಿತರಾಗಿದ್ದಾರೆ. ಅನಿಲ ಗುಂಡಪ್ಪ ನಾಯಕೋಡಿ, ವಿಶಾಲ ತಿಪ್ಪಣ್ಣ ನಾಯಕೋಡಿ ಹಾಗೂ ಸಿದ್ರಾಮ ಶಾಮರಾವ ನಾಯಕೋಡಿ ಪರಾರಿಯಾಗಿದ್ದಾರೆ.

ಗ್ರಾಮದಲ್ಲಿ ಅಕ್ಟೋಬರ್ 27ರ ರಾತ್ರಿ ಮೆಹಬೂಬ್ ಸುಬಾನಿ ಸಂದಲ್ ನಡೆಯಿತು. ದೇವಸ್ಥಾನದ ಕಟ್ಟೆಯ ಮೇಲೆ ಸ್ನೇಹಿತರ ಜತೆಗೆ ಕುಳಿತ್ತಿದ್ದ ಜಗದೇವಪ್ಪ ಅವರನ್ನು ಶಂಕರ ಮತ್ತು ಆತನ ಸಂಗಡಿಗರು ಅವಾಚ್ಯ ಪದಗಳಿಂದ ಬೈದು, ಜಾತಿ ನಿಂದನೆ ಮಾಡಿದ್ದರು. ಇದನ್ನು ಪ್ರಶ್ನಿಸಿದ್ದ ಜಗದೇವಪ್ಪ ಅವರ ಮೇಲೆ ಪ್ರಜ್ಞೆ ತಪ್ಪುವಂತೆ ತೀವ್ರವಾಗಿ ಹಲ್ಲೆಯನ್ನೂ ಮಾಡಿದ್ದರು. ಗಾಯಾಳುವನ್ನು ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಮಂಗಳವಾರ ಸಂಜೆ ಮೃತಪಟ್ಟರು.

ಬಳವಂತರಾವ ವರಾಳೆ ಶಿಕ್ಷಣ ಸಂಸ್ಥೆ

BALWANTRAO VARALE EDUCATION SOCIETY

ESTD. 13/76-77

Office: Dr.B.R Ambedkar High School Campus - HUMNABAD - 585141. Dist. Bidar.

President : **Harsha B Ratnakar, Ph : 9686077341.**

ಸಂಖ್ಯೆ :ಬವಶಿಸಹು/ನೇಮಕಾತಿ/2023–24/ ದಿನಾಂಕ : 16–11–2023

–: ಸಹಾಯಕ ಪ್ರಾಧ್ಯಪಕ ಹುದ್ದೆಗೆ ಅರ್ಜಿ ಆಹ್ವಾನ :–

ಬಳವಂತರಾಯ ವರಾಳೆ ಶಿಕ್ಷಣ ಸಂಸ್ಥೆ, ಹುಮನಾಬಾದ ಅಡಿಯಲ್ಲಿ ಬರುವ ಡಾ.ಬಿ.ಆರ್ ಅಂಬೇಡ್ಕರ್ ಪ್ರಥಮ ದರ್ಜೆ ಕಾಲೇಜು ಹಳ್ಳಿಖೇಡ (ಬಿ), ತಾ॥ ಹುಮನಾಬಾದ" ನಲ್ಲಿ ಖಾಲಿ ಇರುವ ಬೋಧಕ ಹುದ್ದೆ ಭರ್ತಿಮಾಡಿಕೊಳ್ಳಲು, ಕಾಲೇಜು ಶಿಕ್ಷಣ ಆಯುಕ್ತರು, ಬೆಂಗಳೂರು ಹಾಗೂ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಕಲಬುರಗಿ ಇವರ ಪತ್ರಗಳ ವಿವರ.

1] ಕಾಲೇಜು ಶಿಕ್ಷಣ ಆಯುಕ್ತರು, ಬೆಂಗಳೂರು ಇವರ ಪತ್ರ ಸಂಖ್ಯೆ: ಕಾಶಿಇ/113/ಹೈಕ/ರಾವೃಂ/ಖಾಹುಭ/ಗುವಿ/2023–24/ನೇವಿ–2 ದಿನಾಂಕ: 08–11–2023.

2] ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಕಲಬುರಗಿ ಇವರ ಪತ್ರ ಸಂಖ್ಯೆ: ಕಾಶಿಇ/ಪ್ರಾಕಕ/1402/ಖಾಹುಭ/ಓಎಸ್–1/2022–23/2177 ದಿನಾಂಕ: 10–11–2023 ರ ಪ್ರಕಾರ ಅನುಮತಿ ನೀಡಿರುವ ಪ್ರಯುಕ್ತ, ಈ ಕೆಳಕಂಡ ವಿಷಯಗಳ ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತಿದೆ.

ಕ್ರ ಸಂ	ವಿಷಯ	ಹುದ್ದೆಗಳ ಸಂಖ್ಯೆ	ವೃಂದ	ಮೀಸಲಾತಿ
01	ರಾಜ್ಯಶಾಸ್ತ್ರ	01	**ರಾಜ್ಯ ವೃಂದ (ಮಿಕ್ಕುಳಿದ ವೃಂದ)**	ಪರಿಶಿಷ್ಟ ಜಾತಿ

ವಿದ್ಯಾರ್ಹತೆ:–

1. ಅಭ್ಯರ್ಥಿಗಳು ಸಂಬಂಧಪಟ್ಟ ವಿಷಯದಲ್ಲಿ ಸೂಕ್ತ ವಿಶ್ವವಿದ್ಯಾಲಯದಿಂದ ಪಡೆದ ಸ್ನಾತಕೋತ್ತರ ಪದವಿಯಲ್ಲಿ ಪರಿಶಿಷ್ಟ ಜಾತಿ ಅಭ್ಯರ್ಥಿಗಳು ಕನಿಷ್ಠ 50% ಅಂಕಗಳನ್ನು ಪಡೆದಿರಬೇಕು.
2. ಎನ್.ಇ.ಟಿ./ ಎಸ್.ಎಲ್.ಇ.ಟಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
3. ಪಿ.ಹೆಚ್.ಡಿ ಪದವಿಯನ್ನು ಪಡೆದಿರುವ ಅಭ್ಯರ್ಥಿಗಳಿಗೆ ಎನ್.ಇ.ಟಿ./ಎಸ್.ಎಲ್.ಇ.ಟಿ. ಪರೀಕ್ಷೆಯಿಂದ ವಿನಾಯಿತಿ ಇರುತ್ತದೆ.
4. ಪಿ.ಹೆಚ್.ಡಿ. ಪದವಿಯನ್ನು ಕೋರ್ಸ್‌ವರ್ಕ್‌ನೊಂದಿಗೆ ಪಡೆದಿರಬೇಕು. ಒಂದು ವೇಳೆ ದಿನಾಂಕ:11–07–2009ರ ಪೂರ್ವದಲ್ಲಿ ಪಿ. ಹೆಚ್.ಡಿ ಪದವಿ ಪಡೆದಿದ್ದಲ್ಲಿ ಅಥವಾ ನೋಂದಣಿ ಮಾಡಿಸಿದ್ದಲ್ಲಿ, ಅಂತಹ ಅಭ್ಯರ್ಥಿಗಳು ದಿನಾಂಕ: 04–05–2016ರ ಯು.ಜಿ.ಸಿ. ಅಧಿಸೂಚನೆಯಲ್ಲಿ ಹೊರಡಿಸಿರುವ ನಿಯಮಗಳನ್ನು ಪೂರೈಸುವ ಷರತ್ತುಗಳಿಗೊಳಪಟ್ಟಿರುತ್ತದೆ.
5. ಎಂ.ಫಿಲ್. ಪದವಿಯನ್ನು ಪರಿಗಣಿಸಲಾಗುವುದಿಲ್ಲ.

ವಯೋಮಿತಿ:

ನೇಮಕಾತಿ ನಿಯಮದಂತೆ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಲು ನಿಗದಿಪಡಿಸಿರುವ ಕೊನೆ ದಿನಾಂಕದಂದು ಗರಿಷ್ಟ ವಯೋಮಿತಿ ಒಳಗೆ ಇರಬೇಕು (ಪರಿಶಿಷ್ಟ ಜಾತಿ 45 ವರ್ಷಗಳು).

ವೇತನ ಮತ್ತು ಭತ್ಯೆಗಳು : ಯು.ಜಿ.ಸಿ ನಿಯಮಾವಳಿ ಮತ್ತು ಕರ್ನಾಟಕ ರಾಜ್ಯ ಸರ್ಕಾರಿ ನಿಯಮಾವಳಿಗಳನ್ವಯ ಇರುತ್ತದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 06–12–2023 ಸಾಯಂಕಾಲ 4.30 ಗಂಟೆಯೊಳಗಾಗಿ ಅಭ್ಯರ್ಥಿಗಳು ಸ್ವವಿವರ ಹಾಗೂ ಅವಶ್ಯಕ ದೃಢೀಕೃತ ದಾಖಲೆಗಳನ್ನೊಳಗೊಂಡ ಅರ್ಜಿಯನ್ನು (05 ಸೆಟ್ಟ ಪ್ರತಿಗಳಲ್ಲಿ) ಪರಿಶಿಷ್ಟ ಜಾತಿ ಅಭ್ಯರ್ಥಿಗಳು ರೂ. 1000/– (ಒಂದು ಸಾವಿರ ರೂಪಾಯಿ)ಗಳನ್ನು ಡಿಮ್ಯಾಂಡ್ ಡ್ರ್ಯಾಫ್ಟ್ ಮೂಲಕ **"ಅಧ್ಯಕ್ಷರು" ಬಳವಂತರಾಯ ವರಾಳೆ ಶಿಕ್ಷಣ ಸಂಸ್ಥೆ, ಹುಮನಾಬಾದ** ಇವರ ಹೆಸರಿನಲ್ಲಿ ಪಡೆದು ಅರ್ಜಿಯೊಂದಿಗೆ ಲಗತ್ತಿಸಿ ನೋಂದಾಯಿತ ಅಂಚೆ ಮೂಲಕ President Office: Dr.B.R Ambedkar High School Campus - HUMNABAD - 585330 (Dist. Bidar) ವಿಳಾಸಕ್ಕೆ ಸಲ್ಲಿಸಬೇಕು. ಲಕೋಟೆಯ ಮೇಲೆ ಹುದ್ದೆಯ ಹೆಸರು ಬರೆಯಲು ಸೂಚಿಸಲಾಗಿದೆ.

ವಿಶೇಶ ಸೂಚನೆ: ಅರ್ಜಿಯ ಇನ್ನೊಂದು ಪ್ರತ್ಯೇಕ ಸೆಟ್‌ನ್ನು (ಡಿಡಿ ಇಲ್ಲದೆ) ಅಗತ್ಯ ದಾಖಲೆಗಳೊಂದಿಗೆ ಕಡ್ಡಾಯವಾಗಿ ಮೇಲೆ ಹೇಳಿದ ಕಡೆಯ ದಿನಾಂಕದೊಳಗಾಗಿ ಜಂಟಿ ನಿರ್ದೇಶಕರು, ಪ್ರಾದೇಶಿಕ ಕಚೇರಿ, ಕಾಲೇಜು ಶಿಕ್ಷಣ ಇಲಾಖೆ, ಸರಕಾರಿ ಸ್ವಾಯತ್ತ ಪದವಿ ಕಾಲೇಜು, ಹೊಸ ಆರ್.ಟಿ.ಓ. ಕಚೇರಿ ಎದುರುಗಡೆ, ಕಲಬುರ್ಗಿ, ಇವರಿಗೆ ತಪ್ಪದೇ ಸಲ್ಲಿಸತಕ್ಕದ್ದು.

ಇತರೆ ನಿಬಂಧನೆಗಳು:–

1. ಅರ್ಜಿದಾರರು ಅನುದಾನಿತ ಅಥವಾ ಸರಕಾರಿ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿದ್ದಲ್ಲಿ, ಸದರಿ ಕಾಲೇಜಿನ ಪ್ರಾಚಾರ್ಯರ ನಿರಾಪೇಕ್ಷಣೆ ಪತ್ರ [ಎನ್.ಓ.ಸಿ] ವನ್ನು ಸಲ್ಲಿಸತಕ್ಕದ್ದು.
2. ಅಪೂರ್ಣ ಅಥವಾ ನಿಗದಿತ ದಿನಾಂಕ/ಸಮಯದ ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
3. ಕರ್ನಾಟಕ ಸರಕಾರ ಅಥವಾ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರು ಆಯ್ಕೆ ಮತ್ತು ತಿರಸ್ಕಾರದ ಹಕ್ಕನ್ನು ಹೊಂದಿರುತ್ತಾರೆ. ಅರ್ಜಿ ಸಲ್ಲಿಸಿದ ಅಥವಾ ಸಂದರ್ಶನಕ್ಕೆ ಹಾಜರಾದ ಮಾತ್ರಕ್ಕೆ, ಅರ್ಜಿದಾರರು ಯಾವುದೇ ಹಕ್ಕನ್ನು ಚಲಾಯಿಸುವಂತಿಲ್ಲ.
4. ಸಂದರ್ಶನದ ದಿನಾಂಕವನ್ನು ನಂತರ ತಿಳಿಸಲಾಗುವುದು.

ಸಹಿ/– **"ಅಧ್ಯಕ್ಷರು"**
ಬಳವಂತರಾಯ ವರಾಳೆ ಶಿಕ್ಷಣ ಸಂಸ್ಥೆ, ಹುಮನಾಬಾದ

ಮೂರನೇ ವರ್ಷದ ಪುಣ್ಯ ಸ್ಮರಣೆ

16-11-2023



ದಿ॥ ಬಿ.ವಿ. ಸಂಪತ್‌ರವರು

ಮಾಜಿ ಅಧ್ಯಕ್ಷರು, ಬಿಳೇಕಹಳ್ಳಿ – ಕಾಂಗ್ರೆಸ್ ಮುಖಂಡರು

ದಿನಾಂಕ: 16–11–2023 ಗುರುವಾರ ಮಧ್ಯಾಹ್ನ: 12.30 ಕ್ಕೆ ಊಟ ಏರ್ಪಡಿಸಲಾಗಿದೆ

ಸ್ಥಳ: ನಂ. 1 & 2 ಬಿಳೇಕಹಳ್ಳಿ ಲೇಔಟ್, 2ನೇ ಕ್ರಾಸ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು– 560076

"ನಿಮ್ಮ ಜೀವನದ ಸರಳತೆ, ಪ್ರೀತಿ, ಔದಾರ್ಯ ಹಾಗೂ ಮೌಲ್ಯಗಳನ್ನು ಸದಾ ಸ್ಮರಿಸುತ್ತಾ ಮುನ್ನಡೆಯುತ್ತಿರುವ"

ಇಂತಿ : ಧರ್ಮಪತ್ನಿ, ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, BVS ಸಹೋದರರು, BVS ಕುಟುಂಬದವರು ಹಾಗೂ ಬಂಧು ಮಿತ್ರರು

ಪ್ರಜಾವಾಣಿ

ಅಭಿನಂದನೆಗಳು

#festiveflash ಸ್ಪರ್ಧೆಯ ವಿಜೇತರು

ನಿಮ್ಮ ಪ್ರಯತ್ನ ಮತ್ತು ಅಂದ ನಮ್ಮ ಪತ್ರಿಕೆಯಲ್ಲಿ ಹಾಗೂ ನಮ್ಮ ಹೃದಯದಲ್ಲಿ ನಿಮಗೆ ವಿಶೇಷ ಸ್ಥಾನವನ್ನು ದಕ್ಕಿಸಿಕೊಟ್ಟಿದೆ. ಕರ್ನಾಟಕದಾದ್ಯಂತ ದೀಪಾವಳಿ ಆಚರಣೆಯಲ್ಲಿ ಭಾಗವಹಿಸಿದ ಎಲ್ಲರಿಗೂ ಧನ್ಯವಾದಗಳು.





Freedom Healthy Cooking Oils

ಪ್ರಸ್ತುತಪಡಿಸುತ್ತಿದೆ

ದೀಪಾವಳಿಯ ಸಿಂಗಾರ ಸ್ಪರ್ಧೆ



ಹೊಸ ನಂಬರ್ ಪ್ಲೇಟ್ ಅಳವಡಿಸಲು ಉತ್ಸಾಹ ತೋರದ ವಾಹನ ಮಾಲೀಕರು

ಎಚ್‌ಎಸ್‌ಆರ್‌ಪಿ ಅಳವಡಿಕೆ: ಅವಧಿ ವಿಸ್ತರಣೆ

• ಬಾಲಕೃಷ್ಣ ಪಿ.ಎಚ್.

ಹಳೇ ನಂಬರ್ ಪ್ಲೇಟ್ ಹೊಂದಿರುವ ವಾಹನಗಳು (ರಾಜ್ಯದ ಅಂಕಿ ಅಂಶ)

1.40 ಕೋಟಿ	40 ಲಕ್ಷ	20 ಲಕ್ಷ
ದ್ವಿಚಕ್ರ ವಾಹನ	ಲಘು ವಾಹನ	ಸಾರಿಗೆ ವಾಹನ

ಪ್ರಜಾವಾಣಿ ವಿಶೇಷ

ಬೆಂಗಳೂರು: ಹಳೆಯ ವಾಹನಗಳಿಗೆ ಅತಿ ಸುರಕ್ಷಿತ ನೋಂದಣಿ ಫಲಕಗಳನ್ನು (ಎಚ್‌ಎಸ್‌ಆರ್‌ಪಿ) ಅಳವಡಿಸಿಕೊಳ್ಳಲು ಇದ್ದ ಅವಧಿಯನ್ನು ಮೂರು ತಿಂಗಳ ಕಾಲ ವಿಸ್ತರಿಸಲು ಸಾರಿಗೆ ಇಲಾಖೆ ನಿರ್ಧರಿಸಿದೆ.

2019ರ ಏ.1ರ ನಂತರ ನೋಂದಣಿಯಾಗಿರುವ ವಾಹನಗಳಲ್ಲಿ ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಇವೆ. ಅದಕ್ಕಿಂತ ಹಿಂದಿನ ವಾಹನಗಳಿಗೆ ಹೊಸ ನಂಬರ್ ಪ್ಲೇಟ್ ಅಳವಡಿಸಲು ನವೆಂಬರ್ 17ರವರೆಗೆ ಅವಕಾಶ ನೀಡಲಾಗಿತ್ತು. ಆದರೆ, ವಾಹನ ಮಾಲೀಕರು ಹೊಸ ನಂಬರ್ ಪ್ಲೇಟ್ ಅಳವಡಿಸಿಕೊಳ್ಳಲು ಉತ್ಸಾಹ ತೋರಿರಲಿಲ್ಲ. ವಾಹನಗಳ ಮೂಲ ತಯಾರಿಕಾ ಸಂಸ್ಥೆಗಳು ಅನುಮತಿ ನೀಡಿದ ಏಜೆನ್ಸಿಗಳಿಗೆ ಎಚ್‌ಎಸ್‌ಆರ್‌ಪಿ ಅಳವಡಿಸುವ ಅವಕಾಶವನ್ನು ನೀಡಿರುವುದನ್ನು ಪ್ರಶ್ನಿಸಿ ಕೆಲವರು ನ್ಯಾಯಾಲಯದ ಮೆಟ್ಟಿಲೇರಿದ್ದರು. ಹಾಗಾಗಿ ಸಾರಿಗೆ ಇಲಾಖೆಗೆ ಕಟ್ಟುನಿಟ್ಟಾಗಿ ನಿಯಮ ಜಾರಿ ಮಾಡಲು ಆಗಿರಲಿಲ್ಲ.

ಪ್ರಸ್ತಾವ ಸಲ್ಲಿಕೆ: ಅತಿ ಸುರಕ್ಷಿತ ನೋಂದಣಿ ಫಲಕಗಳನ್ನು ಅಳವಡಿಸುವ ಅವಧಿಯನ್ನು ನಾಲ್ಕು ತಿಂಗಳು ವಿಸ್ತರಿಸಬೇಕು ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತರು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದರು. ಸರ್ಕಾರವು ನಾಲ್ಕು ತಿಂಗಳ ಬದಲು ಮೂರು ತಿಂಗಳ ಅವಕಾಶ ನೀಡಲು ನಿರ್ಧರಿಸಿದೆ. ನ.17ರ ಒಳಗೆ ಅಧಿಸೂಚನೆ ಹೊರಡಿಸಲಿದೆ.

ಆನ್‌ಲೈನ್‌ನಲ್ಲಿ ಅವಕಾಶ: http://transport.karnataka.gov.in ಅಥವಾ www.siam.in ಮೂಲಕವೂ ಎಚ್‌ಎಸ್‌ಆರ್‌ಪಿ ಅಳವಡಿಸಲು ನೋಂದಣಿ ಮಾಡಿಕೊಳ್ಳಬಹುದು ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತ ಎ.ಎಂ. ಯೋಗೀಶ್ ತಿಳಿಸಿದ್ದಾರೆ.

ಬುಕ್ ಎಚ್‌ಎಸ್‌ಆರ್‌ಪಿ ಕ್ಲಿಕ್ ಮಾಡಿ ನಿಮ್ಮ ವಾಹನ ತಯಾರಕ ಕಂಪನಿಯನ್ನು ಆಯ್ಕೆ ಮಾಡಬೇಕು. ವಾಹನದ ಮೂಲ ವಿವರಗಳನ್ನು ಭರ್ತಿ ಮಾಡಬೇಕು. ಅನುಕೂಲಕ್ಕೆ ತಕ್ಕಂತೆ ಡೀಲರ್ ಸ್ಥಳವನ್ನು ಆಯ್ಕೆ ಮಾಡಿಕೊಳ್ಳಬೇಕು. ಶುಲ್ಕವನ್ನು ಆನ್‌ಲೈನ್ ಮೂಲಕವೇ ಪಾವತಿಸಬೇಕು. ವಾಹನ ಮಾಲೀಕರ ಮೊಬೈಲ್ ಸಂಖ್ಯೆಗೆ ಒಟಿಪಿ ಬರುತ್ತದೆ. ಎಚ್‌ಎಸ್‌ಆರ್‌ಪಿ ಅಳವಡಿಕೆಯ ದಿನಾಂಕ ಮತ್ತು ಸಮಯವನ್ನು ಆಯ್ಕೆ ಮಾಡಿಕೊಳ್ಳಬಹುದು. ನಿಗದಿ ಪಡಿಸಿದ ಸಮಯಕ್ಕೆ ವಾಹನ ತಯಾರಕರು ಅಥವಾ ಡೀಲರ್ ಸಂಸ್ಥೆಗೆ ಭೇಟಿ ನೀಡಬೇಕು. ವಾಹನ ಮಾಲೀಕರ ಕಚೇರಿ ಆವರಣ ಅಥವಾ ಮನೆಯ ಸ್ಥಳದಲ್ಲಿ ಎಚ್‌ಎಸ್‌ಆರ್‌ಪಿ ಅಳವಡಿಕೆಯ ಆಯ್ಕೆಗೂ ಅವಕಾಶವಿದೆ ಎಂದು ವಿವರಿಸಿದ್ದಾರೆ.



ಎಚ್‌ಎಸ್‌ಆರ್‌ಪಿ ಅಳವಡಿಸಲು ಫೆ.17ರವರೆಗೆ ಅವಕಾಶ ನೀಡಲು ನಿರ್ಧರಿಸಲಾಗಿದೆ. ಒಂದೆರಡು ದಿನಗಳಲ್ಲಿ ಸರ್ಕಾರ ಅಧಿಸೂಚನೆ ಹೊರಡಿಸಲಿದೆ

ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ



ನೋಂದಣಿ ಪ್ರಮಾಣ ಪತ್ರ (ಆರ್‌ಸಿ), ಕಾರ್ಯಕ್ಷಮತೆ ಪ್ರಮಾಣ ಪತ್ರ (ಎಫ್‌ಸಿ) ಪಡೆಯಲು ಈಗಾಗಲೇ ಎಚ್‌ಎಸ್‌ಆರ್‌ಪಿ ಕಡ್ಡಾಯಗೊಳಿಸಲಾಗಿದೆ

ಎ.ಎಂ. ಯೋಗೀಶ್, ಆಯುಕ್ತ, ಸಾರಿಗೆ ಮತ್ತು ರಸ್ತೆ ಸುರಕ್ಷತೆ



ಇಲ್ಲಿವರೆಗೆ ಶೇ 3ರಷ್ಟು ವಾಹನಗಳಿಗೆ ಮಾತ್ರ ಹೊಸ ಫಲಕವನ್ನು ಮಾಲೀಕರು ಅಳವಡಿಸಿಕೊಂಡಿದ್ದಾರೆ. ಶೇ 97ರಷ್ಟು ವಾಹನಗಳಿಗೆ ಹೊಸ ನಂಬರ್ ಪ್ಲೇಟ್ ಅಳವಡಿಸಿಕೊಳ್ಳಬೇಕು

ಸಿ. ಮಲ್ಲಿಕಾರ್ಜುನ, ಹೆಚ್ಚುವರಿ ಆಯುಕ್ತ, ಸಾರಿಗೆ (ಪ್ರವರ್ತನ)

ಸುದ್ದಿ 2 ನಿಮಿಷ

ಪಟಾಕಿ ಸಿಡಿದು ಯುವಕ ಸಾವು

ತರೀಕೆರೆ (ಚಿಕ್ಕಮಗಳೂರು): ತಾಲ್ಲೂಕಿನ ಸುಣ್ಣದಹಳ್ಳಿ ಗ್ರಾಮದಲ್ಲಿ ಮಂಗಳವಾರ ರಾತ್ರಿ ಪಟಾಕಿ ಸಿಡಿದು ಪ್ರದೀಪ್ (38) ಮೃತಪಟ್ಟಿದ್ದಾರೆ.

ದೀಪಾವಳಿ ಅಂಗವಾಗಿ ಅಕ್ಕ-ಪಕ್ಕದವರು ಸೇರಿ ಮನೆಯ ಮುಂದೆ ಪಟಾಕಿ ಬಾಕ್ಸ್ ಇಟ್ಟುಕೊಂಡು ಪಟಾಕಿ ಹಚ್ಚುತ್ತಿದ್ದರು. ಹಚ್ಚಿದ್ದ ಪಟಾಕಿಯಿಂದ ಹಾರಿದ ಕಿಡಿಯೊಂದು ಪಟಾಕಿ ಬಾಕ್ಸ್‌ನತ್ತ ಹಾರಿದೆ. ಬಾಕ್ಸ್‌ನಲ್ಲಿದ್ದ ಪಟಾಕಿ ಎಲ್ಲವೂ ಹೊತ್ತಿಕೊಂಡಿವೆ.

ಆ ಸಂದರ್ಭದಲ್ಲಿ ಬಾಕ್ಸ್ ಮೇಲೆ ಕುಳಿತಿದ್ದ ಪ್ರದೀಪ್ ಅವರು ಮೇಲೆದ್ದು ಓಡುವಷ್ಟರಲ್ಲಿ ಪಟಾಕಿಗಳು ಸಿಡಿದಿವೆ. ಮರ್ಮಾಂಗಕ್ಕೆ ಬಲದವಾದ ಪೆಟ್ಟು ಬಿದ್ದಿದ್ದು, ಕೂಡಲೇ ಅವರನ್ನು ಶಿವಮೊಗ್ಗದ ಆಸ್ಪತ್ರೆಗೆ ಸಾಗಿಸಲು ಪ್ರಯತ್ನಿಸಲಾಯಿತು. ಅಷ್ಟರಲ್ಲಿ ಅವರು ಮೃತಪಟ್ಟರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪ್ರದೀಪ್ ಅವರ ಅಣ್ಣನ ಮಗ ಕುಶಲ್ (12) ಕಾಲಿನ ಪಾದದ ಭಾಗಕ್ಕೆ ಗಂಭೀರ ಗಾಯವಾಗಿದ್ದು, ಶಿವಮೊಗ್ಗದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಪಕ್ಕದ ಮನೆಯ ದರ್ಶನ್ (19), ಷಣ್ಮುಖ (12) ಅವರಿಗೆ ಗಾಯಗಳಾಗಿವೆ. ಮನೆಯ ಆವರಣದಲ್ಲಿದ್ದ ಮೆಸ್ಕಾಂ ಎಂಜಿನಿಯರ್ ರಘು (39) ಅವರಿಗೂ ಗಾಯಗಳಾಗಿದ್ದು, ತರೀಕೆರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಪಟಾಕಿ ಸಿಡಿದ ರಭಸಕ್ಕೆ ಸಮೀಪದ ಮನೆಯ ಮೇಲಿನ ಶೀಟ್ ಹಾಗೂ ಗೋಡೆಗೂ ಹಾನಿಯಾಗಿದೆ. ಮೃತ ಪ್ರದೀಪ್‌ಗೆ ಪತ್ನಿ ಮತ್ತು ಮಗ ಇದ್ದಾರೆ. ಲಿಂಗದಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮುಂದಿನ ವರ್ಷ ಅ.24 ಕ್ಕೆ ತೆರೆಯಲಿದೆ ಹಾಸನಾಂಬೆ ಬಾಗಿಲು



ಹಾಸನ: ಹಾಸನಾಂಬೆಯ ಹದಿನೈದು ದಿನಗಳ ದರ್ಶನೋತ್ಸವಕ್ಕೆ ಬುಧವಾರ ತೆರೆ ಬಿದ್ದಿದ್ದು, ಗರ್ಭಗುಡಿಯ ಬಾಗಿಲನ್ನು ಸಕಲ ಧಾರ್ಮಿಕ ವಿಧಿ, ವಿಧಾನಗಳೊಂದಿಗೆ ಮುಚ್ಚಲಾಯಿತು. ಮತ್ತೆ, 2024ರ ಅಕ್ಟೋಬರ್ 24 ರಿಂದ ನವೆಂಬರ್ 3 ರವರೆಗೆ ದರ್ಶನೋತ್ಸವ ನಡೆಯಲಿದೆ.

ಮಧ್ಯಾಹ್ನ 12.25ಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ, ಶಾಸಕ ಸ್ವರೂಪ್ ಪ್ರಕಾಶ್, ದಕ್ಷಿಣ ವಲಯ ಐಜಿಪಿ ಡಾ.ಬೋರಲಿಂಗಯ್ಯ, ಜಿಲ್ಲಾಧಿಕಾರಿ ಸಿ.ಸತ್ಯಭಾಮಾ ಸಮ್ಮುಖದಲ್ಲಿ ಬಾಗಿಲನ್ನು ಮುಚ್ಚಲಾಯಿತು.

ನವೆಂಬರ್ 2 ರಂದು ಬಾಗಿಲನ್ನು ತೆರೆಯಲಾಗಿತ್ತು. ಭಕ್ತರಿಗೆ 13 ದಿನಗಳ ದರ್ಶನಕ್ಕೆ ಅವಕಾಶ ಕಲ್ಪಿಸಿದ್ದು, ಈ ಬಾರಿ ದಾಖಲೆಯ 14.20 ಲಕ್ಷ ಮಂದಿ ದರ್ಶನ ಪಡೆದಿದ್ದಾರೆ. ವಿಶೇಷ ದರ್ಶನದ ಟಿಕೆಟ್ ಹಾಗೂ ಲಾಡು ಮಾರಾಟದಿಂದ ₹ 6.15 ಕೋಟಿ ಆದಾಯ ಸಂಗ್ರಹವಾಗಿದೆ. ಕಾಣಿಕೆ ಹುಂಡಿ ಎಣಿಕೆ ಗುರುವಾರ ನಡೆಯಲಿದೆ.

‘ಸಣ್ಣಪುಟ್ಟ ಘಟನೆಗಳನ್ನು ಹೊರತುಪಡಿಸಿ, ಸುಸೂತ್ರವಾಗಿ ಜಾತ್ರಾ ಮಹೋತ್ಸವ ಜರುಗಿದೆ. ಕೊನೆಯ ದಿನವಾದ ಬುಧವಾರ ದೇವಾಲಯದ ಸುತ್ತಲಿನ ನಿವಾಸಿಗಳು, ಸಿಬ್ಬಂದಿಗೆ ದರ್ಶನದ ಅವಕಾಶ ನೀಡಬೇಕಾಗಿತ್ತು. ಆದರೆ ಮಾಹಿತಿ ಕೊರತೆಯಿಂದ ಆಚಾತುರ್ಯವಾಗಿದ್ದು, ಮುಂದೆ ಈ ರೀತಿ ಆಗದಂತೆ ಎಚ್ಚರ ವಹಿಸಲಾಗುವುದು’ ಎಂದು ಸಚಿವ ಕೆ.ಎನ್. ರಾಜಣ್ಣ ತಿಳಿಸಿದರು.

ನಿಧನ ವಾರ್ತೆ

ಟಿ.ಆರ್.ಗೋಪಾಲಕೃಷ್ಣನ್



ಬೆಂಗಳೂರು: ‘ದಿ ವೀಕ್’ ಪತ್ರಿಕೆಯ ನಿವೃತ್ತ ಸಂಪಾದಕ ಟಿ.ಆರ್. ಗೋಪಾಲಕೃಷ್ಣನ್ (74) ಅವರು ಬುಧವಾರ ನಿಧನರಾದರು. ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದ ಅವರು ಕಳೆದ ಒಂದು ವಾರದಿಂದ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.

ಮೃತರ ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ 12ಕ್ಕೆ ನಗರದ ಎಲೆಕ್ಟ್ರಾನಿಕ್ ಸಿಟಿಯ ವಿದ್ಯುತ್ ಚಿತಾಗಾರದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದೆಹಲಿ ಸೇರಿದಂತೆ ಬೇರೆ ಬೇರೆ ನಗರಗಳಲ್ಲಿ ಕೆಲಸ ಮಾಡಿದ್ದ ಅವರು, ‘ದಿ ವೀಕ್’ ಪತ್ರಿಕೆಯಿಂದ ನಿವೃತ್ತರಾದ ಮೇಲೆ ಕುಟುಂಬದ ಸದಸ್ಯರ ಜತೆಗೆ ಬೆಂಗಳೂರಿನಲ್ಲಿ ನೆಲೆಸಿದ್ದರು. ಎರಡು ತಿಂಗಳ ಹಿಂದೆ ಗೋಪಾಲಕೃಷ್ಣನ್ ಅವರ ಪತ್ನಿ ನಿಧನರಾಗಿದ್ದರು.

‘ಟಿಆರ್‌ಜಿ’ ಎಂದೇ ಪ್ರಸಿದ್ಧರಾಗಿದ್ದ ಗೋಪಾಲಕೃಷ್ಣನ್ ಅವರು, ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಪತ್ರಕರ್ತರಾಗಿ ಕೆಲಸ ಮಾಡಿದ್ದರು. ಮದರ್ ಲ್ಯಾಂಡ್ ಪತ್ರಿಕೆ ಮೂಲಕ ವೃತ್ತಿ ಜೀವನ ಆರಂಭಿಸಿ, ಇಂಡಿಯಾ ಟುಡೇ, ಹಿಂದೂಸ್ತಾನ್ ಟೈಮ್ಸ್, ಮುಂಬೈನ ‘ಸೂಪರ್’ ಸಿನಿಮಾ ಪತ್ರಿಕೆ ಸಹಾಯಕ ಸಂಪಾದಕರಾಗಿ ಕೆಲಸ ಮಾಡಿದ್ದರು.

1983ರಲ್ಲಿ ‘ದಿ ವೀಕ್’ ಪತ್ರಿಕೆ ಸೇರಿ ವಿವಿಧ ಹುದ್ದೆಗಳನ್ನು ನಿಭಾಯಿಸಿ ಸಂಪಾದಕರಾಗಿ ನಿವೃತ್ತರಾಗಿದ್ದರು. ನಿವೃತ್ತಿ ನಂತರ ‘ಸಿಟಿಜನ್ ಮ್ಯಾಟರ್ಸ್’ ಪತ್ರಿಕೆಯ ಸಲಹಾ ಸಂಪಾದಕರಾಗಿದ್ದರು ಎಂದು ಅವರ ಆಪ್ತರು ತಿಳಿಸಿದ್ದಾರೆ.

ಸ್ಪರ್ಧಾ ಪುರವಣಿ ಓದಿರಿ

ಆರ್.ಡಿ.ಪಾಟೀಲ 9 ದಿನ ಸಿಐಡಿ ಕಸ್ಟಡಿಗೆ

ಕೆಇಎ ನೇಮಕಾತಿ ಪರೀಕ್ಷಾ ಅಕ್ರಮ: ಎಇ ಸೇರಿ ಐವರು ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಕಲಬುರಗಿ: ಬ್ಲೂಟೂತ್ ಸಾಧನ ಬಳಸಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ನೇಮಕಾತಿ ಪರೀಕ್ಷೆ ಬರೆದ ಅಕ್ರಮ ಪ್ರಕರಣದ ಬಂಧಿತ ಪ್ರಮುಖ ಆರೋಪಿ ಆರ್.ಡಿ. ಪಾಟೀಲನನ್ನು ಸಿಐಡಿ ಪೊಲೀಸರು ಬುಧವಾರ ವಶಕ್ಕೆ ಪಡೆದರು.

ನ್ಯಾಯಾಂಗ ಬಂಧನದಲ್ಲಿ ಇದ್ದ ಆರೋಪಿಯನ್ನು ಪೊಲೀಸ್ ಬಿಗಿ-ಭದ್ರತೆಯೊಂದಿಗೆ ಮಧ್ಯಾಹ್ನ ಇಲ್ಲಿನ ಜೆಎಂಎಫ್‌ಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ಹೆಚ್ಚಿನ ವಿಚಾರಣೆಗಾಗಿ 10 ದಿನಗಳ ಮಟ್ಟಿಗೆ ತಮ್ಮ ವಶಕ್ಕೆ ನೀಡುವಂತೆ ಸಿಐಡಿ ಅಧಿಕಾರಿಗಳು ಮನವಿ ಮಾಡಿದ್ದರು. ನ್ಯಾಯಾಲಯವು 9 ದಿನಗಳ ಮಟ್ಟಿಗೆ ಸಿಐಡಿ ಕಸ್ಟಡಿಗೆ ನೀಡಿದೆ.

ಸಿಐಡಿ ಪೊಲೀಸರು ಇಲ್ಲಿನ ಐವಾನ್-ಇ ಶಾಹಿ ಪ್ರದೇಶದ ಗೆಸ್ಟ್ ಹೌಸಿಗೆ ಪಾಟೀಲನನ್ನು ಕರೆತಂದು ವಿಚಾರಣೆ ನಡೆಸುತ್ತಿದ್ದಾರೆ. ಈ ಹಿಂದೆ ಪಿಎಸ್‌ಐ ಅಕ್ರಮ ಸಂಬಂಧ ಇದೇ ಗೆಸ್ಟ್ ಹೌಸ್‌ನಲ್ಲಿ ಆತನ ವಿಚಾರಣೆ ನಡೆಸಿದ್ದರು.

ದೂರು ರದ್ದತಿಗೆ ಮನವಿ: ಪ್ರಕರಣ ಸಂಬಂಧ ದಾಖಲಾದ ದೂರುಗಳನ್ನು ರದ್ದು ಮಾಡುವಂತೆ ಕೋರಿ ಹೈಕೋರ್ಟ್‌ನ ಕಲಬುರಗಿ ಪೀಠಕ್ಕೆ ಪಾಟೀಲ ಅರ್ಜಿ ಸಲ್ಲಿಸಿದ್ದ. ‘ದೂರುಗಳ ರದ್ದತಿಗೆ ಅಷ್ಟೊಂದು ಆತುರ ಏನಿದೆ’ ಎಂದು ಪ್ರಶ್ನಿಸಿದ ಹೈಕೋರ್ಟ್ ನ್ಯಾಯಮೂರ್ತಿಗಳು, ಅರ್ಜಿಯ ವಿಚಾರಣೆಯನ್ನು ನ.17ಕ್ಕೆ ಮುಂದೂಡಿದರು.

ಐವರ ಬಂಧನ: ಆರ್.ಡಿ. ಪಾಟೀಲ ಆಪ್ತ, ನೆಲೋಗಿ ಮೂಲದ ಬೆಳಗಾವಿ ಜಿಲ್ಲೆಯ ಅಥಣಿಯ ಸಣ್ಣ ನೀರಾವರಿ ಇಲಾಖೆ ಸಹಾಯಕ ಎಂಜಿನಿಯರ್ (ಎಇ) ರುದ್ರಗೌಡ, ಶಿವಕುಮಾರ್, ಸಿದ್ದರಾಮ, ರವಿಕುಮಾರ್ ಹಾಗೂ ರಹೀಮ್ ಚೌಧರಿ ಅವರನ್ನು ಸಿಐಡಿ ಅಧಿಕಾರಿಗಳು ಬಂಧಿಸಿ, ನ್ಯಾಯಾಲಯದ ಮುಂದೆ ಹಾಜರುಪಡಿಸಿದರು.

ರುದ್ರಗೌಡನ ಬಳಿ 17 ಹಾಲ್ ಟಿಕೆಟ್ ಪತ್ತೆಯಾದ ಹಿನ್ನೆಲೆಯಲ್ಲಿ ಬಂಧಿಸಲಾಗಿದೆ. ಪ್ರಕರಣದಲ್ಲಿ ಕೆಲವು ಸರ್ಕಾರಿ ನೌಕರರು ಬಂಧನವಾಗುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ. ಸಿಐಡಿ ಕಚೇರಿಯಲ್ಲಿ ರುದ್ರಗೌಡನ ಪರಿಸ್ಥಿತಿ ಕಂಡು ಆತನ ತಾಯಿ ಕಣ್ಣೀರು ಹಾಕಿದ್ದು ಕಂಡುಬಂತು.

ಇಬ್ಬರು ಉಪನ್ಯಾಸಕರ ವಿಚಾರಣೆ: ಕೆಇಎ ನೇಮಕಾತಿ ಪರೀಕ್ಷೆಯ ರಾಯಲ್ ಪಬ್ಲಿಕ್ ಶಾಲಾ ಕೇಂದ್ರದ ಮುಖ್ಯಸ್ಥನಾಗಿದ್ದ ಚಂದ್ರಕಾಂತ ಹಾಗೂ ಕಸ್ಟೋಡಿಯನ್ ಆಗಿದ್ದ ಬಸಣ್ಣ ಪೂಜಾರಿಯನ್ನು ಸಿಐಡಿ ಪೊಲೀಸರು ಬುಧವಾರ ವಿಚಾರಣೆ ನಡೆಸಿ ಅವರಿಂದ ಮಾಹಿತಿ ಕಲೆಹಾಕಿದರು.

ಚಂದ್ರಕಾಂತ ಅವರು ಅಫಜಲಪುರ ತಾಲ್ಲೂಕಿನ ಕರಜಗಿ ಗ್ರಾಮದ ಪಿಯು ಕಾಲೇಜು ಪ್ರಾಂಶುಪಾಲ ಮತ್ತು ಬಸಣ್ಣ ಪೂಜಾರಿ ಅವರು ಅಫಜಲಪುರದ ಸರ್ಕಾರಿ ಪಿಯು ಕಾಲೇಜಿನ ಪ್ರಭಾರ ಪ್ರಾಂಶುಪಾಲ ಆಗಿದ್ದಾರೆ. ಇಬ್ಬರನ್ನು ಸಿಐಡಿ ಕಚೇರಿಗೆ ಕರೆಯಿಸಿ ಕೆಲವು ಮಾಹಿತಿ ಪಡೆಯಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮರು ಪರೀಕ್ಷೆ: ಕೆಇಎಗೆ ಹೊಣೆ

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) 545 ಖಾಲಿ ಹುದ್ದೆಗಳಿಗೆ ನೇರ ನೇಮಕಾತಿಗೆ ಮರು ಲಿಖಿತ ಪರೀಕ್ಷೆ ನಡೆಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ವಹಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಪಿಎಸ್‌ಐ ಹುದ್ದೆಗಳ ನೇಮಕಾತಿಗೆ ರಾಜ್ಯ ಸರ್ಕಾರ ಸ್ವತಂತ್ರ ಸಂಸ್ಥೆಯಿಂದ ಹೊಸದಾಗಿ ಪರೀಕ್ಷೆ ನಡೆಸಬಹುದು ಎಂದು ಹೈಕೋರ್ಟ್ ನ. 10ರಂದು ನೀಡಿದ್ದ ತೀರ್ಪಿನ ಅನ್ವಯ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ.

ಹೈಕೋರ್ಟ್ ನೀಡಿದ ತೀರ್ಪು ಉಲ್ಲೇಖಿಸಿ, ಸೂಕ್ತ ತೀರ್ಮಾನ ತೆಗೆದುಕೊಳ್ಳುವಂತೆ ಕೋರಿ ಪೊಲೀಸ್ ನೇಮಕಾತಿ ವಿಭಾಗದ ಮಹಾ ನಿರ್ದೇಶಕರು ಸಲ್ಲಿಸಿದ್ದ ಪ್ರಸ್ತಾವನೆಯನ್ನು ಪೊಲೀಸ್ ಮಹಾನಿರ್ದೇಶಕರು ಅನುಮೋದಿಸಿದ್ದರು. ಅದರ ಬೆನ್ನಲ್ಲೆ, ಮರು ಪರೀಕ್ಷೆಯ ಹೊಣೆಯನ್ನು ಸರ್ಕಾರ ಕೆಇಎಗೆ ವಹಿಸಿದೆ.

ಆರು ವಿಜ್ಞಾನಿಗಳಿಗೆ ‘ಇನ್ಫೊಸಿಸ್ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನ ಇಬ್ಬರು ವಿಜ್ಞಾನಿಗಳು ಸೇರಿ ವಿಜ್ಞಾನ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆ ಮಾಡಿದ ವಿವಿಧ ಕ್ಷೇತ್ರಗಳ ಆರು ಸಾಧಕರನ್ನು 2023ನೇ ಸಾಲಿನ ‘ಇನ್ಫೊಸಿಸ್ ಪ್ರಶಸ್ತಿ’ಗೆ ಆಯ್ಕೆ ಮಾಡಲಾಗಿದೆ.


’ಎಂಜಿನಿಯರಿಂಗ್ ಮತ್ತು ಕಂಪ್ಯೂಟರ್ ವಿಜ್ಞಾನ, ಮಾನವಿಕ, ಜೀವ ವಿಜ್ಞಾನ, ಗಣಿತ ವಿಜ್ಞಾನ, ಭೌತ ವಿಜ್ಞಾನಗಳು ಮತ್ತು ಸಮಾಜ ವಿಜ್ಞಾನ ವಿಭಾಗಗಳಲ್ಲಿ ಸಾಧನೆ ಮಾಡಿರುವವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಜನವರಿ 13, 2024 ರಂದು ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ’ ಎಂದು ಇನ್ಫೊಸಿಸ್ ಸೈನ್ಸ್ ಫೌಂಡೇಷನ್ ಟ್ರಸ್ಟಿ ಎನ್.ಆರ್. ನಾರಾಯಣಮೂರ್ತಿ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪ್ರಶಸ್ತಿಯು ಚಿನ್ನದ ಪದಕ, ಪ್ರಶಂಸಾ ಪತ್ರ ಮತ್ತು ತಲಾ ₹ 83.11 ಲಕ್ಷ (1 ಲಕ್ಷ ಅಮೆರಿಕನ್ ಡಾಲರ್) ನಗದನ್ನು ಒಳಗೊಂಡಿದೆ ಎಂದು ಅವರು ವಿವರಿಸಿದರು.

ವಿಜ್ಞಾನ ಮತ್ತು ಸಂಶೋಧನಾ ಕ್ಷೇತ್ರವನ್ನು ಉತ್ತೇಜಿಸುವ ಸಲುವಾಗಿ ಇನ್ಫೊಸಿಸ್ ಸೈನ್ಸ್ ಫೌಂಡೇಷನ್, 2008ರಿಂದ ಈ ಪ್ರಶಸ್ತಿ ನೀಡುತ್ತಾ ಬಂದಿದೆ. ಈ ವರ್ಷದ ಪ್ರಶಸ್ತಿಗೆ 224 ಹೆಸರುಗಳು ನಾಮನಿರ್ದೇಶನಗೊಂಡಿದ್ದವು. ಇದರಲ್ಲಿ ಆರು ಮಂದಿಯನ್ನು ಅಂತರರಾಷ್ಟ್ರೀಯ ಮಟ್ಟದ ತೀರ್ಪುಗಾರರ ಸಮಿತಿ ಆಯ್ಕೆ ಮಾಡಿತು ಎಂದು ಹೇಳಿದರು.

ಸವಾಲು ಎದುರಿಸಲು ಸಾಧ್ಯ: ‘ಇನ್ಫೊಸಿಸ್ ಪ್ರಶಸ್ತಿ ಪುರಸ್ಕೃತರು, ಪರಿಸ್ಥಿತಿಗೆ ಅನುಗುಣವಾಗಿ ಹೊಂದಿಕೊಳ್ಳುವ ಆಲೋಚನಾ ಕ್ರಮದ ಮಹತ್ವ ಹಾಗೂ ಸವಾಲುಗಳನ್ನು ನಿಭಾಯಿಸಲು ಯಾವ ಮಾರ್ಗ ಅನುಸರಿಸಿದ್ದೇವೆ ಎಂಬುದನ್ನು ತಮ್ಮ ಕಾರ್ಯದ ಮೂಲಕ ತೋರಿಸಿಕೊಟ್ಟಿದ್ದಾರೆ’ ಎಂದು ನಾರಾಯಣ ಮೂರ್ತಿ ಹೇಳಿದರು.

ಇದೇ ವೇಳೆ ಟ್ರಸ್ಟಿ ಮಂಡಳಿ ಅಧ್ಯಕ್ಷ ಕ್ರಿಸ್ ಗೋಪಾಲಕೃಷ್ಣನ್ , ಟ್ರಸ್ಟಿಗಳಾದ ಶ್ರೀನಾಥ್ ಬಾಟ್ನಿ, ಕೆ. ದಿನೇಶ್, ಎಸ್. ಡಿ. ಶಿಬುಲಾಲ್ ಅವರು ಪ್ರಶಸ್ತಿಗೆ ಆಯ್ಕೆಯಾದವರ ಹೆಸರುಗಳನ್ನು ಪ್ರಕಟಿಸಿದರು. ಟ್ರಸ್ಟಿಗಳಾದ ನಂದನ್ ನಿಲೇಕಣಿ, ಮೋಹನದಾಸ್ ಪೈ ಮತ್ತು ಸಲೀಲ್ ಪಾರೇಖ್ ಅವರು ಹಾಜರಿದ್ದರು. ಪ್ರಶಸ್ತಿಗೆ ಆಯ್ಕೆಯಾದವರು ಹಾಗೂ ಆಯ್ಕೆ ಸಮಿತಿಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.




ಸಚ್ಚಿದಾನಂದ ತ್ರಿಪಾಠಿ




ಜಾಹ್ನವಿ ಫಾಲ್ಕೆ



ಅರುಣ್ ಕುಮಾರ್



ಭಾರ್ಗವ್ ಭಟ್



ಮುಕುಂದ್ ತಟ್ಟೈ



ಕರುಣಾ ಮಂತೆನಾ

ಪ್ರಶಸ್ತಿ ಪುರಸ್ಕೃತರು	
ಎಂಜಿನಿಯರಿಂಗ್ ಮತ್ತು ಕಂಪ್ಯೂಟರ್ ವಿಜ್ಞಾನ	ಸಚ್ಚಿದಾನಂದ ತ್ರಿಪಾಠಿ, ಪ್ರಾಧ್ಯಾಪಕ, ಸುಸ್ಥಿರ ಇಂಧನ ಎಂಜಿನಿಯರಿಂಗ್ ವಿಭಾಗ, ಐಐಟಿ, ಕಾನ್ಪುರ
ಮಾನವಿಕ	ಜಾಹ್ನವಿ ಫಾಲ್ಕೆ, ಸಂಸ್ಥಾಪಕ ನಿರ್ದೇಶಕಿ, ಸೈನ್ಸ್ ಗ್ಯಾಲರಿ, ಬೆಂಗಳೂರು.
ಜೀವ ವಿಜ್ಞಾನ	ಅರುಣ್ ಕುಮಾರ್ ಶುಕ್ಲಾ, ಪ್ರಾಧ್ಯಾಪಕ, ಬಯೋಎಂಜಿನಿಯರಿಂಗ್ ಮತ್ತು ಜೀವವಿಜ್ಞಾನ ವಿಭಾಗ, ಐಐಟಿ, ಕಾನ್ಪುರ
ಗಣಿತ ವಿಜ್ಞಾನ	ಭಾರ್ಗವ್ ಭಟ್, ಫರ್ನೋಲ್ಜ್ ಜಂಟಿ ಪ್ರಾಧ್ಯಾಪಕ, ಇನ್‌ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್ಡ್ ಸ್ಟಡಿ ಮತ್ತು ಪ್ರಿನ್ಸ್‌ಟನ್ ವಿಶ್ವವಿದ್ಯಾಲಯ
ಭೌತ ವಿಜ್ಞಾನಗಳು	ಮುಕುಂದ್ ತಟ್ಟೈ, ಪ್ರಾಧ್ಯಾಪಕ, ಜೀವರಸಾಯನ ಶಾಸ್ತ್ರ, ಜೀವಭೌತವಿಜ್ಞಾನ ಮತ್ತು ಬಯೋಇನ್ಫಾರ್ಮೆಟಿಕ್ಸ್ ವಿಭಾಗ, ಸೆಂಟರ್ ಫಾರ್ ಬಯಾಲಾಜಿಕಲ್ ಸೈನ್ಸಸ್(ಎನ್‌ಸಿಬಿಎಸ್), ಬೆಂಗಳೂರು
ಸಮಾಜ ವಿಜ್ಞಾನ	ಕರುಣಾ ಮಂತೆನಾ, ಪ್ರಾಧ್ಯಾಪಕಿ, ರಾಜ್ಯಶಾಸ್ತ್ರ ವಿಭಾಗ, ಕೊಲಂಬಿಯಾ ವಿಶ್ವವಿದ್ಯಾಲಯ

ಬೆಳಗಾವಿಯಲ್ಲಿ ಅಧಿವೇಶನ; ಜನಪ್ರತಿನಿಧಿಗಳು, ಅಧಿಕಾರಿಗಳಿಗೆ ರೈತರ ಆಹ್ವಾನ

‘ನಮ್ಮ ಮನೆಗಳಲ್ಲೇ ವಾಸ್ತವ್ಯ ಮಾಡಿ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ವಿಧಾನ ಮಂಡಲದ ಚಳಿಗಾಲದ ಅಧಿವೇಶನವನ್ನು ಸಾಧ್ಯವಾದಷ್ಟು ಕಡಿಮೆ ಖರ್ಚಿನಲ್ಲಿ ನಡೆಸಲು ಸಿದ್ಧತೆ ನಡೆದಿರುವ ಬೆನ್ನಲ್ಲೇ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಂಘಟನೆಯ ಪದಾಧಿಕಾರಿಗಳು ತಮ್ಮ ಮನೆಗಳಲ್ಲಿ ವಾಸ್ತವ್ಯ ಮಾಡುವಂತೆ ಜನಪ್ರತಿನಿಧಿಗಳಿಗೆ ಮತ್ತು ಅಧಿಕಾರಿಗಳಿಗೆ ಆಹ್ವಾನಿಸಿದ್ದಾರೆ.

‘ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಶಾಸಕರು ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳು ನಮ್ಮ ಮನೆಗಳಲ್ಲಿ ವಾಸವಿದ್ದು, ಅಧಿವೇಶನದ ಖರ್ಚು ತಗ್ಗಿಸಬಹುದು. ರುಚಿಕಟ್ಟಾದ ಊಟವನ್ನೂ ಸವಿಯಬಹುದು. ಯಾವುದೇ ಸಮಸ್ಯೆ ಆಗದಂತೆ ನೋಡಿಕೊಳ್ಳುತ್ತೇವೆ’ ಎಂದು ರೈತ ಮುಖಂಡರು ಹೇಳಿದ್ದಾರೆ.

ಬರ ಆವರಿಸಿರುವ ಹಿನ್ನೆಲೆಯಲ್ಲಿ ಕಡಿಮೆ ಖರ್ಚಿನಲ್ಲಿ ಅಧಿವೇಶನ ನಡೆಸುವುದಾಗಿ ವಿಧಾನಸಭೆ ಅಧ್ಯಕ್ಷ ಯು.ಟಿ.ಖಾದರ್ ಮತ್ತು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿರುವ ಹಿನ್ನೆಲೆಯಲ್ಲಿ ರೈತರು, ‘ಗ್ರಾಮವಾಸ್ತವ್ಯ ಮೂಲಕ ನಮ್ಮ ಸಂಕಷ್ಟವನ್ನೂ ಆಲಿಸಬೇಕು’ ಎಂದು ಕೋರಿದ್ದಾರೆ.

ಬುತ್ತಿ ಕಟ್ಟಿಕೊಡುತ್ತೇವೆ: ‘ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಪ್ರತಿಷ್ಠಿತ ಹೋಟೆಲ್‌ಗಳಲ್ಲಿ ವಾಸ್ತವ್ಯ ಮಾಡಲು ಮನೆಗಳಲ್ಲೇ ವಾಸ್ತವ್ಯ ಮಾಡಲಿ. ಹಿಂದಿನ ಎರಡು ವರ್ಷವೂ ಆಹ್ವಾನಿಸಿದ್ದರೂ ಯಾರೂ ಬರಲಿಲ್ಲ. ಈ ಸಲ ಬರಗಾಲವಿದ್ದು, ರೈತರ ಮನೆಗಳಲ್ಲಿ ಅವರು ವಾಸಿಸಲಿ. ನಮ್ಮಲ್ಲೇ ಉಳಿದರೆ, ಅಧಿವೇಶನಕ್ಕೆ ಹೋಗುವಾಗ ಬುತ್ತಿಯನ್ನೂ ಕಟ್ಟಿಕೊಡುತ್ತೇವೆ’ ಎಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ ಘಟಕದ ಕಾರ್ಯದರ್ಶಿ ಪ್ರಕಾಶ ನಾಯ್ಕ ‘ಪ್ರಜಾವಾಣಿ’ಗೆ ತಿಳಿಸಿದರು.

25 ಗ್ರಾಮಗಳಲ್ಲಿ ಸಿದ್ಧತೆ: ‘ಬೆಳಗಾವಿ ತಾಲ್ಲೂಕಿನ ಬಸ್ತವಾಡ, ಹಲಗಾ, ಕೊಂಡಸಕೊಪ್ಪ, ಹಿರೇಬಾಗೇವಾಡಿ, ಚಂದನಹೊಸೂರ, ಸಾಂಬ್ರಾ, ಮಚ್ಚೆ, ಕೋಳಿಕೊಪ್ಪ, ಕೆ.ಕೆ.ಕೊಪ್ಪ ಸೇರಿ 25 ಗ್ರಾಮಗಳಲ್ಲಿ ಊಟ, ವಸತಿ ವ್ಯವಸ್ಥೆಗೆ ಸಿದ್ಧತೆ ಮಾಡಿಕೊಂಡಿದ್ದೇವೆ. ಜನಪ್ರತಿನಿಧಿಗಳು, ಅಧಿಕಾರಿಗಳ ಭದ್ರತಾ ಸಿಬ್ಬಂದಿ ಮತ್ತು ಸಹಾಯಕರಿಗೂ ವ್ಯವಸ್ಥೆ ಮಾಡುತ್ತೇವೆ. ಎಲ್ಲರ ಬಗ್ಗೆ ಕಾಳಜಿ ವಹಿಸುತ್ತೇವೆ’ ಎಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಘಟಕದ ಅಧ್ಯಕ್ಷ ಚೂನಪ್ಪ ಪೂಜೇರಿ ಹೇಳಿದರು.

‘ರೈತರ ಪರ ಧ್ವನಿ ಎತ್ತುತ್ತೇವೆ’

‘ಅಧಿವೇಶನ ವೇಳೆ ನಾವು ಬೆಳಗಾವಿಯ ಹೋಟೆಲ್‌ಗಳಲ್ಲಿ ಉಳಿಯುವುದಿಲ್ಲ. ನಿತ್ಯ ಅಧಿವೇಶನಕ್ಕೆ ಹಾಜರಾಗಿ, ರಾತ್ರಿ ನಮ್ಮ ಮನೆಗೆ ಮರಳುತ್ತೇವೆ. ಅಧಿವೇಶನದಲ್ಲಿ ರೈತರ ಪರ ಧ್ವನಿ ಎತ್ತುತ್ತೇವೆ’ ಎಂದು ಶಾಸಕರಾದ ವಿಶ್ವಾಸ ವೈದ್ಯ ಮತ್ತು ಬಾಬಾಸಾಹೇಬ ಪಾಟೀಲ ‘ಪ್ರಜಾವಾಣಿ’ಗೆ ತಿಳಿಸಿದರು.

‘ವಸತಿಗೆ 2 ಸಾವಿರ ಕೊಠಡಿ’: ‘ಕಳೆದ ವರ್ಷದ ಅಧಿವೇಶನಕ್ಕೆ ಸರ್ಕಾರವು ಜಿಲ್ಲಾಡಳಿತಕ್ಕೆ ನೀಡಿದ್ದ ₹20 ಕೋಟಿ ಪೈಕಿ ₹17.5 ಕೋಟಿ ಖರ್ಚಾಗಿತ್ತು. ಈ ಸಲದ ಅಧಿವೇಶನಕ್ಕೆ ಬರುವವರಿಗೆ ವಿವಿಧ ಹೋಟೆಲ್‌ಗಳಲ್ಲಿ 2 ಸಾವಿರಕ್ಕೂ ಹೆಚ್ಚು ಕೊಠಡಿ ಕಾಯ್ದಿರಿಸಿದ್ದೇವೆ. ಇದಕ್ಕೆ ಪೂರಕವಾಗಿ ಅಗತ್ಯ ಕ್ರಮ ತೆಗೆದುಕೊಂಡಿದ್ದೇವೆ’ ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ತಿಳಿಸಿದ್ದಾರೆ.

ಬರ ಹಿನ್ನೆಲೆಯಲ್ಲಿ ರೈತರ ಮನೆಗಳಲ್ಲಿ ವಾಸ್ತವ್ಯ ಮಾಡುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಬೇಕು. ನಮ್ಮ ಬೇಡಿಕೆಗೆ ಸ್ಪಂದಿಸುವಂತೆ ಖಾದರ್ ಅವರಿಗೆ ಮನವಿ ಸಲ್ಲಿಸಿದ್ದೇವೆ

ಪ್ರಕಾಶ ನಾಯ್ಕ, ಕಾರ್ಯದರ್ಶಿ, ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಂಘಟನೆ ರಾಜ್ಯ ಘಟಕ

ಮನೆಗಳಲ್ಲಿ ವಾಸಿಸುವವರು ಅಧಿವೇಶನದಲ್ಲಿ ರೈತರ ಸಮಸ್ಯೆ ಚರ್ಚಿಸಬೇಕು. ಅಧಿವೇಶನಕ್ಕೆ ಖರ್ಚು ಆಗುವ ಹಣ ಉಳಿಸಿ, ಅದನ್ನು ರೈತರಿಗೆ ಪರಿಹಾರದ ರೂಪದಲ್ಲಿ ನೀಡಬೇಕು

ಚೂನಪ್ಪ ಪೂಜೇರಿ, ಅಧ್ಯಕ್ಷ, ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಂಘಟನೆ ರಾಜ್ಯ ಘಟಕ

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ
ಕಾರ್ಯಪಾಲಕ ಅಭಿಯಂತರರ ಕಛೇರಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು
ಟೆಂಡರ್ ಸಂಖ್ಯೆ:ಕಾಪ/ಪಂರಾಇಂವಿಬೆಂಗ್ರಾ/ಇ.ಪ್ರೊ/01/2023-24/610 ದಿನಾಂಕ: 10.11.2023
ಇ-ಟೆಂಡರ ಪ್ರಕಟಣೆ
ಪಂಚಾಯತ್ ರಾಜ್ ಇಂಜಿನಿಯರಿಂಗ್ ಬೆಂಗಳೂರು ಗ್ರಾಮಾಂತರ ವಿಭಾಗ ವ್ಯಾಪ್ತಿಯ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸಲು **ಡೇಟಾ ಎಂಟ್ರಿ ಆಪರೇಟರ್-06, ಚಾಲಕರು-04 ಮತ್ತು ಗ್ರೂಪ್ ಡಿ**-03 ಹುದ್ದೆಗಳನ್ನು ಪಡೆಯಲು ಸ್ಥಳೀಯವಾಗಿ ಹೊರಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಸೀಮಿತ ಅವಧಿಗೆ ಹೊರ ಸಂಪನ್ಮೂಲ ಏಜೆನ್ಸಿ ಮೂಲಕ ಪಡೆಯಲು ಟೆಂಡರ್ ಕರೆಯಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 21-11-2023 ರ ಸಂಜೆ 5.00 ಗಂಟೆಯವರೆಗೆ.
ಹೆಚ್ಚಿನ ವಿವರಗಳನ್ನು https://eproc.karnataka.gov.in/ ನಲ್ಲಿ ನೋಡಬಹುದು.
ಸಹಿ/- ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ, ಬೆಂಗಳೂರು
ವಾಸಾಸಂಇ/ಬೆಂಗ್ರಾಜಿ/2109/ಸ್ಕ್ಯಾನ್/2023-24

ಪುರಸಭೆ ಕಾರ್ಯಾಲಯ, ಚಿಕ್ಕಬಾಣಾವರ
ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ
ಇ-ಮೇಲ್ : itstaff_ulb_ckbanavara@yahoo.com
ವೆಬ್‌ಸೈಟ್ : http://chikkavanavaratown.mrc.gov.in
ಸಂ: ಪು.ಕಾ.ಚಿ./ತಾ.ವಿ./ಟೆಂಡರ್/ಸಿಆರ್/01/2023-24 ದಿನಾಂಕ ; 15.11.2023
ಟೆಂಡರ್ ಪ್ರಕಟಣೆ (ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ **2023-24ನೇ ಸಾಲಿನ 15ನೇ ಹಣಕಾಸಿನ ಅನುದಾನ, 2023-24ನೇ ಸಾಲಿನ ಎಸ್‌ಎಫ್‌ಸಿ ಮುಕ್ತನಿಧಿ ಹಾಗೂ ಶೇ.24.10 ಶೇ.7.25 ಹಾಗೂ ಎಸ್‌ಎಫ್‌ಸಿ ಕುಡಿಯುವ ನೀರಿನ ಅನುದಾನ ಹಾಗೂ ಪುರಸಭಾ ನಿಧಿ ಶೇ. 24.10, ಶೇ.7.25 ಮತ್ತು ಪುರಸಭಾ ನಿಧಿ ಯೋಜನೆಯಡಿ** ಟೆಂಡರ್‌ನ್ನು ಈ ಕೆಳಗಡೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿರುವ ಅರ್ಹ ಗುತ್ತಿಗೆದಾರರು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಮುಖಾಂತರ ಕರೆದಿರುವ ಟೆಂಡರ್‌ಗಳಿಗೆ ಭಾಗವಹಿಸಬಹುದು. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ : 01.12.2023ರ ಸಂಜೆ 4.30 ಗಂಟೆಗೆ.** ಹೆಚ್ಚಿನ ವಿವರಗಳಿಗೆ ಈ ಕಛೇರಿಯ ತಾಂತ್ರಿಕ ಶಾಖೆಯಿಂದ ಪಡೆಯಬಹುದು.
ಸಹಿ/- **ಆಡಳಿತಾಧಿಕಾರಿಗಳು** ಪುರಸಭೆ, ಚಿಕ್ಕಬಾಣಾವರ ಹಾಗೂ ಉಪವಿಭಾಗಾಧಿಕಾರಿಗಳು ಬೆಂಗಳೂರು ಉತ್ತರ ಉಪವಿಭಾಗ
ಸಹಿ/- **ಮುಖ್ಯಾಧಿಕಾರಿಗಳು** ಪುರಸಭೆ, ಚಿಕ್ಕಬಾಣಾವರ
DIPR/CP/YC/2103/2023-24

ಐಸಿಎಆರ್-ರಾಷ್ಟ್ರೀಯ ಹೈನು ಸಂಶೋಧನಾ ಸಂಸ್ಥೆ
ದಕ್ಷಿಣ ವಲಯ ಕೇಂದ್ರ, ಬೆಂಗಳೂರು - 560030
ಇ-ಮೇಲ್: aaondri@gmail.com ಫ್ಯಾಕ್ಸ್: 080-22631475
ಪ್ರಧಾನ ಕಚೇರಿ: 080-22631402 ಎಎಒ: 080-22631405
ndri
ಎಫ್.ನಂ.2-13/ಸಿಡಿಎನ್/ಎಲ್‌ಆರ್‌ಸಿ/ಎನ್‌ಡಿಆರ್‌ಐ/2020-21/3109 ದಿನಾಂಕ: 14-11-2023
ಹೆಚ್ಚುವರಿ ಜಾನುವಾರು ಇತ್ಯಾದಿಗಳ ವಿಲೇವಾರಿಗಾಗಿ ಬಿಡ್ ಆಹ್ವಾನ
ಈ ಸಂಸ್ಥೆಯ 54 ದೇಸಿ ಜಾನುವಾರುಗಳು ಮತ್ತು 43 ಮಿಶ್ರತಳಿ ಜಾನುವಾರುಗಳನ್ನು ನೋಂದಾಯಿತ ಗೋಶಾಲೆಗಳಿಂದ ಸ್ವೀಕೃತ ಆಫರ್‌ಗಳ ಆಧಾರದಲ್ಲಿ ವಿಲೇವಾರಿ ಮಾಡಲು ಉದ್ದೇಶಿಸಲಾಗಿರುತ್ತದೆ. ಈ ಜಾನುವಾರುಗಳನ್ನು ಖರೀದಿಸಲು ಆಸಕ್ತಿಯುಳ್ಳ ಗೋಶಾಲೆಗಳು, 06-12-2023 ರೊಳಗಾಗಿ ದೇಸಿ ಜಾನುವಾರುಗಳಿಗೆ ಮತ್ತು ಮಿಶ್ರತಳಿ ಜಾನುವಾರುಗಳಿಗೆ ಪ್ರತ್ಯೇಕವಾಗಿ ತಮ್ಮ ಆಫರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಆಸಕ್ತಿಯುಳ್ಳ ಬಿಡ್‌ದಾರರು, ಹೆಚ್ಚಿನ ವಿವರಗಳಿಗಾಗಿ ಸಂಸ್ಥೆಯ www.ndri.res.in ವೆಬ್‌ಸೈಟ್‌ಗೆ ಭೇಟಿ ನೀಡಬೇಕೆಂದು ಕೋರಲಾಗಿದೆ.
ಸಹಾಯಕ ಆಡಳಿತಾಧಿಕಾರಿ
ಫೋನ್ ನಂ. 080-22631405
ಇ-ಮೇಲ್: kr.prasad@icar.gov.in

ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ
(An Autonomous Institute of Govt. Of
SRI CHAMARAJENDRA HOSPITAL CAMPUS, HASSAN-573201
Website: www.hims-hassan.org Phone/Fax No.08172-231699/231599
ಇ-ಟೆಂಡರ್ ಪ್ರಕಟಣೆ
ಕ್ರ.ಸಂ.1)ಟೆಂಡರ್ ಅಧಿಸೂಚನೆ ಸಂಖ್ಯೆ: ಹಿಮ್ಸ್/ಎಸ್‌ಸಿಹೆಚ್/ಡ್ರಗ್ಸ್/ರಿ-ಎಟಿಡಿಆರ್/36/2023-24 ವಿವರ: ಹಿಮ್ಸ್ ಸಂಸ್ಥೆಯ ಬೋಧಕ ಆಸ್ಪತ್ರೆಗೆ ಔಷಧಿ ಮತ್ತು ಇತರೆ ಸಾಮಗ್ರಿಗಳನ್ನು ಇ-ಟೆಂಡರ್ ಮೂಲಕ ಸರಬರಾಜು ಪಡೆಯುವ ಬಗ್ಗೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ ದಿನಾಂಕ: 16.11.2023 ರಿಂದ 02.12.2023 ರವರೆಗೆ. ಅಂದಾಜು ಮೊತ್ತ ಲಕ್ಷಗಳಲ್ಲಿ:57.82 ಇ.ಎಂ.ಡಿ ಮೊತ್ತ ಲಕ್ಷಗಳಲ್ಲಿ: 0.57 ಟೆಂಡರ್ ಪ್ರಕ್ರಿಯೆ ದಿನಾಂಕಗಳನ್ನು ಹಾಗೂ ಇತರೆ ವಿವರಗಳನ್ನು ಕರ್ನಾಟಕ ಸಕಾರದ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಂ ಮುಖಾಂತರ kppp.karnataka.gov.in ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ಕೆಲಸದ ವೇಳೆಯಲ್ಲಿ (ರಜಾ ದಿನಗಳನ್ನು ಹೊರತುಪಡಿಸಿ) ಸಂಪರ್ಕಿಸಬಹುದಾಗಿದೆ.
ಸಹಿ/- ಮುಖ್ಯ ಆಡಳಿತಾಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.
ವಾಸಾಸಂಇ/ಹಿಸನಿ/ಹಾಸನ/500/ಕೆಎಸ್‌ಎಂಸಿಎ/506/2023-24

ಕರ್ನಾಟಕ ಸರ್ಕಾರ
ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ ಸರ್ಕಾರಿ ಕೇಂದ್ರ ಮುದ್ರಣಾಲಯ
8ನೇ ಮೈಲಿ, ಆರ್.ವಿ.ಕಾಲೇಜ್ ಅಂಚೆ, ಮೈಸೂರು ರಸ್ತೆ, ಬೆಂಗಳೂರು-560059
ಫೋನ್ ನಂ.080-28484515/080-28484518
ಸಂಖ್ಯೆ: ಡಿಪಿಎಸ್54ಪಿಯುಆರ್(ಸಿ)2023-24/ಟಿ.ಆರ್.ಪಿ_ಎಸ್‌ಬಿ&ಬಿಬಿ ದಿನಾಂಕ: 13.11.2023
ಸಂಕ್ಷಿಪ್ತ ಟೆಂಡರ್ ಅಧಿಸೂಚನೆ
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ)
ಸವಿ ಬರಹ ಅಭ್ಯಸ ಪುಸ್ತಕಗಳನ್ನು ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು ಹಾಗೂ ಬಾಳಿಗೆ ಬೆಳಕು ಪುಸ್ತಕಗಳನ್ನು ಸರ್ಕಾರಿ ವಿಭಾಗೀಯ ಮುದ್ರಣಾಲಯ, ಮೈಸೂರು ಇಲ್ಲಿಂದ ಕರ್ನಾಟಕ ರಾಜ್ಯದ ಡಿ.ಎಸ್.ಇ.ಆರ್.ಟಿ ಕಛೇರಿಗಳಿಗೆ ಸಾಗಾಣಿಕೆಗಾಗಿ ಆನ್‌ಲೈನ್ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ **ರೂ. 28.46 ಲಕ್ಷಗಳಾಗಿರುತ್ತದೆ.** ಟೆಂಡರ್ ಸಲ್ಲಿಸಲು ಕಡೆಯ **ದಿನಾಂಕ: 21.11.2023ರ ಸಂಜೆ 5:30 ಗಂಟೆಯವರೆಗೆ.** ಮಾಹಿತಿಯನ್ನು **https://eproc.karnataka.gov.in** ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.
ಸಹಿ/- ನಿರ್ದೇಶಕರು
ವಾಸಾಸಂಇ/ವಾಪ್ರ/ಎಸ್‌ಎಸ್‌ಸಿ/2096/2023-24

ಕಾರ್ಯನಿರ್ವಾಹಕ ನಿರ್ದೇಶಕರು,
ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ
ಶ್ರೀ ಅಟಲ್ ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ್, ಕಮಲಾಪುರ,
ಹೊಸಪೇಟೆ ತಾಲ್ಲೂಕು, ವಿಜಯನಗರ ಜಿಲ್ಲೆ.
ಸಂಖ್ಯೆ:ಅಬಿವಾಮೃ/ಟೆ.ಕಾ/ಪ್ರ.ದ್ವಾ/102/2022-23 ದಿನಾಂಕ: 15.11.2023
ಇ-ಟೆಂಡರ್ ಪ್ರಕಟಣೆ
2023-24ನೇ ಸಾಲಿನಲ್ಲಿಕಾರ್ಯನಿರ್ವಾಹಕ ನಿರ್ದೇಶಕರು, ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಶ್ರೀ ಅಟಲ್ ಬಿಹಾರಿ ವಾಜಪೇಯಿಜೂಲಾಜಿಕಲ್ ಪಾರ್ಕ್, ಕಮಲಾಪುರ ಮೃಗಾಲಯದಲ್ಲಿ **Development ofEntrance Plaza** ನಿರ್ಮಾಣ ಮಾಡುವ ಸಂಬಂಧ ಕಾಮಗಾರಿಗೆ ಕರ್ನಾಟಕ ಅರಣ್ಯ ಇಲಾಖೆ/ಕೆ.ಪಿ.ಡಬ್ಲ್ಯುಡಿ/ಸಿ.ಪಿ.ಡಬ್ಲ್ಯುಡಿ/ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಕೆಟಿಪಿಪಿ ಕಾಯ್ದೆಮತ್ತು ನಿಯಮಗಳ ಪ್ರಕಾರ ಇ-ಪೋರ್ಟಲ್‌ಮೂಲಕ ಟೆಂಡರ್ ಕರೆಯಲಾಗಿದೆ.
ಇಂಡೆಂಟ್ ಸಂಖ್ಯೆ:ZAK/2023-24/OW/WORK_INDENT8/Call-2. **ಅಂದಾಜು ಮೊತ್ತ (ರೂ.ಗಳಲ್ಲಿ):** Rs. 4,24,00,000.00. **ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ):** Rs.6,36,000.00.
ಈ ಟೆಂಡರ್ ಪ್ರಕಟಣೆ ಪ್ರತಿಯು **https://kppp.karnataka.gov.in** ಇಲ್ಲಿ ಲಭ್ಯವಿರುತ್ತದೆ. ಟೆಂಡರ್ ವಿವರಗಳು ಇ-ಪ್ರಕ್ಯೂರಮೆಂಟ್‌ನಲ್ಲಿ ಲಭ್ಯವಾಗುವ **ದಿನಾಂಕ: 15.11.2023,** ಪೂರ್ವಬಾವಿ ಸಭೆ **ದಿನಾಂಕ: 23.11.2023,** ಕೊನೆಯ **ದಿನಾಂಕ: 21.12.2023** ಸಾಯಂಕಾಲ 5.05ಗಂಟೆಯವರೆಗೆತಾಂತ್ರಿಕ ಬಿಡ್‌ತೆರೆಯುವ **ದಿನಾಂಕ: 22.12.2023** ಸಾಯಂಕಾಲ 5.08ಗಂಟೆಗೆ ಮತ್ತುಆರ್ಥಿಕ ಬಿಡ್‌ತೆರೆಯುವ **ದಿನಾಂಕ: 27.12.2023** ಮಧ್ಯಾಹ್ನ2.03ಗಂಟೆಯ ನಂತರ. ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ನಿರ್ದೇಶಕರು, ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಶ್ರೀ ಅಟಲ್ ಬಿಹಾರಿ ವಾಜಪೇಯಿಜೂಲಾಜಿಕಲ್ ಪಾರ್ಕ್, ಕಮಲಾಪುರ-ಪಾಪಿನಾಯಕನಹಳ್ಳಿ ಮುಖ್ಯರಸ್ತೆ (ಜಂಗಲ್‌ರೆಸಾರ್ಟ್ ಹತ್ತಿರ) ಕಮಲಾಪುರಇವರಕಛೇರಿಯಿಂದಅಥವಾದೂರವಾಣಿ ಸಂಖ್ಯೆ:08394-295289ಕಛೇರಿ ವೇಳೆಯಲ್ಲಿ ಪಡೆಯಬಹುದು.
ಸಹಿ/- ಕಾರ್ಯನಿರ್ವಾಹಕ ನಿರ್ದೇಶಕರು, ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಶ್ರೀ ಅಟಲ್ ಬಿಹಾರಿ ವಾಜಪೇಯಿಜೂಲಾಜಿಕಲ್ ಪಾರ್ಕ್, ಕಮಲಾಪುರ ಹೊಸಪೇಟೆತಾಲ್ಲೂಕು ವಿಜಯನಗರಜಿಲ್ಲೆ
ಡಿಐಪಿಆರ್/ವಿಜಯನಗರ/220/ಕೆಎಸ್‌ಎಂಸಿಎ/2023-24

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಜಿಲ್ಲಾ ಕ್ಷಯರೋಗ ನಿರ್ಮೂಲನಾ ಅಧಿಕಾರಿಗಳ ಕಾರ್ಯಾಲಯ
ಜಿಲ್ಲಾ ಕ್ಷಯರೋಗ ನಿರ್ಮೂಲನಾ ಕೇಂದ್ರ, ಜಿಲ್ಲಾ ಆಸ್ಪತ್ರೆ ಆವರಣ, ಅಥಣಿ ರಸ್ತೆ,ವಿಜಯಪುರ. ದೂರವಾಣಿ ಸಂಖ್ಯೆ: 08352-270211
No: DTC/NTEP/157/2023-24 Date:15.11.2023
ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)
ವಿಷಯ: 2022-23 ನೇ ಸಾಲಿಗೆ ಬಿಡುಗಡೆಯಾದ ಅನುದಾನದಡಿ ಸಾಧನ, ಸಲಕರಣ, ಡ್ರಗ್ಸ್, ಪೀಠೋಪಕರಣ ಇತ್ಯಾದಿಗಳ ಇ-ಟೆಂಡರ್ ಮೂಲಕ ಸರಬರಾಜಿಗಾಗಿ ಅಲ್ಪಾವಧಿ ಟೆಂಡರ್ ಕರೆಯುವ ಬಗ್ಗೆ.
ವಿಜಯಪುರ ಜಿಲ್ಲೆಯಲ್ಲಿ ರಾಷ್ಟ್ರೀಯ ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮದಡಿಯಲ್ಲಿ 2023-24 ನೇ ಸಾಲಿಗೆ ಬಿಡುಗಡೆಯಾದ ಅನುದಾನದಡಿ ಪ್ರಯೋಗಾಲಯದ ರಾಸಾಯನಿಕ ಹಾಗೂ ಸಲಕರಣೆ ಮತ್ತು ಡ್ರಗ್ಸ್ ಇತ್ಯಾದಿಗಳ ಸರಬರಾಜಿಗಾಗಿ ಅರ್ಹ ಸಂಸ್ಥೆಗಳಿಂದ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. **ಭರ್ತಿ ಮಾಡಿದ ಟೆಂಡರ್ ಫಾರ್ಮ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 24.11.2023** ಇರುತ್ತದೆ. ಹೆಚ್ಚಿನ ಮಾಹಿತಿಯನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ದಿಂದ ಪಡೆಯಬಹುದಾಗಿದೆ.
ಇ-ಪ್ರೊಕ್ಯೂರ್‌ಮೆಂಟ್ ಸಂಖ್ಯೆ: 1) DHFWS/2023-24/IND0281
2) DHFWS/2023-24/IND0283
ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ವಿಜಯಪುರ
ವಾಸಾಸಂಇ/ವಿಜಯಪುರ/280/ಕೆಎಸ್‌ಎಂಸಿಎ/2023-24

40 ಕಾರ್ಮಿಕರು ಸುರಕ್ಷಿತ: ನವದೆಹಲಿಯಿಂದ ಬಂದ ಹೊಸ ಯಂತ್ರ

ಮತ್ತೆ ಭೂಕುಸಿತ: ಕಾರ್ಯಾಚರಣೆಗೆ ಅಡ್ಡಿ

ಉತ್ತರಕಾಶಿ (ಉತ್ತರಾಖಂಡ) (ಪಿಟಿಐ): ಉತ್ತರಾಖಂಡ ರಾಜ್ಯದ ಉತ್ತರಕಾಶಿ ಜಿಲ್ಲೆಯ ಸಿಲ್ಕ್ಯಾರಾ ಸುರಂಗದಲ್ಲಿ ಮತ್ತೆ ಭೂಕುಸಿತ ಸಂಭವಿಸಿದ್ದು, ಅದರೊಳಗೆ ಸಿಲುಕಿರುವ 40 ಕಾರ್ಮಿಕರ ಸುರಕ್ಷಿತ ರಕ್ಷಣಾ ಕಾರ್ಯಾಚರಣೆಗೆ ತೀವ್ರ ಅಡ್ಡಿಯಾಗಿದೆ.

ಅಲ್ಲದೇ, ಮಂಗಳವಾರ ರಂಧ್ರ ಕೊರೆಯುವ ಯಂತ್ರದಲ್ಲಿ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡಿತ್ತು. ಇದರಿಂದ ಕಾರ್ಯಾಚರಣೆ ವಿಳಂಬವಾಗಿತ್ತು. ಹಾಗಾಗಿ, ಬುಧವಾರ ನವದೆಹಲಿಯಿಂದ ವಿಮಾನದ ಮೂಲಕ ರಂಧ್ರ ಕೊರೆಯುವ ಹೊಸ ಯಂತ್ರವನ್ನು ತರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಎಲ್ಲಾ ಕಾರ್ಮಿಕರು ಸುರಕ್ಷಿತವಾಗಿದ್ದಾರೆ. ಅವರಿಗೆ ಆಮ್ಲಜನಕ, ಔಷಧ, ಆಹಾರ, ಕುಡಿಯುವ ನೀರು ಸೇರಿದಂತೆ ವಿದ್ಯುತ್ ಪೂರೈಸಲಾಗುತ್ತಿದೆ ಎಂದು ಹೇಳಿದ್ದಾರೆ.

ಇಬ್ಬರಿಗೆ ಗಾಯ: ಚಾರ್‌ಧಾಮ್ ಸರ್ವಋತು ರಸ್ತೆ ಯೋಜನೆಯಡಿ ಈ ಸುರಂಗ ನಿರ್ಮಿಸಲಾಗುತ್ತಿದೆ. ನಿರ್ಮಾಣ ಹಂತದ ವೇಳೆ ಕುಸಿದಿರುವ ಇದರೊಳಗೆ ಕಾರ್ಮಿಕರು ಸಿಲುಕಿಕೊಂಡು ಮೂರು ದಿನಗಳು ಕಳೆದಿವೆ. ಕುಸಿದ ತಕ್ಷಣವೇ ಸರ್ಕಾರ ರಕ್ಷಣಾ ಕಾರ್ಯಾಚರಣೆ ಆರಂಭಿಸಿತ್ತು.

ಮಂಗಳವಾರ ರಾತ್ರಿ ಉಕ್ಕಿನ ಕೊಳವೆಗಳನ್ನು ಅವಶೇಷದ ಅಡಿಯ ಮೂಲಕ ಸೇರಿಸಿ ಕಾರ್ಮಿಕರು ಹೊರಬರಲು ಅನುವಾಗುವಂತೆ ಸುರಕ್ಷಿತ ಮಾರ್ಗ ರೂಪಿಸುವ ಕೆಲಸ ಕೈಗೊಳ್ಳಲಾಗಿತ್ತು. ಈ ವೇಳೆ ಭೂಕುಸಿತ ಸಂಭವಿಸಿದ್ದರಿಂದ ಕಾರ್ಯಾಚರಣೆಯಲ್ಲಿ ತೊಡಗಿದ್ದ ಇಬ್ಬರು ಕಾರ್ಮಿಕರು ಗಾಯಗೊಂಡಿದ್ದಾರೆ. ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ರಕ್ಷಣೆ ಹೇಗೆ?: ಯಂತ್ರದ ಸಹಾಯದಿಂದ ಅವಶೇಷದ ಅಡಿಯಲ್ಲಿ ರಂಧ್ರ ಕೊರೆಯಲಾಗುತ್ತದೆ. ಬಳಿಕ 90 ಸೆಂ.ಮೀ ಮತ್ತು 80 ಸೆಂ.ಮೀ ವ್ಯಾಸದ ಕೊಳವೆಗಳನ್ನು ಒಂದರೊಳಗೊಂದು ಸೇರಿಸಲಾಗುತ್ತದೆ. ಈ ಕೆಲಸ ಪೂರ್ಣಗೊಂಡರೆ ಸುರಂಗದ ಒಳಗೆ ಸಿಲುಕಿರುವ ಕಾರ್ಮಿಕರು ಸುರಕ್ಷಿತವಾಗಿ ಕೊಳವೆಯ ಒಳಗಿನಿಂದ ತೆವಳುತ್ತ ಹೊರಬರಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಕಾರ್ಯಾಚರಣೆಗೆ ಮೊದಲು ಬಳಸಿದ್ದ ಯಂತ್ರದ ಕಾರ್ಯ ನಿಧಾನಗತಿಯಲ್ಲಿತ್ತು. ಹೊಸ ಯಂತ್ರವನ್ನು ನವದೆಹಲಿಯಿಂದ ಭಾರತೀಯ ವಾಯುಪಡೆ ಮೂಲಕ ತರಿಸಲಾಗಿದೆ’ ಎಂದು ಉತ್ತರಕಾಶಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರ್ಪಣ್ ಯದುವಂಶಿ ತಿಳಿಸಿದ್ದಾರೆ.

‘ಹೊಸ ಯಂತ್ರದ ಮೂಲಕ ಒಂದು ಗಂಟೆಯೊಳಗೆ ಅವಶೇಷದ ಅಡಿಯಲ್ಲಿ 4ರಿಂದ 5 ಮೀಟರ್‌ನಷ್ಟು ಆಳವಾಗಿ ರಂಧ್ರ ಕೊರೆಯಬಹುದು. 10 ಗಂಟೆ ಕಾರ್ಯಾಚರಣೆ ನಡೆಸಿದರೆ 50 ಮೀಟರ್‌ನಷ್ಟು ಆಳವಾಗಿ ಕೊರೆಯಬಹುದಾಗಿದೆ’ ಎಂದು ರಾಷ್ಟ್ರೀಯ ಹೆದ್ದಾರಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿ ನಿಗಮದ ನಿರ್ದೇಶಕ ಅಂಶು ಮನೀಶ್ ಖಲ್ಖೋ ತಿಳಿಸಿದ್ದಾರೆ.

‘ಕಾರ್ಯಾಚರಣೆ ಯಾವಾಗ ಪೂರ್ಣಗೊಳ್ಳುತ್ತದೆ ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ. ಆದರೆ, ತ್ವರಿತವಾಗಿ ಕಾರ್ಮಿಕರನ್ನು ಸುರಕ್ಷಿತವಾಗಿ ಹೊರತರುವ ಪ್ರಯತ್ನ ಮುಂದುವರಿದಿದೆ’ ಎಂದು ತಿಳಿಸಿದ್ದಾರೆ.



ಉತ್ತರಕಾಶಿ ಜಿಲ್ಲೆಯಲ್ಲಿ ನಿರ್ಮಾಣ ಹಂತದ ವೇಳೆ ಕುಸಿದಿರುವ ಸಿಲ್ಕ್ಯಾರಾ ಸುರಂಗದ ಒಳಗೆ ಸಿಲುಕಿದವರ ರಕ್ಷಣೆಗಾಗಿ ಕಾರ್ಯಾಚರಣೆಯಲ್ಲಿ ತೊಡಗಿರುವ ಕಾರ್ಮಿಕರು –ಪಿಟಿಐ ಚಿತ್ರ

ಕುಟುಂಬಸ್ಥರ ಆಕ್ರೋಶ

ರಕ್ಷಣಾ ಕಾರ್ಯಾಚರಣೆಯ ವಿಳಂಬ ಖಂಡಿಸಿ ಸಂತ್ರಸ್ತ ಕಾರ್ಮಿಕರ ಕುಟುಂಬಸ್ಥರು ಹಾಗೂ ಉಳಿದ ಕಾರ್ಮಿಕರು ಸ್ಥಳದಲ್ಲಿ ಪ್ರತಿಭಟನೆ ನಡೆಸಿದರು.

ಯಂತ್ರದಲ್ಲಿ ತಾಂತ್ರಿಕ ಸಮಸ್ಯೆ ಕಂಡುಬಂದಿದ್ದರಿಂದ ಕಾರ್ಯಾಚರಣೆಗೆ ಅಡ್ಡಿಯಾಗಿದೆ. ಆದರೂ ಅಧಿಕಾರಿಗಳು ಪರ್ಯಾಯ ಯೋಜನೆ ರೂಪಿಸಿಲ್ಲ ಎಂದು ಆರೋಪಿಸಿದರು.

ಸುರಂಗದೊಳಗೆ ಸಿಲುಕಿದವರಲ್ಲಿ ಜಾರ್ಖಂಡ್‌ನ 15, ಉತ್ತರಪ್ರದೇಶದ 8, ಒಡಿಶಾ 5, ಬಿಹಾರ 4, ಪಶ್ಚಿಮ ಬಂಗಾಳ 3, ಉತ್ತರಾಖಂಡ ಮತ್ತು ಅಸ್ಸಾಂನ ತಲಾ ಇಬ್ಬರು, ಹಿಮಾಚಲಪ್ರದೇಶದ ಒಬ್ಬ ಕಾರ್ಮಿಕ ಇದ್ದಾರೆ.

ಗುಜರಾತ್: ಟ್ಯಾಂಕ್ ಸ್ವಚ್ಛತೆ ವೇಳೆ ನಡೆದ ದುರಂತ

ಉಸಿರುಗಟ್ಟಿ ನಾಲ್ವರ ಸಾವು

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಗುಜರಾತ್‌ನ ಸೂರತ್ ಜಿಲ್ಲೆಯಲ್ಲಿ ಮಂಗಳವಾರ ನೀರು ಮರುಬಳಕೆ ಘಟಕದ ಟ್ಯಾಂಕ್ ಸ್ವಚ್ಛಗೊಳಿಸುವಾಗ, ತಂದೆ–ಮಗ ಸೇರಿದಂತೆ ನಾಲ್ವರು ಕಾರ್ಮಿಕರು ಮೃತಪಟ್ಟಿದ್ದಾರೆ.

ಒಬ್ಬರನ್ನೊಬ್ಬರು ರಕ್ಷಿಸಲು ಯತ್ನಿಸುವಾಗ ಟ್ಯಾಂಕ್‌ನೊಳಗೆ ನಾಲ್ವರು ಉಸಿರುಗಟ್ಟಿ ಮೃತಪಟ್ಟಿದ್ದಾರೆ ಎಂದು ಪ್ರಾಥಮಿಕ ಮಾಹಿತಿಯಿಂದ ಗೊತ್ತಾಗಿದ್ದು, ಸಾವಿನ ನಿಖರ ಕಾರಣಕ್ಕಾಗಿ ಮರಣೋತ್ತರ ಪರೀಕ್ಷಾ ವರದಿಗೆ ಕಾಯಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ರಾಜು ಲುಮ್ಸಿಂಗ್ ಬಘಯ್ಯ (33), ಕಮಲೇಶ್ (16), ಶಹಬಾಜ್ ಮೊಹಮ್ಮದ್ ಶಾದರ್ ಶೇಖ್ (19), ದೀಪಕ್ ಉಮಾಶಂಕರ್ ಸಿಂಗ್ (26) ಮೃತರು.

‘ಸಂಜೆ 7.30ರ ವೇಳೆಗೆ ಮೋಟರ್ ಪರಿಶೀಲಿಸಲು ಮತ್ತು ಸ್ವಚ್ಛಗೊಳಿಸಲಿಕ್ಕಾಗಿ ರಾಜು ಟ್ಯಾಂಕ್ ಒಳಗೆ ಇಳಿದರು. ಅತ್ಯಲ್ಪ ಸಮಯದಲ್ಲೇ ಉಸಿರುಗಟ್ಟಿದಂತಾಗಿದ್ದರಿಂದ, ಹೊರಗೆ ಬರಲು ಮೆಟ್ಟಿಲು ಹತ್ತುವಾಗ ಪ್ರಜ್ಞಾಹೀನರಾದರು. ಇದನ್ನು ಗಮನಿಸಿದ ಅವರ ಪುತ್ರ ಕಮಲೇಶ್ ತಂದೆಯ ರಕ್ಷಣೆಗಾಗಿ ಟ್ಯಾಂಕ್ ಪ್ರವೇಶಿಸಿದ. ಕೆಲ ಕ್ಷಣದಲ್ಲೇ ಆತನು ಕುಸಿದು ಬಿದ್ದ. ತಂದೆ–ಮಗನನ್ನು ರಕ್ಷಿಸಲಿಕ್ಕಾಗಿ ಶಹಬಾಜ್ ಹಾಗೂ ದೀಪಕ್ ಟ್ಯಾಂಕ್‌ಗಿಳಿದರು. ಇವರಿಬ್ಬರೂ ಟ್ಯಾಂಕ್‌ನೊಳಗೆ ಮೃತಪಟ್ಟಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಎಫ್‌ಐಆರ್ ದಾಖಲಿಸಲಾಗಿದೆಯೇ ಎಂದು ‘ಪ್ರಜಾವಾಣಿ’ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸೂರತ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಿತೇಶ್ ಜಾಯ್ಸರ್, ಎಫ್‌ಐಆರ್ ದಾಖಲಿಸುವ ಮೊದಲು ಸಾವಿಗೆ ನಿಖರವಾದ ಕಾರಣ ತಿಳಿಯಲಿಕ್ಕಾಗಿ ಮರಣೋತ್ತರ ಪರೀಕ್ಷೆ ಹಾಗೂ ಫ್ಯಾಕ್ಟರಿ ಇನ್‌ಸ್ಪೆಕ್ಟರ್ ನೀಡುವ ವರದಿಗಾಗಿ ಕಾಯುತ್ತಿದ್ದೇವೆ’ ಎಂದರು.

‘ಮೃತರು ಬಾಯ್ಲರ್ ಕಾರ್ಮಿಕರು. ಪಲ್ಸಾನಾ ಪೊಲೀಸ್ ಠಾಣಾ ವ್ಯಾಪ್ತಿಯ ರಾಜಹನ್ಸ್ ಟೆಕ್ಸ್ಟ್‌ದಲ್ಲಿರುವ ಜವಳಿ ಉದ್ಯಾನದಲ್ಲಿನ ಕಿರಣ್ ಇಂಡಸ್ಟ್ರಿಯಲ್ ಪ್ರೈವೇಟ್ ಲಿಮಿಟೆಡ್‌ಗೆ ಸೇರಿದ ಟ್ಯಾಂಕ್ ಸ್ವಚ್ಛಗೊಳಿಸಲು ಗುತ್ತಿಗೆದಾರರು ಕರೆದೊಯ್ದಿದ್ದರು’ ಎಂದು ಮೃತ ರಾಜು ಬಘಯ್ಯ ಅವರ ಸೋದರ ಮಾವ ರಮೇಶ್ ಬೋಧಯ್ಯ ತಿಳಿಸಿದರು.

ಒಳನುಸುಳುವಿಕೆ ಯತ್ನ: ಉಗ್ರನ ಹತ್ಯೆ

ಶ್ರೀನಗರ: ಉತ್ತರ ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯ ಉರಿ ಪ್ರದೇಶದಲ್ಲಿ ಬುಧವಾರ ಗಡಿ ನಿಯಂತ್ರಣ ರೇಖೆಯುದ್ದಕ್ಕೂ ಒಳನುಸುಳುವ ಯತ್ನವನ್ನು ವಿಫಲಗೊಳಿಸಿದ ಸೇನೆ, ಉಗ್ರನೊಬ್ಬನನ್ನು ಹತ್ಯೆ ಮಾಡಿದೆ.

ಪ್ರತಿಕೂಲ ಹವಾಮಾನದ ಲಾಭ ಪಡೆಯುತ್ತಿರುವ ಭಯೋತ್ಪಾದಕರು ಗಡಿಯುದ್ದಕ್ಕೂ ಒಳನುಸುಳಲು ಪ್ರಯತ್ನಿಸುತ್ತಿದ್ದಾರೆ. ಗಡಿ ಭದ್ರತಾ ಪಡೆ ಹಾಗೂ ಉಗ್ರರ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ಉಗ್ರನೊಬ್ಬ ಮೃತಪಟ್ಟಿದ್ದು, ಉಳಿದ ಉಗ್ರರಿಗಾಗಿ ಸೇನೆ ಶೋಧ ನಡೆಸಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರದಲ್ಲಿನ ಗಡಿ ನಿಯಂತ್ರಣ ರೇಖೆಯುದ್ದಕ್ಕೂ ಹಿಂದಿನ ವರ್ಷಗಳಲ್ಲಿ ಉಗ್ರರ ಒಳನುಸುಳುವಿಕೆ ಕ್ಷೀಣಿಸಿತ್ತು. ಆದರೆ, ಈ ವರ್ಷ ಹೆಚ್ಚಾಗಿದ್ದು, ಇದುವರೆಗೂ 42 ಉಗ್ರರು ಸೇನೆಯಿಂದ ಹತ್ಯೆಯಾಗಿದ್ದಾರೆ.

ಚಳಿಗಾಲ ಆರಂಭವಾದ ಬೆನ್ನಲ್ಲೇ ಗಡಿಯುದ್ದಕ್ಕೂ ‘ಒಳನುಸುಳುವಿಕೆಯ ಋತು‘ ಶುರುವಾಗಿದೆ. ಪಾಕಿಸ್ತಾನವು ಈಗ ಕಠಿಣ ತರಬೇತಿ ಪಡೆದ ಭಯೋತ್ಪಾದಕರನ್ನು ಭಾರತದೊಳಕ್ಕೆ ಕಳಿಸುವ ಹೊಸ ತಂತ್ರವನ್ನು ಪ್ರಾರಂಭಿಸಿದೆ ಎಂದು ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಜಾರ್ಖಂಡ್‌ಗೆ ₹50 ಸಾವಿರ ಕೋಟಿ

ಬಿರ್ಸಾ ಮುಂಡಾ ಪ್ರತಿಮೆಗೆ ನಮನ ಸಲ್ಲಿಸಿದ ಪ್ರಧಾನಿ ನರೇಂದ್ರ ಮೋದಿ

ಖೂಂಟಿ (ಜಾರ್ಖಂಡ್) (ಪಿಟಿಐ): ಜಾರ್ಖಂಡ್‌ಗೆ ₹50,000 ಕೋಟಿ ವೆಚ್ಚದ ಯೋಜನೆಗಳ ಸುರಿಮಳೆಯಾಗಿದೆ. ಅಲ್ಲದೆ, ಶೇ 100ರಷ್ಟು ರೈಲು ವಿದ್ಯುದ್ದೀಕರಣವಾಗಿರುವ ರಾಷ್ಟ್ರದ ಮೊದಲ ರಾಜ್ಯವೆನಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಬುಧವಾರ ಹೇಳಿದ್ದಾರೆ.

ಜಾರ್ಖಂಡ್‌ನಲ್ಲಿ ಎರಡು ದಿನಗಳ ಪ್ರವಾಸದಲ್ಲಿರುವ ಮೋದಿ ಅವರು ಬುಡಕಟ್ಟು ಸಮುದಾಯದ ನಾಯಕ ಬಿರ್ಸಾ ಮುಂಡಾ ಅವರ ಜನ್ಮದಿನದಂದು ಅವರಿಗೆ ಗೌರವ ಸಲ್ಲಿಸಿ ಮಾತನಾಡಿದರು. ಬಿರ್ಸಾ ಜನ್ಮದಿನವನ್ನು ಇಲ್ಲಿ ಜನಜಾತಿಯ ಗೌರವ್ ದಿವಸ್ ಮತ್ತು ಜಾರ್ಖಂಡ್‌ನ ಸಂಸ್ಥಾಪನಾ ದಿನವನ್ನಾಗಿಯೂ ಆಚರಿಸಲಾಗುತ್ತದೆ.

ಇದಕ್ಕೂ ಮೊದಲು ಮಂಗಳವಾರ ರಾತ್ರಿ ರಾಂಚಿಯಲ್ಲಿ ಪ್ರಧಾನಿ ಅವರು 10 ಕಿಲೋಮೀಟರ್ ರೋಡ್ ಶೋ ನಡೆಸಿದರು.

ಆದಿವಾಸಿಗಳ ಕೊಡುಗೆಯನ್ನು ಸ್ಮರಿಸಿದ ಪ್ರಧಾನಿ, ಆದಿವಾಸಿಗಳು ದೇಶಕ್ಕೆ ಗಣನೀಯ ಕೊಡುಗೆ ನೀಡಿದ್ದರೂ ಅದಕ್ಕೆ ತಕ್ಕ ಮನ್ನಣೆ ಸಿಕ್ಕಿಲ್ಲ. ಬುಡಕಟ್ಟು ಯೋಧರಿಗೆ ದೇಶವು ಸದಾ ಋಣಿಯಾಗಿರಲಿದೆ ಎಂದರು.

ರಾಷ್ಟ್ರದ ಅಭಿವೃದ್ಧಿಗಾಗಿ ಮಹಿಳೆಯರು, ರೈತರು, ಯುವಕರು ಮತ್ತು ಮಧ್ಯಮ ವರ್ಗ ಮತ್ತು ಬಡವರು - ನಾಲ್ಕು ಆಧಾರ ಸ್ತಂಭಗಳಿದ್ದಂತೆ. ಈ ಆಧಾರ-ಸ್ತಂಭಗಳನ್ನು ಬಲಪಡಿಸುವ ಅಗತ್ಯವಿದೆ ಎಂದು ಒತ್ತಿ ಹೇಳಿದರು.

2014ರಿಂದ ದೇಶದಾದ್ಯಂತ ಸಂಪೂರ್ಣ ಎಲ್‌ಪಿಜಿ ಸೌಲಭ್ಯ ಕಲ್ಪಿಸಲಾಗಿದೆ. ದೇಶದ 70ರಷ್ಟು ಜನಸಂಖ್ಯೆಯು ಜಲ ಜೀವನ್ ಮಿಷನ್ ವ್ಯಾಪ್ತಿಯಲ್ಲಿದೆ. 100 ಪ್ರತಿಶತದಷ್ಟು ಜನರು ರೋಗನಿರೋಧಕ ಶಕ್ತಿ ಹೊಂದಿದ್ದಾರೆ ಎಂದು ಹೇಳಿದರು.

ಖೂಂಟಿ ಫುಟ್‌ಬಾಲ್ ಮೈದಾನದಲ್ಲಿ, ದುರ್ಬಲ ಬುಡಕಟ್ಟು ಗುಂಪುಗಳ ಅಭಿವೃದ್ಧಿಗಾಗಿ ₹24,000 ಕೋಟಿ ಯೋಜನೆಯನ್ನು ಮೋದಿ ಅನಾವರಣಗೊಳಿಸಿದರು. ಜೊತೆಗೆ ರಾಜ್ಯದಲ್ಲಿ ₹7,200 ಕೋಟಿ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಿದರು. ಅಲ್ಲದೆ, ‘ವಿಕಸಿತ್ ಭಾರತ್ ಸಂಕಲ್ಪ ಯಾತ್ರೆ’ಗೂ ಚಾಲನೆ ನೀಡಿದರು.

ಮಿಗ್ ಯುದ್ಧ ವಿಮಾನ ಅನಾವರಣ

ರಾಂಚಿ(ಪಿಟಿಐ): ಕಾರ್ಯಾಚರಣೆ ಸ್ಥಗಿತಗೊಳಿಸಿರುವ, ಮಿಗ್–211 ಯುದ್ಧ ವಿಮಾನವನ್ನು ಇಲ್ಲಿನ ರಾಜಭವನದಲ್ಲಿ ಪ್ರಧಾನಿ ನರೇಂದ್ರ ಮೋದಿ ಬುಧವಾರ ಅನಾವರಣಗೊಳಿಸಿದರು.

ಈ ಯುದ್ಧವಿಮಾನವನ್ನು, ಬಾಂಗ್ಲಾದೇಶ ವಿಮೋಚನೆಗಾಗಿ 1971ರಲ್ಲಿ ನಡೆದ ಯುದ್ಧದಲ್ಲಿ ಬಳಸಲಾಗಿತ್ತು.

ನಿಷ್ಕ್ರಿಯಗೊಳಿಸಿರುವ ಮಿಗ್–211 ಯುದ್ಧ ವಿಮಾನವನ್ನು ಪ್ರಧಾನಿ ಮೋದಿ ರಾಜಭವನ ಆವರಣದಲ್ಲಿ ಅನಾವರಣಗೊಳಿಸಿದ್ದಾರೆ. ಈ ಯುದ್ಧ ವಿಮಾನವನ್ನು ಭಾರತೀಯ ವಾಯುಪಡೆಗೆ 1964ರಲ್ಲಿ ಸೇರ್ಪಡೆ ಮಾಡಲಾಗಿತ್ತು’ ಎಂದು ಜಾರ್ಖಂಡ್ ರಾಜ್ಯಪಾಲ ಸಿ.ಪಿ.ರಾಧಾಕೃಷ್ಣನ್ ಅವರು ಸಾಮಾಜಿಕ ಮಾಧ್ಯಮ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ. ಮುಖ್ಯಮಂತ್ರಿ ಹೇಮಂತ್ ಸೊರೇನ್ ಇದ್ದರು.

ನಮನ: ಇದಕ್ಕೂ ಮುನ್ನ, ಬುಡಕಟ್ಟು ಜನಾಂಗದ ಹೋರಾಟಗಾರ ಬಿರ್ಸಾ ಮುಂಡಾ ಅವರ ಹುಟ್ಟೂರು, ಖೂಂಟಿ ಜಿಲ್ಲೆಯಲ್ಲಿರುವ ಉಲಿಹಾತು ಗ್ರಾಮಕ್ಕೆ ಭೇಟಿ ನೀಡಿದ ಪ್ರಧಾನಿ ನರೇಂದ್ರ ಮೋದಿ, ಮುಂಡಾ ಅವರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದರು.



ಜಾರ್ಖಂಡ್‌ನ ಖೂಂಟಿಯ ಉಲಿಹಾತುನಲ್ಲಿರುವ ಬುಡಕಟ್ಟು ಸಮುದಾಯದ ಆರಾಧ್ಯ ನಾಯಕ ಬಿರ್ಸಾ ಮುಂಡಾ ಪ್ರತಿಮೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಪುಷ್ಪ ನಮನ ಸಲ್ಲಿಸಿದರು –ಪಿಟಿಐ ಚಿತ್ರ

ನಕಲಿ ವೈದ್ಯ ಸೇರಿ ನಾಲ್ವರ ಬಂಧನ

ನವದೆಹಲಿ (ಪಿಟಿಐ): ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದ ವ್ಯಕ್ತಿ ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿ ಒಬ್ಬ ನಕಲಿ ವೈದ್ಯ ಸೇರಿದಂತೆ ನಾಲ್ವರನ್ನು ದೆಹಲಿ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಬಂಧಿತರು ದಕ್ಷಿಣ ದೆಹಲಿಯ ಗ್ರೇಟರ್ ಕೈಲಾಶ್‌ನಲ್ಲಿನ ಕ್ಲಿನಿಕ್‌ವೊಂದರಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಕ್ಲಿನಿಕ್ ಮಾಲೀಕ, ವೈದ್ಯರೆಂದು ಹೇಳಿಕೊಂಡಿದ್ದ ಮಹೇಂದ್ರ ಹಾಗೂ ಇತರ ಇಬ್ಬರು ಸಿಬ್ಬಂದಿಯನ್ನು ಬಂಧಿಸಲಾಗಿದೆ.

ಬಂಧಿತರ ಪೈಕಿ ಮಹೇಂದ್ರ ಎಂಬಾತ ಟೆಕ್ನಿಷಿಯನ್ ಆಗಿದ್ದು, ಫೋರ್ಜರಿ ಮೂಲಕ ಎಂಬಿಬಿಎಸ್ ಪ್ರಮಾಣಪತ್ರ ಪಡೆದುಕೊಂಡಿದ್ದ ಎಂಬ ಆರೋಪ ಇದೆ ಎಂದು ಪೊಲೀಸರು ತಿಳಿಸಿದ್ದಾರೆ. ‘ಆರೋಗ್ಯ ಸಮಸ್ಯೆಯಿಂದಾಗಿ ಆಸ್ಪತ್ರೆಗೆ ದಾಖಲಾಗಿದ್ದ ವ್ಯಕ್ತಿಗೆ ಆರೋಪಿಗಳು ಶಸ್ತ್ರಚಿಕಿತ್ಸೆ ನೆರವೇರಿಸಿದ್ದರು’ ಎಂದು ಮೃತವ್ಯಕ್ತಿಯ ಸಂಬಂಧಿಕರು ಆರೋಪಿಸಿದ್ದರು.

ತಮಿಳುನಾಡು: ಸಿಪಿಎಂ ನಾಯಕ ಶಂಕರಯ್ಯ ಇನ್ನಿಲ್ಲ



ಚೆನ್ನೈ (ಪಿಟಿಐ): ತಮಿಳುನಾಡಿನ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಕಮ್ಯುನಿಸ್ಟ್ ಚಳವಳಿಯ ಹಿರಿಯ ನಾಯಕ ಎನ್. ಶಂಕರಯ್ಯ (101) ಬುಧವಾರ ನಿಧನರಾದರು.

ಸಿಪಿಎಂನ ಹಿರಿಯ ನಾಯಕರಾದ ಅವರಿಗೆ ಇಬ್ಬರು ಪುತ್ರರು ಹಾಗೂ ಪುತ್ರಿ ಇದ್ದಾರೆ. ಅನಾರೋಗ್ಯದಿಂದ ಬಳಲುತ್ತಿದ್ದ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿಯೇ ಅವರು ನಿಧನರಾಗಿದ್ದಾರೆ.

ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದ ಅವರು, ಆಲ್ ಇಂಡಿಯಾ ಕಿಸಾನ್ ಸಭಾದ ಅಧ್ಯಕ್ಷ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು. 1995ರಿಂದ 2002ರ ವರೆಗೆ ತಮಿಳುನಾಡಿನ ಸಿಪಿಎಂ ರಾಜ್ಯ ಘಟಕದ ಅಧ್ಯಕ್ಷರಾಗಿದ್ದರು. ಪಕ್ಷದ ರಾಜ್ಯ ರೈತ ಘಟಕದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.

ಅವರು ಜನಿಸಿದ್ದು 1922ರ ಜುಲೈ 15ರಂದು. ಹುಟ್ಟೂರು ಕೋವಿಲ್‌ಪಟ್ಟಿ. ಮದುರೈನ ಅಮೆರಿಕನ್ ಕಾಲೇಜಿನಲ್ಲಿ ಪದವಿ ಶಿಕ್ಷಣ ಪಡೆಯುವಾಗಲೇ ಬ್ರಿಟಿಷ್ ಆಡಳಿತದ ವಿರುದ್ಧ ವಿದ್ಯಾರ್ಥಿಗಳನ್ನು ಸಂಘಟಿಸಿದ್ದರು. ಸ್ವಾತಂತ್ರ್ಯ ಹೋರಾಟದ ವೇಳೆ ಐದು ವರ್ಷ ಕಾಲ ಅವರು ಜೈಲುವಾಸ ಅನುಭವಿಸಿದ್ದರು. ಸ್ವಾತಂತ್ರ್ಯ ನಂತರವೂ ಜನಸಾಮಾನ್ಯರ ಸಮಸ್ಯೆಗಳ ಪರವಾದ ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದ ಅವರು, ನಾಲ್ಕು ವರ್ಷ ಸಜೆ ಅನುಭವಿಸಿದ್ದರು.

ಗೌರವ ಡಾಕ್ಟರೇಟ್ ಸಿಗಲಿಲ್ಲ: ಮದುರೈ ಕಾಮರಾಜ್ ವಿಶ್ವವಿದ್ಯಾಲಯದಿಂದ ಶಂಕರಯ್ಯ ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಲು ಸರ್ಕಾರ ಘೋಷಿಸಿತ್ತು. ಆದರೆ, ತಮಿಳುನಾಡಿನ ಸ್ವಾತಂತ್ರ್ಯದ ಹೋರಾಟದ ಬಗ್ಗೆ ಅರಿವಿಲ್ಲದ ಕೆಲವು ಸಂಕುಚಿತ ವ್ಯಕ್ತಿಗಳ ಸಂಚಿನಿಂದಾಗಿ ಆ ಗೌರವದಿಂದ ಅವರು ವಂಚಿತರಾಗಬೇಕಾಯಿತು ಎಂದು ರಾಜ್ಯಪಾಲ ಆರ್.ಎನ್. ರವಿ ಅವರ ಹೆಸರು ಉಲ್ಲೇಖಿಸದೆ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಟೀಕಿಸಿದ್ದಾರೆ.

ಚೀನಾ ಯುದ್ಧ ನೌಕೆ ಮೇಲೆ ನಿಗಾ

ನವದೆಹಲಿ(ಪಿಟಿಐ): ಅರಬ್ಬಿ ಸಮುದ್ರದಲ್ಲಿ ಪಾಕಿಸ್ತಾನ ಮತ್ತು ಚೀನಾ ನಡೆಸುತ್ತಿರುವ ಜಂಟಿ ಸಮರಾಭ್ಯಾಸದಲ್ಲಿ ಭಾಗಿಯಾಗಿರುವ ಚೀನಾ ಯುದ್ಧ ನೌಕೆಗಳು ಹಾಗೂ ಜಲಾಂತರ್ಗಾಮಿಗಳ ಚಲನವಲನಗಳ ಮೇಲೆ ಭಾರತೀಯ ನೌಕಾಪಡೆ ಕಣ್ಗಾವಲಿರಿಸಿದೆ ಎಂದು ಮೂಲಗಳು ಬುಧವಾರ ಹೇಳಿವೆ.

ಚೀನಾ ಯುದ್ಧನೌಕೆಗಳು ಮಲಕ್ಕಾ ಜಲಸಂಧಿ ಮೂಲಕ ಅರಬ್ಬಿ ಸಮುದ್ರವನ್ನು ಪ್ರವೇಶಿಸಿದ ಬೆನ್ನಲ್ಲೇ, ಅವುಗಳ ಮೇಲೆ ನೌಕಾಪಡೆ ನಿಗಾ ಇರಿಸಿದೆ ಎಂದು ತಿಳಿಸಿವೆ.

ಯುದ್ಧನೌಕೆಗಳು, ಜಲಾಂತರ್ಗಾಮಿಗಳು ಸೇರಿದಂತೆ ಕಡಲಗಡಿ ರಕ್ಷಣೆಯಲ್ಲಿ ಬಳಸುವ ಹಲವು ರಕ್ಷಣಾ ವ್ಯವಸ್ಥೆಗಳನ್ನು ಚೀನಾದ ಪೀಪಲ್ಸ್ ಲಿಬರೇಷನ್ ಆರ್ಮಿ ಈ ಜಂಟಿ ತಾಲೀಮಿನಲ್ಲಿ ನಿಯೋಜನೆ ಮಾಡಿದೆ. ‘ಕಡಲಿನ ಭದ್ರತೆಗೆ ಒದಗಿದ ಬೆದರಿಕೆಗಳಿಗೆ ಜಂಟಿ ಪ್ರತಿಕ್ರಿಯೆ’ ಹೆಸರಿನಲ್ಲಿ ಇದೇ ಮೊದಲ ಬಾರಿಗೆ ಚೀನಾ ಮತ್ತು ಪಾಕಿಸ್ತಾನ ನೌಕಾಪಡೆಗಳು ಸೋಮವಾರದಿಂದ ಆರಂಭಿಸಿರುವ ಈ ಜಂಟಿ ತಾಲೀಮು ನ.17ರ ವರೆಗೆ ನಡೆಯಲಿದೆ.



ಗಾಜಾ ನಗರದಲ್ಲಿ ಇರುವ ಅಲ್ ಶಿಫಾ ಆಸ್ಪತ್ರೆ ಸುತ್ತುವರಿದಿರುವ ತನ್ನ ಯೋಧರು ನಡೆಸುತ್ತಿರುವ ಕಾರ್ಯಾಚರಣೆಯ ಚಿತ್ರವನ್ನು ಇಸ್ರೇಲ್ ಸೇನೆ ಬುಧವಾರ ಬಿಡುಗಡೆ ಮಾಡಿದೆ –ಎಎಫ್‌ಪಿ ಚಿತ್ರ

ಆಸ್ಪತ್ರೆಗೆ ನುಗ್ಗಿದ ಇಸ್ರೇಲ್ ಸೇನೆ

ಒಂದನೇ ಪುಟದಿಂದ

ಯೋಧರು ತುರ್ತು ಚಿಕಿತ್ಸೆ, ಶಸ್ತ್ರ ಚಿಕಿತ್ಸೆ ಮತ್ತು ತೀವ್ರ ನಿಗಾ ಘಟಕದೊಳಗೆ ಪ್ರವೇಶಿಸಿ ಶೋಧ ನಡೆಸಿದ್ದಾರೆ’ ಎಂದು ಗಾಜಾ ಆಸ್ಪತ್ರೆಗಳ ನಿರ್ದೇಶಕ ಮೊಹಮ್ಮದ್ ಝಾಕೌತ್ ಖಚಿತಪಡಿಸಿದ್ದಾರೆ.

ಆಸ್ಪತ್ರೆಯ ಮುಂಭಾಗ ಹಾಗೂ ಅದರ ಸುತ್ತಮುತ್ತ ಕಳೆದ ಒಂದು ವಾರದಿಂದ ಕದನ ನಡೆಯುತ್ತಿತ್ತು. ಈ ನಡುವೆಯೇ ಅಮೆರಿಕ ಸೇರಿದಂತೆ ಹಲವು ದೇಶಗಳು ಅಲ್ ಶಿಫಾದ ಮೇಲೆ ದಾಳಿ ನಡೆಸದಂತೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರಿಗೆ ಎಚ್ಚರಿಕೆ ನೀಡಿದ್ದವು. ಹಮಾಸ್ ನಿರ್ನಾಮಕ್ಕೆ ಈ ಕಾರ್ಯಾಚರಣೆ ನಡೆಸುವುದು ಅನಿವಾರ್ಯವಾಗಿದೆ ಎಂದು ಇಸ್ರೇಲ್ ಸಮರ್ಥಿಸಿಕೊಂಡಿದೆ.

ಈ ದಾಳಿಯನ್ನು ಜೋರ್ಡಾನ್ ಹಾಗೂ ಪ್ಯಾಲೆಸ್ಟೀನ್ ಆಡಳಿತ ಖಂಡಿಸಿದ್ದು, ಇದು ಅಂತರರಾಷ್ಟ್ರೀಯ ಕಾನೂನಿನ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ದೂರಿವೆ.

ಇಸ್ರೇಲ್ ವಾದವೇನು?: ‘ಹಮಾಸ್ ತನ್ನ ರಕ್ಷಣೆಗಾಗಿ ಆಸ್ಪತ್ರೆಯನ್ನು ಗುರಾಣಿಯಾಗಿ ಬಳಸಿಕೊಂಡಿದೆ. ಇದರ ಕೆಳಭಾಗದಲ್ಲಿ ಉಗ್ರ ಚಟುವಟಿಕೆಯ ನೆಲೆ ಸ್ಥಾಪಿಸಿಕೊಂಡಿದೆ’ ಎಂದು ಇಸ್ರೇಲ್ ದೂರಿದೆ. ಇದನ್ನು ಹಮಾಸ್ ಹಾಗೂ ಆಸ್ಪತ್ರೆಯ ಸಿಬ್ಬಂದಿ ನಿರಾಕರಿಸಿದ್ದಾರೆ.

‘ಬಂಡುಕೋರರನ್ನು ಗುರಿಯಾಗಿಸಿಕೊಂಡು ಆಸ್ಪತ್ರೆಯ ನಿರ್ದಿಷ್ಟ ಪ್ರದೇಶದಲ್ಲಷ್ಟೇ ಕಾರ್ಯಾಚರಣೆ ನಡೆಸಲಾಗಿದೆ. ರೋಗಿಗಳು ಮತ್ತು ವೈದ್ಯಕೀಯ ಸಿಬ್ಬಂದಿ ಇರುವ ಸ್ಥಳದಲ್ಲಿ ಕಾರ್ಯಾಚರಣೆ ನಡೆಸಿಲ್ಲ’ ಎಂದು ಇಸ್ರೇಲ್ ಸ್ಪಷ್ಟಪಡಿಸಿದೆ.

‘ಪುರುಷರು, ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ 240 ಜನರನ್ನು ಹಮಾಸ್ ಒತ್ತೆಯಾಳುಗಳನ್ನಾಗಿ ಇರಿಸಿಕೊಂಡಿದೆ. ಅವರ ರಕ್ಷಣೆಗಾಗಿ ಆಸ್ಪತ್ರೆಯಲ್ಲಿ ಈ ಕಾರ್ಯಾಚರಣೆ ನಡೆಸಲಾಗಿದೆ’ ಎಂದು ಹೇಳಿದೆ.

ಇಲ್ಲಿಯವರೆಗೆ ಮೃತಪಟ್ಟವರ ವಿವರ

11,320 ಒಟ್ಟು ಮೃತಪಟ್ಟಿರುವ ಪ್ಯಾಲೆಸ್ಟೀನ್ ನಾಗರಿಕರು

4,650 ಹದಿನೆಂಟು ವರ್ಷಕ್ಕಿಂತ ಒಳಗಿರುವ ಮಕ್ಕಳು

202 ವೈದ್ಯಕೀಯ ಸಿಬ್ಬಂದಿ

3,600 ನಾಪತ್ತೆಯಾದವರು

> **ಗಾಜಾಪಟ್ಟಿಯ ಹೊರಭಾಗ, ಅಲ್ ಶಿಫಾ ಆಸ್ಪತ್ರೆಯೊಳಗೆ ಇಸ್ರೇಲ್ ಸೇನೆ ಪ್ರವೇಶಿಸಲು ಸಾಧ್ಯವಿಲ್ಲ ಎಂದು ಹಮಾಸ್ ಹೇಳಿತ್ತು. ಗಾಜಾದಲ್ಲಿ ನಾವು ತಲುಪದ ಸ್ಥಳ ಉಳಿದಿಲ್ಲ**
>
> **ಬೆಂಜಮಿನ್ ನೆತನ್ಯಾಹು,** ಪ್ರಧಾನಿ, ಇಸ್ರೇಲ್

ಜೆಇಎಂ ಮುಖ್ಯಸ್ಥನ ಆಪ್ತ ಇಕ್ಬಾಲ್ ವಿರುದ್ಧ ಚಾರ್ಜ್ ಶೀಟ್

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರದಲ್ಲಿ ಭದ್ರತಾ ಪಡೆಗಳ ಮೇಲೆ ದಾಳಿ ನಡೆಸಿ ಕೋಮು ಸಾಮರಸ್ಯ ಕದಡಲು ಸಂಚು ರೂಪಿಸಿದ್ದ ಪ್ರಕರಣದಲ್ಲಿ ಜೈಶ್-ಎ-ಮೊಹಮ್ಮದ್ (ಜೆಇಎಂ) ಮುಖ್ಯಸ್ಥ ಮೌಲಾನಾ ಮಸೂದ್ ಅಜರ್ ಅಲ್ವಿಯ ಬಲಗೈ ಬಂಟ ದಿಲಾವರ್ ಇಕ್ಬಾಲ್ ಮತ್ತು ಕುಪ್ವಾರ ನಿವಾಸಿ ಮೊಹಮ್ಮದ್ ಉಬೈದ್ ಮಲಿಕ್ ವಿರುದ್ಧ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.


ಪಾಕ್ ಆಕ್ರಮಿತ ಕಾಶ್ಮೀರದ ಅಬ್ಬಾಸ್‌ಪುರದ ನಿವಾಸಿ ಮೊಹಮ್ಮದ್ ದಿಲಾವರ್ ಇಕ್ಬಾಲ್, ಮಾಜ್ ಖಾನ್ ಕಾಶ್ಮೀರಿ ಮತ್ತು ಆಜಾದ್ ಕಾಶ್ಮೀರಿ ಸೇರಿ ಹಲವು ಹೆಸರುಗಳೊಂದಿಗೆ ಗುರುತಿಸಿಕೊಂಡಿದ್ದಾನೆ. ಜಮ್ಮು ಮತ್ತು ಕಾಶ್ಮೀರದ ಕೇಂದ್ರಾಡಳಿತ ಪ್ರದೇಶದ ಯುವಕರನ್ನು ಭಯೋತ್ಪಾದಕ ಕೃತ್ಯಗಳಿಗೆ ಸೆಳೆಯಲು ಪ್ರಚೋದನಾಕಾರಿ ಭಾಷಣಗಳನ್ನು ಮಾಡಿದ್ದಾನೆ ಎಂದು ಎನ್‌ಐಎ ತಿಳಿಸಿದೆ.

ಜಮ್ಮುವಿನ ವಿಶೇಷ ನ್ಯಾಯಾಲಯದಲ್ಲಿ ಸಲ್ಲಿಸಲಾದ ಚಾರ್ಜ್ ಶೀಟ್‌ನಲ್ಲಿ, ದಿಲಾವರ್ ಇಕ್ಬಾಲ್ ಮಸೂದ್ ಅಜರ್‌ನ ನಿಕಟ ಸಹಚರ ಉಬೈದ್ ಮಲಿಕ್‌ನನ್ನು ಜೆಇಎಂ ಭಯೋತ್ಪಾದಕ ಸಂಘಟನೆಗೆ ಸೇರಲು ಪ್ರೇರೇಪಿಸಿದ್ದ. ಅಲ್ಲದೆ, ಕಾಶ್ಮೀರ ಕಣಿವೆಯಲ್ಲಿ ನಡೆದ ಎನ್‌ಕೌಂಟರ್‌ಗಳಿಗೆ ಸಂಬಂಧಿಸಿದ ವಿಡಿಯೊಗಳನ್ನು ಬಳಸಿಕೊಂಡು ಪ್ರಚೋದಿಸುತ್ತಿದ್ದ ಎಂದು ಎನ್‌ಐಎ ಹೇಳಿದೆ.



ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



❦ ಸುಭಾಷಿತ ❦

ಒಬ್ಬ ವಿವೇಕಿ ಮಾತನಾಡುತ್ತಾನೆ, ಏಕೆಂದರೆ ಅವನಿಗೆ ಏನೋ ಹೇಳಬೇಕಿರುತ್ತದೆ; ಒಬ್ಬ ಮೂರ್ಖ ಮಾತನಾಡುತ್ತಾನೆ, ಏಕೆಂದರೆ ಅವನಿಗೆ ಏನಾದರೂ ಹೇಳಬೇಕಿರುತ್ತದೆ. -ಪ್ಲೇಟೊ

ಚಾರ್‌ಧಾಮ್ ಯೋಜನೆಯ ಸುರಂಗ ಕುಸಿತ ಅಸಮತೋಲನಕ್ಕೆ ಉತ್ತರ ಹೇಳುತ್ತಿದೆ ಪ್ರಕೃತಿ

ಹಿಮಾಲಯದ ತಪ್ಪಲಿನಲ್ಲಿ ದುರ್ಘಟನೆಗಳು ಮತ್ತೆ ಮತ್ತೆ ಸಂಭವಿಸುತ್ತಿವೆ. ಇಂತಹ ಪ್ರಕರಣಗಳು ಅಲ್ಲಿ ಕಟ್ಟಡ ಹಾಗೂ ಇತರ ನಿರ್ಮಾಣ ಚಟುವಟಿಕೆಗಳ ಮೇಲೆ ನಿಯಂತ್ರಣ ಹೇರಬೇಕಾದ ಅಗತ್ಯ ಇದೆ ಎಂಬುದನ್ನು ಹೇಳುತ್ತಿವೆ. ಉತ್ತರಾಖಂಡದಲ್ಲಿ ಚಾರ್‌ಧಾಮ್ ಹೆದ್ದಾರಿಯ ಭಾಗವಾದ ಸುರಂಗದ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದ 40 ಜನ ಕಾರ್ಮಿಕರು ಭಾನುವಾರದಿಂದ ಆ ಸುರಂಗದಲ್ಲಿಯೇ ಸಿಲುಕಿಕೊಂಡಿದ್ದಾರೆ. ಅವರ ರಕ್ಷಣೆಗಾಗಿ ಕಾರ್ಯಾಚರಣೆ ನಡೆದಿದೆ. ಅವರನ್ನು ಸುರಕ್ಷಿತವಾಗಿ ಕರೆ ತರಲಾಗುವುದು ಎಂದು ಸಂಬಂಧಪಟ್ಟ ಅಧಿಕಾರಿಗಳು ಭರವಸೆ ನೀಡಿದ್ದಾರೆ. ಉತ್ತರಕಾಶಿ ಪ್ರದೇಶದ ಬ್ರಹ್ಮಖಾಲ್ ಮತ್ತು ಯಮುನೋತ್ರಿ ನಡುವಿನ ಪ್ರದೇಶದಲ್ಲಿನ ಈ ಸುರಂಗ ಕುಸಿದು ಕಾರ್ಮಿಕರು ಅದರ ಒಳಗೆ ಸಿಲುಕಿದ್ದಾರೆ. ಈ ಯೋಜನೆಯ ಬಗ್ಗೆ ವಿವಾದಗಳು ಇವೆ ಎಂಬುದು ಇಲ್ಲಿ ಗಮನಾರ್ಹ. ಈ ಪ್ರದೇಶದ ನಾಲ್ಕು ಯಾತ್ರಾಸ್ಥಳಗಳನ್ನು ಅಗಲವಾದ ರಸ್ತೆಗಳೊಂದಿಗೆ ಸಂಪರ್ಕಿಸುವ ಉದ್ದೇಶದ ಯೋಜನೆಯು ತೀವ್ರ ಟೀಕೆಗೆ ಗುರಿಯಾಗಿದೆ. ಇದು ಪರಿಸರದ ದೃಷ್ಟಿಯಿಂದ ಅಪಾಯಕಾರಿ ಎಂದು ತಜ್ಞರು ಹೇಳಿದ್ದಾರೆ. ಆದರೆ ಸರ್ಕಾರವು ಹಲವು ನಿಯಮಗಳನ್ನು ಉಲ್ಲಂಘಿಸಿ, ಪರಿಸರದ ಮೇಲೆ ಆಗುವ ಪರಿಣಾಮಗಳ ಬಗ್ಗೆ ಸರಿಯಾದ ಅಧ್ಯಯನ ನಡೆಸದೆ ಈ ಯೋಜನೆಯ ಅನುಷ್ಠಾನವನ್ನು ಮುಂದುವರಿಸಿದೆ. ಯೋಜನೆಯ ಜಾರಿಗಾಗಿ ಅಂದಾಜು 690 ಹೆಕ್ಟೇರ್ ಅರಣ್ಯ ನಾಶವಾಗುತ್ತದೆ, 55 ಸಾವಿರ ಮರಗಳನ್ನು ಕಡಿಯಬೇಕಾಗುತ್ತದೆ, ಅಂದಾಜು 2 ಕೋಟಿ ಕ್ಯೂಬಿಕ್ ಮೀಟರ್‌ನಷ್ಟು ಮಣ್ಣನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಎತ್ತಿಹಾಕಬೇಕಾಗುತ್ತದೆ. ಇಳಿಜಾರು ಪ್ರದೇಶದಲ್ಲಿ ಮಣ್ಣನ್ನು ತೆಗೆಯುವುದು, ಸುರಂಗ ನಿರ್ಮಾಣ, ತ್ಯಾಜ್ಯದ ಸೃಷ್ಟಿಯು ಈ ಸೂಕ್ಷ್ಮ ಪ್ರದೇಶದ ಮೇಲೆ ಅಗಾಧ ಒತ್ತಡವನ್ನು ಸೃಷ್ಟಿಸುತ್ತವೆ.



ಪರಿಸರ ಹಿತವನ್ನು ಮನಸ್ಸಿನಲ್ಲಿ ಇರಿಸಿಕೊಳ್ಳದೇ ಹೋದರೆ ಇಡೀ ಹಿಮಾಲಯ ಪ್ರದೇಶ ಹಾಗೂ ಇಡೀ ದೇಶ ತೊಂದರೆಗೆ ಸಿಲುಕುತ್ತವೆ

ಹಿಮಾಲಯ ಪ್ರದೇಶದ ಎತ್ತರದ ಸ್ಥಳಗಳು ಹಾಗೂ ತಪ್ಪಲಿನ ಜಾಗಗಳು ಮಣ್ಣು ಕುಸಿಯುವ ಅಪಾಯವನ್ನು ಎದುರಿಸುತ್ತಿವೆ. ಹಠಾತ್ ಪ್ರವಾಹ ಮತ್ತು ಭೂಕಂಪನದ ಅಪಾಯಗಳೂ ಇಲ್ಲಿ ಹೆಚ್ಚು. ಇಂತಹ ಘಟನೆಗಳು ಈ ಪ್ರದೇಶಗಳಲ್ಲಿ ಈಚಿನ ತಿಂಗಳುಗಳಲ್ಲಿ ಆಗುತ್ತಲೇ ಇವೆ. ಇದರಿಂದಾಗಿ ದುರ್ಘಟನೆಗಳು ಸಹ ಹೆಚ್ಚುತ್ತಿವೆ. ಜೋಶಿಮಠ ಪ್ರದೇಶದ ಹಲವೆಡೆ ಕಳೆದ ವರ್ಷ ಬಿರುಕುಗಳು ಮೂಡಿದ್ದವು, ಕೆಲವು ಪ್ರದೇಶಗಳು ಕುಸಿದಿದ್ದವು. ಅಲ್ಲಿ ನೆಲ ಕುಸಿಯುವುದು ಮುಂದುವರಿದಿದೆ. ತೀರಾ ಈಚೆಗೆ ಹಿಮಾಚಲ ಪ್ರದೇಶದಲ್ಲಿ ಪ್ರವಾಹ ಉಂಟಾಗಿತ್ತು. ಒಂದೆರಡು ತಿಂಗಳ ಹಿಂದೆ ಸಿಕ್ಕಿಂನಲ್ಲಿ ನಡೆದ ನೀರ್ಗಲ್ಲು ಸ್ಫೋಟದ ಪರಿಣಾಮವಾಗಿ ತೀಸ್ತಾ ನದಿಯಲ್ಲಿ ಭಾರಿ ಪ್ರವಾಹ ಉಂಟಾಗಿತ್ತು. ಇದರಿಂದಾಗಿ ಜನ ಪ್ರಾಣ ಕಳೆದುಕೊಂಡರು, ಆಸ್ತಿ-ಪಾಸ್ತಿ ನಷ್ಟ ಆಯಿತು. ಚುಂಗ್‌ಥಾಂಗ್ ಅಣೆಕಟ್ಟಿನ ಕೆಲವು ಭಾಗಗಳು ಪ್ರವಾಹದಲ್ಲಿ ಕೊಚ್ಚಿಹೋಗಿದ್ದವು. ಅಸ್ಸಾಂ-ಅರುಣಾಚಲ ಪ್ರದೇಶ ಗಡಿಯ ಸುಬನ್‌ಸಿರಿ ಕೆಳದಂಡೆ ವಿದ್ಯುತ್ ಯೋಜನೆ ಪ್ರದೇಶದಲ್ಲಿ ಈಚೆಗೆ ಆದ ಭೂಕುಸಿತದ ಪರಿಣಾಮವಾಗಿ ನಿರ್ಮಾಣ ಕಾರ್ಯಗಳಿಗೆ ತೊಂದರೆ ಉಂಟಾಗಿತ್ತು, ಇಂತಹ ಯೋಜನೆಗಳ ಕುರಿತು ಇರುವ ಕಳವಳವನ್ನು ಇನ್ನಷ್ಟು ಹೆಚ್ಚು ಮಾಡಿತ್ತು. ನೀರಿನ ಹರಿವನ್ನು ಈ ಸ್ಥಳದಿಂದ ಬೇರೆಡೆಗೆ ತಿರುಗಿಸಲು ನಿರ್ಮಿಸಿದ್ದ ಸುರಂಗಕ್ಕೆ ಹಾನಿಯಾಗಿದೆ. ಹಿಮಾಲಯದ ಪರ್ವತ ಪ್ರದೇಶದಲ್ಲಿ ಪ್ರಕೃತಿಗೆ ತನ್ನ ಮೇಲಿನ ಒತ್ತಡವನ್ನು ತಾಳಿಕೊಳ್ಳಲು ಆಗುತ್ತಿಲ್ಲ. ಅದನ್ನು ಪ್ರಕೃತಿಯು ಭೂಕುಸಿತ, ಹಠಾತ್ ಪ್ರವಾಹ ಹಾಗೂ ಇತರ ವಿಕೋಪಗಳ ರೂಪದಲ್ಲಿ ತೋರಿಸುತ್ತಿದ್ದಾಳೆ. ಮನುಷ್ಯ ನಡೆಸಿದ ದಾಳಿಯ ಕಾರಣದಿಂದಾಗಿ ಉಂಟಾಗಿರುವ ಅಸಮತೋಲನವನ್ನು ಸರಿಪಡಿಸಲು ಹಿಮಾಲಯ ಪರ್ವತ ಶ್ರೇಣಿಗಳು ಪ್ರಯತ್ನ ನಡೆಸಿವೆ. ಈ ಸಂಘರ್ಷದಲ್ಲಿ ಜಯ ಗಳಿಸುವುದು ಯಾರು ಎಂಬ ಬಗ್ಗೆ ಅನುಮಾನ ಬೇಕಿಲ್ಲ. ಆದರೆ ಸೋಲುವುದು ಖಚಿತ ಎಂಬುದು ಗೊತ್ತಿದ್ದೂ ಮನುಷ್ಯನು ಪ್ರಕೃತಿಯ ಮೇಲಿನ ತನ್ನ ಪ್ರಹಾರವನ್ನು ಮುಂದುವರಿಸಿದ್ದಾನೆ.

ಮೂಲಸೌಕರ್ಯ ನಿರ್ಮಾಣ ಹಾಗೂ ಅಭಿವೃದ್ಧಿ ಕೆಲಸಗಳು ದೇಶದ ಎಲ್ಲ ಕಡೆಗಳಲ್ಲಿಯೂ ಆಗಬೇಕು ಎಂಬುದು ನಿಜ. ಆದರೆ, ಅಂತಹ ಚಟುವಟಿಕೆಗಳಿಂದ ಒಳಿತಿಗಿಂತ ಹೆಚ್ಚಾಗಿ ಕೆಡುಕು ಸಂಭವಿಸಿದಾಗ, ಮಾಡಿದ ಕೆಲಸದ ಕುರಿತು ಪುನರ್ ಅವಲೋಕಿಸುವ ಹಾಗೂ ತಪ್ಪು ತಿದ್ದಿಕೊಳ್ಳುವ ಧೋರಣೆಯು ಮನುಷ್ಯನಿಗೆ ಇರಬೇಕು. ಬೇರೆ ಬೇರೆ ಪ್ರದೇಶಗಳಿಗೆ ಬೇರೆ ಬೇರೆ ಅಭಿವೃದ್ಧಿ ಸೂತ್ರಗಳ ಅಗತ್ಯ ಇದೆ. ಚಾರ್‌ಧಾಮ್ ಯೋಜನೆಯ ಹಿಂದಿನ ರಾಜಕೀಯ ಲೆಕ್ಕಾಚಾರಗಳು ಬಹಳ ದೊಡ್ಡವೇ ಆಗಿವೆ. ಇಲ್ಲಿ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವುದು ಒಂದು ಆದ್ಯತೆ ಮಾತ್ರ. ಪರಿಸರ ಹಿತವನ್ನು ಮನಸ್ಸಿನಲ್ಲಿ ಇರಿಸಿಕೊಳ್ಳದೇ ಹೋದರೆ ಇಡೀ ಹಿಮಾಲಯ ಪ್ರದೇಶ ಹಾಗೂ ಇಡೀ ದೇಶ ತೊಂದರೆಗೆ ಸಿಲುಕುತ್ತವೆ.

ದಿನದ ಟ್ವೀಟ್



ಸುರಕ್ಷತೆ ಒದಗಿಸಿ

ನಾಯಿ ಕಡಿತಕ್ಕೆ ಪರಿಹಾರ ನೀಡುವಂತೆ ಪಂಜಾಬ್ ಹರಿಯಾಣ ಹೈಕೋರ್ಟ್ ಆದೇಶಿಸಿದೆ. ನಗರಪಾಲಿಕೆ ಮತ್ತು ರಾಜ್ಯ ಸರ್ಕಾರವನ್ನು ಎಚ್ಚರಿಸಲು ಇರುವ ಏಕೈಕ ಮಾರ್ಗ ಬಹುಶಃ ಇದೇ ಇರಬಹುದು. ಲೋಧಿ ಗಾರ್ಡನ್‌ನಲ್ಲಿ ಜಾಗಿಂಗ್ ಮಾಡುವಾಗ ನನ್ನ ಸ್ನೇಹಿತನೊಬ್ಬ ಬೀದಿನಾಯಿಯಿಂದ ಕಚ್ಚಿಸಿಕೊಂಡ. ರಸ್ತೆಗಳಲ್ಲಿ ಕೂಡ ನೀವೀಗ ಸುರಕ್ಷಿತವಾಗಿ ನಡೆದುಕೊಂಡು ಹೋಗಲು ಸಾಧ್ಯವಿಲ್ಲ. ನಾಯಿ ಮತ್ತು ಕೋತಿ ಕಚ್ಚುವ ಪ್ರಕರಣಗಳು ಹೆಚ್ಚುತ್ತಿವೆ.

ಯಶೋವರ್ಧನ್ ಝಾ ಆಜಾದ್, ಉದ್ಯಮಿ, ನಿವೃತ್ತ ಐಪಿಎಸ್ ಅಧಿಕಾರಿ

ಕಿಡಿನುಡಿ



ಆದಿವಾಸಿ ಸ್ವಾತಂತ್ರ್ಯ ಹೋರಾಟಗಾರ ಬಿರ್ಸಾ ಮುಂಡಾ ಅವರ ಜನ್ಮದಿನಾಚರಣೆಯ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಮಧ್ಯಪ್ರದೇಶದಲ್ಲಿ ₹ 24,000 ಕೋಟಿ ಮೊತ್ತದ ಯೋಜನೆಯನ್ನು ಆದಿವಾಸಿಗಳ ಕಲ್ಯಾಣಕ್ಕಾಗಿ ನ. 15ರಂದು ಅನಾವರಣಗೊಳಿಸಿದ್ದಾರೆ. ಹಿಂದೊಮ್ಮೆ ನಮ್ಮಲ್ಲಿ ಮಾದರಿ ನೀತಿಸಂಹಿತೆ ಇತ್ತು ಮತ್ತು ಅದನ್ನು ಚುನಾವಣಾ ಆಯೋಗ ಜಾರಿಗೊಳಿಸುತ್ತಿತ್ತು. ಈಗ ಅದಿಲ್ಲ. ದೇವರೇ! ಟಿ.ಎನ್.ಶೇಷನ್ ನಮ್ಮೊಡನಿಲ್ಲ! ಹಿಂದೆಂದಿಗಿಂತಲೂ ಅವರ ಅಗತ್ಯ ಈಗ ಇದೆ...

ರಾಜೇಂದ್ರ ಕುಂಭಟ್

25 ವರ್ಷಗಳ ಹಿಂದೆ — ಸೋಮವಾರ, 16-11-1998

• ಅಮೆರಿಕ ವ್ಯಾಪಾರ ನಿಷೇಧ ಕ್ರಮಕ್ಕೆ ಭಾರತದ ಖಂಡನೆ

ನವದೆಹಲಿ, ನ. 15 (ಯುಎನ್‌ಐ)- ಅಮೆರಿಕವು ಭಾರತದ 40 ಆಯ್ದ ಸಂಸ್ಥೆಗಳು ಹಾಗೂ ಅವುಗಳ 200 ಅಂಗಸಂಸ್ಥೆಗಳ ಮೇಲೆ ನಿಷೇಧ ಹೇರಿರುವುದು ವಿಶ್ವ ವ್ಯಾಪಾರ ಸಂಸ್ಥೆಯ ಒಪ್ಪಂದಗಳಿಗೆ ವಿರುದ್ಧವಾಗಿದ್ದು ಈ ವಿಷಯವನ್ನು ಭಾರತವು ವಿಶ್ವ ವ್ಯಾಪಾರ ಸಂಸ್ಥೆಯ ಮುಂದೆ ಹಾಗೂ ಅಮೆರಿಕದ ಸರ್ಕಾರದೊಡನೆ ಎತ್ತುವುದು ಎಂದು ವಾಣಿಜ್ಯ ಸಚಿವ ರಾಮಕೃಷ್ಣ ಹೆಗಡೆ ಅವರು ಹೇಳಿದ್ದಾರೆ.

ಈ ಸಂಸ್ಥೆಗಳ ಮೇಲೆ ಅಮೆರಿಕದ ನಿಷೇಧದ ಪರಿಣಾಮ ಅತ್ಯಲ್ಪ. ಆದರೂ ಭಾರತದ ಕಂಪನಿಗಳು ಅಮೆರಿಕದಿಂದ ಸರಕು ತರಿಸಿಕೊಳ್ಳುವುದಕ್ಕೆ ಅಮೆರಿಕದ ಈ ಕ್ರಮ ಅಡ್ಡಿಯಾದರೆ ಅದೇ ಸರಕುಗಳನ್ನು ವಿಶ್ವದ ಬೇರೆ ಭಾಗಗಳಿಂದ ತರಿಸಿಕೊಳ್ಳಲಾಗುವುದು ಎಂದು ಅವರು ಭಾರತದ ಉದ್ಯಮಗಳ ಒಕ್ಕೂಟ ಹಾಗೂ 77 ರಾಷ್ಟ್ರಗಳ ಗುಂಪು ಜಂಟಿಯಾಗಿ ಏರ್ಪಡಿಸಿದ್ದ ವ್ಯಾಪಾರ ಸಮಾವೇಶದ ಸಂದರ್ಭದಲ್ಲಿ ಪತ್ರಕರ್ತರಿಗೆ ತಿಳಿಸಿದರು.

• ಸಹಜಸ್ಥಿತಿಗೆ ಮರಳಿದ ಮೂರು ಸಾವಿರ ಮಠ

ಹುಬ್ಬಳ್ಳಿ, ನ. 15- ಇಲ್ಲಿನ ಮೂರು ಸಾವಿರ ಮಠದಲ್ಲಿ ಉತ್ತರಾಧಿಕಾರಿ ವಿವಾದ ಮತ್ತು ದಿಢೀರ್ ಪೀಠಾರೋಹಣದಿಂದ ಉಂಟಾಗಿದ್ದ ಬಿಕ್ಕಟ್ಟು ಪರಿಹಾರಗೊಂಡಿದೆ. ಬಿಕ್ಕಟ್ಟು ನಿವಾರಣಾ ಒಪ್ಪಂದದ ಪ್ರಕಾರ, ಇಂದು ಪರಿಸ್ಥಿತಿ ಬಹುತೇಕ ಮಾಮೂಲಿಗೆ ಬಂದಿದೆ.

ಒಪ್ಪಂದದ ಅನುಸಾರ, ಕಿರಿಯ ಸ್ವಾಮೀಜಿ ರುದ್ರಮುನಿ ದೇವರು ಅವರು ಕೇಂದ್ರ ಬಸ್ ನಿಲ್ದಾಣ ಸಮೀಪದಲ್ಲಿರುವ ಮಠದ ಅತಿಥಿಗೃಹಕ್ಕೆ ತೆರಳಿದ್ದಾರೆ.

50 ವರ್ಷಗಳ ಹಿಂದೆ — ಶುಕ್ರವಾರ, 16-11-1973

• ಕರ್ನಾಟಕ ವಿ.ವಿ ಕುಲಪತಿ ಚುನಾವಣೆ ಪದ್ಧತಿ ರದ್ದು

ಬೆಂಗಳೂರು, ನ. 15- ಬೆಂಗಳೂರು ವಿಶ್ವ-ವಿದ್ಯಾಲಯದಲ್ಲಿ ಇರುವಂತೆ, ರಾಜ್ಯಪಾಲರು ಕುಲಪತಿಗಳನ್ನು ನೇಮಿಸುವ ಕ್ರಮವನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೂ ಅನ್ವಯ ಮಾಡಿ, ರಾಜ್ಯ ಸರ್ಕಾರ ಇಂದು ಸುಗ್ರೀವಾಜ್ಞೆ ಹೊರಡಿಸಿದೆ.

ಇದನ್ನು ಅನುಸರಿಸಿ, ಈಗಾಗಲೇ ಕರ್ನಾಟಕ ವಿಶ್ವವಿದ್ಯಾಲಯದಿಂದ ಪ್ರಕಟವಾಗಿರುವ ಹೊಸ ಕುಲಪತಿಗಳ ಆಯ್ಕೆಗೆ ಸಂಬಂಧಿಸಿದ ಚುನಾವಣಾ ಕಾರ್ಯಕ್ರಮದ ಪಟ್ಟಿಯು ರದ್ದಾಗಿದೆ.

ಮೈಸೂರು ವಿಶ್ವವಿದ್ಯಾಲಯದ ಸೆನೆಟ್, ಸಿಂಡಿಕೇಟ್, ಅಕಡೆಮಿಕ್ ಕೌನ್ಸಿಲ್ ಮತ್ತಿತರ ಚುನಾಯಿತ ಸಮಿತಿಗಳ ಅಧಿಕಾರಾವಧಿಯನ್ನು 1974ರ ಡಿಸೆಂಬರ್‌ವರೆಗೆ ಸುಗ್ರೀವಾಜ್ಞೆಯು ವಿಸ್ತರಿಸಿದೆ. ಈ ವಿಶ್ವವಿದ್ಯಾ-ಲಯದಲ್ಲಿ ಈಗ ಕುಲಪತಿಗಳನ್ನು ಸರ್ಕಾರವೇ ನಾಮಕರಣ ಮಾಡುವ ಪದ್ಧತಿ ಇದೆ.

ಕುಟುಂಬ ರಾಜಕಾರಣದ ಪೋಷಣೆ, ಸಂತೋಷ್ ಬಣಕ್ಕೆ ಸಿಗದ ಮನ್ನಣೆ

ಮತ್ತೆ ಯಡಿಯೂರಪ್ಪ ಕೈಗೆ ಬಿಜೆಪಿ



ಗತಿಬಿಂಬ

ವೈ.ಗ.ಜಗದೀಶ್

‘ದೇಶದ ಅಭಿವೃದ್ಧಿಗೆ ಕುಟುಂಬ ರಾಜಕಾರಣ ಕಂಟಕ, ಪ್ರಜಾಪ್ರಭುತ್ವಕ್ಕೆ ಮಾರಕ. ಕುಟುಂಬ ರಾಜಕಾರಣವನ್ನು ಬೇರುಸಮೇತ ಕಿತ್ತುಹಾಕಬೇಕು...’

ಪ್ರಧಾನಿ ನರೇಂದ್ರ ಮೋದಿ ಅವರು ಎರಡು ತಿಂಗಳ ಹಿಂದಷ್ಟೇ ಕೊಟ್ಟ ಕರೆ ಇದು.

ಛತ್ತೀಸಗಢ ಮತ್ತು ತೆಲಂಗಾಣದಲ್ಲಿ ಕೈಗೊಂಡ ಚುನಾವಣಾ ಪ್ರಚಾರ ಸಭೆಗಳಲ್ಲಿ ಭಾಗಿಯಾಗಿದ್ದ ಮೋದಿ, ‘ಕಾಂಗ್ರೆಸ್ ಪಕ್ಷವು ಪಂಚಾಯಿತಿಯಿಂದ ಪಾರ್ಲಿ-ಮೆಂಟ್‌ವರೆಗೆ ಅಧಿಕಾರದಲ್ಲಿ ಇದ್ದರೂ ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಹಲವು ವರ್ಷಗಳವರೆಗೆ ಜಾರಿಗೆ ತಂದಿರಲಿಲ್ಲ ಹಾಗೂ ಮಾದಿಗರ ಸಬಲೀಕರಣ-ಕ್ಕಾಗಿ ಶೀಘ್ರದಲ್ಲೇ ಸಮಿತಿ ರಚಿಸಲಾಗುವುದು’ ಎಂದು ಘೋಷಿಸಿದ್ದರು. ಮಾದಿಗರ ಪರವಾಗಿ ಬಲಿಷ್ಠ ಹೋರಾಟ ರೂಪಿಸಿದ್ದ ಕೃಷ್ಣ ಮಾದಿಗ ಅವರನ್ನು ವೇದಿಕೆಯಲ್ಲಿಯೇ ತಬ್ಬಿಕೊಂಡು ಭಾವುಕರಾಗಿದ್ದರು.

ಈ ಎಲ್ಲ ಬೆಳವಣಿಗೆಗಳ ಮಗ್ಗುಲಲ್ಲೇ, ಬಿಜೆಪಿಯ ಕರ್ನಾಟಕ ಘಟಕಕ್ಕೆ ಬಿ.ವೈ. ವಿಜಯೇಂದ್ರ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಮೋದಿಯವರು ಸಾರ್ವಜನಿಕ ಸಭೆಗಳಲ್ಲಿ ಆಡುವ ಮಾತಿಗೂ ನಿಜದ ನಡವಳಿಕೆಗೂ ಭಾರಿ ಅಂತರ ಇರುವುದನ್ನು ಇದು ತೋರಿಸುತ್ತದೆ. ವಂಶಾಡಳಿತ ರಾಜಕಾರಣವನ್ನು ವಿರೋಧಿಸುತ್ತಲೇ ಬಂದಿರುವ ಮೋದಿ, ಬಿಜೆಪಿ ಸಾರಥ್ಯವನ್ನು ಬಿ.ಎಸ್.ಯಡಿಯೂರಪ್ಪ ಅವರ ಕಿರಿಯ ಮಗ ವಿಜಯೇಂದ್ರ ಅವರಿಗೆ ವಹಿಸಿದ್ದನ್ನು ಕಂಡು, ಮೋದಿಯವರನ್ನು ‘ದೈವೀಸ್ವರೂಪ’ದಲ್ಲಿ ನೋಡುವ ಕಮಲ ಪಡೆಯ ನಾಯಕರಿಗೆ ಮಾತೇ ಹೊರಡದಂತಾಗಿದೆ. ತಮ್ಮಲ್ಲಿ ಓಡಾಡುವ ಶಕ್ತಿ ಇರುವಾಗಲೇ ವಿಜಯೇಂದ್ರ ಅವರನ್ನು ದಡ ಮುಟ್ಟಿಸಬೇಕೆಂಬ ಯಡಿಯೂರಪ್ಪ ಅವರ ಹಟ ಗೆದ್ದಿದೆ. ‘ಮೋದಿಯವರ ನಾಮಬಲದಲ್ಲೇ ಗೆಲ್ಲುತ್ತೇವೆ’ ಎಂಬ ಹುಸಿ ಭರವಸೆಯಲ್ಲಿದ್ದ ಪಕ್ಷದ ವರಿಷ್ಠರು, ಯಡಿಯೂರಪ್ಪ ಅವರ ಎದುರು ಸಂಪೂರ್ಣ ಶರಣಾಗಿದ್ದಾರೆ. ರಾಷ್ಟ್ರೀಯ ನಾಯಕರನ್ನೇ ನೆಚ್ಚಿಕೊಳ್ಳುವ ಪರಿಪಾಟವು ಎಲ್ಲ ಕಡೆ ಫಲ ನೀಡದು, ಪ್ರಾದೇಶಿಕ ನಾಯಕತ್ವಕ್ಕೆ ಮಣೆ ಹಾಕುವುದು ಅನಿವಾರ್ಯ ಎಂಬುದನ್ನು ಒಪ್ಪಿಕೊಂಡಿರುವುದು ಈ ಬೆಳವಣಿಗೆಯಿಂದ ಸ್ಪಷ್ಟವಾಗಿ ಗೋಚರಿಸುತ್ತದೆ.

2018ರ ವಿಧಾನಸಭೆ ಚುನಾವಣೆಗೆ ಮುನ್ನವೇ, ಯಡಿಯೂರಪ್ಪ ಅವರನ್ನು ಹಣಿಯಬೇಕೆಂಬ ಸಂಚು ಬಿಜೆಪಿಯಲ್ಲಿ ಮೊಳಕೆಯೊಡೆದಿತ್ತು. ಪಕ್ಷವನ್ನು ತಮ್ಮ ಮುಷ್ಟಿಯಲ್ಲಿ ಅಮುಕಿಡಬೇಕು ಎಂಬ ಮಹದಾಸೆ ಹೊತ್ತಿದ್ದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರು ಇದರ ಹಿಂದಿದ್ದುದು ರಹಸ್ಯವೇನಲ್ಲ. ಯಡಿಯೂರಪ್ಪ ವಿರುದ್ಧ ಪಕ್ಷನಿಷ್ಠರ ಹೆಸರಿನಲ್ಲಿ ಗುಂಪು ರೂಪುಗೊಂಡಿದ್ದು, ಕೆ.ಎಸ್.ಈಶ್ವರಪ್ಪ ನೇತೃತ್ವದಲ್ಲಿ ಸಂಗೊಳ್ಳಿ ರಾಯಣ್ಣ ಬ್ರಿಗೇಡ್ ಸ್ಥಾಪನೆಯಾದದ್ದು ಇದರ ಮುಂದುವರಿದ ಭಾಗ ಎಂಬುದರಲ್ಲಿ ಅನುಮಾನ ಇಲ್ಲ.

ಚುನಾವಣೆಯಲ್ಲಿ ಬಿಜೆಪಿಗೆ ಬಹುಮತ ಸಿಗಲಿಲ್ಲ. ಯಡಿಯೂರಪ್ಪ ಅಧಿಕಾರದ ಛಲ ಬಿಡಲಿಲ್ಲ. ‘ಆಪರೇಷನ್ ಕಮಲ’ದ ಕಳ್ಳಮಾರ್ಗದಲ್ಲಿ, ಕಾಂಗ್ರೆಸ್, ಜೆಡಿಎಸ್ ಶಾಸಕರ ರಾಜೀನಾಮೆ ಕೊಡಿಸಿ 2019ರಲ್ಲಿ ಮುಖ್ಯಮಂತ್ರಿ ಗಾದಿಗೇರುವ ದಾರಿ ನಿರ್ಮಿಸಿಕೊಂಡರು. ವಿಜಯೇಂದ್ರ ಆಪರೇಷನ್ ಕಮಲದ ನೇತೃತ್ವ ವಹಿಸಿದ್ದರು. ಆದರೆ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಲು ಯಡಿಯೂರಪ್ಪ ಅವರಿಗೆ ಮೋದಿ-ಶಾ ನಾಲ್ಕೈದು ದಿನ ಒಪ್ಪಿಗೆಯನ್ನೇ ನೀಡಲಿಲ್ಲ. ಇದಕ್ಕೆ ಬಗ್ಗದ ಯಡಿಯೂರಪ್ಪ, ರಾಜಭವನಕ್ಕೆ ಸಂದೇಶವನ್ನು ರವಾನಿಸಿದರು. ಸಿಟ್ಟಿಗೆದ್ದ ಮೋದಿ-ಶಾ ಜೋಡಿ, ಸಂಪುಟ ವಿಸ್ತರಣೆಗೆ ಸಮ್ಮತಿ ನೀಡಲಿಲ್ಲ. ಯಡಿಯೂರಪ್ಪ ಒಂದು ತಿಂಗಳು ಏಕಾಂಗಿಯಾಗಿ ಸರ್ಕಾರವನ್ನು ನಿಭಾಯಿಸಿದರು. ಬಳಿಕವೂ ಕೇಂದ್ರ ಸರ್ಕಾರ ಕರ್ನಾಟಕಕ್ಕೆ ಅಗತ್ಯ ಸಹಕಾರ ಕೊಡಲಿಲ್ಲ. ಭೇಟಿಗೆ ಸಮಯ ಕೇಳಿದರೂ ಮೋದಿಯವರು ನೀಡುತ್ತಿರಲಿಲ್ಲ.

ಎರಡು ವರ್ಷ ಕಳೆಯುವ ಮುನ್ನವೇ, ಯಡಿಯೂರಪ್ಪ ಅವರನ್ನು ಕುರ್ಚಿಯಿಂದ ಇಳಿಸುವ ಕಸರತ್ತು ಶುರುವಾಯಿತು. ಅಷ್ಟುಹೊತ್ತಿಗಾಗಲೇ, ‘ಯಡಿಯೂರಪ್ಪ ಬದಲು ಅವರ ಮಗ ವಿಜಯೇಂದ್ರ ಅಧಿಕಾರ ನಡೆಸುತ್ತಿದ್ದಾರೆ. ನಾಲ್ಕೈದು ಕೋಟಿ ಅನುದಾನಕ್ಕೂ ಅವರ ಮುಂದೆ ಕೈಯೊಡ್ಡಿ ನಿಲ್ಲಬೇಕಾದ ಸ್ಥಿತಿ ಬಂದಿದೆ, ಭ್ರಷ್ಟಾಚಾರ ಮುಗಿಲುಮುಟ್ಟಿದೆ’ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮತ್ತು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಹಾದಿಬೀದಿಯಲ್ಲಿ ಹೇಳತೊಡಗಿದ್ದರು. ಏತನ್ಮಧ್ಯೆ, ವಿಜಯೇಂದ್ರ ಆಪ್ತ ಸಹಾಯಕ ಆಯನೂರು ಉಮೇಶ್ ಸೇರಿದಂತೆ ಹಲವರ ಮನೆಗಳ ಮೇಲೆ ಆದಾಯ ತೆರಿಗೆ ಇಲಾಖೆ ದಾಳಿಯೂ ನಡೆಯಿತು. ಇದೆಲ್ಲದರ ಪರಿಣಾಮವಾಗಿ, ಯಡಿಯೂರಪ್ಪ ಕಣ್ಣೀರಿಡುತ್ತಲೇ ಕುರ್ಚಿಯಿಂದ ಇಳಿದರು. ಬಳಿಕ, ರಚನೆಯಾದ ಬಸವರಾಜ ಬೊಮ್ಮಾಯಿ ನೇತೃತ್ವದ ಸಂಪುಟದಲ್ಲಿ ವಿಜಯೇಂದ್ರ ಅವರಿಗೆ ಸಚಿವ ಸ್ಥಾನ ನೀಡಬೇಕೆಂಬ ಯಡಿಯೂರಪ್ಪ ಪಟ್ಟಿಗೆ ವರಿಷ್ಠರು ಬೆಲೆ ಕೊಡಲಿಲ್ಲ. ಅದಾದ ಬಳಿಕ, ರಾಜ್ಯ ಪ್ರವಾಸ ಮಾಡಿ ಪಕ್ಷವನ್ನು ಸಂಘಟಿಸುವುದಾಗಿ ಯಡಿಯೂರಪ್ಪ ಹೇಳುತ್ತಲೇ ಬಂದರು. ಅದಕ್ಕೂ ವರಿಷ್ಠರು ತಡೆ ಹಾಕುತ್ತಲೇ ಬಂದರು.

ಈ ಬೆಳವಣಿಗೆಗಳ ಮಧ್ಯೆಯೇ ನಡೆದ ವಿಧಾನಸಭೆ ಚುನಾವಣೆಯಲ್ಲಿ ಪಕ್ಷ ಹೀನಾಯವಾಗಿ ನೆಲ ಕಚ್ಚಿತು. ‘ಹೊಂದಾಣಿಕೆ ರಾಜಕಾರಣದಿಂದ



ಕೆಲವೆಡೆ ಸೋಲಬೇಕಾಯಿತು’ ಎಂದು ಸೋತವರು ಹೇಳಿಕೊಂಡರು. ‘ನಾಯಕರ ಮಧ್ಯೆ ಹೊಂದಾಣಿಕೆ ನಡೆದಿದ್ದರಿಂದ ಶಿಕಾರಿಪುರದಲ್ಲಿ ವಿಜಯೇಂದ್ರ ಗೆಲ್ಲುವಂತಾಯಿತು’ ಎಂದು ಕಾಂಗ್ರೆಸ್ ನಾಯಕರೇ ಹೇಳಿದ್ದುಂಟು.

ವಿಧಾನಸಭೆ ಚುನಾವಣೆ ವೇಳೆ ಮೋದಿ-ಅಮಿತ್ ಶಾ ರಾಜ್ಯದಲ್ಲಿಯೇ ಮೊಕ್ಕಾಂ ಹೂಡಿದ್ದರೂ ಪಕ್ಷ ಹೀನಾಯ ಸೋಲು ಅನುಭವಿಸಬೇಕಾಯಿತು. ಬಿಜೆಪಿ ನೇತೃತ್ವದ ಸರ್ಕಾರದ ಮೇಲಿನ ಭ್ರಷ್ಟಾಚಾರದ ಆರೋಪ, ಹದಗೆಟ್ಟ ಆಡಳಿತವು ಸೋಲಿಗೆ ಪ್ರಮುಖ ಕಾರಣಗಳಾಗಿದ್ದವು. ಯಡಿಯೂರಪ್ಪ ಅವರನ್ನು ಕಡೆಗಣಿಸಿದ್ದೂ ಅಪಜಯದ ಪ್ರಮುಖ ಕಾರಣಗಳಲ್ಲಿ ಒಂದು ಎಂಬುದು ಬಿಜೆಪಿ ವರಿಷ್ಠರಿಗೆ ಮನವರಿಕೆಯಾದಂತಿದೆ.

‘ಮಗನಿಗೆ ಅಧ್ಯಕ್ಷ ಸ್ಥಾನ ಇಲ್ಲವೇ ವಿರೋಧ ಪಕ್ಷದ ನಾಯಕನ ಸ್ಥಾನ ನೀಡದಿದ್ದರೆ ಪಕ್ಷ ತೊರೆಯಲು ಹಿಂಜರಿಯಲಾರೆ’ ಎಂದು ಯಡಿಯೂರಪ್ಪ ‘ಬೆದರಿಕೆ’ ಹಾಕಿದ್ದರು. ವಿಧಾನಸಭೆ ಚುನಾವಣೆ ವೇಳೆ, ಜಗದೀಶ ಶೆಟ್ಟರ್, ಲಕ್ಷ್ಮಣ ಸವದಿ, ಆಯನೂರು ಮಂಜುನಾಥ ಅವರು ಪಕ್ಷ ಬಿಟ್ಟಿದ್ದರಿಂದ ‘ಬಿಜೆಪಿ ಲಿಂಗಾಯತ ವಿರೋಧಿ’ ಎಂಬ ಹಣೆಪಟ್ಟಿಗೆ ಮತ್ತಷ್ಟು ಹೊಳಪು ಬಂದಿತ್ತು. ವಿಧಾನಸಭೆ ಚುನಾವಣೆಯಲ್ಲಿ ಸೋತವರು, ಗೆದ್ದ ಕೆಲವರು ಲೋಕಸಭೆ ಚುನಾವಣೆಗೆ ಮುನ್ನ ಪಕ್ಷ ಬಿಡಲಿದ್ದಾರೆ, ಅವರಲ್ಲಿ ಯಡಿಯೂರಪ್ಪ ಹಿಂಬಾಲಕರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಎಂಬ ಮಾಹಿತಿಯೂ ವಿಜಯೇಂದ್ರ ನೇಮಕದ ಹಿಂದೆ ಕೆಲಸ ಮಾಡಿದೆ.

ಬಿಜೆಪಿ ನೇತೃತ್ವದ ಸರ್ಕಾರದ ಕೊನೆಯ ಎರಡು ವರ್ಷ ನಡೆಸಿದ ಧರ್ಮ ವಿಭಜನೆಯ, ಕೋಮುದ್ವೇಷದ ರಾಜಕೀಯವು ಕರ್ನಾಟಕದಲ್ಲಿ ಫಲ ನೀಡಲಿಲ್ಲ. ಜಾತಿ ಆಧಾರಿತ ರಾಜಕಾರಣವೇ ಇನ್ನೂ ರಾಜ್ಯದಲ್ಲಿ ಪ್ರಭಾವಿಯಾಗಿದೆ ಎಂಬುದೂ ಬಿಜೆಪಿ ವರಿಷ್ಠರಿಗೆ ಗೊತ್ತಾದಂತಿದೆ.

‘ವಿಜಯೇಂದ್ರ ಸಾಮರ್ಥ್ಯ ನೋಡಿ ಸ್ಥಾನ ನೀಡಲಾಗಿದೆ’ ಎಂದು ಜೆ.ಪಿ.ನಡ್ಡಾ ಹೇಳಿದ್ದಾರೆ. ಹಿಂದೆ ಯಾವತ್ತೂ ಚುನಾವಣಾ ರಾಜಕಾರಣ ನೋಡದ ವಿಜಯೇಂದ್ರ ಮೊದಲ ಬಾರಿಗೆ ಶಾಸಕರಾದವರು. ಅಪ್ಪ 2019ರಲ್ಲಿ ಅಧಿಕಾರಕ್ಕೇರಿದ ಮೇಲಷ್ಟೇ ಪಕ್ಷದ ಉಪಾಧ್ಯಕ್ಷ ಹುದ್ದೆ ನೋಡಿದವರು. ಅವರ ಸಾಮರ್ಥ್ಯವೇ ಹೆಚ್ಚೆಂದು ನಡ್ಡಾ ಒಪ್ಪುವುದಾದರೆ, ಬಸನಗೌಡ ಪಾಟೀಲ ಯತ್ನಾಳ, ಆರ್.ಅಶೋಕ, ವಿ.ಸೋಮಣ್ಣ, ಎಸ್.ಸುರೇಶ್ ಕುಮಾರ್, ಸಿ.ಟಿ.ರವಿ, ಮುರುಗೇಶ ನಿರಾಣಿ, ಗೋವಿಂದ ಕಾರಜೋಳ ಅವರನ್ನೆಲ್ಲ ಅವಮಾನಿಸಿದಂತೆ. ಹಾಗೆಂದು ವಿಜಯೇಂದ್ರ ಅವರಿಗೆ ಸಾಮರ್ಥ್ಯ ಇಲ್ಲವೆಂದಲ್ಲ. ಅಪ್ಪನ ವರ್ಚಸ್ಸು, ದುಡ್ಡಿನ ಬಲ, ಪ್ರಬಲ ಸಮುದಾಯವೊಂದು ಬೆನ್ನಿಗೆ ನಿಲ್ಲುವ ಅವಕಾಶವೂ ವಿಜಯೇಂದ್ರ ಅವರ ನೇಮಕದ ಹಿಂದಿನ ಕಾರಣವಿದ್ದೀತು.

ಒಂದಂತೂ ಸತ್ಯ; ಕೋಮುದ್ವೇಷವನ್ನೇ ಜನರಿಗೆ ಉಣಿಸಿ, ಅನ್ಯರ ಮೇಲೆ ಹಗೆ ಸಾಧಿಸುವ ಧರ್ಮಕೇಂದ್ರಿತ ರಾಜಕಾರಣಕ್ಕಿಂತ, ಹಣಬುರುಕತನ, ಅಧಿಕಾರ ರಾಜಕಾರಣ ಮಾಡುವವರು ಲೇಸು. ಹಾಗೆಂದು, ಅಕ್ರಮ ಹಣ ಸಂಪಾದನೆ ಸಹ್ಯವೆಂದಲ್ಲ. ಅವರು ಮನಸ್ಸು ಮನಸ್ಸುಗಳ ಮಧ್ಯೆ ವಿಷ ಹರಡಿ, ಸಾಮಾಜಿಕ ಕ್ಲೇಶ ಉಂಟು ಮಾಡುವುದಿಲ್ಲ. ವ್ಯಾಪಾರ ಮಾಡುವವನಿಗೆ ಬೀದಿಗಳು, ಅಂಗಡಿ ಬಾಗಿಲು ಮುಕ್ತವಾಗಿ ತೆರೆದಿದ್ದ-ರಷ್ಟೇ ಲಾಭ. ಬಿಜೆಪಿ ವರಿಷ್ಠರ ಈ ನಡೆ, ಅಷ್ಟರಮಟ್ಟಿಗೆ ಸಮಾಧಾನ ಪಟ್ಟುಕೊಳ್ಳುವ ಸಂಗತಿಯಷ್ಟೆ.

ಚುರುಮುರಿ



ಚಿಲ್ಡ್ರನ್ಸ್ ಡೇ...

• ಗುರು ಪಿ.ಎಸ್.

‘ಹ್ಯಾಪಿ ಚಿಲ್ಡ್ರನ್ಸ್ ಡೇ’ ಮುದ್ದಣ್ಣಂಗೆ ವಿಶ್ ಮಾಡಿದ ವಿಜಿ.

‘ಏನ್ ಸರ್ ಇದು, ಮಕ್ಕಳ ದಿನ ಆಚರಿಸಿ ಎರಡು ದಿನ ಆಯ್ತು, ಅದರಲ್ಲೂ ನನಗ್ಯಾಕೆ ವಿಶ್ ಮಾಡ್ತಿದೀರಿ?’

‘ನಿಮ್ಮಂಥ ಪೊಲಿಟೀಷಿಯನ್ಸ್‌ಗೆ ಪ್ರತಿದಿನವೂ ಮಕ್ಕಳ ದಿನವೇ ಅಲ್ವಾ ಮುದ್ದಣ್ಣ, ಅದಕ್ಕೆ ವಿಶ್ ಮಾಡಿದೆ’ ನಗುತ್ತಾ ಹೇಳಿದ ವಿಜಿ.

‘ಮಕ್ಕಳ ಬದುಕು-ಭವಿಷ್ಯದ ಬಗ್ಗೆ ಯಾವ ತಂದೆ-ತಾಯಿಗೆ ಚಿಂತೆ ಇರಲ್ಲ ಹೇಳಿ ಸರ್, ಅವರವರ ‘ಸ್ಟೇಟಸ್’ ಅನುಸಾರ ಮಕ್ಕಳಿಗೆ ಪದವಿ-ಅಧಿಕಾರ ಕೊಡಿಸ್ತಾರೆ, ಅಷ್ಟಕ್ಕೂ ನಾವು ಮಾತ್ರವಾ ಮಕ್ಕಳ ದಿನ ಸೆಲಬ್ರೇಟ್ ಮಾಡ್ತಿರೋದು, ಬೇರೆ ಪಕ್ಷದವರೂ ಮಾಡ್ತಿಲ್ವ’.

‘ನೀವಷ್ಟೇ ಅಂತ ನಾನೆಲ್ಲಿ ಹೇಳಿದೆ? ಅವರು ಡಾಟರ್ಸ್ ಡೇ, ಗ್ರ್ಯಾಂಡ್‌ಸನ್ಸ್ ಡೇ ಮಾಡಿದ್ರೆ, ಇವರೂ ಸನ್ಸ್ ಡೇ, ಗ್ರ್ಯಾಂಡ್‌ಸನ್ಸ್ ಡೇ, ಡಾಟರ್ ಇನ್ಲಾಸ್ ಡೇ ಎಲ್ಲ ಮಾಡಿದ್ರಲ್ಲ’.

‘ಹೌದು ಮತ್ತೆ, ಒಗ್ಗಟ್ಟೇ ನಮ್ಮ ಮೂಲ ಮಂತ್ರ’ ಸಮರ್ಥಿಸಿಕೊಂಡ ಮುದ್ದಣ್ಣ.

‘ನಿಮ್ ನಿಮ್ ಮಕ್ಕಳು, ಮೊಮ್ಮಕ್ಕಳು, ಅಣ್ಣಂದಿರು, ತಮ್ಮಂದಿರ ದಿನವನ್ನೇ ಆಚರಿಸ್ತಾ ಕೂತ್ಕೊಂಡ್ರೆ, ಪಕ್ಷಕ್ಕಾಗಿ ದುಡಿದ ಈ ಭಾರತ ಮಾತೆಯ ಮಕ್ಕಳು, ಕರ್ನಾಟಕ ಮಾತೆಯ ಮಕ್ಕಳ ಗತಿಯೇನು? ಅವರ ಭವಿಷ್ಯ ಏನು?’ ಆತಂಕದಲ್ಲಿ ಕೇಳಿದ ವಿಜಿ.

‘ಯಾಕ್ ಸರ್ ಇಷ್ಟು ಚಿಂತಾಕ್ರಾಂತರಾಗಿ ಕೇಳ್ತಿದೀರಿ, ಎಲ್ಲರಿಗೂ ಒಂದಲ್ಲ ಒಂದಿನ ಬಂದೇ ಬರುತ್ತೆ. ನಾವೆಲ್ಲ ಮಕ್ಕಳ ದಿನ ಒಂದನ್ನೇ ಆಚರಿಸಲ್ವಲ್ಲ, ಬೇರೆ ಬೇರೆ ದಿನಗಳನ್ನೂ ಸೆಲಬ್ರೇಟ್ ಮಾಡ್ತೀವಲ್ಲ’.

‘ಏಪ್ರಿಲ್ 1ಕ್ಕೆ ಆಚರಿಸ್ತೀವಲ್ಲ, ಅದಾ?’ ವಿಜಿ ಮಾತಿಗೆ ನಗತೊಡಗಿದ ಮುದ್ದಣ್ಣ, ‘ಹೋಗ್ಲಿ ಬಿಡಿ ಸರ್, ಇದೇ ಸಂಡೆ ಕ್ರಿಕೆಟ್ ವರ್ಲ್ಡ್ ಕಪ್ ಫೈನಲ್ ಇದೆ. ಸ್ಟೇಡಿಯಂಗೆ ಹೋಗಿ ನೋಡ್ಕೊಂಡು ಬರೋಣ ಬನ್ನಿ’.

‘ನೋಡಿ, ಈಗ ಕ್ರಿಕೆಟ್ ಆಡಳಿತದಲ್ಲೂ ‘ಸನ್ ಡೇ’ ಇಬ್ಬರೂ ನಗಲಾರಂಭಿಸಿದರು.

ಸಂಗತ

ಬೇಕು ಮನೆಗೆ ಪತ್ರಿಕೆಯ ಸೊಬಗು!

ಮನೆಗೆ ದಿನಪತ್ರಿಕೆ ತರಿಸುವುದರಿಂದ ಆಗುವ ನಾನಾ ಉಪಯೋಗಗಳ ಬಗ್ಗೆ ಹೆಚ್ಚಿನ ಜನರು ಯೋಚಿಸುವಂತೆ ಕಾಣುವುದಿಲ್ಲ

• ಮಲ್ಲಿಕಾರ್ಜುನ ಹೆಗ್ಗಳಗಿ

ಪುಸ್ತಕ ಬಿಡುಗಡೆ ಕಾರ್ಯಕ್ರಮದ ಆಮಂತ್ರಣ ಪತ್ರಿಕೆ ಕೊಡಲು, ಕಾಲೇಜು ಪ್ರಾಚಾರ್ಯರಾಗಿರುವ ಸ್ನೇಹಿತರೊಬ್ಬರ ಮನೆಗೆ ಹೋಗಿದ್ದೆ. ‘ನಿಮ್ಮ ಕಾಲೇಜು ವಿದ್ಯಾರ್ಥಿಗಳು ಕ್ರೀಡಾಕೂಟದಲ್ಲಿ ಜಯ ಗಳಿಸಿದ ಫೋಟೊ ಇಂದಿನ ಪತ್ರಿಕೆಗಳಲ್ಲಿ ಚೆನ್ನಾಗಿ ಬಂದಿದೆ. ವಿದ್ಯಾರ್ಥಿಗಳೊಂದಿಗೆ ನಿಮ್ಮ ಫೋಟೊ ಕೂಡ ಇದೆ, ಅಭಿನಂದನೆ’ ಎಂದೆ. ಅವರು ತಮ್ಮ ಪುತ್ರನನ್ನು ಕರೆದು, ನೆರೆಮನೆಗೆ ಹೋಗಿ ಪತ್ರಿಕೆ ತೆಗೆದುಕೊಂಡು ಬರಲು ಹೇಳಿದರು. ಆ ಹುಡುಗ ಹೋಗಿ ವಾಪಸ್ ಬಂದು ‘ಡ್ಯಾಡಿ ಅವರು ಪತ್ರಿಕೆ ಓದುತ್ತಿದ್ದಾರೆ, ನಂತರ ಬರಲು ಹೇಳಿದರು’ ಎಂದ. ಪ್ರಾಚಾರ್ಯರ ಮುಖ ಸಣ್ಣದಾಯಿತು.

‘ಮನೆಗೆ ಪತ್ರಿಕೆ ತರಿಸುವುದಿಲ್ಲವೇ?’ ಎಂದೆ. ‘ಕಾಲೇಜಿಗೆ ಎಲ್ಲ ಪತ್ರಿಕೆಗಳೂ ಬರುತ್ತವೆ. ಅಲ್ಲೇ ಓದುತ್ತೇನೆ, ನ್ಯೂಸ್ ಎಲ್ಲಾ ಟಿ.ವಿ.ಯಲ್ಲಿ ಬರುತ್ತದೆ...’ ಎಂದರು. ಲೇಖಕರೂ ಆಗಿರುವ ಪ್ರಾಚಾರ್ಯರು ಮನೆಗೆ ಒಂದು ದಿನಪತ್ರಿಕೆ ತರಿಸುವುದಿಲ್ಲ, ತಮಗೆ ಬೇಕೆನಿಸಿದರೆ ಪಕ್ಕದ ಮನೆಯಿಂದ ತಂದು ಓದುತ್ತಾರೆ ಎಂಬುದನ್ನು ತಿಳಿದು ಬೇಸರವಾಯಿತು.

ಕಚೇರಿಗಳಲ್ಲಿ, ವಾಚನಾಲಯಗಳಲ್ಲಿ ಪತ್ರಿಕೆ ಓದುತ್ತೇವೆ, ಸುದ್ದಿಗಳು ಟಿ.ವಿ.ಯಲ್ಲಿ ಬರುತ್ತವೆ, ಮೊಬೈಲ್ ಫೋನ್‌ನಲ್ಲಿಯೂ ಪತ್ರಿಕೆಯನ್ನು ನೋಡಬಹುದು. ಹೀಗಾಗಿ, ಮನೆಗೆ ಪತ್ರಿಕೆ ತರಿಸಿಕೊಳ್ಳುವ ಅವಶ್ಯವಿಲ್ಲ ಎನ್ನುವ ಮನೋಭಾವ ಅನೇಕರಲ್ಲಿ ಕಂಡುಬರುತ್ತದೆ. ಅದು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗತೊಡಗಿದೆ. ದಿನಪತ್ರಿಕೆಗಾಗಿ ಪ್ರತಿ ತಿಂಗಳು ಹಣ ಖರ್ಚು ಮಾಡುವುದು ವ್ಯರ್ಥ ಎನ್ನುವುದು ಇವರ ಭಾವನೆ ಆಗಿರಬಹುದು. ಆದರೆ ಮನೆಗೆ ಪತ್ರಿಕೆ ತರಿಸುವುದರಿಂದ ಆಗುವ ಉಪಯೋಗಗಳ ಬಗ್ಗೆ ಇವರು ಯೋಚಿಸಿದಂತೆ ಕಾಣುವುದಿಲ್ಲ.

ಪತ್ರಿಕೆ ಮನೆಯಲ್ಲಿ ಇದ್ದರೆ ಮಹಿಳೆಯರು ತಮಗೆ ಬಿಡುವು ದೊರೆತಾಗ ನಿಧಾನಕ್ಕೆ ಓದುತ್ತಾರೆ. ಇದರಿಂದ ಅವರಲ್ಲಿ ಓದುವ ಪ್ರೀತಿ ಮತ್ತು ಲೋಕಜ್ಞಾನ ಬೆಳೆಯುತ್ತದೆ. ಮಕ್ಕಳಿಗೆ ಉಪಯುಕ್ತ ಮಾಹಿತಿ, ಪಠ್ಯದ ವಿಷಯಕ್ಕೆ ಸಂಬಂಧಿಸಿದ ಹೆಚ್ಚಿನ ವಿವರ ತಿಳಿದುಕೊಳ್ಳಲು ಅನುಕೂಲವಾಗುತ್ತದೆ. ವೈಜ್ಞಾನಿಕ ಆವಿಷ್ಕಾರಗಳ ಪರಿಚಯ, ಭಾಷಾ ಪ್ರೌಢಿಮೆ, ವಾಕ್ಯ ರಚನೆ ಕೌಶಲ, ಶಬ್ದ ಸಂಪತ್ತು ಬೆಳೆಯುತ್ತವೆ. ಪತ್ರಿಕೆಗಳಲ್ಲಿಯ ಚಿತ್ರಗಳನ್ನು ನೋಡಿ ಆನಂದಿಸುತ್ತಾರೆ. ತಾವೇ ಚಿತ್ರ ರಚಿಸುವ, ಕಥೆ, ಕವನ, ಪ್ರಬಂಧ ಬರೆಯುವ ಹವ್ಯಾಸ ಬೆಳೆಸಿಕೊಳ್ಳುತ್ತಾರೆ. ನಿಯಮಿತವಾಗಿ ಪತ್ರಿಕೆ ಓದುವುದರಿಂದ ಅವರಲ್ಲಿ ಸೃಜನಾತ್ಮಕ ಕಲೆ ಬೆಳೆಯುತ್ತದೆ. ಲೇಖಕರಾಗಿ, ಕಲಾವಿದರಾಗಿ, ಚಿಂತಕರಾಗಿ ಬೆಳೆದವರೆಲ್ಲರೂ ಪತ್ರಿಕೆಗಳಿಂದ ಪಡೆದ ಪ್ರೇರಣೆಯ ಬಗ್ಗೆ ಹೇಳುತ್ತಾರೆ.

ಪತ್ರಿಕೆಗಳು ಜನಪರ ಹೋರಾಟಗಳ ಬೆನ್ನೆಲುಬು. ದೈನಂದಿನ ಆಗುಹೋಗುಗಳಿಗೆ ಪತ್ರಿಕೆಗಳು ಕನ್ನಡಿ ಹಿಡಿಯುತ್ತವೆ. ದೃಶ್ಯ ಮಾಧ್ಯಮದಲ್ಲಿ ನೋಡುವುದಕ್ಕೂ ಪ್ರಕಟಿತ ವರದಿ ಓದಿ ತಿಳಿದುಕೊಳ್ಳುವುದಕ್ಕೂ ಬಹಳ ವ್ಯತ್ಯಾಸವಿದೆ. ಪ್ರಕಟಿತ ವರದಿ ಸ್ಪಷ್ಟತೆಯನ್ನು ನೀಡುತ್ತದೆ. ದೃಶ್ಯ ಮಾಧ್ಯಮದಲ್ಲಿ ಅಬ್ಬರ ಜಾಸ್ತಿ, ಹೂರಣ ಕಡಿಮೆ. ದೃಶ್ಯ ಪ್ರಪಂಚಕ್ಕಿಂತ ಅಕ್ಷರ ಪ್ರಪಂಚ ಪರಿಣಾಮಕಾರಿ ಆದದ್ದು, ಪತ್ರಿಕೆ ಓದುವಾಗ ಇರುವ ಸಂಯಮ, ಸಾವಧಾನವು ಟಿ.ವಿ. ನೋಡುವಾಗ ಇರುವುದು ಸಾಧ್ಯವೇ ಇಲ್ಲ.

ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಪತ್ರಿಕೆಗಳು ವಹಿಸಿದ ಪಾತ್ರ ದೊಡ್ಡದು. ಗಾಂಧೀಜಿ, ನೆಹರೂ, ಲೋಕಮಾನ್ಯ ತಿಲಕರಂತಹ ನಾಯಕರು ಜನರಲ್ಲಿ ಪತ್ರಿಕೆಗಳ ಮೂಲಕ ರಾಷ್ಟ್ರಪ್ರಜ್ಞೆ ಬೆಳೆಸಿದರು. ಜನಾಂದೋಲನವನ್ನು ಕಟ್ಟುವ ದೃಷ್ಟಿಯಿಂದ ಅವರು ಸ್ವತಃ ಹಲವು ಪತ್ರಿಕೆಗಳನ್ನು ರೂಪಿಸಿದರು.

ಮನೆಯಿಂದ ಹೊರಗೆ ಹೋಗದ ಅಸಹಾಯಕ ಹಿರಿಯರಿಗೆ ಪತ್ರಿಕೆ ಸ್ನೇಹಿತನಂತೆ ಕೆಲಸ ಮಾಡುತ್ತದೆ. ಅವರಿಗೆ ಖುಷಿಯಾಗಿ ಸಮಯ ಕಳೆಯುವುದಕ್ಕೆ ದಿನಪತ್ರಿಕೆಗಳ ಓದು ನೆರವಾಗುತ್ತದೆ. ಓದು ಧ್ಯಾನಕ್ಕೆ ಸಮಾನ ಎನ್ನುವ ಮಾತೂ ಇದೆ.



ಪರಿಚಿತ ಹಿರಿಯರೊಬ್ಬರು ಪತ್ರಿಕೆಗಳನ್ನು ಹರಡಿಕೊಂಡು ಮನೆಯ ಮುಂದಿನ ಹೊರಾಂಗಣದಲ್ಲಿ ಓದುತ್ತಾ ಕುಳಿತಿದ್ದರು. ‘ಎಷ್ಟು ಪತ್ರಿಕೆಗಳನ್ನು ತರಿಸುತ್ತೀರಿ ಸರ್?’ ಎಂದೆ. ಅವರು ‘ಎರಡು ಕನ್ನಡ, ಒಂದು ಇಂಗ್ಲಿಷ್ ಪತ್ರಿಕೆ ತರಿಸುತ್ತೇನೆ’ ಎಂದರು. ಸ್ವಲ್ಪ ತಡೆದು ಅವರು ‘ಮನೆಗೆ ಪತ್ರಿಕೆ ತರಿಸುವುದೆಂದರೆ ಬೆಳಿಗ್ಗೆ ಮನೆಯ ಮುಂದೆ ನೀರು ಚಿಮುಕಿಸಿ ರಂಗೋಲಿ ಹಾಕಿದಾಗೆ. ಪತ್ರಿಕೆ ಒಂದು ಪುಟ್ಟ ವಿಶ್ವವಿದ್ಯಾಲಯ. ನಾನು ಏಕಾಂಗಿಯಾಗಿ ಇದ್ದಾಗಲೂ ಎಲ್ಲರೊಡನೆ ಇದ್ದೀನಿ ಎನ್ನುವ ಭಾವವನ್ನು ಪತ್ರಿಕೆ ತುಂಬುತ್ತದೆ’ ಎಂದರು.

ಪತ್ರಿಕೆಯು ಚಿಂತನೆ, ಮನರಂಜನೆ ಮತ್ತು ಬೋಧನೆಯನ್ನು ಕೊಡುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪತ್ರಿಕೆಗಳ ಪಾತ್ರ ಬಹಳ ದೊಡ್ಡದು. ಜನರನ್ನು ಜನರಿಗೆ, ಜನರನ್ನು ಸರ್ಕಾರಕ್ಕೆ, ಸರ್ಕಾರವನ್ನು ಜನರಿಗೆ ಪರಿಚಯಿಸುವ ಮಹತ್ವದ ಕಾರ್ಯವನ್ನು ಅವು ಮಾಡುತ್ತವೆ. ಪತ್ರಿಕೆಯು ವಿಶ್ವದ ಸಾಂಸ್ಕೃತಿಕ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸುತ್ತದೆ. ಅದನ್ನು ಕೊಳ್ಳುವುದಕ್ಕೆ ಮಾಡುವ ಖರ್ಚು ಕೂಡ ಒಂದು ಹೂಡಿಕೆ. ಮನೆಯಲ್ಲಿ ಅಂದಿನ ದಿನಪತ್ರಿಕೆ ಇರುವುದು ಕುಟುಂಬದ ಘನತೆಯನ್ನು ಹೆಚ್ಚಿಸುತ್ತದೆ.

‘ಪತ್ರಿಕೆಗಳಿಲ್ಲದ ಜಗತ್ತನ್ನು ಕಲ್ಪಿಸಿಕೊಳ್ಳುವುದು ನನ್ನಿಂದ ಸಾಧ್ಯವಿಲ್ಲ’ ಎಂದು ನೆಹರೂ ಹೇಳುತ್ತಿದ್ದರು. ಹಾಲು, ದಿನಸಿಯಂತೆ ಪತ್ರಿಕೆ ಕೂಡ ಮನೆಗೆ ಅವಶ್ಯ ವಸ್ತುವೇ ಆಗಿದೆ. ಕುಟುಂಬವನ್ನು ಸಶಕ್ತವಾಗಿ, ಸಂತೋಷವಾಗಿ ಇಡಲು ಮನೆಗೆ ಬರಲಿ ದಿನಪತ್ರಿಕೆ.

ವಾಚಕರ ವಾಣಿ

ಆರೋಗ್ಯ ಸಮಸ್ಯೆ ಕುರಿತು ಗುಮಾನಿ: ಸ್ಪಷ್ಟನೆ ಅಗತ್ಯ

ಉತ್ತರ ಕನ್ನಡ ಜಿಲ್ಲೆಯ ಸಿದ್ಧಿ ಸಮುದಾಯದ ಮಹಿಳೆಯರ ಆರೋಗ್ಯ ಸಮಸ್ಯೆಗಳ ಬಗ್ಗೆ ಹೋರಾಟಗಾರ್ತಿ ಜೂಲಿಯಾನ ಅವರಲ್ಲಿ ಇತ್ತೀಚೆಗೆ ಚರ್ಚಿಸುತ್ತಿದ್ದಾಗ ಅವರು, ‘ಸರ್, ನಮ್ಮ ಮಹಿಳೆಯರಲ್ಲಿ ಎಂದೂ ಕಂಡರಿಯದಿದ್ದ ಮಂಡಿ, ಸೊಂಟ ನೋವು, ಸುಸ್ತಿನಂತಹ ಸಮಸ್ಯೆಗಳು ಇತ್ತೀಚೆಗೆ ಹೆಚ್ಚಾಗಿ ಕಾಣಿಸುತ್ತಿವೆ. ಅದರಲ್ಲೂ, ಮಧ್ಯವಯಸ್ಕ ಮಹಿಳೆಯರು ಈ ಸಮಸ್ಯೆಗಳಿಂದ ಹೆಚ್ಚಾಗಿ ಬಳಲುತ್ತಿದ್ದಾರೆ. ಇದೆಲ್ಲಾ, ಕೋವಿಡ್ ನಂತರದ ಬೆಳವಣಿಗೆ. ಬಹುಶಃ ಕೋವಿಡ್ ನಿರೋಧಕ ಲಸಿಕೆ ತೆಗೆದುಕೊಂಡಿದ್ದರಿಂದ ಈ ರೀತಿ ಆಗಿರಬಹುದೇ?’ ಎಂದು ಅನುಮಾನ ವ್ಯಕ್ತಪಡಿಸಿದರು. ಇದೇ ರೀತಿಯ ಗುಮಾನಿಯ ಮಾತುಗಳನ್ನು ರೈಲು, ಬಸ್ಸಿನಲ್ಲಿ ಪ್ರಯಾಣಿಸುವಾಗ ಸಹಪ್ರಯಾಣಿಕರಿಂದಲೂ ಕೇಳಿಸಿಕೊಂಡಿದ್ದೇನೆ. ಆಸ್ಪತ್ರೆಗಳಲ್ಲಂತೂ ಅನೇಕರ ಬಾಯಲ್ಲಿ ಇಂತಹ ಮಾತುಗಳು ಕೇಳಿಬರುತ್ತವೆ. ಅದರಲ್ಲೂ, ಸೆಲೆಬ್ರಿಟಿಗಳ ಸಾವು ಸಂಭವಿಸಿದಾಗ ಈ ಬಗೆಯ ಮಾತುಗಳಿಗೆ ಮತ್ತಷ್ಟು ರೆಕ್ಕೆಗಳು ಬಂದು ಎಲ್ಲೆಡೆ ಜೋರಾಗೇ ಹರಡುತ್ತವೆ. ಈ ಅಭಿಪ್ರಾಯಗಳು ಎಲ್ಲಾ ವಯೋಮಾನದವರಲ್ಲಿ ಹಾಗೂ ಅನಕ್ಷರಸ್ಥರಲ್ಲಿ ಮಾತ್ರವಲ್ಲದೆ, ಅಕ್ಷರಸ್ಥರಲ್ಲಿಯೂ ಕೇಳಿಬರುತ್ತಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು.

ಈ ಬಗ್ಗೆ ಸಂಬಂಧಿಸಿದ ಇಲಾಖೆ ಅಥವಾ ಸಂಸ್ಥೆಗಳು ಸೂಕ್ತ ಸ್ಪಷ್ಟೀಕರಣವನ್ನು ನೀಡಬೇಕಿರುವುದು ಅಗತ್ಯ. ಮಾಧ್ಯಮಗಳ ಮೂಲಕ ಜಾಗೃತಿ ಮೂಡಿಸಿ ಜನರಲ್ಲಿನ ಊಹಾಪೋಹಗಳಿಗೆ ತೆರೆ ಎಳೆಯಬೇಕು. ಇಲ್ಲವಾದರೆ, ಮುಂದಿನ ದಿನಗಳಲ್ಲಿ ಸರ್ಕಾರ ಕೈಗೊಳ್ಳುವ ಆರೋಗ್ಯ ಅಭಿಯಾನಗಳಿಗೆ ಹಿನ್ನಡೆಯಾಗಬಹುದು. ಜನರಲ್ಲಿ ಆರೋಗ್ಯದ ಬಗ್ಗೆ ಮೌಢ್ಯ ಬೆಳೆದು ಅಮೂಲ್ಯ ಜೀವಗಳು ತೊಂದರೆಗೆ ಸಿಲುಕುವ ಅಪಾಯವಿದೆ.

ಆನಂದ ಎನ್.ಎಲ್., ಅಜ್ಜಂಪುರ

ಹಬ್ಬದ ಆಚರಣೆ: ಅಪಾಯಗಳ ಅರಿವು ಮೂಡಿಸಿ

ಈ ಬಾರಿಯ ದೀಪಾವಳಿಯಲ್ಲಿ ಹಸಿರು ಪಟಾಕಿ ಬಳಸುವಂತೆ ಸರ್ಕಾರವು ಸಲಹೆ, ಮಾರ್ಗದರ್ಶನ ನೀಡಿದ್ದರೂ ಸಮಯದ ಮಿತಿ ಇಲ್ಲದೆ ಪಟಾಕಿಗಳ ಸದ್ದು ಜೋರಾಗೇ ಕೇಳಿಬಂದಿದೆ. ಇದರಿಂದ ಪ್ರಾಣಿಗಳಿಗೆ ಹಾಗೂ ಅನಾರೋಗ್ಯ ಪೀಡಿತರಿಗೆ ಹೆಚ್ಚು ತೊಂದರೆಯಾಗಿದೆ. ಯಾವುದೇ ಕಾನೂನು ತಂದರೂ ನಮ್ಮ ಜನರು ಅದನ್ನು ಉಲ್ಲಂಘಿಸುವುದು ಸರ್ವೇಸಾಮಾನ್ಯ ಎಂಬಂತಾಗಿದೆ. ಹೀಗಾಗಿ, ಅಪಾಯಕಾರಿ ಪಟಾಕಿಗಳ ತಯಾರಿಕೆಯನ್ನು ನಿಷೇಧಿಸುವುದೇ ಸೂಕ್ತ.

ಸಂಘ- ಸಂಸ್ಥೆಗಳ ಸದಸ್ಯರು ಶಾಲಾ ಕಾಲೇಜುಗಳಿಗೆ ಹೋಗಿ, ಯಾವುದೇ ಹಬ್ಬದ ಆಚರಣೆಯಲ್ಲಿನ ಅತಿರೇಕಗಳು ಹಾಗೂ ಪಟಾಕಿಯ ಅಪಾಯವನ್ನು ತಿಳಿಸಿ ಹೇಳಬೇಕು. ಪಟಾಕಿ ದುರಂತಗಳ ಬಗ್ಗೆ ಪ್ರಾತ್ಯಕ್ಷಿಕೆಯ ಮೂಲಕ ಎಚ್ಚರಿಕೆ ನೀಡಬೇಕು. ಇಂತಹ ವಿಷಯಗಳನ್ನು ಪಠ್ಯದಲ್ಲಿ ಸೇರಿಸಿದರೆ, ಸಂಭವನೀಯ ಅಪಾಯಗಳ ಬಗ್ಗೆ ಮಕ್ಕಳಲ್ಲಿ ಅರಿವು ಮೂಡುತ್ತದೆ.

ಎಂ.ಎಸ್.ಉಷಾ ಪ್ರಕಾಶ್, ಮೈಸೂರು

ಕಾಲಮಿತಿಯಲ್ಲಿ ಕಡತ ವಿಲೇವಾರಿ ಆಗಬೇಕು

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳು, ನೌಕರರ ವಿರುದ್ಧ ಶಿಸ್ತುಕ್ರಮ ಜರುಗಿಸುವುದಕ್ಕೆ ಸಂಬಂಧಿಸಿ ದೀರ್ಘಕಾಲದಿಂದ ಬಾಕಿ ಉಳಿದಿದ್ದ 310 ಕಡತಗಳನ್ನು ಸಚಿವ ಪ್ರಿಯಾಂಕ್ ಖರ್ಗೆ ಒಂದೇ ದಿನ ವಿಲೇವಾರಿ ಮಾಡಿರುವುದು (ಪ್ರ.ವಾ., ನ. 14) ಸ್ವಾಗತಾರ್ಹ. ಉಳಿದ ಸಚಿವರು ಹಾಗೂ ಇತರ ಇಲಾಖೆಗಳ ಉನ್ನತ ಅಧಿಕಾರಿಗಳು ಈ ಬಗೆಯ ನಡೆಯನ್ನು ತಾವೂ ಅಳವಡಿಸಿಕೊಂಡಲ್ಲಿ ಭ್ರಷ್ಟಾಚಾರ ನಿಯಂತ್ರಣ ಸಾಧ್ಯ.

ಕೆಲವು ಇಲಾಖೆಗಳಲ್ಲಿ ಈಗಲೂ ವೃಂದ ಮತ್ತು ನೇಮಕಾತಿ ನಿಯಮಗಳು ರಚನೆಯಾಗಿಲ್ಲ. ಕೆಳಹಂತದ ನೌಕರ ವರ್ಗದವರನ್ನು ಸತಾಯಿಸುವುದನ್ನು ಮೇಲಧಿಕಾರಿಗಳು ರೂಢಿಸಿಕೊಂಡಿರುವುದು ದುರದೃಷ್ಟಕರ. ಈ ದಿಸೆಯಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಮುಖ್ಯಮಂತ್ರಿಗಳು ಸಂಬಂಧಿಸಿದವರಿಗೆ ಸ್ಪಷ್ಟ ಸೂಚನೆ ನೀಡಬೇಕು. ಕಾಲಮಿತಿಯಲ್ಲಿ ಕಡತ ವಿಲೇವಾರಿ ಮಾಡುವ ಉದ್ದೇಶದಿಂದ ರೂಪಿಸಿದ ‘ಸಕಾಲ’ ಯೋಜನೆಗೆ ಬಲ ತುಂಬಬೇಕು.

ಭೀಮಾನಂದ ಮೌರ್ಯ, ಮೈಸೂರು

ಶಾಸಕರ ವಿರುದ್ಧ ಕ್ರಮ ಜರುಗಿಸಿ

₹ 10 ಸಾವಿರ ಲಂಚ ತೆಗೆದುಕೊಂಡು ವ್ಯಕ್ತಿಯೊಬ್ಬರ ಕೆಲಸ ಮಾಡಿಕೊಡುವಂತೆ ಬಸವಕಲ್ಯಾಣದ ಶಾಸಕ ಶರಣು ಸಲಗರ ಅವರು ಲೋಕೋಪಯೋಗಿ ಇಲಾಖೆಯ ನೌಕರನಿಗೆ ಹೇಳಿರುವ ಸುದ್ದಿ (ಪ್ರ.ವಾ., ನ. 14) ಓದಿ ಬಹಳ ವಿಷಾದ ಎನಿಸಿತು. ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳಿಗೆ ಇಂದಿನ ರಾಜಕಾರಣಿಗಳು ಮತ್ತು ಅಧಿಕಾರಿಗಳು ಯಾವ ರೀತಿಯಲ್ಲಿ ಸ್ಪಂದಿಸುತ್ತಾರೆ ಎಂಬುದು ಇಡೀ ನಾಡಿಗೆ ಜಗಜ್ಜಾಹೀರು ಆಯಿತು. ಲಂಚ ತೆಗೆದುಕೊಳ್ಳುವುದು, ಲಂಚ ಕೊಡುವುದು ಮತ್ತು ಲಂಚ ತೆಗೆದುಕೊಳ್ಳುವಂತೆ ಪ್ರೇರೇಪಿಸುವುದು ಅಪರಾಧ ಎಂಬ ಸಾಮಾನ್ಯ ಜ್ಞಾನ ಇವರಿಗೆ ಇಲ್ಲವೇ? ಆ ವ್ಯಕ್ತಿಯ ಕೆಲಸ ಮಾಡಿಕೊಡಲು ₹ 40 ಸಾವಿರ ಲಂಚಕ್ಕೆ ಬೇಡಿಕೆ ಇಡಲಾಗಿತ್ತು, ಅದನ್ನು ತಾವು ₹ 10 ಸಾವಿರಕ್ಕೆ ಇಳಿಸಲು ತಿಳಿಸಿದ್ದಾಗಿ ಶಾಸಕರು ಹೇಳಿದ್ದಾರೆ. ಲಂಚಕ್ಕೆ ಬೇಡಿಕೆ ಇಟ್ಟ ನೌಕರನನ್ನು ಅಮಾನತು ಮಾಡಿ, ಇತರ ನೌಕರರಿಗೆ ಅವರು ಎಚ್ಚರಿಕೆಯ ಸಂದೇಶ ಕೊಡಬಹುದಿತ್ತು. ಅದನ್ನುಬಿಟ್ಟು, ಲಂಚ ತೆಗೆದುಕೊಂಡು ಕೆಲಸ ಮಾಡಿಕೊಡುವಂತೆ ಒಬ್ಬ ಸರ್ಕಾರಿ ನೌಕರನಿಗೆ ತಾಕೀತು ಮಾಡುವುದು ಎಷ್ಟು ಸರಿ?

ಜನರಿಂದ ಆಯ್ಕೆಯಾದ ಶಾಸಕನ ಆದ್ಯತೆ ಭ್ರಷ್ಟಾಚಾರವನ್ನು ಮಟ್ಟ ಹಾಕುವುದು. ಆದರೆ, ಇವರೇ ಲಂಚ ತೆಗೆದುಕೊಳ್ಳಲು ಹೇಳಿದರೆ, ಜನರಿಗೆ ಯಾವ ರೀತಿ ರಕ್ಷಣೆ ಸಿಗಬಹುದು? ಇಂತಹವರನ್ನು ಆಯ್ಕೆ ಮಾಡಿದ ಜನರ ಪಾಡೇನು? ಶಾಸಕರ ವಿರುದ್ಧ ಸ್ಪೀಕರ್ ಸೂಕ್ತ ಕ್ರಮ ಕೈಗೊಳ್ಳಲಿ.

ವಿ.ತಿಪ್ಪೇಸ್ವಾಮಿ, ಹಿರಿಯೂರು

ನೆರವಿಗೆ ಮನವಿ


ನನ್ನ ತಂದೆ ಇ.ಎನ್.ಲಕ್ಷ್ಮಿನಾರಾಯಣ ಅವರು ಬ್ಲ್ಯಾಡರ್ ಕ್ಯಾನ್ಸರ್‌ನಿಂದ ಬಳಲುತ್ತಿದ್ದಾರೆ. ಕಿಮೊಥೆರಪಿ ಹಾಗೂ ಇಮ್ಯುನೊಥೆರಪಿ ಚಿಕಿತ್ಸೆಗೆ ₹ 10 ಲಕ್ಷ ಖರ್ಚು ತಗಲುವುದೆಂದು ವೈದ್ಯರು ತಿಳಿಸಿದ್ದಾರೆ. ಖಾಸಗಿ ಕಂಪನಿಯ ಉದ್ಯೋಗಿಯಾಗಿ ನಿವೃತ್ತರಾಗಿರುವ ಅವರಿಗೆ ಅಷ್ಟೊಂದು ಹಣ ಹೊಂದಿಸುವುದು ಅಸಾಧ್ಯ. ದಾನಿಗಳು ದಯಮಾಡಿ ನೆರವು ನೀಡಿ. ಬ್ಯಾಂಕ್ ವಿವರ: ಎಲ್.ವರಲಕ್ಷ್ಮಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಖಾತೆ ಸಂಖ್ಯೆ- 20186824765, ಆರ್.ಟಿ.ನಗರ ಶಾಖೆ, ಬೆಂಗಳೂರು. IFSC- SBIN0007982, ಸಂಪರ್ಕ ಸಂಖ್ಯೆ- 9148818403

ಎಲ್.ವರಲಕ್ಷ್ಮಿ, ಬೆಂಗಳೂರು


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮಹಾ ಗಡಿಪಾರು

40 ಲಕ್ಷ ಅಫ್ಗಾನ್ ನಿರಾಶ್ರಿತರ ಹೊರದಬ್ಬುತ್ತಿರುವ ಪಾಕಿಸ್ತಾನ



ಗಡಿದಾಟಿ ಬಂದ ತನ್ನದೇ ಪ್ರಜೆಗಳನ್ನು ಅಫ್ಗಾನಿಸ್ತಾನದ ತಾಲಿಬಾನ್ ಸರ್ಕಾರವು ಸಂಪೂರ್ಣವಾಗಿ ಒಳಗೇನೂ ಬಿಟ್ಟುಕೊಳ್ಳುತ್ತಿಲ್ಲ. ಗಡಿಗಳ ಸಮೀಪವೇ ಶಿಬಿರಗಳನ್ನು ನಿರ್ಮಿಸಿ, ಅಲ್ಲೇ ಇರುವಂತೆ ಮಾಡಿದೆ. ಅವರನ್ನೆಲ್ಲಾ ನೋಂದಣಿ ಮಾಡಿಕೊಳ್ಳುತ್ತಿದೆ. ಉದ್ಯೋಗ ಸಿಕ್ಕ ಕುಟುಂಬಗಳನ್ನಷ್ಟೇ ದೇಶದ ಬೇರೆ ಸ್ಥಳಗಳಿಗೆ ರವಾನಿಸುತ್ತಿದೆ. ಅಫ್ಗಾನಿಸ್ತಾನದಲ್ಲಿ ನೆಲೆಸಲು ಇಚ್ಛಿಸದೇ ಇರುವವರು ಬೇರೆ ದೇಶಗಳ ಆಶ್ರಯ ಕೋರಲು ಇಂಟರ್‌ನ್ಯಾಷನಲ್ ಮೈಗ್ರೇಷನ್ ಆರ್ಗನೈಸೇಷನ್ ಅವಕಾಶ ಕಲ್ಪಿಸಿದೆ. ಅಫ್ಗಾನ್ ಗಡಿಯಲ್ಲಿ ಕಚೇರಿ ತೆರೆದು, ನಿರಾಶ್ರಿತರಿಂದ ಅರ್ಜಿಗಳನ್ನು ಸ್ವೀಕರಿಸುತ್ತದೆ. ಕಚೇರಿ ಎದುರು ತಮ್ಮ ಸರದಿಗಾಗಿ ಕಾದು ಕುಳಿತ ನಿರಾಶ್ರಿತರು



ಅತ್ತ ದರಿ; ಇತ್ತ ಪುಲಿ– ಇದು ಅಫ್ಗಾನ್ ನಿರಾಶ್ರಿತರ ಸ್ಥಿತಿ. ಅತ್ತ ಅಫ್ಗಾನಿಸ್ತಾನಕ್ಕೂ ವಾಪಸಾಗಲು ಇಷ್ಟವಿಲ್ಲದೆ, ಇತ್ತ ಪಾಕಿಸ್ತಾನ ಸರ್ಕಾರದ ಹಿಂಸೆಯನ್ನೂ ತಾಳಲಾರದ ಹೀನ ಸ್ಥಿತಿಯಲ್ಲಿ ನಿರಾಶ್ರಿತರು ಅಫ್ಗಾನಿಸ್ತಾನಕ್ಕೆ ತೆರಳುತ್ತಿದ್ದಾರೆ. 'ಅಭಿವೃದ್ಧಿ ಹಾಗೂ ಭದ್ರತೆ'ಯ ಕಾರಣವೊಡ್ಡಿ ಪಾಕಿಸ್ತಾನವು ನಿರಾಶ್ರಿತರನ್ನು ಗಡಿಪಾರು ಮಾಡುತ್ತಿದೆ



ಪಾಕಿಸ್ತಾನದಿಂದ ಅಫ್ಗಾನಿಸ್ತಾನದತ್ತ ಹೊರಟ ನಿರಾಶ್ರಿತರ ಟ್ರಕ್‌ಗಳು

ಪ್ರಜಾವಾಣಿ ವಾರ್ತೆ

ಸೋವಿಯತ್ ರಷ್ಯಾವು 1979ರಲ್ಲಿ ಅಫ್ಗಾನಿಸ್ತಾನದ ಮೇಲೆ ಆಕ್ರಮಣ ಮಾಡಿತು. ಅಲ್ಲಿಂದ ಆರಂಭಗೊಂಡು 2021ರಲ್ಲಿ ತಾಲಿಬಾನ್ ಅಧಿಕಾರ ಹಿಡಿಯುವವರೆಗೆ ಅಫ್ಗಾನಿಸ್ತಾನದಿಂದ ಜನರು ಪಾಕಿಸ್ತಾನಕ್ಕೇ ಹೆಚ್ಚಿನ ಸಂಖ್ಯೆಯಲ್ಲಿ ವಲಸೆ ಬಂದಿದ್ದಾರೆ. ಹೀಗೆ ಬಂದ ಸುಮಾರು 40 ಲಕ್ಷ ನಿರಾಶ್ರಿತರಿಗೆ ಪಾಕಿಸ್ತಾನ ನೆಲೆ ನೀಡಿತ್ತು. ಭೂಕಂಪ, ಬರ, ಪದೇ ಪದೇ ನಡೆಯುವ ಯುದ್ಧಗಳು, ಹಿಂಸೆಗಳಿಂದ ರೋಸಿದ ಜನರು ಇರಾನ್, ಪಾಕಿಸ್ತಾನ ಸೇರಿದಂತೆ ಹಲವು ದೇಶಗಳಿಗೆ ವಲಸೆ ಹೋಗಿದ್ದಾರೆ. ಅಫ್ಗಾನಿಸ್ತಾನವನ್ನು ತಾಲಿಬಾನ್ ವಶಪಡಿಸಿಕೊಂಡ ಬಳಿಕವಂತೂ ಈ ಸಂಖ್ಯೆ ಅಧಿಕವಾಗಿದೆ. ವಿಶ್ವಸಂಸ್ಥೆ ಪ್ರಕಾರ, 2023ರಲ್ಲಿ 82 ಲಕ್ಷ ಜನರು ಸುಮಾರು 103 ದೇಶಗಳಿಗೆ ವಲಸೆ ಹೋಗಿದ್ದಾರೆ. ಊಟ, ಉದ್ಯೋಗ, ನೆಮ್ಮದಿಯ ಬದುಕು ಅರಸಿ ಅಫ್ಗಾನಿಸ್ತಾನದಿಂದ ಬಂದಿದ್ದ ಜನರನ್ನು ಸ್ವಾಗತಿಸಿದ್ದ ಪಾಕಿಸ್ತಾನವು ಈಗ ಏಕಾಏಕಿ ಅವರನ್ನು ಮರಳಿ ಅಫ್ಗಾನಿಸ್ತಾನಕ್ಕೆ ದೂಡುತ್ತಿದೆ.

'ಕಾನೂನುಬಾಹಿರವಾಗಿ ಪಾಕಿಸ್ತಾನದಲ್ಲಿ ನೆಲೆಸಿರುವ ಎಲ್ಲ ನಿರಾಶ್ರಿತರು ಅಕ್ಟೋಬರ್ 31ರ ಒಳಗಾಗಿ ದೇಶವನ್ನು ಬಿಟ್ಟು ತಮ್ಮ ದೇಶಗಳಿಗೆ ಮರಳಬೇಕು. ಇಲ್ಲವೇ ಗಡಿಪಾರು ಮಾಡಲಾಗುವುದು'– ಪಾಕಿಸ್ತಾನ ಸರ್ಕಾರವು ಇದ್ದಕ್ಕಿದ್ದಂತೆ ಅಕ್ಟೋಬರ್ ಮೊದಲ ವಾರದಲ್ಲಿ ಹೊರಡಿಸಿದ ಆದೇಶ ಇದು.

ಇದರಲ್ಲಿ ಅಫ್ಗಾನಿಸ್ತಾನದ ನಿರಾಶ್ರಿತರ ಸಂಖ್ಯೆಯೇ 17 ಲಕ್ಷ ದಾಟುತ್ತದೆ. 17 ಲಕ್ಷದ ಜತೆಗೆ ಉಳಿದ 23 ಲಕ್ಷ ಜನರನ್ನೂ ಹೊರಗಟ್ಟಲು ಪಾಕಿಸ್ತಾನ ಸರ್ಕಾರ ಸಿದ್ಧತೆ ನಡೆಸಿದೆ. 'ಪಾಕಿಸ್ತಾನವೇ ನಮ್ಮ ಮನೆ. ಇದನ್ನು ಬಿಟ್ಟು ಹೇಗೆ ಹೊರಡುವುದು? ನಮಗೂ ಘನತೆ ಇದೆ. ಅವಮಾನಕರವಾಗಿ ಒಮ್ಮಿಂದೊಮ್ಮೆ ಈ ರೀತಿ ದೇಶದಿಂದ ಹೊರದಬ್ಬುವುದು ಸರಿಯಲ್ಲ' ಎನ್ನುವುದು ವೃದ್ಧರೊಬ್ಬರ ಅಭಿಪ್ರಾಯ.

'ಒಂದೇ ತಿಂಗಳ ಗಡುವು ನೀಡಿ, ನಿರಾಶ್ರಿತರಿಗೆ ಹಿಂಸೆ ನೀಡಿ, ಭಯಪಡಿಸಿ ಪಾಕಿಸ್ತಾನದಿಂದ ಓಡಿಸಲಾಗುತ್ತಿದೆ' ಎನ್ನುತ್ತಾರೆ ಮಾನವಹಕ್ಕುಗಳ ಅಂತರರಾಷ್ಟ್ರೀಯ ಸಂಸ್ಥೆಗಳು. ಘನತೆಯ ಬದುಕು ಕಟ್ಟಿಕೊಳ್ಳುವುದು ನಿರಾಶ್ರಿತರ ಹಕ್ಕು ಎಂದು '1951 ನಿರಾಶ್ರಿತರ ಒಪ್ಪಂದ' ಹೇಳುತ್ತದೆ. ಪಾಕಿಸ್ತಾನ ಈ ಒಪ್ಪಂದಕ್ಕೆ ಸಹಿ ಹಾಕಿಲ್ಲ. ಆದರೂ, ಅಫ್ಗಾನ್ ನಿರಾಶ್ರಿತರನ್ನು ಈವರೆಗೆ ಒಪ್ಪಂದದ ನಿಯಮಗಳಂತೆಯೇ ನಡೆಸಿಕೊಂಡಿತ್ತು. ಆದರೆ ಈಗ ನಿಲುವು ಬದಲಿಸಿದ ಪಾಕಿಸ್ತಾನ, ನಿರಾಶ್ರಿತರನ್ನು ಹೊರದೂಡುತ್ತಿದೆ. ವಿವಿಧ ಕ್ಷೇತ್ರಗಳಲ್ಲಿ ಉದ್ಯೋಗದಲ್ಲಿದ್ದ ಅಫ್ಗಾನಿಸ್ತಾನದವರನ್ನು ಹಲವು ತಿಂಗಳ ಹಿಂದೆಯೇ ಕೆಲಸದಿಂದ ತೆಗೆಯಲಾಗಿದೆ. ನವೆಂಬರ್ 1ರಿಂದಲೇ ನಿರಾಶ್ರಿತರ ಮನೆಗಳನ್ನು ಬುಲ್ಡೋಜರ್‌ಗಳಿಂದ ನೆಲಸಮ ಮಾಡಲಾಗಿದೆ. ಕಾನೂನುಬಾಹಿರವಾಗಿ ದೇಶದಲ್ಲಿ ನೆಲೆಸಿರುವ ನಿರಾಶ್ರಿತರನ್ನು ಮಾತ್ರವೇ ಹೊರದಬ್ಬಲಾಗುತ್ತಿದೆ ಎಂದು ಪಾಕಿಸ್ತಾನ ಸರ್ಕಾರ ಹೇಳಿದೆ. ಆದರೆ, ನಿರಾಶ್ರಿತರ ಗುರುತಿನ ಚೀಟಿ ಇರುವ ಅಫ್ಗಾನಿಸ್ತಾನದ ಜನರನ್ನೂ ಪಾಕಿಸ್ತಾನವು ದೇಶದಿಂದ ಹೊರಗೆ ಕಳುಹಿಸುತ್ತಿದೆ.

ಆಧಾರ: ಎಎಫ್‌ಪಿ, ರಾಯಿಟರ್ಸ್, ವಿಶ್ವ ಸಂಸ್ಥೆಯ ಮಾನವ ಹಕ್ಕುಗಳ ಆಯೋಗ

ಪರದೇಸಿ ಬದುಕೂ, ಪಾಸ್ತೊ ಹಾಡೂ

'**ಪಾಕಿಸ್ತಾನ** ಇಂಥದ್ದೊಂದು ದಿನಕ್ಕೆ ಕಾರಣವಾಗುತ್ತದೆ ಎಂದು ನಾವು ಭಾವಿಸಿಯೇ ಇರಲಿಲ್ಲ' ಎನ್ನುತ್ತಾರೆ ಅಫ್ಗಾನಿಸ್ತಾನದ ಮಹಿಳೆಯೊಬ್ಬರು. ಅಫ್ಗಾನಿಸ್ತಾನ ಹಾಗೂ ಪಾಕಿಸ್ತಾನದ ಜನರ ನಡುವೆ ವಿವಾಹ ನಡೆದಿದೆ. ಇವರಿಗೆ ಮಕ್ಕಳೂ ಆಗಿದ್ದಾವೆ. ಈ ಮಕ್ಕಳು ಎಂದಿಗೂ ಅಫ್ಗಾನಿಸ್ತಾನ ನೋಡಿದವರಲ್ಲ. ಪಾಕಿಸ್ತಾನದ ಹೆಣ್ಣುಮಗಳು ತನ್ನ ಅಫ್ಗಾನಿಸ್ತಾನದ ಗಂಡನಿಂದ ದೂರವಾಗಿದ್ದಾರೆ. ಅಫ್ಗಾನಿಸ್ತಾನದ ಹೆಣ್ಣುಗಳದ್ದೂ ಇದೇ ಕತೆ. ಬಂಧನದಿಂದ ಪಾರಾಗಲು ಹಲವು ನಿರಾಶ್ರಿತರು ನೆಲಮಾಳಿಗೆಯಲ್ಲಿ 'ಬಂದಿ'ಯಾಗಿದ್ದಾರೆ.

'ನನಗೆ 11 ವರ್ಷ ಇರುವಾಗಿನಿಂದ ಪಾಸ್ತೊ ಹಾಡುಗಳನ್ನು ಹಾಡುತ್ತಿದ್ದೇನೆ. ಅಫ್ಗಾನಿಸ್ತಾನದಲ್ಲಿ ಹೆಣ್ಣುಮಕ್ಕಳು ಸಾರ್ವಜನಿಕವಾಗಿ ಹಾಡುವುದು ನಿಷೇಧ. ಅದಕ್ಕಾಗಿಯೇ 2021ರಲ್ಲಿ ಇಲ್ಲಿಗೆ ಬಂದಿದ್ದೇನೆ. ನನ್ನ ವೀಸಾ ಕೂಡ ಮುಗಿಯುತ್ತಿದೆ. ಕೆನಡಾದಲ್ಲೋ, ಫ್ರಾನ್ಸ್‌ನಲ್ಲೋ ಆಶ್ರಯ ಸಿಗಬಹುದು ಎಂದು ಅಂದುಕೊಂಡಿದ್ದೇನೆ' ಎನ್ನುತ್ತಾರೆ 28 ವರ್ಷದ ವಫಾ ಎನ್ನುವ ಯುವತಿ.

'ಇಸ್ಲಾಂನಿಂದ ಬೇರೆ ಧರ್ಮಗಳಿಗೆ ಮತಾಂತರ ಆಗುವುದು ತಾಲಿಬಾನ್ ಆಡಳಿತದಲ್ಲಿ ನಿಷಿದ್ಧ. ಅಂತಹವರನ್ನು ಅಲ್ಲಿ ಗಲ್ಲಿಗೇರಿಸಲಾಗುತ್ತದೆ. ಇಸ್ಲಾಂನಿಂದ ಕ್ರೈಸ್ತ ಧರ್ಮಕ್ಕೆ ಸಾವಿರಾರು ಮಂದಿ ಈಗಾಗಲೇ ಮತಾಂತರವಾಗಿದ್ದಾರೆ. ಇವರೂ ಈಗ ಅಫ್ಗಾನಿಸ್ತಾನಕ್ಕೆ ಹೊರಟಿದ್ದಾರೆ. ಸಿಖ್ ಹಾಗೂ ಹಜಾರಾ ಸಮುದಾಯಗಳ ಮಧ್ಯೆ ಅಫ್ಗಾನಿಸ್ತಾನದಲ್ಲಿ ವೈರತ್ವವಿದೆ. ಹಜಾರಾ ಸಮುದಾಯವರನ್ನು ಅಲ್ಲಿ ಹುಡುಕಿ ಹುಡುಕಿ ಕೊಲ್ಲಲಾಗುತ್ತಿದೆ. ಈಗ ಈ ಸಮುದಾಯದವರೂ ಅಲ್ಲಿಗೆ ತೆರಳಬೇಕಾಗಿದೆ.

ಅಫ್ಗಾನಿಸ್ತಾನಕ್ಕೆ ತೆರಳಿ ಮಾಡುವುದಾದರೂ ಏನು ಎನ್ನುವುದು ಹಲವರ ಪ್ರಶ್ನೆ. 'ನಮ್ಮದಾದ ಭೂಮಿ ಇಲ್ಲ, ಮನೆಯಿಲ್ಲ, ಮಾಡಲು ಕೆಲಸವಿಲ್ಲ. ಅಲ್ಲಿಗೆ ಹೋಗಿ ಏನು ಮಾಡುವುದು. ಭೂಕಂಪ, ಬರದಿಂದ ಅಲ್ಲಿ ಈಗಾಗಲೇ ಹಲವು ಸಂಕಷ್ಟಗಳಿವೆ. ನಮಗೆ ಎಲ್ಲಿಂದ ಉದ್ಯೋಗ ಸಿಗುತ್ತದೆ. ಆ ದೇಶದಲ್ಲಿ ಎಲ್ಲಿಗೆ ಅಂತ ಹೋಗುವುದು' ಹಲವರ ಪ್ರಶ್ನೆ.

ಪಾಕಿಸ್ತಾನದ ಆರೋಪ: 'ಟಿಟಿಪಿ ಉಗ್ರರು ಎರಡು ವರ್ಷದಲ್ಲಿ ಪಾಕಿಸ್ತಾನದ ವಿರುದ್ಧ ಆತ್ಮಾಹುತಿ ಬಾಂಬ್ ದಾಳಿ ಸೇರಿ ಹಲವು ದಾಳಿಗಳನ್ನು ನಡೆಸಿದ್ದಾರೆ.ಖೈಬರ್ ಪ್ರಾಂತದಲ್ಲೇ ಇಂತಹ ದಾಳಿಗಳು ಹೆಚ್ಚು ನಡೆದಿವೆ. ಇದರಲ್ಲಿ 2,267 ನಮ್ಮ ಪ್ರಜೆಗಳು ಸಾವನ್ನಪ್ಪಿದ್ದಾರೆ. ಆತ್ಮಾಹುತಿ ದಾಳಿ ನಡೆಸಿದವರಲ್ಲಿ 15 ಮಂದಿ ಅಫ್ಗಾನಿಸ್ತಾನದವರಾಗಿದ್ದಾರೆ. ತಾಲಿಬಾನ್ ಕುಮ್ಮಕ್ಕಿನಿಂದಲೇ ಟಿಟಿಪಿ ದಾಳಿ ನಡೆಸುತ್ತಿದೆ' ಎನ್ನುತ್ತಾರೆ ಪಾಕಿಸ್ತಾನದ ಹಂಗಾಮಿ ಪ್ರಧಾನಿ ಅನ್ವರ್ ಉಲ್ ಹಕ್ ಕಕ್ಕರ್. ಆದರೆ ಇದನ್ನು ತಾಲಿಬಾನ್ ನಿರಾಕರಿಸಿದೆ.

ಅಫ್ಗಾನಿಸ್ತಾನ ಗಡಿಗಳಲ್ಲಿ ಶಿಬಿರಗಳನ್ನು ಮಾಡಿ, ಟೆಂಟ್‌ಗಳನ್ನು ಹಾಕಲಾಗಿದೆ. ಆದರೆ, ಇದು ನಿರಾಶ್ರಿತರ ಸಂಖ್ಯೆಗೆ ಹೋಲಿಸಿದರೆ ಬಹಳ ಕಡಿಮೆ. ಗಡಿ ದಾಟಬೇಕು ಎಂದಾದರೆ, ಸುಮಾರು ಆರು–ಏಳು ದಿನಗಳು ಕಾಯುವ ಸ್ಥಿತಿ ಎದುರಾಗಿದೆ. ಅಫ್ಗಾನಿಸ್ತಾನದಲ್ಲಿ ನಿರ್ಮಿಸಿರುವ ಶಿಬಿರಗಳಲ್ಲಿ ನೀರಿಲ್ಲ, ಆಹಾರವಿಲ್ಲ. ಅಫ್ಗಾನಿಸ್ತಾನದಲ್ಲಿ ಚಳಿಗಾಲ ಆರಂಭವಾಗಿದೆ. ಮಕ್ಕಳು, ಗರ್ಭಿಣಿಯರು, ವೃದ್ಧರು ತೀವ್ರವಾಗಿ ಸಂಕಷ್ಟಕ್ಕೆ ಈಡಾಗಿದ್ದಾರೆ. ಆಹಾರವಿಲ್ಲದೆ, ಒಂದು ಲೀಟರ್ ಬಾಟಲಿ ನೀರಿನಿಂದ ಇಡೀ ದಿನ ಕುಟುಂಬವೊಂದು ಜೀವನ ನಡೆಸುತ್ತಿದೆ.

'ಸಸಿಗಳು ಮರಗಳಾಗಿವೆ'

ಪಾಕಿಸ್ತಾನಕ್ಕೆ ಓಡಿಬಂದಾಗ ನಾನಿನ್ನೂ ಚಿಕ್ಕ ಹುಡುಗ. ಆಗಲೇ ಇಟ್ಟಿಗೆಗೂಡಿನಲ್ಲಿ ಕೆಲಸಕ್ಕೆ ಸೇರಿದ್ದೆ. ಮದುವೆಯೂ ಆದೆ. ನಾನೂ ನನ್ನ ಹೆಂಡತಿ ಕೈಯಾರೆ ಮಾಡಿದ ಇಟ್ಟಿಗೆಗಳಲ್ಲೇ ಮನೆ ಕಟ್ಟಿಕೊಂಡಿದ್ದೆವು. ಆಗ ನಾನು ನೆಟ್ಟ ಎರಡು ಸಸಿಗಳು ಈಗ ಮರಗಳಾಗಿವೆ. ನನ್ನ ಮಕ್ಕಳು–ಮೊಮ್ಮಕ್ಕಳು ಇಲ್ಲಿಯೇ ಹುಟ್ಟಿವೆ. ಈಗ 40 ವರ್ಷಗಳ ನಂತರ ನೀವು ಇಲ್ಲಿನವರಲ್ಲ ಎಂದು ಓಡಿಸುತ್ತಿದ್ದಾರೆ

ಅಬ್ದುಲ್ಲಾ, ಪೆಷಾವರದಲ್ಲಿ ನೆಲೆಸಿದ್ದ ಅಫ್ಗಾನ್ ನಿರಾಶ್ರಿತ



ಸರ್ಕಾರಿ ಪ್ರಾಯೋಜಿತ 'ದಾಳಿ'

ನಿರಾಶ್ರಿತರನ್ನು ಹೊರದಬ್ಬಲು ಪಾಕಿಸ್ತಾನವು ಹಲವು ತಿಂಗಳಿನಿಂದ ತಯಾರಿ ನಡೆಸಿತ್ತು. ಇದಕ್ಕಾಗಿ ದೇಶದಾದ್ಯಂತ ಬಂಧನ ಕೇಂದ್ರಗಳನ್ನು ತೆರೆದಿತ್ತು. ಮನೆ ಮನೆಗೆ 'ದಾಳಿ' ಇಡುವುದು, ಮನೆಮಂದಿಯನ್ನು ಬಂಧಿಸಿ, ಬಂಧನ ಕೇಂದ್ರಗಳಿಗೆ ಹಾಕುವುದು... ಮಹಿಳೆಯರನ್ನು ಪುಟ್ಟ ಮಕ್ಕಳನ್ನೂ ಬಂಧಿಸಲಾಗಿದೆ. 'ದಾಳಿ'ಯ ವೇಳೆ ನಿರಾಶ್ರಿತರಿಗೆ ಹಿಂಸೆಯನ್ನೂ ನೀಡಲಾಗಿದೆ ಎನ್ನುವುದು ಮಾನವಹಕ್ಕು ಆಯೋಗದ ಆರೋಪ. 'ಕೆಲವು ಕಡೆ ಇಂಥ ಘಟನೆ ನಡೆದಿರಬಹುದು. ಆದರೆ, ಮಹಿಳೆಯರನ್ನು ಮಕ್ಕಳನ್ನು 'ಭಾರಿ ಎಚ್ಚರ'ದಿಂದ ನೋಡಿಕೊಳ್ಳುವಂತೆ ಆದೇಶಿಸಲಾಗಿದೆ' ಎನ್ನುತ್ತದೆ ಪಾಕಿಸ್ತಾನ ಸರ್ಕಾರ.

ಮಹಿಳೆಯರು ಹಾಗೂ ಮಕ್ಕಳು ಮನೆಯಲ್ಲಿ ಇರುವಾಗ ಕುಟುಂಬಕ್ಕೆ ಸಂಬಂಧಿಸಿದವರು ಮನೆಗೆ ಬರುವುದನ್ನು ಅಫ್ಗಾನಿಸ್ತಾನದ ಜನರು ಇಷ್ಟಪಡುವುದಿಲ್ಲ. ಇದು ಅವರ ಸಂಪ್ರದಾಯಕ್ಕೆ, ಧರ್ಮಕ್ಕೆ ವಿರುದ್ಧವಾದುದು. ಆದ್ದರಿಂದ, ಈ ಮುಜುಗರದಿಂದ, ಬಂಧನದ ಭೀತಿಯಿಂದ ಪಾರಾಗಲು ನಿರಾಶ್ರಿತರು ತಾವಾಗಿಯೇ ದೇಶವನ್ನು ಬಿಡುತ್ತಿದ್ದಾರೆ. ಕೆಲವೊಮ್ಮೆ ಕುಟುಂಬದ ಎಲ್ಲರನ್ನೂ, ಕೆಲವೊಮ್ಮೆ ಕುಟುಂಬದ ಕೆಲವರನ್ನು ಪೊಲೀಸರು ಬಂಧಿಸಿದ್ದಾರೆ. ಬಂಧನ ಕೇಂದ್ರದಿಂದ ಪಾಕಿಸ್ತಾನ–ಅಫ್ಗಾನಿಸ್ತಾನದ ಗಡಿಗೆ ತಂದು ಬಿಟ್ಟಿದ್ದಾರೆ. ಇವರುಗಳು ಕುಟುಂಬದಿಂದ ದೂರವಾಗಿದ್ದಾರೆ. ನೂರಾರು ಸಂಖ್ಯೆಯಲ್ಲಿ ಬಂಧನದಲ್ಲಿರುವ ನಿರಾಶ್ರಿತರನ್ನು ಇನ್ನೂವರೆಗೂ ಪಾಕಿಸ್ತಾನ ಬಿಡುಗಡೆ ಮಾಡಿಲ್ಲ.

ಟೈಗರನ ಕಾರ್ಟೂನಿಷ್ ಸಾಹಸಗಳು



'ಟೈಗರ್ 3' ಸಿನಿಮಾದಲ್ಲಿ ಸಲ್ಮಾನ್ ಖಾನ್

ನಾವು ನೋಡಿದ ಸಿನಿಮಾ

ಚಿತ್ರ : ಟೈಗರ್ 3
- ನಿರ್ಮಾಣ: ಆದಿತ್ಯ ಚೋಪ್ರಾ
- ನಿರ್ದೇಶನ: ಮನೀಷ್ ಶರ್ಮ
- ತಾರಾಗಣ: ಸಲ್ಮಾನ್ ಖಾನ್, ಕತ್ರಿನಾ ಕೈಫ್, ಇಮ್ರಾನ್ ಹಶ್ಮಿ, ರೇವತಿ, ಸಿಮ್ರಾನ್, ಕುಮುದ್ ಮಿಶ್ರ, ಶಾರುಕ್ ಖಾನ್

ಚಿಣ್ಣರ ಚೆನ್ನರ ಸಿನಿಮಾ ('ಚೈಲ್ಡಿಷ್' ಸಿನಿಮಾ ಎನ್ನುವುದನ್ನು ಕೆಲವರು ಹೀಗೆ ಸಮರ್ಥಿಸಿಕೊಳ್ಳುತ್ತಾರೆ) ಮಾಡಿದರೆ ಹೇಗಿರಬಹುದು ಎನ್ನುವುದಕ್ಕೆ 'ಪಠಾಣ್'ನಲ್ಲಿ ಚಿತ್ರಕಥಾ ಬರಹಗಾರ ಶ್ರೀಧರ್ ರಾಘವನ್ ಸುಳಿವುಗಳನ್ನು ಕಾಣಿಸಿದ್ದರು. ಅವರದ್ದೇ ಬರಹವಿದ್ದ 'ವಾರ್' ಹಿಂದಿ ಚಿತ್ರದ ಜಾಯಮಾನವೂ ಅದೇ. ಮಿಕ್ಕಿ–ಮೌಸ್ ಕಾರ್ಟೂನುಗಳ ಭಾವದ ಮೀಟುಗಳಿಗೆ ಹೊರತೇ ಆದ 'ಕಾರ್ಟೂನ್ ಚಿತ್ರಗಳು' ಬರುತ್ತಿರುವ ಈ ಕಾಲದಲ್ಲಿ 'ಟೈಗರ್ 3' ಕೂಡ ಅಂಥದ್ದಕ್ಕೇ ಇನ್ನೊಂದು ಸೇರ್ಪಡೆ.

'ಟೈಗರ್ 3' ಚಿತ್ರದ ಸಾಹಸ ದೃಶ್ಯವೊಂದರಲ್ಲಿ ಪಠಾಣ್ ಅರ್ಥಾತ್ ಶಾರುಕ್ ಖಾನ್ ಬರುತ್ತಾರೆ; 'ಆರ್‌ಆರ್‌ಆರ್' ಸಿನಿಮಾದಲ್ಲಿ ರಾಮ್‌ಚರಣ್ ಹಾಗೂ ಜೂನಿಯರ್ ಎನ್‌ಟಿಆರ್ ಇಬ್ಬರೂ ಭೇಟಿಯಾಗುವ ದೃಶ್ಯದ ದುರ್ಬಲ ಅನುಕರಣೆಯಂತೆ. ಅಲ್ಲಿ ಸೇತುವೆ ಮೇಲಿನ ಗೂಡ್ಸ್ ಬೋಗಿಗಳು ಹೊತ್ತಿ ಉರಿಯುತ್ತವೆ. ಇಲ್ಲಿ ಸೇತುವೆಯೇ ಮುರಿದು, ಅಲ್ಲಿ ಶಸ್ತ್ರಾಸ್ತ್ರಗಳ ಮೊರೆತದ ಸದ್ದು. ಸಲ್ಮಾನ್, ಶಾರುಕ್ ಇಬ್ಬರೂ ಉಕ್ಕಿನ ಹಗ್ಗಗಳನ್ನು ಹಿಡಿದು ಎತ್ತಲಿಂದ ಎತ್ತಲೋ ಹಾರಾಡುತ್ತಾ, ಹೆಲಿಕಾಪ್ಟರನ್ನೂ ವಶಕ್ಕೆ ತೆಗೆದುಕೊಂಡು ಇನ್ನೆತ್ತಲೋ ಸಾಗುವ ಕಾರ್ಟೂನಿಷ್ ಧೋರಣೆ. ಈ ಸಾಹಸಗಳನ್ನು ನೋಡಿ ರೋಮಾಂಚನವಾಗುವುದಕ್ಕಿಂತ ನಗು ಬರುವುದೇ ಹೆಚ್ಚು.

ಈ ಸಲ ಪಾಕಿಸ್ತಾನದ ಪ್ರಧಾನಿಯ ಇಮೇಜನ್ನು ಉಳಿಸುವ ಕೆಲಸವನ್ನು ನಿರ್ದೇಶಕರು ಟೈಗರ್ ಕೈಗೆ ಕೊಟ್ಟುಬಿಟ್ಟಿದ್ದಾರೆ. ಪಾಕಿಸ್ತಾನದ ಭಕ್ತನಂತೆ ಭಾಷಣ ಹೊಡೆದು, ಭಾರತವನ್ನು ಮುಗಿಸುವ ಹುಚ್ಚು ಕನಸು ಕಾಣುವ ಖಳನ ಪಾತ್ರದ ಬರವಣಿಗೆ ಅತಿ ಬಾಲಿಶವಾಗಿದೆ. ಹೀಗಾಗಿ ಟೈಗರನ ಸಾಹಸಗಳನ್ನೆಲ್ಲ ಗಾಳಿಪಟದ ಹಾರಾಟಕ್ಕೆ ಸಮೀಕರಿಸಬಹುದು. ಕತ್ರಿನಾ ಕೈಫ್ ನೃತ್ಯ ಮಾಡದೆ, ಹೆಚ್ಚಾಗಿ ಹೊಡೆದಾಟವನ್ನೇ ಮಾಡಿರುವುದು ರಸಿಕರಿಗೆ ಬಗೆದ ದ್ರೋಹ. ಹಿಂದೆ ಗಿರೀಶ ಕಾರ್ನಾಡರು ನಿರ್ವಹಿಸಿದ್ದ ಪಾತ್ರಕ್ಕೆ ರೇವತಿ ನ್ಯಾಯ ಸಲ್ಲಿಸಿದ್ದಾರೆ.

ಅನಯ್ ಗೋಸ್ವಾಮಿ ಸಿನಿಮಾಟೊಗ್ರಫಿಯು ಕಣ್ಣಿಗೆ ವಿವರಗಳನ್ನು ಕಟ್ಟುವಂತೆ ಮಾಡುವುದಲ್ಲದೆ ತಪ್ಪುಗಳನ್ನೂ ಎತ್ತಿ ತೋರಿಸುತ್ತದೆ. ಸಲ್ಮಾನ್ ಖಾನ್ ಅಭಿನಯಿಸುವ ಕಷ್ಟ ತೆಗೆದುಕೊಂಡಿಲ್ಲ. ಬಟ್ಟೆ ಮಳಿಗೆ ಎದುರಿನ ಹೆಣ್ಣುಬೊಂಬೆಯಂತಿರುವ ಕತ್ರಿನಾ, ಗಂಡುಬೊಂಬೆಯಂತಿರುವ ಇಮ್ರಾನ್ ಹಶ್ಮಿ ತಮಗೂ ನಟನಾ ಕೌಶಲಕ್ಕೂ ಸಂಬಂಧವಿಲ್ಲ ಎಂಬಂತೆ ಇದ್ದುಬಿಟ್ಟಿದ್ದಾರೆ. ಪ್ರೀತಂ ಸಂಗೀತವಾಗಲೀ, ಕುಮುದ್ ಮಿಶ್ರಾ ಹದವರಿತ ಅಭಿನಯವಾಗಲೀ, ಶಾರುಕ್ ಖಾನ್ ಕಾಮಿಡಿ ಟೈಮಿಂಗ್ ಆಗಲೀ ಮೂರನೇ ಟೈಗರ್ ಗರ್ಜಿಸುವಂತೆ ಮಾಡಲು ಸಾಕಾಗುವುದಿಲ್ಲ.

ವಿಶಾಖ ಎನ್.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಗುರುವಾರ ನವೆಂಬರ್ 16, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ತೃತೀಯ ಗಂ. 12-35 ನಕ್ಷತ್ರ: ಮೂಲಾ ಗಂ. 26-17 ಯೋಗ: ಸುಕರ್ಮ ಗಂ 09-59 ಕರಣ: ಗರ ಗಂ. 12-35, ತುಲಾ ಮಾಸದ 30 ನೇ ದಿನ, ಮಳೆನಕ್ಷತ್ರ: ವಿಶಾಖ 3.
ರಾಹುಕಾಲ : ಮಧ್ಯಾಹ್ನ 01-30 - 03-00
ಸೂರ್ಯೋದಯ : 06-34 ಸೂರ್ಯಾಸ್ತ : 05-57
ಮುಸ್ಲಿಂ ದಿನಾಂಕ : 01 ಜುಮಾದುಲ್ಲಾವಲ್
ಅದೃಷ್ಟ ಸಂಖ್ಯೆ : 1, 7

ಮೇಷ: ನಿಮ್ಮ ಈ ದಿನದ ಕೆಲಸಕ್ಕೆ ಇನ್ನೊಬ್ಬರನ್ನು ಅವಲಂಬಿಸುವುದು, ನಂಬಿಕೊಳ್ಳುವುದು ಸರಿಯಲ್ಲ. ದೇಹಾರೋಗ್ಯದ ವಿಚಾರದಲ್ಲಿ ನಿರ್ಲಕ್ಷ್ಯ ಮಾಡುವುದು ಸರಿಯಲ್ಲ. ಸ್ವಸಾಮರ್ಥ್ಯಕ್ಕೆ ಸರಿಯಾದ ಕೆಲಸ ಆರಿಸಿಕೊಳ್ಳಿರಿ.

ವೃಷಭ: ನಿಮ್ಮ ಕೆಲಸಕ್ಕೆ ದಾಯಾದಿ ವರ್ಗದವರಿಂದ ಅಪರೂಪಕ್ಕೆ ಅನುಕೂಲ ಉಂಟಾಗಲಿದೆ. ವೃತ್ತಿ ಅಥವಾ ಕೆಲಸಗಳಲ್ಲಿ ಬದಲಾವಣೆ ಸನ್ನಿಹಿತವಾಗಲಿದೆ. ವಾಹನಾದಿ ಯಂತ್ರಗಳಿಂದ ಧನ ಮತ್ತು ಸಮಯ ವ್ಯಯವಾಗಬಹುದು.

ಮಿಥುನ: ನಿಮ್ಮ ಕೈ ಮೀರಿದ ಕೆಲಸಗಳ ಬಗ್ಗೆ ಮತ್ತೆ ಮತ್ತೆ ಯೋಚಿಸುವುದು ಸರಿಯಲ್ಲ. ಕುಟುಂಬದ ಸದಸ್ಯರು ಜೊತೆಗೂಡಿ ಸಂತೋಷಮಯವಾಗಿ ಕಾಲ ಕಳೆಯುವ ಅವಕಾಶ ಲಭ್ಯವಾಗುವುದು. ವ್ಯಾಧಿಗಳಿಂದ ಗುಣಮುಖರಾಗುವಿರಿ.

ಕರ್ಕಾಟಕ: ನಿಮ್ಮ ಸುತ್ತಮುತ್ತಲಿನ ವಿದ್ಯಮಾನಗಳ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹವಾಗುವುದು. ಕಾರ್ಯಗಾರದಲ್ಲಿ ಗುಂಪಿನ ಮುಂದಾಳತ್ವ ವಹಿಸಿಕೊಳ್ಳಬೇಕಾಗುವುದು. ಮನೆ ಕಟ್ಟುವ ಕೆಲಸ ಮುಂದುವರೆಯುವುದು.

ಸಿಂಹ: ಯಾವುದೇ ಹೊಸ ಉದ್ಯೋಗ ಅಥವಾ ಕರಾರುಗಳ ವಿಚಾರದಲ್ಲಿ ಮುಂದುವರೆಯಲು ಈ ದಿನ ಸರಿಯಲ್ಲ. ನಿಮ್ಮ ದಿಟ್ಟತನದ ಜೊತೆಗೆ ಸ್ವಲ್ಪ ತಂತ್ರಗಾರಿಕೆ ತೋರಿದರೆ ಅಧಿಕಾರಗಳಿಸುವುದು ಕಷ್ಟವೇನಲ್ಲ.

ಕನ್ಯಾ: ಅಸಾಧ್ಯ ಕಾರ್ಯಗಳನ್ನೂ ಸಾಧಿಸಿ ತೋರಿಸುವ ಮನೋಬಲ ನಿಮ್ಮಲ್ಲಿದೆ. ನಿಮ್ಮಲ್ಲಿದ್ದ ಅನಗತ್ಯ ಚಿಂತೆ, ಭಯಗಳು ದೂರಾಗಿ ನೆಮ್ಮದಿ ಹೊಂದುವಿರಿ. ವ್ಯವಹಾರಗಳನ್ನು ವಿಸ್ತರಿಸಿಕೊಳ್ಳುವಲ್ಲಿ ಸ್ನೇಹಿತರು ನೆರವಾಗಲಿದ್ದಾರೆ.

ತುಲಾ: ಗುರಿ ಸಾಧಿಸಲು ಪ್ರಮುಖ ವ್ಯಕ್ತಿಗಳೊಂದಿಗಿನ ಭೇಟಿ ಮತ್ತು ಕೆಲ ಬದಲಾವಣೆ ಅನಿವಾರ್ಯ ಎನಿಸಲಿದೆ. ಸ್ವ ಉದ್ಯೋಗಿಗಳು ಕೈ ತಪ್ಪಿ ಹೋಗಿದ್ದ ಕೆಲಸಗಳನ್ನು ಮರಳಿ ಪಡೆದುಕೊಳ್ಳುವಲ್ಲಿ ಗೆಲುವು ಕಾಣುವಿರಿ.

ವೃಶ್ಚಿಕ: ಸಾಂಸಾರಿಕವಾಗಿ ಮತ್ತು ಆರ್ಥಿಕವಾಗಿ ನಿಮ್ಮ ಇಷ್ಟಾರ್ಥ ಸಿದ್ಧಿಸುವುದು. ಅದನ್ನು ಈ ದಿನ ಉಪಯೋಗಿಸಿಕೊಳ್ಳಿರಿ. ಹಾಲು ಉತ್ಪನ್ನ ಪದಾರ್ಥಗಳ ಮಾರಾಟದಿಂದ ವರಮಾನ ಹೆಚ್ಚುವುದು. ಕೃಷಿಕರಿಗೆ ಸಂಪಾದನೆ ಹೆಚ್ಚಲಿದೆ.

ಧನು: ಸಹವರ್ತಿಗಳ ಅಭಿಪ್ರಾಯ ತಿರಸ್ಕರಿಸುವುದು ಸರಿಯಲ್ಲ, ಆಲಿಸಿ ಉಪಯೋಗಕ್ಕೆ ಬರುವ ಅಂಶವನ್ನು ಸ್ವೀಕರಿಸಿ. ಸಂತಾನದ ಸುದ್ದಿ ಆನಂದ ತರಲಿದೆ. ಸಂಪರ್ಕ ಮಾಧ್ಯಮ ಕ್ಷೇತ್ರದಲ್ಲಿರುವವರಿಗೆ ಉತ್ತಮವಾದ ದಿನ.

ಮಕರ: ಲೇಖನಗಾರರಿಗೆ ಮತ್ತು ಅಧ್ಯಾಪನ ವೃತ್ತಿಯುಳ್ಳವರಿಗೆ ಉನ್ನತ ಯಶಸ್ಸು. ವ್ಯಾಪಾರ ವ್ಯವಹಾರಗಳಲ್ಲಿ ಚತುರ ನಡೆ ಇರುವುದು. ಗುಡಿ ಕೈಗಾರಿಕೆಗಳ ವಸ್ತುಗಳಿಗೆ ಪ್ರದರ್ಶನ ಮಾರಾಟದಲ್ಲಿ ಬೇಡಿಕೆ ಹೆಚ್ಚುವುದು.

ಕುಂಭ: ದಾಂಪತ್ಯದಲ್ಲಿ ವಾದಗಳಿಗೆ ಆಸ್ಪದ ನೀಡದಿರುವುದು ಒಳ್ಳೆಯದು. ವಸ್ತ್ರ ವಿನ್ಯಾಸದಲ್ಲಿ ವಿಶೇಷ ಪರಿಣಿತಿ ತೆಗೆದುಕೊಳ್ಳಬಹುದು. ಮನೋಬಲದ ಜತೆ ಗಣೇಶನನ್ನು ಪೂಜಿಸುವುದರಿಂದ ಕಾರ್ಯಸಿದ್ಧಿಯಾಗುವುದು.

ಮೀನ: ಆಪ್ತ ಸ್ನೇಹಿತರು ಮತ್ತು ನೆರೆಯವರೊಂದಿಗೆ ಬಾಂಧವ್ಯ ಉತ್ತಮಗೊಳ್ಳುವುದು. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ. ಜಮೀನಿನಲ್ಲಿ ವಿಷಜಂತುಗಳಿಂದ ಭಯವಾಗುವ ಸನ್ನಿವೇಶ ನಡೆಯಬಹುದು.

ನುಡಿ ಬೆಳಗು

ಬೇವು ಬಿತ್ತಿದರೆ ಮಾವು ಸಿಕ್ಕೀತೇ?



ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಯೂರೋಪಿನ ದೇಶವೊಂದರ ಬಹಳ ಹಿಂದಿನ ಕಥೆ. ಒಬ್ಬ ರೈತ ಪ್ರತೀ ದಿನ ಒಂದು ಪೌಂಡ್ ಬೆಣ್ಣೆಯನ್ನು ಬೇಕರಿಯಾತನಿಗೆ ಮಾರುತ್ತಿದ್ದ. ಕೆಲವು ತಿಂಗಳುಗಳ ನಂತರ ಒಮ್ಮೆ ಹೀಗೆಯೇ ಬೇಕರಿಯವನಿಗೆ ಬೆಣ್ಣೆಯನ್ನು ತೂಕ ಮಾಡ ಬೇಕೆಂದೆನಿಸಿತು. ತೂಕ ಮಾಡಿದಾಗ ಅದು ಒಂದು ಪೌಂಡಿಗಿಂತ ಕಡಿಮೆಯಿತ್ತು. ಬೇಕರಿಯವನಿಗೆ ವಿಪರೀತ ಕೋಪ ಬಂದಿತು, 'ಎಲಾ ಇವನ! ದಿನವೂ ಖರೀದಿ ಮಾಡುವ ನನಗೇ ಮೋಸ ಮಾಡಿದನಲ್ಲ' ಎಂದುಕೊಂಡು ನ್ಯಾಯಾಲಯಕ್ಕೆ ದೂರು ತೆಗೆದುಕೊಂಡು ಹೋದ. ಅಲ್ಲಿ ನ್ಯಾಯಾಧೀಶರು ರೈತನಿಗೆ 'ನೀನು ಹೇಗೆ ಬೆಣ್ಣೆಯನ್ನು ತೂಕ ಮಾಡುತ್ತೀ' ಎಂದು ಕೇಳಿದರು. ಆಗ ರೈತ, 'ಸ್ವಾಮೀ ನಾನು ಬಡವ. ನನ್ನ ಹತ್ತಿರ ತೂಕದ ಯಂತ್ರವೇನೋ ಇದೆ. ಆದರೆ ತೂಕದ ಕಲ್ಲುಗಳಿಲ್ಲ. ಇವನು ನನ್ನ ಹತ್ತಿರ ಬೆಣ್ಣೆ ಖರೀದಿಸುವುದಕ್ಕಿಂತ ಬಹಳ ಮೊದಲಿನಿಂದಲೂ ನಾನು ಇವನ ಹತ್ತಿರ ದಿನವೂ ಒಂದು ಪೌಂಡ್ ಬ್ರೆಡ್ ಖರೀದಿಸುತ್ತಿದ್ದೇನೆ. ಹಾಗೆ ದಿನವೂ ಖರೀದಿಸಿದ ಬ್ರೆಡ್ ಅನ್ನೇ ತೂಕದ ಕಲ್ಲಿನಂತೆ ಉಪಯೋಗಿಸಿ ನಾನು ಬೆಣ್ಣೆಯನ್ನು ತೂಕ ಮಾಡುತ್ತಿದ್ದೆ. ಇದರರ್ಥ ಬೇಕರಿಯವನಿಗೆ ಒಂದು ಪೌಂಡ್ ಬೆಣ್ಣೆ ಸಿಗಲಿಲ್ಲವೆಂದರೆ ಅವನೂ ಒಂದು ಪೌಂಡ್ ಬ್ರೆಡ್ ಕೊಡದೇ ಮೋಸ ಮಾಡುತ್ತಿದ್ದಾನೆ ತಾನೇ?' ಎಂದ ರೈತ. ನ್ಯಾಯಾಧೀಶ ಬೇಕರಿಯಾತನ ಮುಖ ನೋಡಿದ. ಆತ ನಾಚಿಕೆಯಿಂದ ತಲೆತಗ್ಗಿಸಿದ.

'ಬೇವಿನ ಬೀಜವ ಬಿತ್ತಿ ಬೆಲ್ಲದ ಕಟ್ಟೆಯ ಕಟ್ಟಿ ಆಕಳ ಹಾಲನೆರೆದು ಜೇನುತುಪ್ಪವ ಹೊಯ್ದಡೆ ಸಿಹಿಯಾಗಬಲ್ಲುದೇ ಕಹಿಯಹುದಲ್ಲದೇ' ಎಂದು ಬಸವಣ್ಣನವರು ಬಹು ಮಾರ್ಮಿಕವಾಗಿ ಹೇಳಿದ್ದಾರೆ. ಬಿತ್ತಿದ್ದನ್ನು ಬೆಳೆದುಕೋ ಎಂಬ ಗಾದೆಯಂತೆ ಹೇಗೆ ಬೇವಿನ ಬೀಜ ಮಾವಿನಹಣ್ಣನ್ನು ಕೊಡಲಾರದೋ ಹಾಗೆಯೇ ನಮ್ಮ ತಪ್ಪು ಕೆಲಸಗಳು ಯೋಗ್ಯ ಫಲಿತಾಂಶ ನೀಡಲಾರವು. ನಮಗೆ ನೆನಪಿರಬೇಕಾದ್ದೆಂದರೆ ಈ ಜಗತ್ತು ಸಾಲವನ್ನಿಟ್ಟುಕೊಳ್ಳುವುದಿಲ್ಲ. ನಾವು ಕೊಟ್ಟಿದ್ದನ್ನು ನಮಗೆ ವಾಪಾಸು ಕೊಟ್ಟೇ ಕೊಡುತ್ತದೆ. ಹೀಗಿರುವಾಗ ನಾವು ದ್ವೇಷ, ಅಸೂಯೆ, ಮೋಸ ಇತ್ಯಾದಿಗಳನ್ನು ಸಮಾಜಕ್ಕೆ ನೀಡಿ ನಮಗೆ ಪ್ರೀತಿ, ಕರುಣೆ, ನ್ಯಾಯ ಸಿಗಬೇಕೆಂದು ಬಯಸಿದರೆ ಸಿಗಲು ಸಾಧ್ಯವೇ? ಇತರರನ್ನು ಮೋಸಗೊಳಿಸುವ, ಕಾರಣವಿಲ್ಲದೇ ದ್ವೇಷಿಸುವ, ಅಸೂಯೆಯಿಂದ ಕುದಿವ ವ್ಯಕ್ತಿಗಳಿಗೆ ಮಾನಸಿಕ ನೆಮ್ಮದಿ ಎನ್ನುವುದು ಮರೀಚಿಕೆಯೇ. ತಮಾಷೆಯೆಂದರೆ ಬೇರೆಯವರ ತಪ್ಪನ್ನು ಖಂಡಿಸುವ ನಮಗೆ ನಾವು ಅದೇ ತಪ್ಪನ್ನು ಮಾಡುತ್ತಿದ್ದರೂ ಗಮನಕ್ಕೆ ಬರುವುದೇ ಇಲ್ಲ; ಮೇಲಿನ ಕಥೆಯ ಬೇಕರಿಯವನಂತೆ! ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ ಹೇಳಿದಂತೆ ಕತ್ತಲೆ ಅಂಧಕಾರವನ್ನು ಓಡಿಸಲಾರದು. ಕೇವಲ ಬೆಳಕು ಮಾತ್ರ ಅದನ್ನು ಮಾಡಬಲ್ಲದು. ನಿಜವೇ, ಈ ಅರಿವು ನಮ್ಮೆಲ್ಲರ ಅಂತರಂಗದಲ್ಲೂ ಬೆಳಗಲಿ.

ಪದಬಂಧ 5501

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮಗನಿಗೆ ಇದು ತುಂಬಾ ಸಲೀಸು! (3)
6.ಸೂತಕವಿದ್ದಾಗಲೇ ಪ್ರವೇಶಿಸಿದ ಹೆರಿಗೆ ಮನೆ (5)
7.ಸರಿಸಮಾನನಾದವನು (3)
8.ನೀರಾವರಿ ಭೂಮಿ (2)
10.ಅಂಕಣದಲ್ಲಿರುವ ಅಂಕಿ (2)
11.ನೀರಿನ ಚಿಲುಮೆ (3)
13.ಸಂಪುಟದಲ್ಲಿ ಹೂಡಿದ ಮುಷ್ಕರ (2)
14.ಕೆರಳಿದವನ ಮೆಟ್ಟು (2)
18.ಸಿದ್ಧಿ ಪಡೆಯುವುದು (3)
19.ಈತ ದಾರಿತೋರುವವನು (5)
20.ದನವಿರುವ ಮನೆ ಇಲ್ಲಿದೆ (3)

ಮೇಲಿಂದ ಕೆಳಕ್ಕೆ
1.ಒಳ್ಳೆಯ ವಾಸನೆ ಇಲ್ಲಿದೆ (4)
2.ವೃಕ್ಷದ ಹತ್ತಿರವಿರುವ ಪಚ್ಚೆ (4)
3.ಕನ್ನಡಿಗನು ಹಿಡಿದಿರುವ ಲೆನ್ಸ್ (3)
4.ಪ್ರಸಿದ್ಧ ಪಡಿಸುವವನು (4)
5.ಮೆತ್ತುವಾಗ ಹಿಂದಿಯವನು ಪಟ್ಟ ಪರಿಶ್ರಮ! (4)
9.ಕುದುರೆಯನ್ನೇರುವ ಬಳೆ (3)
10.ಹೆದರಿಕೆ ಹೀಗೆ ಬಂದಿದೆ (3)
12.ತನ್ನ ಬಗೆಗೆ ಇರುವ ಗೌರವ (4)
13.ಪಾದ ನಡುವಿಟ್ಟಾಗಲೇ ಗಳಿಕೆ! (4)
15.ಆನಂದಾನುಭವಕ್ಕೆ ಉಂಟಾದ ಅಡ್ಡಿ (4)
16.ಮನದೊಳಗಿರುವ ಕುಲ (4)
17.ಮಂಕ ಹೊತ್ತಿರುವ ಬುಟ್ಟಿ (3)

1		2	■	3	■	4	■	5
	■		■	6				
7			■		■		■	
	■	8	9	■	10		■	
■	■	■	11			■	■	■
12	■	13		■	14	15	■	16
	■		■	17	■	18		
19					■		■	
	■		■		■	20		

5500ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಾತ 3.ವಸನ
5.ವರೋಪಚಾರ 6.ಶರ
8.ನಾಕ 9.ಅಂಕೆ
10.ಕದ
14.ಗಾಳಿಗೋಪುರ 15.ಕಮರಿ
16.ಒನಕೆ

ಮೇಲಿಂದ ಕೆಳಕ್ಕೆ:
1.ಪರವಶ 2.ತವಕ
3.ವರಹ 4.ನಕ್ಷತ್ರಕ
7.ರಸಿಕೆ 8.ನಾಸಿಕ
9.ಅಂಗಾರಕ 11.ದಬ್ಬಾಳಿಕೆ
12.ನಗಾರಿ 13.ಟಗರು

ಸುಡೊಕು 5887

	7	9			3		8	
				8		2		9
8	1		2	6		7		
	8					1		5
	9	2	8	1	5		6	
5						8		
9		7	5					
	5			7	2		4	
4	3		6		1			2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5886 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

ಕಾರ್ಯಕರ್ತರ ಶ್ರಮಕ್ಕೆ ಮೊದಲ ಆದ್ಯತೆ: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರ ಹೇಳಿಕೆ

ಲೋಕಸಭೆ: 28 ಸ್ಥಾನಗಳನ್ನೂ ಗೆಲ್ಲುವ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಂಬರುವ ಲೋಕಸಭಾ ಚುನಾವಣೆ ಅಗ್ನಿಪರೀಕ್ಷೆಯಾಗಿದ್ದು, 28 ಸ್ಥಾನಗಳನ್ನೂ ಗೆಲ್ಲುವ ಮೂಲಕ ಮತ್ತೊಮ್ಮೆ ಮೋದಿಯವರನ್ನು ಪ್ರಧಾನಿ ಮಾಡುವ ದೃಢ ಸಂಕಲ್ಪ ತೊಡಬೇಕು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಪಕ್ಷದ ಕಚೇರಿಯಲ್ಲಿ ಬುಧವಾರ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಕಾರ್ಯಕರ್ತರು, ಶಾಸಕರು ಮತ್ತು ಸಂಸದರನ್ನು ಉದ್ದೇಶಿಸಿ ಮಾತನಾಡಿದರು.

'ಕಳೆದ ಲೋಕಸಭಾ ಚುನಾವಣೆ ವೇಳೆಯಲ್ಲಿ ಬಿ.ಎಸ್.ಯಡಿಯೂರಪ್ಪ ಅಧ್ಯಕ್ಷರಾಗಿದ್ದರು. ಆಗ ಅವರು ರಾಜ್ಯದಲ್ಲಿ 20 ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲುತ್ತೇವೆ ಎಂದು ಹೇಳಿದಾಗ ಕುಹಕ ಮಾಡಿದವರು ಹಲವರು. ಆದರೆ, ಪಕ್ಷದ ಎಲ್ಲ ನಾಯಕರೂ ಒಗ್ಗಟ್ಟಿನಿಂದ ಹೋರಾಡಿದ ಫಲವಾಗಿ 25 ಸ್ಥಾನಗಳನ್ನು ಗೆದ್ದುಕೊಂಡೆವು. ಮತ್ತೆ ಆ ಸವಾಲು ನಮ್ಮ ಮುಂದಿದೆ' ಎಂದರು.

'ಕಾರ್ಯಕರ್ತರ ಚುನಾವಣೆ ಎಂದೇ ಕರೆಯಲಾಗುವ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಸೇರಿ ಎಲ್ಲ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಲಕ್ಷಾಂತರ ಕಾರ್ಯಕರ್ತರು ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಯಲ್ಲಿ ಬೆವರು ಹರಿಸಿ ಕೆಲಸ ಮಾಡುತ್ತಾರೆ. ನಮ್ಮನ್ನು ಗೆಲ್ಲಿಸುತ್ತಾರೆ. ಕಾರ್ಯಕರ್ತರೇ ಸ್ಪರ್ಧಿಸುವ ಚುನಾವಣೆಗಳಲ್ಲಿ ಶಾಸಕರು ಮತ್ತು ಸಂಸದರು ಶ್ರಮಿಸಬೇಕು' ಎಂದು ಹೇಳಿದರು.

'ಚುನಾವಣೆಯಲ್ಲಿ ಎಲ್ಲ ಸಮುದಾಯಗಳ ಕಾರ್ಯಕರ್ತರು ಕೆಲಸ ಮಾಡಿರುತ್ತಾರೆ. ಆದರೆ ಗೆದ್ದ ಬಳಿಕ ಲಿಂಗಾಯತ ನಾಯಕ, ಒಕ್ಕಲಿಗ ನಾಯಕ ಎಂದು ಗುರುತಿಸಿಕೊಳ್ಳುವುದನ್ನು ನಾಯಕರು ಬಿಡಬೇಕು. ಎಲ್ಲ ಸಮುದಾಯಗಳ ನಾಯಕ ಎನ್ನುವ ಮನಸ್ಥಿತಿ ಬೆಳೆಸಿಕೊಳ್ಳಬೇಕು' ಎಂದರು.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಮಾತನಾಡಿ, 'ಪಂಚರಾಜ್ಯಗಳ ಚುನಾವಣೆ ಬಳಿಕ ಬೆಂಗಳೂರು ಅರಮನೆ ಮೈದಾನದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಕಾರ್ಯಕರ್ತರನ್ನು ಸೇರಿಸಿ ಬೃಹತ್ ಕಾರ್ಯಕ್ರಮ ಆಯೋಜಿಸಲಾಗುವುದು. ಅದಕ್ಕೆ ಅಮಿತ್ ಶಾ ಮತ್ತು ಜೆ.ಪಿ.ನಡ್ಡಾ ಅವರನ್ನು ಆಹ್ವಾನಿಸಲಾಗುವುದು' ಎಂದರು.

ಸಂಸದ ಡಿ.ವಿ.ಸದಾನಂದಗೌಡ ಮಾತನಾಡಿ, 'ಅಧ್ಯಕ್ಷರಾದವರು ಉಗುಳುವುದಕ್ಕಿಂತ ನೋವು ನುಂಗುವುದನ್ನು ಕಲಿಯಬೇಕು. ವಿಜಯೇಂದ್ರ ಅವರಿಗೆ ಪಕ್ಷವನ್ನು ಸದೃಢವಾಗಿ ಮುನ್ನಡೆಸುವ ಸಾಮರ್ಥ್ಯ ಇದೆ. ತಂದೆಯ ಶಕ್ತಿ ರಕ್ತದಲ್ಲಿ ಹರಿದು ಬಂದಿದೆ. ಕಳೆದ ಚುನಾವಣೆಯಲ್ಲಿ ಆದ ಹಿನ್ನಡೆಯನ್ನು ಬಡ್ಡಿ ಸಮೇತ ಹಿಂದಕ್ಕೆ ಪಡೆಯಬೇಕು' ಎಂದರು.

ಆಪರೇಷನ್ ಕಮಲ ಮಾಡಬೇಕಿಲ್ಲ. ಒಳ ಜಗಳದಿಂದ ಕಾಂಗ್ರೆಸ್ ಸರ್ಕಾರ ಕುಸಿಯಲಿದೆ. ಅವರ ಶಾಸಕರಿಗೇ ಒಂದು ರೂಪಾಯಿ ಸಿಗುತ್ತಿಲ್ಲ
ಬಿ.ವೈ.ವಿಜಯೇಂದ್ರ
ಬಿಜೆಪಿ, ರಾಜ್ಯ ಘಟಕ ಅಧ್ಯಕ್ಷ

ಬಿಜೆಪಿಗೆ ದೊಡ್ಡ ಶಕ್ತಿ, ಉತ್ಸಾಹ ಬಂದಿದೆ. ಎಲ್ಲರೂ ಒಟ್ಟಾಗಿ ನಡೆದರೆ ವಿಜಯೇಂದ್ರ ಸಾರಥ್ಯದಲ್ಲಿ ಲೋಕಸಭಾ ಚುನಾವಣೆಯಲ್ಲಿ 28 ಸ್ಥಾನ ಗೆಲ್ಲಬಹುದು
ಬಸವರಾಜ ಬೊಮ್ಮಾಯಿ
ಶಾಸಕ

ಪಕ್ಷದಲ್ಲಿ ಸಣ್ಣಪುಟ್ಟ ಸಮಸ್ಯೆ ಇರಬಹುದು. ಅದನ್ನು ಸಂಘದ ಹಿರಿಯರು ಬಗೆಹರಿಸುತ್ತಾ ಬಂದಿದ್ದಾರೆ. ನಾವು ಹಿರಿಯರು ಮಾರ್ಗದರ್ಶನ ನೀಡುತ್ತೇವೆ. ಮುಂದಕ್ಕೆ ನುಗ್ಗಿ
ಕೆ.ಎಸ್.ಈಶ್ವರಪ್ಪ
ಮಾಜಿ ಸಚಿವ

2024 ರ ಚುನಾವಣೆಯಲ್ಲಿ ಸಾಧಿಸಿ ತೋರಿಸೋಣ. ಜನಸಂಖ್ಯೆಯ ಶೇ 60 ರಷ್ಟಿರುವ ಯುವಕರ ಭಾವನೆಗಳಿಗೆ ವಿಜಯೇಂದ್ರ ಹೊಸ ದಿಕ್ಕು ನೀಡಬಲ್ಲರು
ಡಿ.ವಿ.ಸದಾನಂದಗೌಡ
ಕೇಂದ್ರದ ಮಾಜಿ ಸಚಿವ

ನಾವು ವಿಜಯೇಂದ್ರ ಅವರಿಗೆ ಶುಭ ಹಾರೈಸಿದ್ದೇವೆ. ಬಿಜೆಪಿಯವರೇ ಅವರಿಗೆ ಅಶುಭ ಹಾರೈಸುತ್ತಿದ್ದಾರೆ
ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ

ಸೋಮಣ್ಣ, ಅಶೋಕ, ಯತ್ನಾಳ ಗೈರು

ಬಿಜೆಪಿಯ ನಾಯಕರಾದ ವಿ.ಸೋಮಣ್ಣ, ಆರ್.ಅಶೋಕ. ಬಸನಗೌಡ ಪಾಟೀಲ ಯತ್ನಾಳ, ಅರವಿಂದ ಬೆಲ್ಲದ, ಶೋಭಾ ಕರಂದ್ಲಾಜೆ, ಪ್ರಲ್ಹಾದ ಜೋಶಿ ಅವರ ಗೈರು ಎದ್ದು ಕಾಣುತ್ತಿತ್ತು.

ಸೋಮಣ್ಣ ಬಿಜೆಪಿ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿದ್ದರು. ಅಲ್ಲದೇ, ಇತ್ತೀಚಿನ ವರ್ಷಗಳಲ್ಲಿ ಯಡಿಯೂರಪ್ಪ ಮತ್ತು ವಿಜಯೇಂದ್ರ ಜತೆಗಿನ ಸಂಬಂಧ ಹಳಸಿತ್ತು. ಇದರಿಂದ ಮತ್ತಷ್ಟು ಮುನಿಸಿಕೊಂಡಿರುವ ಸೋಮಣ್ಣ ತಮ್ಮದೇ ದಾರಿ ಹಿಡಿಯುವ ಸಾಧ್ಯತೆ ಇದೆ.

ಯತ್ನಾಳ ಅವರು ಯಡಿಯೂರಪ್ಪ ಮತ್ತು ವಿಜಯೇಂದ್ರ ಅವರ ವಿರುದ್ಧ ಸಮಯ ಸಿಕ್ಕಾಗಲೆಲ್ಲಾ ಹರಿಹಾಯುತ್ತಲೇ ಬಂದಿದ್ದಾರೆ. ಇವರೂ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿದ್ದರು.

ಮಧ್ಯಪ್ರದೇಶ ರಾಜ್ಯದ ಚುನಾವಣೆ ಪ್ರಚಾರದಲ್ಲಿ ತೊಡಗಿರುವುದರಿಂದ ಕಾರ್ಯಕ್ರಮಕ್ಕೆ ಬರಲು ಆಗದು ಎಂದು ಸಿ.ಟಿ.ರವಿ ಮುಂಚಿತವಾಗಿಯೇ ಹೇಳಿದ್ದರು.

'ಶೇ 40 ಕಮಿಷನ್ ಈಗ ಜಾರಿ ಆಗಿದೆ'

'ನಮ್ಮ ಸರ್ಕಾರ ಇದ್ದಾಗ ಕಾಂಗ್ರೆಸ್ ಪಕ್ಷದವರು ಶೇ 40 ಕಮಿಷನ್ ಸರ್ಕಾರ ಎಂದು ಟೀಕಿಸಿದರು. ಜನ ಅದನ್ನು ನಂಬಿದರು. ಅವರು ಹೇಳಿದ್ದು ಕಾಂಗ್ರೆಸ್ ಸರ್ಕಾರ ಬಂದ 6 ತಿಂಗಳಲ್ಲೇ ಸತ್ಯ ಆಗಿದೆ. ಈಗ ನಿಜಕ್ಕೂ ಶೇ 40 ಕಮಿಷನ್ ಸರ್ಕಾರ ಜಾರಿ ಬಂದಿದೆ. ಹಗಲು ದರೋಡೆಯಲ್ಲಿ ತೊಡಗಿದ್ದಾರೆ. ವ್ಯಾಪಾರಸ್ಥರು, ಉದ್ಯಮಿಗಳನ್ನು ಕೇಳಿ ನೋಡಿ, ಈ ಸರ್ಕಾರದ ಬಗ್ಗೆ ಎಲ್ಲ ಬಿಚ್ಚಿಡುತ್ತಾರೆ' ಎಂದು ವಿಜಯೇಂದ್ರ ಅವರು ಹೇಳಿದರು.

'ರಾಜ್ಯದಲ್ಲಿ ಭೀಕರ ಬರಗಾಲ ಇದೆ. ಆದರೆ ಒಬ್ಬನೇ ಒಬ್ಬ ಸಚಿವ ಗ್ರಾಮಗಳಿಗೆ ಹೋಗುತ್ತಿಲ್ಲ. ರೈತರ ಸಮಸ್ಯೆಯನ್ನು ಕೇಳುವ ಪ್ರಯತ್ನವನ್ನೂ ಮಾಡಿಲ್ಲ. ಅಧಿಕಾರದ ದರ್ಪದಿಂದ ಮೆರೆಯುತ್ತಿದ್ದಾರೆ. ಇವರ ಉದ್ಧಟತನಕ್ಕೆ ಲೋಕಸಭಾ ಚುನಾವಣೆಯಲ್ಲಿ ತಕ್ಕ ಉತ್ತರ ನೀಡಬೇಕು' ಎಂದರು.

ನಾಳೆ ಬಿಜೆಪಿ ಶಾಸಕಾಂಗ ಪಕ್ಷದ ಸಭೆ

ಇದೇ 17 ರಂದು ಬಿಜೆಪಿ ಶಾಸಕಾಂಗ ಪಕ್ಷದ ಸಭೆ ನಡೆಯಲಿದ್ದು, ಅದೇ ದಿನ ವಿರೋಧ ಪಕ್ಷದ ನಾಯಕರ ಹೆಸರು ಘೋಷಣೆ ಆಗುವ ಸಾಧ್ಯತೆ ಇದೆ.

ಸುದ್ದಿಗಾರರ ಜತೆ ಮಾತನಾಡಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು, ಶುಕ್ರವಾರ ಸಂಜೆ ಸಭೆ ನಿಗದಿಯಾಗಿದೆ. ದೆಹಲಿಯಿಂದ ಇಬ್ಬರು ವೀಕ್ಷಕರು ಬರಲಿದ್ದಾರೆ. ಯಾರೆಲ್ಲ ಬರುತ್ತಾರೆ ಎಂಬುದು ಗುರುವಾರ ಗೊತ್ತಾಗಲಿದೆ ಎಂದರು.

ವಿರೋಧ ಪಕ್ಷದ ನಾಯಕರ ಆಯ್ಕೆಗೆ ಸಂಬಂಧಿಸಿದಂತೆ ಶಾಸಕರ ಅಭಿಪ್ರಾಯ ಮುಖ್ಯ. ಶಾಸಕರ ಅಭಿಪ್ರಾಯ ಪಡೆದು ಹೆಸರು ಪ್ರಕಟಿಸುವ ಸಾಧ್ಯತೆ ಇದೆ ಎಂದು ಹೇಳಿದರು.

ಬೆಳಗಾವಿಯಲ್ಲಿ ಡಿಸೆಂಬರ್ 4 ರಿಂದ ವಿಧಾನಮಂಡಲ ಅಧಿವೇಶನ ಆರಂಭವಾಗಲಿದ್ದು, ಅದಕ್ಕೆ ಮೊದಲೇ ವಿರೋಧಪಕ್ಷದ ನಾಯಕರ ಆಯ್ಕೆ ನಡೆಯುವ ಸಾಧ್ಯತೆ ಇದೆ.

ಸುದ್ದಿ 2 ನಿಮಿಷ

ಸೋಮಣ್ಣ ಸದ್ಯವೇ ಪ್ರತ್ಯೇಕ ಸಭೆ

ಬೆಂಗಳೂರು: ಬಿಜೆಪಿ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿದ್ದ ಬಿಜೆಪಿ ನಾಯಕ ವಿ.ಸೋಮಣ್ಣ ಅವರು ಸದ್ಯವೇ ಗೋವಿಂದರಾಜನಗರ ಕ್ಷೇತ್ರದ ತಮ್ಮ ಬೆಂಬಲಿಗರ ಸಭೆ ಕರೆದು ಮುಂದಿನ ನಡೆಯನ್ನು ತೀರ್ಮಾನಿಸಲಿದ್ದಾರೆ ಎಂದು ಅವರ ಆಪ್ತ ವಲಯ ಹೇಳಿದೆ.

ಬಿ.ವೈ.ವಿಜಯೇಂದ್ರ ಅವರನ್ನು ಪಕ್ಷದ ಅಧ್ಯಕ್ಷರನ್ನಾಗಿ ಮಾಡಿದ ಬೆನ್ನಲ್ಲೇ ಮುನಿಸಿಕೊಂಡಿರುವ ಅವರು ಕಾಂಗ್ರೆಸ್ ಸೇರುವ ಸಾಧ್ಯತೆ ಇದೆ. ಕಾಂಗ್ರೆಸ್ ಪಕ್ಷದಿಂದ ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರ ಅಥವಾ ತುಮಕೂರು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸುವ ಬಯಕೆ ಹೊಂದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ಸಂಬಂಧ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಜತೆ ಸಂಪರ್ಕದಲ್ಲಿದ್ದಾರೆ ಎಂದು ಮೂಲಗಳು ಹೇಳಿವೆ.

ತಾಯಿ –ಮರಿಯಾನೆ ಒಗ್ಗೂಡಿಸಿದ ಅರಣ್ಯ ಸಿಬ್ಬಂದಿ



ಮಡಿಕೇರಿ: ವಿರಾಜಪೇಟೆ ಸಮೀಪದ ನರಿಯಂದಡ ಗ್ರಾಮ ಪಂಚಾಯಿತಿಯ ಕರಡ ಗ್ರಾಮದ ಕೀಮಲೆ ಕಾಡುವಿನ ಮನೆಯೊಂದರ ಆವರಣದಲ್ಲಿ ಸೋಮವಾರ ತಡರಾತ್ರಿ ಮರಿ ಹಾಕಿ ಜನರ ಗದ್ದಲದಿಂದ ಕಾಡಿನೊಳಗೆ ಹೋಗಿದ್ದ ತಾಯಿ ಆನೆ ಜತೆ ಮರಿಯಾನೆಯನ್ನು ಸೇರಿಸುವಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಯಶಸ್ವಿಯಾದರು. ಅದಕ್ಕಾಗಿ ಅವರು ಮಂಗಳವಾರ ಸುಮಾರು 7 ಕಿ.ಮೀ ದೂರ ಕಾಡಿನಲ್ಲಿ ಮರಿಯಾನೆಯೊಂದಿಗೆ ಅಲೆದಾಟ ನಡೆಸಿದರು.

ಕಾಡಾನೆ ಮರಿ ಹಾಕಿದ ವಿಷಯ ಮಂಗಳವಾರ ಬೆಳಿಗ್ಗೆ ಗೊತ್ತಾಗುತ್ತಿದ್ದಂತೆಯೇ ಅಕ್ಕಪಕ್ಕದ ಗ್ರಾಮಸ್ಥರು ಕುತೂಹಲದಿಂದ ಧಾವಿಸಿ ಬಂದರು. ಅದರಿಂದ ವಿಚಲಿತವಾದ ಆನೆಯು ಮರಿಯಾನೆಯನ್ನು ಬಿಟ್ಟು ತೆರಳಿತ್ತು.

ನಂತರ ಬಂದ ಅರಣ್ಯ ಸಿಬ್ಬಂದಿಯು ಮರಿಯಾನೆಗೆ ಗುಕ್ಲೋಸ್ ನೀಡಿ ಸ್ವಲ್ಪದೂರ ಎತ್ತಿಕೊಂಡು, ಸ್ವಲ್ಪ ದೂರ ಜೀಪ್‌ನಲ್ಲಿ ಸಾಗಿಸಿದರು. ನಂತರ ಕಾಡಿನೊಳಗೆ ನಡೆಸಿಕೊಂಡು ಹುಡುಕಾಡಿ ತಾಯಿಯೊಂದಿಗೆ ಸೇರಿಸಿದರು. ಸ್ಥಳೀಯರೂ ಸಹಕರಿಸಿದರು.

'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ವಲಯ ಅರಣ್ಯಾಧಿಕಾರಿ ದೇವಯ್ಯ, 'ಮರಿಯನ್ನು ಬಿಟ್ಟು ಆನೆಯು ಅಷ್ಟು ದೂರ ಹೋಗಿದ್ದು ಅಪರೂಪದ ಘಟನೆ. ಸ್ಥಳೀಯರಾದ ಪಿ.ಸೋಮೇಶ್ ಸಹಕಾರ ಸ್ಮರಣೀಯ' ಎಂದರು.



ಸೌಹಾರ್ದ ದೀಪಾವಳಿ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ತಾವರಗೇರಾದ ಶ್ಯಾಮೀದಲಿ ದರ್ಗಾದಲ್ಲಿ ಸೋಮವಾರ ದೀಪಾವಳಿ ಹಬ್ಬದ ಪ್ರಯುಕ್ತ ಭಕ್ತರು ಹಣತೆಗಳನ್ನು ಹಚ್ಚಿದರು

ಕಾಂಗ್ರೆಸ್ ಸಮುದ್ರದಂತೆ: ವಿಷ– ಅಮೃತ ಎರಡೂ ಇದೆ– ಸಚಿವ ಕೆ.ಎನ್. ರಾಜಣ್ಣ

ಪ್ರಜಾವಾಣಿ ವಾರ್ತೆ

ಹಾಸನ: 'ಕಾಂಗ್ರೆಸ್ ಪಕ್ಷ ಸಮುದ್ರವಿದ್ದಂತೆ. ಅಲ್ಲಿಗೆ ಗಂಗೆಯಂಥ ಪವಿತ್ರ ಜಲವೂ ಬರುತ್ತದೆ. ಚರಂಡಿ ನೀರೂ ಸೇರುತ್ತದೆ. ಸಮುದ್ರದಲ್ಲಿ ವಿಷ–ಅಮೃತವೆರಡೂ ಇರುತ್ತವೆ. ಕೆಲವರಿಗೆ ವಿಷ, ಇನ್ನೂ ಕೆಲವರಿಗೆ ಅಮೃತ ಸಿಗುತ್ತದೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ಮಾರ್ಮಿಕವಾಗಿ ನುಡಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಕಾಂಗ್ರೆಸ್ ತೊರೆದಿದ್ದ ಮಾಜಿ ಸಂಸದ ಎಸ್.ಪಿ.ಮುದ್ದುಹನುಮೇಗೌಡರು ಮತ್ತೆ ಪಕ್ಷಕ್ಕೆ ಬರುತ್ತಾರೆಂದು ಖಚಿತವಾಗಿ ಹೇಳಲಾಗದು. ಅವರ ಬಹಳಷ್ಟು ಸ್ನೇಹಿತರು ಮಾತ್ರ ಬರುವ ಇಂಗಿತ ವ್ಯಕ್ತಪಡಿಸಿದ್ದಾರೆ. ಬಂದವರೆಲ್ಲರೂ ಚುನಾವಣೆ ಆಕಾಂಕ್ಷಿಗಳೇ ಆಗಿರುತ್ತಾರೆ' ಎಂದರು.

ಜೆಡಿಎಸ್ ಮುಖಂಡರಾದ ಗೌರಿಶಂಕರ್, ಮಂಜುನಾಥ್ ಕಾಂಗ್ರೆಸ್ ಸೇರ್ಪಡೆ ಕುರಿತು ಪ್ರತಿಕ್ರಿಯಿಸಿ, 'ಮಾಧ್ಯಮದ ಮೂಲಕ ವಿಷಯ ತಿಳಿಯಿತು. ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್ ಅವರು ಕರೆ ಮಾಡಿ, ಸೇರ್ಪಡೆ ಕಾರ್ಯಕ್ರಮಕ್ಕೆ ಬನ್ನಿ ಎಂದರು. ಬೇರೆ ಕಾರ್ಯಕ್ರಮವಿದೆ ಎಂದು ಹೇಳಿದೆ' ಎಂದರು.

'ಅವರ ಸೇರ್ಪಡೆ ಬಗ್ಗೆ ನನ್ನೊಂದಿಗೆ ಚರ್ಚಿಸಿಲ್ಲ. ನಮ್ಮ ಜಿಲ್ಲೆಯ ಮುಖಂಡರೊಂದಿಗೂ ಚರ್ಚಿಸಿಲ್ಲ. ಸೇರಿಸಿಕೊಳ್ಳಬೇಕೇ, ಬೇಡವೇ ಎಂದು ಕೇಳಲೇ ಇಲ್ಲ. ಸೇರಿಸಿಕೊಂಡಿದ್ದಾರೆ. ಸಂತೋಷ, ನಮಗೇನೂ ಅಸಮಾಧಾನವಿಲ್ಲ' ಎಂದರು.

ಸೀಗೆಹಳ್ಳಿಯ ಬ್ರಹ್ಮಾಂಡ ಹೋರಿ ಸಾವು

ಹಾವೇರಿ: ತಾಲ್ಲೂಕಿನ ಸೀಗೆಹಳ್ಳಿ ಗ್ರಾಮದಲ್ಲಿ ಮಂಗಳವಾರ ನಡೆದ ಹೋರಿ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ಬ್ರಹ್ಮಾಂಡ ಹೋರಿಯು ವರದಾ ನದಿಗೆ ಬಿದ್ದು ಮೃತಪಟ್ಟಿದೆ.

'ಸೀಗೆಹಳ್ಳಿ ಗ್ರಾಮದ ಶಿವಪುತ್ರಪ್ಪ ಕೋರಿ ಎಂಬುವರಿಗೆ ಸೇರಿದ ಹೋರಿಯು ಸ್ಪರ್ಧೆಯಿಂದ ತಪ್ಪಿಸಿಕೊಂಡು ಓಡುವ ಭರದಲ್ಲಿ ಹಾವೇರಿ ತಾಲ್ಲೂಕಿನ ಬಿದರಗಡ್ಡಿ ಗ್ರಾಮದ ಬಳಿ ವರದಾ ನದಿಯ ಬ್ರಿಡ್ಜ್ ಕಂ ಬ್ಯಾರೇಜ್ ಮೇಲಿನಿಂದ ಹಾರಿ ನೀರಿಗೆ ಬಿದ್ದಿದೆ. ಎದೆಯ ಭಾಗಕ್ಕೆ ಪೆಟ್ಟು ಬಿದ್ದು, ಮೃತಪಟ್ಟಿದೆ' ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ಹಂದಿಗೆ ಟಿಪ್ಪು ಕಿರೀಟ: ಆರೋಪಿ ಸೆರೆ

ಮದ್ದೂರು: ಹಂದಿಗೆ ಟಿಪ್ಪು ಸುಲ್ತಾನ್ ಕಿರೀಟ ತೊಡಿಸಿದಂತೆ ರೂಪಿಸಿದ ಚಿತ್ರವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿದ್ದ ಆರೋಪದಲ್ಲಿ, ಪಟ್ಟಣದ ಚನ್ನೇಗೌಡ ಬಡಾವಣೆಯ ಯುವಕ ಸ್ವಾಮಿ ಎಂಬಾತನನ್ನು ಪಟ್ಟಣ ಠಾಣೆ ಪೊಲೀಸರು ಬುಧವಾರ ಬಂಧಿಸಿದ್ದಾರೆ. ಆತನನ್ನು ಪೊಲೀಸರು ಥಳಿಸಿದ್ದಾರೆ ಎಂದು ಆರೋಪಿಸಿ ವಿಎಚ್‌ಪಿ ಸದಸ್ಯರು ಪೊಲೀಸ್ ಠಾಣೆ ಮುಂದೆ ಪ್ರತಿಭಟಿಸಿದರು.

ಆರೋಪಿಯು ಚಿತ್ರವನ್ನು ತನ್ನ ಇನ್‌ಸ್ಟಾಗ್ರಾಂ, ಫೇಸ್‌ಬುಕ್ ಖಾತೆಯಲ್ಲಿ ಪ್ರಕಟಿಸಿದ್ದ. ಆ ಬಗ್ಗೆ ಪಟ್ಟಣದ ಫೈರೋಜ್ ಹಾಗೂ ಆದಿಲ್ ಖಾನ್ ನೀಡಿದ್ದ ದೂರು ಆಧರಿಸಿ ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದರು.

ಆ ವೇಳೆ ಠಾಣೆಯ ಎದುರು ಜಮಾಯಿಸಿದ ವಿಎಚ್‌ಪಿ ಮುಖಂಡರು 'ಒಂದು ಪ್ರಾಣಿಗೆ ಯಾವುದೋ ಒಂದು ಬಟ್ಟೆ ಹಾಕಿದರೆ, ಹೇಗೆ ಮುಸ್ಲಿಮರ ಭಾವನೆಗೆ ಧಕ್ಕೆಯಾಗುತ್ತದೆ. ಮಸೀದಿಗಳಲ್ಲಿ ಆಜಾನ್ ಕೂಗುವುದರಿಂದ ನಮ್ಮ ಭಾವನೆಗೆ ಧಕ್ಕೆಯಾಗುವುದಿಲ್ಲವೇ? ಪೊಲೀಸರು ಮುಗ್ಧ ಯುವಕನನ್ನು ಬಂಧಿಸಿ ಹಲ್ಲೆ ಮಾಡಿದ್ದಾರೆ' ಎಂದು ಆರೋಪಿಸಿದರು.

ಕಾಂಗ್ರೆಸ್ ಸೇರಿದ ಜೆಡಿಎಸ್ ಮಾಜಿ ಶಾಸಕರು

ಮುಂದೆ ಬಿಜೆಪಿಯಲ್ಲಿ ಜೆಡಿಎಸ್ ವಿಲೀನ: ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಜೊತೆಗಿನ ಮೈತ್ರಿಯಿಂದ ಅಸಮಾಧಾನಗೊಂಡಿದ್ದ ಜೆಡಿಎಸ್‌ನ ಮಾಜಿ ಶಾಸಕರಾದ ಆರ್. ಮಂಜುನಾಥ್ (ದಾಸರಹಳ್ಳಿ) ಮತ್ತು ಡಿ.ಸಿ. ಗೌರಿಶಂಕರ್ (ತುಮಕೂರು ಗ್ರಾಮಾಂತರ) ಅವರು ಕಾಂಗ್ರೆಸ್ ಸೇರಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬೊಮ್ಮನಹಳ್ಳಿ ಕ್ಷೇತ್ರದಿಂದ ಸ್ಪರ್ಧಿಸಿದ್ದ ಜೆಡಿಎಸ್‌ನ ಪ್ರಸಾದ್ ಗೌಡ ಕೂಡಾ 'ಕೈ' ಹಿಡಿದಿದ್ದಾರೆ.


ಕೆಪಿಸಿಸಿ ಕಚೇರಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಮ್ಮುಖದಲ್ಲಿ ಈ ಮೂವರೂ ತಮ್ಮ ಬೆಂಬಲಿಗರ ಕಾಂಗ್ರೆಸ್ ಸೇರಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಿದ್ದರಾಮಯ್ಯ, 'ಜೆಡಿಎಸ್ ಕೂಡ ಕೋಮುವಾದಿ ಪಕ್ಷ. ಇದು ಗೊತ್ತಾದ ಮೇಲೆ ಮಂಜುನಾಥ್ ಮತ್ತು ಗೌರಿಶಂಕರ್ ಅವರು ಜಾತ್ಯತೀತ ಪಕ್ಷವಾದ ಕಾಂಗ್ರೆಸ್ ಸೇರಿದ್ದಾರೆ' ಎಂದರು.

'ನಾವಿದ್ದಾಗ ಜನತಾದಳ ಸೆಕ್ಯುಲರ್ ಆಗಿತ್ತು. ಈಗ 'ಎಸ್' ಕಿತ್ತೋಗಿ ಕೇವಲ ಜನತಾದಳ ಆಗಿ ಉಳಿದಿದೆ. ಹಿಂದೆಯೂ ಬಿಜೆಪಿ ಜತೆ ಕೈ ಜೋಡಿಸಿದ್ದ ಕಾರಣಕ್ಕೆ ಜನತಾ ಪರಿವಾರದಲ್ಲಿ ಸೆಕ್ಯುಲರ್ ಸಿದ್ಧಾಂತದವರೆಲ್ಲಾ ಪ್ರತ್ಯೇಕವಾಗಿ ಉಳಿದೆವು. ಈಗ ಜೆಡಿಎಸ್ ಮತ್ತೆ ಬಿಜೆಪಿ ಜತೆ ಬೆರೆಯುತ್ತಿದೆ. ನಾನು ಈ ಜೆಡಿಎಸ್ ಅನ್ನು ಬಿಜೆಪಿಯ 'ಬಿ' ಟೀಮ್ ಅಂದಿದ್ದಕ್ಕೆ ಸಿಟ್ಟಾಗಿದ್ದರು. ಅಂದು ನಾನು ಹೇಳಿದ್ದನ್ನು ಇಂದು ಅವರೇ ಸಾಬೀತುಪಡಿಸಿದ್ದಾರೆ' ಎಂದರು.

'ಜೆಡಿಎಸ್ ಈಗ ತನ್ನ ಸ್ವರೂಪದಲ್ಲಿ ಜನಸಮುದಾಯದ ರಾಜಕೀಯ ಪಕ್ಷವಾಗಿ ಉಳಿದಿಲ್ಲ. ಕೇವಲ ಕುಟುಂಬದ ಪಕ್ಷ ಆಗಿಯಷ್ಟೆ ಸೀಮಿತವಾಗಿದೆ. ರಾಜಕೀಯ ಕಾರಣಕ್ಕೆ ಈಗ ಬಿಜೆಪಿ ಕೊತೆ ವಿಲೀನ ಆಗದೇ ಇರಬಹುದು. ಆದರೆ, ಮುಂದಿನ ದಿನಗಳಲ್ಲಿ ಜೆಡಿಎಸ್, ಬಿಜೆಪಿ ಜೊತೆ ವಿಲೀನ ಆಗಬಹುದು' ಎಂದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಸಲೀಂ ಅಹ್ಮದ್, ಶಾಸಕರಾದ ಪಿ.ಎಂ. ನರೇಂದ್ರ ಸ್ವಾಮಿ, ಡಾ. ರಂಗನಾಥ್, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಜೀರ್ ಅಹಮ್ಮದ್, ಮುಖಂಡರಾದ ಬಿ.ಎಲ್ ಶಂಕರ್ ಸೇರಿದಂತೆ ಹಲವರು ಈ ವೇಳೆ ಇದ್ದರು. ಆದರೆ, ತುಮಕೂರು ಜಿಲ್ಲಾ ಉಸ್ತುವಾರಿ ಸಚಿವ ಜಿ. ಪರಮೇಶ್ವರ, ಸಚಿವ ಕೆ.ಎನ್. ರಾಜಣ್ಣ ಸೇರಿದಂತೆ ಹಲವರು ಗೈರಾದರು. ಗೌರಿಶಂಕರ್ ಅವರ ಕಾಂಗ್ರೆಸ್ ಸೇರ್ಪಡೆಗೆ ಸ್ಥಳೀಯ ಕಾಂಗ್ರೆಸ್ ನಾಯಕರು ವಿರೋಧ ತೋರಿಸಿರುವ ಕಾರಣ ಈ ನಾಯಕರು ಅಂತರ ಕಾಯ್ದುಕೊಂಡರು ಎನ್ನಲಾಗಿದೆ.



ಜೆಡಿಎಸ್‌ನ ಮಾಜಿ ಶಾಸಕರಾದ ಡಿ.ಸಿ. ಗೌರಿಶಂಕರ್ ಮತ್ತು ಆರ್. ಮಂಜುನಾಥ್ ಅವರು ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಸಮ್ಮುಖದಲ್ಲಿ ಬುಧವಾರ ಕಾಂಗ್ರೆಸ್ ಸೇರಿದರು. ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಇದ್ದರು

ಸಿ.ಎಂ ಸ್ಥಾನಕ್ಕೆ ನನ್ನ ಹೆಸರು ಹೇಳದ ಎಚ್‌ಡಿಕೆ: ಡಿ.ಕೆ. ಶಿವಕುಮಾರ್

'ಡಿ.ಕೆ.ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಎಂದು ಘೋಷಣೆ ಮಾಡಿದರೆ ಮುಂಬೈಯಿಂದ ಮರಳಿ ಬರುವುದಾಗಿ ಕೆ. ಗೋಪಾಲಯ್ಯ ಮತ್ತು ಎಸ್.ಟಿ. ಸೋಮಶೇಖರ್ ಕರೆ ಮಾಡಿ ಹೇಳಿದ್ದರು. ಆದರೆ, ಕುಮಾರಸ್ವಾಮಿ ನನ್ನ ಹೆಸರು ಹೇಳಲಿಲ್ಲ' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

'ಕಾಂಗ್ರೆಸ್ ಪಕ್ಷದ 40 ಶಾಸಕರು ಬಿಜೆಪಿ ಸಂಪರ್ಕದಲ್ಲಿ ಇದ್ದು, ಶಿವಕುಮಾರ್ ಮುಖ್ಯಮಂತ್ರಿ ಆಗುವುದಾದರೆ ಜೆಡಿಎಸ್‌ನ 19 ಶಾಸಕರ ಬೆಂಬಲ ನೀಡುತ್ತೇವೆ ಎಂದು ಕುಮಾರಸ್ವಾಮಿ ಅವರ ಈಗಿನ ಮಾತು ಕೇಳಲು ನಾವೇನು ದಡ್ಡರೇ' ಎಂದು ಪ್ರಶ್ನಿಸಿದರು.

'ಮುಂದಿನ ವಾರ ಇನ್ನಷ್ಟು ಪ್ರಮುಖ ನಾಯಕರು ಕಾಂಗ್ರೆಸ್ ಸೇರ್ಪಡೆಯಾಗಲಿದ್ದಾರೆ. ಮುಂದಿನ ದಿನಗಳಲ್ಲಿ ಹೊಸದಾಗಿ ಪಕ್ಷ ಸೇರ್ಪಡೆಯಾದ ಕ್ಷೇತ್ರಗಳಲ್ಲಿ ನಾನೇ ಖುದ್ದಾಗಿ ತೆರಳಿ ಕಾರ್ಯಕರ್ತರ ಸಭೆ ನಡೆಸುತ್ತೇನೆ' ಎಂದರು.

'ಅನುದಾನ ಕೊಡದೆ ಹಿಂಸೆ ನೀಡಿದರು'

ಕಾಂಗ್ರೆಸ್ ಸೇರಿದ ಬಳಿಕ ಮಾತನಾಡಿದ ಆರ್. ಮಂಜುನಾಥ್, 'ನಾನು ಬಿಜೆಪಿ ವಿರುದ್ಧ ಹೋರಾಟ ಮಾಡುತ್ತಲೇ ಬಂದಿದ್ದೇನೆ. ಶಾಸಕನಾಗಿದ್ದಾಗ ಅನುದಾನ ನೀಡದೆ ಹಿಂಸೆ ನೀಡಿದರು. ಕಳೆದ ಚುನಾವಣೆಯಲ್ಲಿ ನಾನು ಹಣ ಹಂಚಲಿಲ್ಲ. ಆ ಕಾರಣಕ್ಕೆ ನನ್ನನ್ನು ಸೋಲಿಸಿಬಿಟ್ಟರು. ಇದೀಗ ಬಿಜೆಪಿ ಜೊತೆ ಜೆಡಿಎಸ್ ಮೈತ್ರಿ ಮಾಡಿಕೊಂಡಿದೆ. ಇದು ಇಷ್ಟವಾಗಿಲ್ಲ. ಹೀಗಾಗಿ ಕಾಂಗ್ರೆಸ್ ಸೇರಿದ್ದೇನೆ' ಎಂದರು.

ಜೆಡಿಎಸ್– ಕಾಂಗ್ರೆಸ್ ವಾಕ್ಸಮರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್.ಡಿ. ಕುಮಾರಸ್ವಾಮಿ ಅವರ ಮನೆಗೆ ದೀಪಾಲಂಕಾರ ಮಾಡಲು ವಿದ್ಯುತ್ ಮಾರ್ಗದಿಂದ ಅಕ್ರಮವಾಗಿ ಸಂಪರ್ಕ ಪಡೆದಿರುವ ಆರೋಪವು ಜೆಡಿಎಸ್– ಕಾಂಗ್ರೆಸ್ ಮಧ್ಯೆ ತೀವ್ರ ವಾಕ್ಸಮರಕ್ಕೆ ಎಡೆಮಾಡಿದೆ.

ಮಂಗಳವಾರ ಬೆಳಿಗ್ಗೆಯಿಂದಲೇ ಸಾಮಾಜಿಕ ಮಾಧ್ಯಮಗಳಲ್ಲಿ ತೀವ್ರ ಟೀಕಾಪ್ರಹಾರ ನಡೆಸಿದ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು, ಕುಮಾರಸ್ವಾಮಿ ಅವರನ್ನು ಇಕ್ಕಟ್ಟಿಗೆ ಸಿಲುಕಿಸಲು ಯತ್ನಿಸಿದರು.

ಪ್ರಕರಣ ಹೊರಬರುತ್ತಿದ್ದಂತೆಯೇ ಮಾಧ್ಯಮಗಳಿಗೆ ಮಂಗಳವಾರ ಪ್ರತಿಕ್ರಿಯೆ ನೀಡಿದ ಕುಮಾರಸ್ವಾಮಿ, 'ನನ್ನ ಮನೆಗೆ ವಿದ್ಯುತ್ ದೀಪಾಲಂಕಾರ ಮಾಡುವ ಕೆಲಸವನ್ನು ಖಾಸಗಿ ವ್ಯಕ್ತಿಯೊಬ್ಬರಿಗೆ ವಹಿಸಲಾಗಿತ್ತು. ಅವರು ಮನೆಗೆ ವಿದ್ಯುತ್ ದೀಪಗಳನ್ನು ಅಳವಡಿಸಿದ ಬಳಿಕ ಪಕ್ಕದಲ್ಲಿದ್ದ ಕಂಬದಿಂದ ಸಂಪರ್ಕ ಪಡೆದು ಪರೀಕ್ಷಿಸಿದ್ದರು' ಎಂದರು.

'ಸೋಮವಾರ ನಾನು ತೋಟದ ಮನೆಯಲ್ಲಿದ್ದೆ. ರಾತ್ರಿ ಮನೆಗೆ ಬಂದಾಗ ವಿಷಯ ಗಮನಕ್ಕೆ ಬಂತು. ತಕ್ಷಣ ವಿದ್ಯುತ್ ಸಂಪರ್ಕ ತೆರವು ಮಾಡಿಸಿ, ಮನೆಯ ಮೀಟರ್‌ನಿಂದಲೇ ದೀಪಾಲಂಕಾರಕ್ಕೆ ವಿದ್ಯುತ್ ಪೂರೈಸಲಾಗಿದೆ. ಆಗಿರುವ ಅಚಾತುರ್ಯಕ್ಕೆ ವಿಷಾದವಿದೆ. ದಂಡ ಕಟ್ಟಲು ಸಿದ್ಧನಿದ್ದೇನೆ' ಎಂದು ಹೇಳಿದರು.

'ಎಚ್‌ಡಿಕೆಗೆ ಅಭಿನಂದನೆ': ಪ್ರಕರಣದ ಕುರಿತು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 'ಅಚಾತುರ್ಯವೋ? ಕಳ್ಳತನವೋ? ವಿದ್ಯುತ್ ಕಳ್ಳತನವನ್ನು ಒಪ್ಪಿಕೊಂಡು ದಂಡ ಕಟ್ಟುವುದಾಗಿ ಹೇಳಿರುವ ಕುಮಾರಸ್ವಾಮಿ ಅವರನ್ನು ಅಭಿನಂದಿಸುತ್ತೇನೆ' ಎಂದು ಹೇಳಿದರು.

'ಈ ವಿಷಯದಲ್ಲಿ ಅಧಿಕಾರಿಗಳು ಸೂಕ್ತ ಕ್ರಮ ಜರುಗಿಸುತ್ತಾರೆ. ಸರ್ಕಾರ ಹಸ್ತಕ್ಷೇಪ ಮಾಡುವುದಿಲ್ಲ' ಎಂದರು.

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರ ಕಛೇರಿ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ರಾಯಚೂರು

ಸಂ.ಕಾನಿಅ/ಗ್ರಾನೀಸ&ನೈ/ವಿರಾ/ತಾ.ಶಾ/MVSO&M/ಇ-ಟೆಂಡರ/2023-24/1528 ದಿನಾಂಕ: 13-11-2023

ಇ-ಪ್ರೋಕ್ಯೂರಮೆಂಟ ಅಲ್ಪಾವಧಿ ಟೆಂಡರ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ರಾಯಚೂರು ಇವರು KW-2 & 4 (Standard Bid Document) ನಿಬಂಧನೆಗಳೊಪಟ್ಟಂತೆ ಪಂಚಾಯತರಾಜ ಇಂಜಿನೀಯರಿಂಗ ಇಲಾಖೆಯಲ್ಲಿ ಸಿವ್ಹಿಲ್ ನೊಂದಾಯಿತ ಹಾಗೂ ಇ-ಗುತ್ತಿಗೆ ಕುರಿತು ಇ-ಪ್ರೋಕ್ಯೂರಮೆಂಟ ಇವರಿಂದ ನೊಂದಾಯಿಸಿದ ಅರ್ಹ ಗುತ್ತಿಗೆದಾರರುಗಳಿಂದ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2023-24 ನೇ ಸಾಲಿನ MVS O&M ಯೋಜನೆ ಅಡಿಯಲ್ಲಿ ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿಗೆ ಐಟಂವಾರು ಟರ್ನಕೀ ಆಧಾರದ ಮೇಲೆ ಇ-ಟೆಂಡರ ಆಹ್ವಾನಿಸಲಾಗಿದೆ.

1] E-Payment/NEFT ಮುಖಾಂತರ ಅರ್ಜಿ ಸ್ವೀಕರಿಸುವ ದಿನಾಂಕ : 13-11-2023 2] ಶೆಡ್ಯೂಲಗಳನ್ನು Online ನಲ್ಲಿ ಬಿಡುವ ದಿನಾಂಕ : 13-11-2023 3] ಭರ್ತಿ ಮಾಡಿದ ಟೆಂಡರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 28-11-2023 ಸಂಜೆ 4:30 ಗಂಟೆವರೆಗೆ 4] ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 30-11-2023 ಬೆಳಿಗ್ಗೆ 11:00 ಗಂಟೆ ಸಾಧ್ಯವಿದ್ದಲ್ಲಿ 5] ಆರ್ಥಿಕ ಬಿಡ್ ತೆರೆಯುವ ದಿನಾಂಕ : 01-12-2023 ಬೆಳಿಗ್ಗೆ 11:00 ಗಂಟೆಗೆ ಸಾಧ್ಯವಿದ್ದಲ್ಲಿ

Indent Nos.: Lingasugur: 2232/CALL-2

ಕಾಮಗಾರಿಗಳ ವಿವರ, ಷರತ್ತು ಹಾಗೂ ನಿಬಂಧನೆಗಳಿಗಾಗಿ ಈ ಕಛೇರಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್ ಸೈಟ https://kppp.karnataka.gov.in/ ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾ.ನೀ.ಸ &ನೈ ವಿಭಾಗ, ರಾಯಚೂರು.

DIP/RCR/215/KSMC&A/Job No.212/2023-24

ಧಾರವಾಡ, ಗದಗ ಮತ್ತು ಉತ್ತರಕನ್ನಡ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಧಾರವಾಡ
ಲಕ್ಕಮ್ಮನಹಳ್ಳಿ, ಕೈಗಾರಿಕಾ ಪ್ರದೇಶ, ವಿದ್ಯಾಗಿರಿ ಅಂಚೆ, ಧಾರವಾಡ-4
ದೂ: 0836-2467603/2468380 E-mail: dharwarnin@gmail.com ಫ್ಯಾಕ್ಸ್: 0836-2468268

IFT NO: KMF/2023-24/SE0995 DATE: 15-11-2023

ಪ್ಯಾಕಿಂಗ್ ಗುತ್ತಿಗೆಯ ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಧಾರವಾಡ, ಗದಗ ಮತ್ತು ಉತ್ತರಕನ್ನಡ ಜಿಲ್ಲಾ ಹಾಲು ಒಕ್ಕೂಟ ನಿಯಮಿತ., ಧಾರವಾಡವು (ಧಾಮುಲ್) ಕಹಾಮ ಅಥವಾ ಸಹಕಾರ ಹಾಲು ಡೇರಿಗಳಲ್ಲಿ **"ಯಾಂತ್ರಿಕ ಮಾದರಿಯ ಯಂತ್ರಗಳಲ್ಲಿ ಹಾಲು/ಮೊಸರು/ಲಸ್ಸಿ/ಮಜ್ಜಿಗೆ ಪ್ಯಾಕಿಂಗ್ ಹಾಗೂ ಯಂತ್ರಗಳ ಕಾರ್ಯಾಚರಣೆ & ನಿರ್ವಹಣೆ"** ಯನ್ನು ನಿರ್ವಹಿಸಿದ ಬಗ್ಗೆ 5 ವರ್ಷ ಅನುಭವವಿರುವ, ಅಲ್ಲದೇ ಕಾರ್ಮಿಕ ಇಲಾಖೆಯಿಂದ ಲೈಸನ್ಸ್ ಹೊಂದಿದ, ವೃತ್ತಿ ತೆರಿಗೆ, ಸೇವಾ ತೆರಿಗೆ, ಆದಾಯ ತೆರಿಗೆ ನೊಂದಣಿಯಾದ ಹಾಗೂ ಭವಿಷ್ಯನಿಧಿ (PF) ಮತ್ತು ಕಾರ್ಮಿಕರ ರಾಜ್ಯ ವಿಮೆಯ (ESI) ಪ್ರತ್ಯೇಕ ಕೋಡ್ ಹೊಂದಿದ, ಆಸಕ್ತಿಯುಳ್ಳ ಮತ್ತು ಅರ್ಹ ಟೆಂಡರುದಾರರಿಂದ **ದ್ವೈವಾರ್ಷಿಕ ಅವಧಿಗೆ** ಮುಖ್ಯಡೇರಿ ಧಾರವಾಡದಲ್ಲಿ ಗುತ್ತಿಗೆ ನಿರ್ವಹಿಸಲು ಇ-ಟೆಂಡರ ಆಹ್ವಾನಿಸಲಾಗಿದೆ.

ಆಸಕ್ತಿಯುಳ್ಳ ಟೆಂಡರುದಾರರು ಟೆಂಡರ್ ಪ್ರೊಸೆಸ್ಸಿಂಗ್ ಶುಲ್ಕ (Non-refundable) ವನ್ನು ಮತ್ತು EMD ಮೊತ್ತ **ರೂ.2,70,000/-** ವನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಯಾವುದಾದರೂ ಒಂದು ನಿರ್ದಿಷ್ಟ ಮೂಲದಿಂದ ಟೆಂಡರ್ ದಸ್ತಾವೇಜುವಿನಲ್ಲಿ ತಿಳಿಸಿದಂತೆ ಭರಣಾ ಮಾಡಬಹುದಾಗಿದೆ. ಹೆಚ್ಚಿನ ವಿವರಗಳಾದ ಭದ್ರತಾ ಠೇವಣಿ, ಟೆಂಡರ ಕರಾರು ಮತ್ತು ಷರತ್ತುಗಳನ್ನು ವೆಬ್‌ಸೈಟ್ http://kppp.karnataka.gov.in ನಲ್ಲಿ ಲಾಗ್‌ಇನ್ ಆಗಿ ಅಥವಾ ಸಹಾಯವಾಣಿ ಸಂಖ್ಯೆ:- 080-46010000 / 68948777 ಅಥವಾ ಇ-ಮೇಲ್:- support@eprochelpdesk.com ರ ಮೂಲಕ ಸಂಪರ್ಕಿಸಿ ಟೆಂಡರ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ವೆಬ್‌ಸೈಟ್‌ನ ಯಾವುದೇ ತಾಂತ್ರಿಕ ಅಡಚಣೆಯಿಂದ, ಕೊನೆ ಘಳಿಗೆಯಲ್ಲಿ ಟೆಂಡರ ಸಲ್ಲಿಸುವಿಕೆಯಲ್ಲಿ ಅಥವಾ ಸ್ವೀಕರಿಸುವಲ್ಲಿ ಏನಾದರೂ ತೊಂದರೆ ಆದಲ್ಲಿ ಧಾಮುಲ್ ಯಾವುದೇ ರೀತಿ ಜವಾಬ್ದಾರರಲ್ಲ.

1	ಇ-ಪೋರ್ಟಲ್ ಜಾಲತಾಣದಿಂದ ಟೆಂಡರ ದಾಖಲಾತಿ ಲಭ್ಯವಾಗುವ ದಿನಾಂಕ	ದಿ:-16.11.2023 ರಿಂದ ದಿ:-16.12.2023ರ ಸಂಜೆ 4 ಗಂಟೆಗಿಂತ ಮೊದಲು
2	ಪೂರ್ವಭಾವಿ ಸಭೆ (ಧಾಮೂಲ್ ಆವರಣದಲ್ಲಿ)	ದಿ:-07-12-2023 ರಂದು ಬೆಳಿಗ್ಗೆ 11 ಕ್ಕೆ
3	ಇ-ಟೆಂಡರ ಸಲ್ಲಿಸುವ ಕೊನೆಯ ದಿನಾಂಕ & ವೇಳೆ	ದಿ:-16-12-2023 ರ ಸಂಜೆ 4-00 ರವರೆಗೆ
4	ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ವೇಳೆ	ದಿ:-18-12-2023 ರ ಸಂಜೆ 4-30 ರ ನಂತರ
5	ವಾಣಿಜ್ಯ ಬಿಡ್ ತೆರೆಯುವ ದಿನಾಂಕ & ವೇಳೆ	ದಿ:-22-12-2023 ರ ಬೆಳಿಗ್ಗೆ 11-00 ರ ನಂತರ

ಸಹಿ/- ಕಾರ್ಯನಿರ್ವಾಹಕ ನಿರ್ದೇಶಕರು

ಕರ್ನಾಟಕ ಸರಕಾರ
ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ
(ದೂರವಾಣಿ ಸಂಖ್ಯೆ: 08482-228366, ಫ್ಯಾಕ್ಸ್: 08482-240322)
(ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಕರ್ನಾಟಕ, ಬೆಂಗಳೂರಿಗೆ ಸಂಯೋಜನೆಗೊಂಡಿದ್ದು, ಭಾರತ ಸರ್ಕಾರ, ನವದೆಹಲಿಯಿಂದ ಅಂಗೀಕೃತಗೊಂಡಿದೆ)
Website : www.brims-bidar.in & E-mail–directorbrimsbidar2007@gmail.com

ಸಂಖ್ಯೆ: BRIMS/Tender/Journals /CR- /2023-24/1154 Date: 13.11.2023

ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರಿಗೆ 2023-24ನೇ ಸಾಲಿಗಾಗಿ SUPPLY OF JOURNALS CENTRAL LIBRARY/DEPARTMENT OF LIBRARY ಸರಬರಾಜುವಿಗಾಗಿ ಟೆಂಡರ್ ಅಧಿಸೂಚನೆ.

ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರಿಗೆ 2023-24ನೇ ಸಾಲಿಗಾಗಿ ಅತೀ ಅವಶ್ಯಕವಾಗಿ ಬೇಕಾಗಿರುವ ಪುಸ್ತಕಗಳನ್ನು JOURNALS FOR CENTRAL LIBRARY/DEPARTMENT OF LIBRARY ಗಳನ್ನು ಸರಬರಾಜುವಿಗಾಗಿ ಟೆಂಡರ್ ಕರೆಯುವ ನಿಟ್ಟಿನಲ್ಲಿ ಮುದ್ರಾಣಾಲಯದವರು/ಅಧೀಕೃತ ಮಾರಾಟಗಾರರಿಂದ ಟೆಂಡರ್ ಅವ್ಹಾನಿಸಲಾಗಿದೆ. ಇಚ್ಛೇಯುಳ್ಳ ಬಿಡ್‌ದಾರರು ಇ-ಸಂಗ್ರಹಣೆಯ ಪೋರ್ಟಲ್ ಮೂಲಕ ಸದರಿ ಟೆಂಡರಿನ ವಿವರ ವೀಕ್ಷಿಸಬಹುದು/ಡೌನ್‌ಲೋಡ್ ಮಾಡಿಕೊಂಡು ಅರ್ಜಿ ಇ-ಪ್ರೋಕ್ಯೂರಮೇಂಟ್ ಮೂಲಕ ಸಲ್ಲಿಸಬಹುದು. http://eproc.karnataka.gov.in ಮತ್ತು ಟೆಂಡರಿನ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಈ ಸಂಸ್ಥೆಯ ಅಂತರ್ಜಾಲತಾಣವಾದ www.brimsbidar.in & http://bimsbidar.karnataka.gov.in ನಲ್ಲಿ ವೀಕ್ಷಿಸಬಹುದು.

1) ಟೆಂಡರ್ ಸಂಖ್ಯೆ : **DME_DIR_BIMS_BID,** 2) ಟೆಂಡರಿನ ಬಗ್ಗೆ ಕ್ವಾರಿಗಳು ಮತ್ತು ಸ್ಪಷ್ಟಿಕರಣ ಪಡೆಯುವ ಕೋನೆಯ ದಿನಾಂಕ: **20-11-2023 ಮಧ್ಯಾಹ್ನ 2:15 ಗಂಟೆಯ ಒಳಗಾಗಿ,** 3) ಟೆಂಡರ್ ಸಲ್ಲಿಸುವ ಕೋನೆಯ ದಿನಾಂಕ: **29-11-2023 ಸಂಜೆ: 5:30 ಗಂಟೆಯ ಒಳಗಾಗಿ,** 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **01-12-2023 ಸಂಜೆ: 11:00 ಗಂಟೆಗೆ ಒಳಗಾಗಿ,** 5) ವಾಣಿಜ್ಯ ಬಿಡ್ ತೆರೆಯುವ ದಿನಾಂಕ: **06-12-2023 ಬೆಳ್ಳಿಗೆ 11:00 ಗಂಟೆಗೆ ಒಳಗಾಗಿ,** 6) ಟೆಂಡರ್ ಅಂದಾಜು ಮೊತ್ತ : **ರೂ. 40.00 ಲಕ್ಷಗಳು,** 7) ಇ.ಎಂ.ಡಿ: ರೂ. 100000.00, 8) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸುವ ವಿಳಾಸ: ನಿರ್ದೇಶಕರು, ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್.

ಗಮನಿಸಿ: ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಗಳಲ್ಲಿ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾವಣೆಗಳು ಕೇವಲ ವಿದ್ಯುನ್ಮಾನ ಸಂಗ್ರಹಣೆ (e-procurement) ವೇದಿಕೆಯಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- ನಿರ್ದೇಶಕರು
ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್

ವಾ.ಸಾ.ಸಂ.ಇ/ಬೀದರ/134/ಕೆಎಸ್‌ಎಂಸಿ&ಎ/2023-24

‘ಕೈ’ ಭದ್ರಕೋಟೆಯಲ್ಲಿ ಸಂಬಂಧಿಗಳ ಕಾದಾಟ

ಚುನಾವಣಾ ಪಯಣ — ಮಧ್ಯಪ್ರದೇಶ



ಮಂಜುನಾಥ ಹೆಬ್ಬಾರ್

ದಬ್ರಾ: ಬೀಸು ಹೇಳಿಕೆಗಳ ಮೂಲಕ ಒಂದಿಲ್ಲೊಂದು ವಿವಾದಗಳನ್ನು ಸೃಷ್ಟಿಸುತ್ತಾ ಬಂದಿರುವ ಬಿಜೆಪಿಯ ಹುರಿಯಾಳು ಇಮಾರ್ತಿ ದೇವಿ ಅವರಿಗೆ ದಬ್ರಾದ ಕಣದಲ್ಲಿ ಗೆಲುವಿನ ದಡ ಮುಟ್ಟುವುದು ಅಷ್ಟೊಂದು ಸುಲಭವಲ್ಲ. ಸಂಬಂಧಿಗಳ ನಡುವಿನ ಕಾದಾಟದ ಈ ಕ್ಷೇತ್ರದಲ್ಲಿ ಕೈ-ಕಮಲದ ಅಭ್ಯರ್ಥಿಗಳ ನಡುವೆ ರೋಚಕ ಹಣಾಹಣಿ ಏರ್ಪಟ್ಟಿದೆ.

ಪರಿಶಿಷ್ಟ ಜಾತಿಯ ಮೀಸಲು ಕ್ಷೇತ್ರವಾದ ದಬ್ರಾದಲ್ಲಿ ಬಿಜೆಪಿಯ ಮಾಜಿ ಸಚಿವೆ ಇಮಾರ್ತಿ ದೇವಿ ಅವರು ತಮ್ಮ ಸಂಬಂಧಿ ಮತ್ತು ಕಾಂಗ್ರೆಸ್ ಶಾಸಕ ಸುರೇಶ್ ರಾಜೆ ಅವರನ್ನು ಎದುರಿಸುತ್ತಿದ್ದಾರೆ. ಗ್ವಾಲಿಯರ್-ಚಂಬಲ್ ಕ್ಷೇತ್ರದಲ್ಲಿ ತೀವ್ರ ಗಮನ ಸೆಳೆದಿರುವ ಕ್ಷೇತ್ರಗಳಲ್ಲಿ ಇದೂ ಒಂದು.

ದೇಶದಲ್ಲಿ ಕೋವಿಡ್ ವ್ಯಾಪಕವಾಗಿ ಹರಡಿದ್ದ ಸಂದರ್ಭದಲ್ಲಿ ಇಮಾರ್ತಿ ದೇವಿ ‘ನಾನು ಗೋವಿನ ಸೆಗಣಿ ಹಾಗೂ ಮಣ್ಣಿನಲ್ಲಿ ಜನಿಸಿದವಳು. ನನ್ನ ಹತ್ತಿರಕ್ಕೂ ಕೊರೊನಾ ವೈರಸ್ ಸುಳಿಯುವುದಿಲ್ಲ’ ಎಂದು ಹೇಳಿಕೆ ನೀಡಿದ್ದರು. ಒಂದು ಸಲ ಅವರು, ‘ಶೌಚಾಲಯದಲ್ಲಿ ಅಡುಗೆ ಮಾಡಿದರೆ ತಪ್ಪೇನು?’ ಎಂದು ಪ್ರಶ್ನಿಸಿದ್ದರು. 2020ರಲ್ಲಿ ಬಿಜೆಪಿಗೆ ಪಕ್ಷಾಂತರಗೊಂಡ ಸಂದರ್ಭದಲ್ಲಿ ‘ನನ್ನ ರಾಜಕೀಯ ಗುರು ಜ್ಯೋತಿರಾದಿತ್ಯ ಸಿಂಧಿಯಾ ಸೂಚಿಸಿದರೆ ಬಾವಿಗೆ ಹಾರಲು ಸಿದ್ಧ’ ಎಂದೂ ಹೇಳಿಕೊಂಡಿದ್ದರು. 2020ರ ಉಪಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್ ನಾಯಕ ಕಮಲನಾಥ್ ಅವರು ಇಮಾರ್ತಿ ಅವರನ್ನು ‘ಐಟಂ’ ಎಂದೂ ಕರೆದಿದ್ದರು. ಈ ಹೇಳಿಕೆಗೆ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು. ಈ ಪ್ರಕರಣದ ಬೆನ್ನಲ್ಲೇ ಕಮಲನಾಥ್ ಅವರ ‘ಸ್ಟಾರ್ ಪ್ರಚಾರಕ’ ಸ್ಥಾನ-ಮಾನವನ್ನು ಚುನಾವಣಾ ಆಯೋಗ ರದ್ದುಪಡಿಸಿತ್ತು. ಆದರೆ, ಉಪ ಚುನಾವಣೆಯಲ್ಲಿ ಇಮಾರ್ತಿ ಅವರಿಗೆ ‘ಅನುಕಂಪ’ದ ಮತಗಳು ಬಿದ್ದಿರಲಿಲ್ಲ. ಚುನಾವಣೆಯಲ್ಲಿ ಅವರು ಸೋತಿದ್ದರು.

ಈ ಸಲ ಮತ್ತೊಮ್ಮೆ ಅವರು ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ.

ರಾಜ್ಯದ ಗೃಹ ಸಚಿವ ನರೋತ್ತಮ ಮಿಶ್ರಾ ಅವರು ಈ ಕ್ಷೇತ್ರದಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸಿದ್ದರು. ಕ್ಷೇತ್ರ ಪುನರ್‌ವಿಂಗಡಣೆ ಬಳಿಕ 2008ರಲ್ಲಿ ಇದು ಮೀಸಲು ಕ್ಷೇತ್ರವಾಗಿ ಪರಿವರ್ತನೆಗೊಂಡಿತ್ತು. ಕಾರ್ಮಿಕ ಕುಟುಂಬದಿಂದ ಬಂದ ಇಮಾರ್ತಿ ದೇವಿ ಅವರನ್ನು ‘ಕೈ’ ಪಾಳಯ ಕಣಕ್ಕಿಳಿಸಿತ್ತು. 2008, 2013 ಹಾಗೂ 2018ರಲ್ಲಿ ಇಮಾರ್ತಿ ದೇವಿ ಗೆದ್ದಿದ್ದರು. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿತ್ತು. ಮಹಿಳಾ ಮತ್ತು ಮಕ್ಕಳಾ ಕಲ್ಯಾಣ ಸಚಿವರಾಗಿ ಇಮಾರ್ತಿ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲಾಗಿತ್ತು. ಮಧ್ಯಾಹ್ನದ ಬಿಸಿಯೂಟದ ವೇಳೆ ಅಂಗನವಾಡಿ ಮಕ್ಕಳಿಗೆ ಮೊಟ್ಟೆ ನೀಡುವ ಯೋಜನೆ ರೂಪಿಸಿದ್ದರು. ಅದಕ್ಕೆ ಬಿಜೆಪಿ ತೀವ್ರ ವಿರೋಧ ವ್ಯಕ್ತಪಡಿಸಿತ್ತು. ಕೆಲವೇ ತಿಂಗಳಲ್ಲಿ ಅವರೇ ಕಮಲ ಪಾಳಯಕ್ಕೆ ಸೇರಿಕೊಂಡಿದ್ದರು. 2020ರ ಉಪಚುನಾವಣೆಯಲ್ಲಿ ಸೋತಿದ್ದರು. ಉಪಚುನಾವಣೆಯ ಸಂದರ್ಭದಲ್ಲಿ ಸುರೇಶ್ ರಾಜೆ ಅವರು ಕಾಂಗ್ರೆಸ್‌ಗೆ ಸೇರಿ ಅಭ್ಯರ್ಥಿಯಾಗಿದ್ದರು.

2.34 ಲಕ್ಷ ಮತದಾರರನ್ನು ಹೊಂದಿರುವ ಈ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರು (ಅಂದಾಜು 55 ಸಾವಿರ ಮತದಾರರು) ನಿರ್ಣಾಯಕ ಸಂಖ್ಯೆಯಲ್ಲಿದ್ದಾರೆ. ಬ್ರಾಹ್ಮಣ ಹಾಗೂ ಸಾಹು ಮತದಾರರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ‘ದಬ್ರಾವನ್ನು ಜಿಲ್ಲೆಯನ್ನಾಗಿ ಮಾಡಬೇಕು ಎಂಬುದು ನನ್ನ ಕನಸು. ನನ್ನ ಕನಸು ನನಸಾದ ಬಳಿಕ ರಾಜಕೀಯ ನಿವೃತ್ತಿಯಾಗುತ್ತೇನೆ’ ಎಂಬುದು ಇಮಾರ್ತಿ ಅವರ ಪ್ರಮುಖ ಭರವಸೆ. ‘ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ. ದಬ್ರಾ ಜಿಲ್ಲಾ ಕೇಂದ್ರವಾಗಲಿದೆ’ ಎಂದೂ ಕಾಂಗ್ರೆಸ್ ಅಭ್ಯರ್ಥಿ ಸುರೇಶ್ ರಾಜೆ ಅವರು ಮತದಾರರಿಗೆ ‘ವಾಗ್ದಾನ’ ನೀಡಿದ್ದಾರೆ.

‘ಕಳೆದ ನಾಲ್ಕು ಚುನಾವಣೆಗಳಲ್ಲಿ ಕಾಂಗ್ರೆಸ್ ಇಲ್ಲಿ ಗೆದ್ದಿದೆ. ಆದರೆ, ಕೊಟ್ಟಿರುವ ಭರವಸೆಗಳನ್ನು ಈಡೇರಿಸಿಲ್ಲ. ದಬ್ರಾದಲ್ಲಿರುವ ಸರ್ಕಾರಿ ಆಸ್ಪತ್ರೆಯಲ್ಲಿ ತೀವ್ರ ನಿಗಾ ಘಟಕ ಇಲ್ಲ. ನಗರದಲ್ಲಿ ಒಳಚರಂಡಿ ಯೋಜನೆ ಪೂರ್ಣಗೊಂಡಿಲ್ಲ. ಮೀಸಲು ಕ್ಷೇತ್ರದಲ್ಲಿ ಸಮಸ್ಯೆಗಳು ಬೆಟ್ಟದಷ್ಟು ಇವೆ’ ಎಂದು ದೂರುತ್ತಾರೆ ದಬ್ರಾದಲ್ಲಿ ರೆಸ್ಟೋರೆಂಟ್ ನಡೆಸುತ್ತಿರುವ ಕಮಲ್ ಸಿಂಗ್. ‘ಕ್ಷೇತ್ರದಲ್ಲಿ ಸಾಕಷ್ಟು ಪ್ರವಾಸಿ ತಾಣಗಳಿವೆ. ನಗರದ ಸಮೀಪದಲ್ಲಿ ಸಿಂಧ್ ನದಿ ಹರಿಯುತ್ತಿದೆ. ಕೈಗಾರಿಕೆಗಳ ಸ್ಥಾಪನೆಗೆ ಅವಕಾಶ ಇದೆ. ಈ ಸಂಬಂಧ ಹಲವು ವರ್ಷಗಳಿಂದ ಮನವಿ ಸಲ್ಲಿಸುತ್ತಾ ಬಂದಿದ್ದೇವೆ. ಆದರೆ, ಕೈಗಾರಿಕಾ ಪ್ರದೇಶಕ್ಕೆ ಬೇಕಾದ ಭೂಮಿಯನ್ನು ಒದಗಿಸಿಲ್ಲ. ಇಲ್ಲಿನ ಶಾಸಕರದ್ದು ಬರೀ ಮಾತು ಅಷ್ಟೇ’ ಎಂದು ಆಕ್ರೋಶ ವ್ಯಕ್ತಪಡಿಸುತ್ತಾರೆ ಉದ್ಯಮಿ ರಾಜೇಂದ್ರ ಸಾಹು. ‘ನಮ್ಮ ಕ್ಷೇತ್ರದ ನೂರಾರು ಮಕ್ಕಳು ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ. ಇಲ್ಲಿನ ವಾಸ್ತವ ಸ್ಥಿತಿಯ ಅರಿವಿದ್ದ ಇಮಾರ್ತಿ ಅವರು ಮಕ್ಕಳಿಗೆ ಮೊಟ್ಟೆ ನೀಡುವ ಯೋಜನೆ ರೂಪಿಸಿದರು. ಯೋಜನೆ ಜಾರಿಯಾಗಲು ಬಿಜೆಪಿ ಬಿಡಲಿಲ್ಲ. ಧರ್ಮದ ಹೆಸರಿನಲ್ಲಿ ರಾಜಕಾರಣ ಮಾಡುವವರಿಗೆ ಈ ಸಲ ಪಾಠ ಕಲಿಸುತ್ತೇವೆ’ ಎಂದು ಹೇಳುತ್ತಾರೆ ದಬ್ರಾದ ಮಹಿಳೆ ಫಾತಿಮಾ. ‘ಮಹಿಳೆಯರಿಗೆ ಪ್ರತಿ ತಿಂಗಳು ₹1,250 ನೀಡುವ ಬಿಜೆಪಿ ಸರ್ಕಾರದ ಯೋಜನೆ ಉತ್ತಮವಾದುದು. ಇದು ನಮ್ಮಂತಹ ಬಡ ಮಹಿಳೆಯರಿಗೆ ದೊಡ್ಡ ಮೊತ್ತ’ ಎಂದೂ ಹೇಳಲು ಮರೆಯಲಿಲ್ಲ.

ಚುನಾವಣಾ ಕಣದಲ್ಲಿ



- **ಗೆಲುವಿನ ವಿಶ್ವಾಸ:** ವಿಧಾನಸಭೆ ಚುನಾವಣೆಗಳಲ್ಲಿ ತಮ್ಮ ಪಕ್ಷವು ಕನಿಷ್ಠ ನಾಲ್ಕು ರಾಜ್ಯಗಳಲ್ಲಿ ಸರ್ಕಾರ ರಚಿಸಲಿದೆ. ಇದು 2024ರ ಸಾರ್ವತ್ರಿಕ ಚುನಾವಣೆಯು ಯಾವ ದಿಕ್ಕಿನಲ್ಲಿ ಸಾಗಲಿದೆ ಎಂಬುದಕ್ಕೆ ಸ್ಪಷ್ಟ ದಿಕ್ಸೂಚಿ ಆಗಲಿದೆ ಎಂದು ಕಾಂಗ್ರೆಸ್‌ನ ಹಿರಿಯ ನಾಯಕ ಸಚಿನ್ ಪೈಲಟ್ ಹೇಳಿದ್ದಾರೆ.
  ವಿಧಾನಸಭೆ ಚುನಾವಣೆಯಲ್ಲಿ ಸೀಟು ಹಂಚಿಕೆಗೆ ಸಂಬಂಧಿಸಿದಂತೆ ‘ಇಂಡಿಯಾ’ ಮೈತ್ರಿಕೂಟದಲ್ಲಿ ಬಂದಿರುವ ಅಡ್ಡಿ ಆತಂಕಗಳು ಲೋಕಸಭೆ ಚುನಾವಣೆಯಲ್ಲಿ ಇರುವುದಿಲ್ಲ. 2024ರಲ್ಲಿ ಬಿಜೆಪಿಯನ್ನು ಸೋಲಿಸಲು ‘ಇಂಡಿಯಾ’ ಮೈತ್ರಿಕೂಟದ ಪಕ್ಷಗಳು ಒಗ್ಗೂಡಿ ಶ್ರಮಿಸಲು ಬದ್ಧವಾಗಿವೆ. ಯಾರು ಯಾವ ಸ್ಥಾನ ಹೊಂದಬೇಕೆಂಬುದು ಚುನಾವಣೆ ಬಳಿಕ ತೀರ್ಮಾನವಾಗಲಿದೆ ಎಂದು ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.
- **ರ‍್ಯಾಲಿ ರದ್ದು:** ಮಧ್ಯಪ್ರದೇಶದಲ್ಲಿ ಬೈತೂಲ ಜಿಲ್ಲೆಯ ಆಮಲಾದಲ್ಲಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಚುನಾವಣಾ ರ‍್ಯಾಲಿ ರದ್ದಾಗಿದೆ. ಖರ್ಗೆ ಅವರು ಬುಧವಾರ ಪಯಣಿಸಬೇಕಿದ್ದ ಹೆಲಿಕಾಪ್ಟರ್‌ನಲ್ಲಿ ತಾಂತ್ರಿಕ ದೋಷ ಕಂಡು ಬಂದ ಕಾರಣ ಕಾರ್ಯಕ್ರಮ ರದ್ದು ಮಾಡಲಾಗಿದೆ ಎಂದು ಪಕ್ಷದ ನಾಯಕರೊಬ್ಬರು ಹೇಳಿದ್ದಾರೆ.
  ಆದರೆ ಬೆರಾಸಿಯಾ ಮತ್ತು ಭೋಪಾಲ್‌ನಲ್ಲಿ ಕಾರ್ಯಕ್ರಮಗಳು ನಿಗದಿಯಂತೆ ನಡೆಯಲಿವೆ ಎಂದು ಅವರು ತಿಳಿಸಿದ್ದಾರೆ.
- **ರೈತರಿಗೆ ಉಚಿತ ವಿದ್ಯುತ್:** ತೆಲಂಗಾಣದಲ್ಲಿ ಪಕ್ಷ ಅಧಿಕಾರಕ್ಕೆ ಬಂದರೆ ರೈತರಿಗೆ 24 ಗಂಟೆಗಳು ಉಚಿತ ವಿದ್ಯುತ್ ಪೂರೈಕೆ ಮಾಡಲಾಗುವುದು ಎಂದು ಕಾಂಗ್ರೆಸ್‌ನ ರಾಜ್ಯ ಘಟಕದ ಅಧ್ಯಕ್ಷ ಎ. ರೇವಂತ್ ರೆಡ್ಡಿ ಹೇಳಿದ್ದಾರೆ. ಪ್ರಚಾರ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಮಾತನಾಡಿದ ಅವರು, 2004ರಲ್ಲಿ ವೈ.ಎಸ್. ರಾಜಶೇಖರ ರೆಡ್ಡಿ ನೇತೃತ್ವದ ಸರ್ಕಾರದಲ್ಲಿ ರೈತರಿಗೆ ಉಚಿತವಾಗಿ ವಿದ್ಯುತ್ ಪೂರೈಕೆ ಮಾಡಿದ್ದನ್ನು ಸ್ಮರಿಸಿದರು.
- **‘ಕೆಸಿಆರ್‌ಗೆ ಸೋಲು’:** ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ (ಕೆಸಿಆರ್) ಅವರು ಗಜ್ವೇಲ್ ಮತ್ತು ಕಾಮಾರೆಡ್ಡಿ ಎರಡೂ ಕ್ಷೇತ್ರಗಳಲ್ಲಿ ಸೋಲಲಿದ್ದಾರೆ ಎಂದು ತೆಲಂಗಾಣ ಬಿಜೆಪಿ ಅಧ್ಯಕ್ಷ ಜಿ. ಕಿಷನ್ ರೆಡ್ಡಿ ಹೇಳಿದ್ದಾರೆ.
  ಸುದ್ದಿಗಾರರ ಜತೆ ಮಾತನಾಡಿದ ಅವರು, ಕಾಮಾರೆಡ್ಡಿಯಲ್ಲಿ ಬಿಜೆಪಿ ಅಭ್ಯರ್ಥಿಯನ್ನು ಸೋಲಿಸಲು ಬಿಆರ್‌ಎಸ್ ಮತ್ತು ಕಾಂಗ್ರೆಸ್ ಪಕ್ಷಗಳು ಪಿತೂರಿ ನಡೆಸಿವೆ ಎಂದು ಆರೋಪಿಸಿದರು. ಕೇಂದ್ರದಲ್ಲಿ 2024ರ ಚುನಾವಣೆ ಬಳಿಕ ಸಮ್ಮಿಶ್ರ ಸರ್ಕಾರ ಇರಲಿದೆ ಎಂದು ಕೆಸಿಆರ್ ಹೇಳಿರುವುದನ್ನು ಟೀಕಿಸಿದ ಅವರು, ಸಮ್ಮಿಶ್ರ ಸರ್ಕಾರವೇನಾದರೂ ಬಂದರೆ, ಪ್ರತಿ ಮೂರು ತಿಂಗಳಿಗೆ ಹೊಸ ಪ್ರಧಾನಿ ಇರಲಿದ್ದಾರೆ ಎಂದು ಹೇಳಿದ್ದಾರೆ.
- **ಕಾಂಗ್ರೆಸ್‌ಗೆ ಸೇರ್ಪಡೆ:** ರಾಜಸ್ಥಾನದಲ್ಲಿ ಬಿಜೆಪಿ ನಾಯಕ ಅಮಿನ್ ಪಠಾಣ್ ಅವರು ಬುಧವಾರ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು.
  ವಾಜಪೇಯಿ, ಭೈರೋನ್‌ಸಿಂಗ್ ಶೆಖಾವತ್ ಅವರಂತಹ ನಾಯಕರಿಂದ ಸ್ಫೂರ್ತಿಗೊಂಡು ತಾವು 25 ವರ್ಷಗಳಿಂದ ಬಿಜೆಪಿಯಲ್ಲಿ ಇದ್ದದ್ದಾಗಿ ಹೇಳಿದ ಅವರು ಇಂದಿನ ಬಿಜೆಪಿಯಲ್ಲಿ ಕೇವಲ ಗುಜರಾತಿನ ಜನರು ಮತ್ತು ಉದ್ಯಮಿಗಳಿಗೆ ಮಾತ್ರ ಉತ್ತೇಜನ ನೀಡಲಾಗುತ್ತಿದೆ ಎಂದು ಆರೋಪಿಸಿದರು.
- **‘ದೇಶದಲ್ಲಿ ಬದಲಾವಣೆ’:** ಒಬಿಸಿಗಳು, ದಲಿತರು ಮತ್ತು ಬುಡಕಟ್ಟು ಜನರು ತಮ್ಮ ಜನಸಂಖ್ಯೆ ಎಷ್ಟಿದೆ ಎಂಬುದನ್ನು ಅರಿತುಕೊಂಡ ಬಳಿಕ ದೇಶವು ಬದಲಾವಣೆ ಹೊಂದಲಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದರು.
  ಛತ್ತೀಸಗಢದ ಬೆಮೆತರಾ ಜಿಲ್ಲೆಯಲ್ಲಿ ರ‍್ಯಾಲಿಯಲ್ಲಿ ಮಾತನಾಡಿದ ಅವರು ‘ಮೋದಿಜಿ ₹ 12,000 ಕೋಟಿ ಮೌಲ್ಯದ ವಿಮಾನದಲ್ಲಿ ಹಾರಾಟ ನಡೆಸುತ್ತಾರೆ ಮತ್ತು ಪ್ರತಿ ದಿನ ಹೊಸ ದಿರಿಸು ಧರಿಸುತ್ತಾರೆ. ಒಬಿಸಿ ಪದ ಬಳಸಿ ಅವರು ಆಯ್ಕೆಯಾದರು. ಒಬಿಸಿಗಳಿಗೆ ಅವರ ಹಕ್ಕುಗಳನ್ನು ನೀಡುವ ಸಮಯ ಬಂದಾಗ, ಅವರು ಒಬಿಸಿ ಎಂಬುದು ಇಲ್ಲ. ಭಾರತದಲ್ಲಿರುವುದು ಬಡವರು ಎಂಬ ಜಾತಿ ಮಾತ್ರ ಎನ್ನುತ್ತಾರೆ. ಒಬಿಸಿಗಳು ಎಷ್ಟು ಮಂದಿ ಇದ್ದಾರೆ ಎಂಬುದನ್ನು ನಾವು ಪತ್ತೆ ಹಚ್ಚುತ್ತೇವೆ’ ಎಂದರು.


ನುಡಿ-ಕಿಡಿ



ಅವರು (ಜ್ಯೋತಿರಾದಿತ್ಯ ಸಿಂಧಿಯಾ) ತಮ್ಮ ಕುಟುಂಬದ ಸಂಪ್ರದಾಯವನ್ನು ಚೆನ್ನಾಗಿ ಅನುಸರಿಸು-ತ್ತಾರೆ. ಗ್ವಾಲಿಯಾರ್ ಮತ್ತು ಚಂಬಲ್ ಪ್ರದೇಶದ ಜನರ ವಿಶ್ವಾಸಕ್ಕೆ ಅವರು ದ್ರೋಹ ಬಗೆದರು. ನೀವು ಮತ ಹಾಕಿದ್ದ ನಿಮ್ಮ ಸರ್ಕಾರವನ್ನು ಅವರು ಬೀಳಿಸಿದರು. ಅವರು ನೋಡಲು ಅಷ್ಟೇನೂ ಎತ್ತರವಾಗಿಲ್ಲ. ಆದರೆ ಅವರ ಅಹಂಕಾರ ಮಾತ್ರ ವಾಹ್ ಭಾಯಿ ವಾಹ್.

ಪ್ರತಿಪಕ್ಷಗಳು ತೆಗಳುತ್ತವೆಂದು ಮೋದಿ ಅವರು ಯಾವಾಗಲೂ ಅಳುತ್ತಾರೆ. ನೀವು ಸಲ್ಮಾನ್ ಖಾನ್ ಅವರ ‘ತೇರೆ ನಾಮ್’ ಸಿನಿಮಾ ನೋಡಿದ್ದೀರಾ? ಅದರಲ್ಲಿ ಸಲ್ಮಾನ್ ಖಾನ್ ಆರಂಭದಿಂದ ಅಂತ್ಯದವರೆಗೆ ಅಳುತ್ತಿರು-ತ್ತಾರೆ. ನಾನು ಹೇಳುತ್ತೇನೆ, ಮೋದಿ ಜಿ ಅವರ ಕುರಿತು ‘ಮೇರೆ ನಾಮ್’ ಶೀರ್ಷಿಕೆಯೊಂದಿಗೆ ಸಿನಿಮಾ ನಿರ್ಮಿಸೋಣ.

ಪ್ರಿಯಾಂಕಾ ಗಾಂಧಿ ವಾದ್ರಾ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ



ಕಾಂಗ್ರೆಸ್ ತನ್ನ ಮುಖವನ್ನು ಕಾಲಕಾಲಕ್ಕೆ ಬದಲಿಸುತ್ತದೆ. ಈಗ ಅವರಿಗೆ ಭಗವಾನ್ ರಾಮ ಪ್ರಿಯನಾಗಿದ್ದಾನೆ. ರಾಮ ಕಾಲ್ಪನಿಕ. ಅವನ ಅಸ್ತಿತ್ವಕ್ಕೆ ವೈಜ್ಞಾನಿಕ ಮತ್ತು ಐತಿಹಾಸಿಕ ಪುರಾವೆಗಳಿಲ್ಲ ಎಂದು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವು ಕೋರ್ಟ್‌ನಲ್ಲಿ ಅಫಿಡವಿಟ್ ಸಲ್ಲಿಸಿತ್ತು.

ಅದೇ ಪಕ್ಷ ಈಗ ರಾಮನ ಹೆಸರಿನಲ್ಲಿ ಮತ ಕೋರುತ್ತಿದೆ. ಈ ದೇಶವು ರಾಮಭಕ್ತರಿಂದ ತುಂಬಿದೆ. ಮತ ಕೇಳಲು ರಾಮನ ಹೆಸರು ಬಳಸಬೇಕಿದೆ ಎಂಬುದು ಅವರಿಗೆ ಅರಿವಾಗಿದೆ. ಹಾಗಾಗಿಯೇ ಈಚೆಗೆ ಅವರು ಮಂದಿರದಿಂದ ಮಂದಿರಕ್ಕೆ ಹೋಗುತ್ತಿದ್ದಾರೆ.

ಜೆ.ಪಿ. ನಡ್ಡಾ, ಬಿಜೆಪಿ ಅಧ್ಯಕ್ಷ

₹18 ಸಾವಿರ ಕೋಟಿ ಬಿಡುಗಡೆ

ಪಿಎಂ– ಕಿಸಾನ್ ಯೋಜನೆ: 15ನೇ ಕಂತು ಮಂಜೂರಿಗೆ ಕಾಂಗ್ರೆಸ್ ಆಕ್ಷೇಪ



‘ಜನ್ ಜಾತೀಯ ಗೌರವ ದಿವಸ’ ಕಾರ್ಯಕ್ರಮದ ವೇಳೆ ಪ್ರಧಾನಿ ಮೋದಿ ಜನರತ್ತ ಕೈ ಬೀಸಿದರು. ಜಾರ್ಖಂಡ್ ರಾಜ್ಯಪಾಲ ಸಿ.ಪಿ. ರಾಧಾಕೃಷ್ಣನ್ ಇದ್ದಾರೆ ಪಿಟಿಐ ಚಿತ್ರ

ಖೂಂಟಿ/ ನವದೆಹಲಿ(ಪಿಟಿಐ): ಪಿಎಂ–ಕಿಸಾನ್ ಯೋಜನೆಯ 15ನೇ ಕಂತು ₹18,000ಕೋಟಿಯನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಬುಧವಾರ ಬಿಡುಗಡೆ ಮಾಡಿದ್ದಾರೆ. ಇದರಿಂದ ದೇಶದಾದ್ಯಂತ ಎಂಟು ಕೋಟಿ ರೈತರಿಗೆ ಅನುಕೂಲವಾಗಲಿದೆ.

ಜಾರ್ಖಂಡ್‌ನ ಖೂಂಟಿ ಜಿಲ್ಲೆಯಲ್ಲಿ ಜನಜಾತೀಯ ಗೌರವ್ ದಿವಸ ಆಚರಣೆಯ ಕಾರ್ಯಕ್ರಮದಲ್ಲಿ ಪ್ರಧಾನಿ ಅವರು ಬಟನ್ ಒತ್ತುವ ಮೂಲಕ ರೈತರ ಬ್ಯಾಂಕ್ ಖಾತೆಗಳಿಗೆ ಹಣವನ್ನು ವರ್ಗಾಯಿಸಿದರು.

ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ (ಪಿಎಂ- ಕಿಸಾನ್) ಯೋಜನೆಯಡಿ ಪ್ರತಿ ವರ್ಷ ₹ 6,000 ಆರ್ಥಿಕ ನೆರವನ್ನು ರೈತರ ಬ್ಯಾಂಕ್ ಖಾತೆಗಳಿಗೆ ಮೂರು ಕಂತುಗಳಲ್ಲಿ ವರ್ಗಾಯಿಸಲಾಗುವುದು. ಈಗಾಗಲೇ ಯೋಜನೆಯಡಿ ₹ 2.62 ಲಕ್ಷ ಕೋಟಿ ಹಣವನ್ನು ರೈತರಿಗೆ ವರ್ಗಾಯಿಸಲಾಗಿದೆ.

‘ಉದ್ದೇಶಪೂರ್ವಕವೇ?’: ಛತ್ತೀಸಗಢ ಮತ್ತು ಮಧ್ಯಪ್ರದೇಶ ವಿಧಾನಸಭೆ ಚುನಾವಣೆಗೆ ಇನ್ನು ಎರಡು ದಿನಗಳು ಮಾತ್ರ ಬಾಕಿ ಇರುವಾಗ ಈ ಹಣ ಬಿಡುಗಡೆ ಮಾಡಿರುವುದನ್ನು ಕಾಂಗ್ರೆಸ್ ಪ್ರಶ್ನಿಸಿದೆ. ಉದ್ದೇಶಪೂರ್ವಕವಾಗಿ ಹೀಗೆ ಮಾಡಲಾಗಿದೆಯೇ ಎಂದು ಕೇಳಿದೆ. ಇದೇ 17ರಂದು ಮಧ್ಯಪ್ರದೇಶದಲ್ಲಿ ಒಂದೇ ಹಂತದ ಮತ್ತು ಛತ್ತೀಸಗಢದಲ್ಲಿ ಎರಡನೇ ಹಂತದ ಚುನಾವಣೆ ನಡೆಯಲಿದೆ.

ಯೋಜನೆಯ ಆರನೇ ಕಂತನ್ನು 2020ರ ಆ. 1ರಂದು ಮತ್ತು ಒಂಬತ್ತನೇ ಕಂತನ್ನು 2021ರ ಆ. 9ರಂದು ಬಿಡುಗಡೆ ಮಾಡಲಾಗಿತ್ತು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಯೋಜನೆಯ 12ನೇ ಕಂತನ್ನು ಕಳೆದ ವರ್ಷ ಅ. 17ರಂದು ಬಿಡುಗಡೆ ಮಾಡಲಾಗಿತ್ತು. 15ನೇ ಕಂತನ್ನು ಬುಧವಾರ ಬಿಡುಗಡೆ ಮಾಡಲಾಗಿದೆ. ಎರಡು ದಿನಗಳಲ್ಲಿ ಛತ್ತೀಸಗಢ ಮತ್ತು ಮಧ್ಯಪ್ರದೇಶದಲ್ಲಿ, ಇನ್ನು 10 ದಿನಗಳಲ್ಲಿ ರಾಜಸ್ಥಾನದಲ್ಲಿ ಮತ್ತು ಇನ್ನು 15 ದಿನಗಳಲ್ಲಿ ತೆಲಂಗಾಣದಲ್ಲಿ ಚುನಾವಣೆ ನಡೆಯಲಿದೆ. ಈ ಸಂದರ್ಭದಲ್ಲಿ 15ನೇ ಕಂತು ಬಿಡುಗಡೆ ಮಾಡಲಾಗಿದೆ. ಎಂದು ಅವರು ಪೋಸ್ಟ್‌ನಲ್ಲಿ ಹೇಳಿದ್ದಾರೆ.

ಇದು ಉದ್ದೇಶಪೂರ್ವಕವೇ ಎಂದೂ ಪ್ರಶ್ನಿಸಿದ್ದಾರೆ.

ಭಗವಾನ್ ‘ಮಹದೇವ್’ ಅವಮಾನಿಸಿದ ಬಘೇಲ್: ಶಾ

ಬೆಮೆತರಾ (ಪಿಟಿಐ) : ಛತ್ತೀಸಗಢದ ಬೆಮೆತರಾ ಜಿಲ್ಲೆಯು ‘ಲವ್ ಜಿಹಾದ್’ ಕೇಂದ್ರವಾಗಿ ಮಾರ್ಪಟ್ಟಿದೆ ಮತ್ತು ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಅಂತಹ ಕೃತ್ಯ ಮಾಡಲು ಯಾರೂ ಧೈರ್ಯ ಮಾಡುವುದಿಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಬುಧವಾರ ಹೇಳಿದ್ದಾರೆ.

ರಾಜ್ಯದಲ್ಲಿ ಎರಡನೇ ಹಂತದ ಚುನಾವಣೆಯ ಪ್ರಚಾರದ ಕೊನೆಯ ದಿನದಂದು ಬೆಮೆತರಾ ಜಿಲ್ಲೆಯ ಸಾಜಾ ವಿಧಾನಸಭಾ ಕ್ಷೇತ್ರದಲ್ಲಿ ರ‍್ಯಾಲಿಯಲ್ಲಿ ಮಾತನಾಡಿದ ಶಾ, ರಮಣ್ ಸಿಂಗ್ ನೇತೃತ್ವದ ಬಿಜೆಪಿ ಸರ್ಕಾರದ ಅವಧಿಯಲ್ಲಿ, ದುರ್ಗ್ ವಿಭಾಗವು ಶಿಕ್ಷಣದ ಕೇಂದ್ರವಾಗಿತ್ತು. ಭೂಪೇಶ್ ಇದನ್ನು ಬೆಟ್ಟಿಂಗ್ ಕೇಂದ್ರವನ್ನಾಗಿ ಪರಿವರ್ತಿಸಿದ್ದಾರೆ. ಯುವಕರನ್ನು ಬೆಟ್ಟಿಂಗ್ ವ್ಯವಹಾರಕ್ಕೆ ತಳ್ಳುವ ಪಾಪವನ್ನು ಅವರು ಮಾಡಿದ್ದಾರೆ’ ಎಂದು ಟೀಕಿಸಿದರು.

'ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರು ಬೆಟ್ಟಿಂಗ್ ಅಪ್ಲಿಕೇಶನ್‌ಗೆ ಭಗವಾನ್ ಮಹದೇವ್ ಹೆಸರು ಇಡುವ ಮೂಲಕ ಅವಮಾನಿಸಿದ್ದಾರೆ. ಬೆಟ್ಟಿಂಗ್ ಆ್ಯಪ್‌ಗೆ ಬಘೇಲ್ ತಮ್ಮದೇ ಹೆಸರು ಇಡಬಹುದಿತ್ತು. ಅವರು ಮಹದೇವ್ ಹೆಸರನ್ನು ಏಕೆ ಬಳಸಿದರು? ’ ಎಂದರು.

ಬಿಜೆಪಿ ಸಾಜಾ ಕ್ಷೇತ್ರದಿಂದ ಈಶ್ವರ್ ಸಾಹು ಅವರನ್ನು ಕಣಕ್ಕಿಳಿಸಿದೆ. ಕಳೆದ ಏಪ್ರಿಲ್‌ನಲ್ಲಿ ಜಿಲ್ಲೆಯ ಬಿರಾನಪುರ ಗ್ರಾಮದಲ್ಲಿ ನಡೆದ ಕೋಮು ಘರ್ಷಣೆಯಲ್ಲಿ ಈಶ್ವರ್ ಪುತ್ರ ಭುವನೇಶ್ವರ್ ಸಾಹು ಮೃತಪಟ್ಟಿದ್ದರು.

‘ಈಶ್ವರ್ ಸಾಹು ಕೇವಲ ಅಭ್ಯರ್ಥಿ ಮಾತ್ರವಲ್ಲ, ನ್ಯಾಯಕ್ಕಾಗಿ ಹೋರಾಟದ ಸಂಕೇತ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ರಚಿಸುವುದಲ್ಲದೆ, ಭುವನೇಶ್ವರ್ ಸಾಹುಗೆ ನ್ಯಾಯವನ್ನು ಖಾತರಿಪಡಿಸುತ್ತವೆ ಮತ್ತು ತುಷ್ಟೀಕರಣದ ರಾಜಕೀಯದಲ್ಲಿ ತೊಡಗಿರುವವರಿಗೆ ಪಾಠ ಕಲಿಸುತ್ತವೆ’ ಎಂದು ಎಚ್ಚರಿಸಿದರು.

ಸಾಹು, ಕುರ್ಮಿ ಮತ್ತು ಗೊಂಡ್ ಸಮುದಾಯಗಳು ಅದರ (ಲವ್ ಜಿಹಾದ್) ಗುರಿಯಾಗಿದ್ದರೆ, ಬಘೇಲ್ ಸರ್ಕಾರ ನಿದ್ರೆಯಲ್ಲಿದೆ. ಬಿಜೆಪಿ ಅಧಿಕಾರಕ್ಕೆ ತಂದರೆ ಅಂತಹ ಕೃತ್ಯವನ್ನು ಮಾಡಲು ಯಾರೂ ಧೈರ್ಯ ಮಾಡಲ್ಲ ಎಂದು ಅವರು ಹೇಳಿದರು.

ರಾಜಸ್ಥಾನ: ರಾಹುಲ್ ಪ್ರಚಾರ ಇಂದಿನಿಂದ

ಪ್ರಜಾವಾಣಿ ವಾರ್ತೆ

ನವದೆಹಲಿ: ಚುನಾವಣೆಗೆ ಎಂಟು ದಿನಗಳು ಬಾಕಿ ಇರುವಾಗ ರಾಜಸ್ಥಾನದಲ್ಲಿ ರಾಹುಲ್ ಗಾಂಧಿ ಅವರು ಅಂತಿಮವಾಗಿ ನಾಲ್ಕು ದಿನಗಳು ಪ್ರಚಾರ ಕೈಗೊಳ್ಳಲಿದ್ದಾರೆ. ಚುನಾವಣೆ ಘೋಷಣೆ ಬಳಿಕ ಇದೇ ಮೊದಲ ಬಾರಿಗೆ ಅವರು ಈ ರಾಜ್ಯಕ್ಕೆ ಭೇಟಿ ನೀಡುತ್ತಿದ್ದು ಇದೇ 16, 19,21 ಮತ್ತು 22ರಂದು ಪ್ರಚಾರ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ.

ಇದೇ 25ರಂದು ರಾಜಸ್ಥಾನದಲ್ಲಿ ಚುನಾವಣೆ ನಡೆಯಲಿದೆ. ಪ್ರಚಾರಕ್ಕೆ ಇದೇ 23 ಕಡೆಯ ದಿನ.

ಚುನಾವಣೆ ಘೋಷಣೆಯಾಗಿ ತಿಂಗಳಾದರೂ ರಾಹುಲ್ ರಾಜ್ಯಕ್ಕೆ ಭೇಟಿ ನೀಡದೇ ಇದ್ದುದ್ದು ಅವರು ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಪರ ಪ್ರಚಾರ ಕೈಗೊಳ್ಳುವರೋ ಇಲ್ಲವೋ ಎಂಬ ಅನುಮಾನ ಹುಟ್ಟು ಹಾಕಿತ್ತು. ಸಚಿನ್ ಪೈಲಟ್ ಅವರನ್ನು ಮುಖ್ಯಮಂತ್ರಿಯಾಗಿ ಮಾಡುವ ಪಕ್ಷದ ಹೈಕಮಾಂಡ್‌ನ ಆಲೋಚನೆಯನ್ನು ಗೆಹಲೋತ್ ಅವರು ನಿಷ್ಫಲಗೊಳಿಸಿದ್ದರು. ಕೇವಲ ನಾಲ್ಕು ದಿನ ಪ್ರಚಾರ ಕೈಗೊಳ್ಳ-ಲಿದ್ದರೂ ರಾಹುಲ್ ಅವರು ಜೈಪುರದಲ್ಲಿ ಇನ್ನೂ ಕೆಲವು ದಿನಗಳ ಇರಲಿದ್ದಾರೆ. ದೆಹಲಿಯಲ್ಲಿ ಹೆಚ್ಚಿರುವ ವಾಯು ಮಾಲಿನ್ಯದ ಕಾರಣ ರಾಹುಲ್ ಅವರ ತಾಯಿ, ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಜೈಪುರದಲ್ಲಿ ಕೆಲ ಕಾಲ ತಂಗಲಿದ್ದಾರೆ.

‘ಸೋನಿಯಾ ಅವರು ಕೆಲ ದಿನಗಳು ಜೈಪುರದಲ್ಲಿ ಇರಲಿದ್ದಾರೆ. ಇದು ವೈಯಕ್ತಿಕ ಭೇಟಿ ಆಗಿರುತ್ತದೆ. ರಾಹುಲ್ ಅವರು ಜೈಪುರದಲ್ಲಿದ್ದು ಛತ್ತೀಸಗಢ-ದಲ್ಲಿ ಮತ್ತು ರಾಜಸ್ಥಾನದಲ್ಲಿ ಪ್ರಚಾರ ಕೈಗೊಳ್ಳಲಿದ್ದಾರೆ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಮಂಗಳವಾರ ರಾತ್ರಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ರಾಹುಲ್ ಅವರಲ್ಲದೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ತಲಾ ಮೂರು ದಿನಗಳು ರ‍್ಯಾಲಿಗಳಲ್ಲಿ ಪಾಲ್ಗೊಳ್ಳುವರು.

ಅಕ್ಟೋಬರ್ 9ರಂದು ಚುನಾವಣೆ ಘೋಷಣೆಯಾದ ಬಳಿಕ ರಾಹುಲ್ ಅವರು ತೆಲಂಗಾಣದಲ್ಲಿ ಕನಿಷ್ಠ ಐದು ದಿನಗಳಿದ್ದು 14 ರೋಡ್‌ಶೋಗಳು, ಸಾರ್ವಜನಿಕ ಸಭೆಗಳು ಮತ್ತು ಇತರ ಸಭೆಗಳಲ್ಲಿ ಭಾಗವಹಿಸಿದ್ದಾರೆ. ತೆಲಂಗಾಣದಲ್ಲಿ ಇದೇ 30ರಂದು ಚುನಾವಣೆ ನಡೆಯಲಿದೆ.

ರಾಜಸ್ಥಾನದಲ್ಲಿ ರಾಹುಲ್ ಅವರ ಗೈರು ಕುರಿತಂತೆ ವಿವಾದಗಳು ಏಳುತ್ತಿದ್ದಂತೆಯೇ ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು, ‘ಕೆಲವು ಮಾಧ್ಯಮಗಳು ಕಾಂಗ್ರೆಸ್‌ನ ಉನ್ನತ ನಾಯಕರ ವಿರುದ್ಧ ಸುಳ್ಳು ಸುದ್ದಿಗಳನ್ನು ಹಬ್ಬಿಸುತ್ತಿವೆ’ ಎಂದು ಆರೋಪಿಸಿದರು.

’ಪ್ರಧಾನಿ ಮೋದಿ ಅವರು ಮಿಜೋರಾಂನಲ್ಲಿ ಪ್ರಚಾರ ಕೈಗೊಳ್ಳದಿರುವ ಬಗ್ಗೆ ಸಂಪೂರ್ಣ ಮೌನವಿದೆ. ಆದರೆ ನಮ್ಮ ವಿರುದ್ಧ ಅಪ ಪ್ರಚಾರ ಮಾಡಲಾಗುತ್ತಿದೆ. ರಾಜಸ್ಥಾನದ ಬಗೆಗಿನ ನಮ್ಮ ಬದ್ಧತೆಯನ್ನು ಪ್ರಶ್ನಿಸುವುದು ಸರಿಯಲ್ಲ’ ಎಂದು ಅವರು ಎಕ್ಸ್‌ನಲ್ಲಿ ಭಾನುವಾರ ಪೋಸ್ಟ್ ಮಾಡಿದ್ದಾರೆ.

ಭಾರತ್ ಜೋಡೊ ಯಾತ್ರೆ ವೇಳೆ ರಾಹುಲ್ ಅವರು 18 ದಿನಗಳು ರಾಜಸ್ಥಾನದಲ್ಲಿ ನಡೆದಾಡಿದ್ದರು ಎಂದೂ ಅವರು ನೆನಪಿಸಿಕೊಂಡಿದ್ದಾರೆ.

‘ಮುಂಬರುವ ಚುನಾವಣೆಗೆ ಪಕ್ಷ ನೀಡಿರುವ ಗ್ಯಾರಂಟಿಗಳು, ರಾಹುಲ್ ಅವರು ರಾಜಸ್ಥಾನದ ಬಡವರು, ಯುವಜನತೆ ಮತ್ತು ದುರ್ಬಲ ವರ್ಗದ ಜನರೊಂದಿಗೆ ನಡೆಸಿದ ಸಂವಾದದ ಪ್ರತಿಫಲ. ರಾಜಸ್ಥಾನದಲ್ಲಿ ಮತ್ತೆ ಕಾಂಗ್ರೆಸ್ ಸರ್ಕಾರ ರಚನೆಗೆ ಪಕ್ಷದ ಬೂತ್ ಮಟ್ಟದಿಂದ ಕಾಂಗ್ರೆಸ್ ಅಧ್ಯಕ್ಷ-ರವರೆಗೆ ಇಡೀ ಪಕ್ಷ ಒಗ್ಗೂಡಿ ಕಾರ್ಯ ನಿರ್ವಹಿಸುತ್ತಿದೆ’ ಎಂದು ಅವರು ಹೇಳಿದ್ದಾರೆ.

‘ನಾವು ಭರ್ಜರಿ ಜಯದೊಂದಿಗೆ ಅಧಿಕಾರಕ್ಕೆ ಮರಳುತ್ತೇವೆ ಎಂಬುದರಲ್ಲಿ ಸಂಶಯವಿಲ್ಲ– ಏಕೆಂದರೆ, ರಾಜಸ್ಥಾನದ ಎಂಟು ಕೋಟಿ ಜನರೊಂದಿಗೆ ಕಾಂಗ್ರೆಸ್‌ಗೆ ಸದೃಢ ಬಂಧವಿದೆ ಅಲ್ಲದೆ ಪಕ್ಷವು ಕಾಂತ್ರಿಕಾರಕ ಆಡಳಿತವನ್ನು ನೀಡಿದೆ’ ಎಂದೂ ತಿಳಿಸಿದ್ದಾರೆ.

‘ವಿಚ್ಛೇದನ ನೀಡದೆ ಪರಸ್ತ್ರೀ ಜತೆ ವಾಸ ಸಹಜೀವನ ಅಲ್ಲ’

ಚಂಡೀಗಢ (ಪಿಟಿಐ): ಪತಿಯು ತನ್ನ ಪತ್ನಿಗೆ ವಿಚ್ಛೇದನ ನೀಡದೆಯೇ, ಪರ ಸ್ತ್ರೀ ಜೊತೆ ‘ಸ್ವೇಚ್ಛೆಯಿಂದ ಕೂಡಿದ ಮತ್ತು ವಿವಾಹೇತರ ಸಂಬಂಧ’ ಹೊಂದಿದ್ದಲ್ಲಿ, ಅವರಿಬ್ಬರ ಸಂಬಂಧವನ್ನು ‘ಸಹಜೀವನ’ ಅಥವಾ ‘ವಿವಾಹದಂತಹ ಸಂಬಂಧ’ ಎಂಬುದಾಗಿ ಕರೆಯುವಂತಿಲ್ಲ ಎಂದು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ತಮ್ಮ ಬದುಕು ಮತ್ತು ಸ್ವಾತಂತ್ರ್ಯದ ರಕ್ಷಣೆ ಕೋರಿ ಪಂಜಾಬ್‌ನ ಜೋಡಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಕುಲದೀಪ್ ತಿವಾರಿ ಅವರಿದ್ದ ಏಕಸದಸ್ಯ ಪೀಠ ವಜಾಗೊಳಿಸಿದೆ.

ತಮ್ಮ ಸಹಜೀವನ ಸಂಬಂಧದಿಂದ ಆಕ್ರೋಶಗೊಂಡಿರುವ ಮಹಿಳೆಯ ಕುಟುಂಬದ ಸದಸ್ಯರು ತಮಗೆ ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ಅರ್ಜಿದಾರರು ತಿಳಿಸಿದ್ದಾರೆ.

ಸಹ ಜೀವನ ನಡೆಸುತ್ತಿರುವ ಮಹಿಳೆ ಅವಿವಾಹಿತರಾಗಿದ್ದಾರೆ, ಆದರೆ ಪುರುಷ ವಿವಾಹಿತ. ಸಂಬಂಧ ಹಳಸಿದ ಕಾರಣ ಪತ್ನಿಯಿಂದ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಅವರು ತಮ್ಮ ತಾಯಿಯೊಂದಿಗೆ ವಾಸಿಸುತ್ತಿದ್ದಾರೆ ಎಂಬುದನ್ನು ವಿಚಾರಣೆ ವೇಳೆ ಪೀಠ ಗಮನಿಸಿದೆ.

‘ಸಂಗಾತಿಯಿಂದ ವಿಚ್ಛೇದನ ಪಡೆಯದೆ, ಪರಸ್ತ್ರೀ ಜತೆ ವಿವಾಹೇತರ ಸಂಬಂಧ ಹೊಂದಿದ್ದಾರೆ. ಇದು ಐಪಿಸಿ ಸೆಕ್ಷನ್ 494/495ರ ಅಡಿ ಶಿಕ್ಷಾರ್ಹ ಅಪರಾಧವಾಗಬಹುದು. ಏಕೆಂದರೆ ಅಂತಹ ಸಂಬಂಧವು ಮದುವೆಯ ಸ್ವರೂಪದಲ್ಲಿ 'ಸಹಜೀವನ' ಅಥವಾ 'ವಿವಾಹದಂತಹ ಸಂಬಂಧ' ಎಂಬ ಪದಗುಚ್ಛದೊಳಗೆ ಬರುವುದಿಲ್ಲ’ ಎಂದು ನ್ಯಾಯಾಲಯ ಆದೇಶದಲ್ಲಿ ತಿಳಿಸಿದೆ.

ರಾಜಸ್ಥಾನ: ಕಾಂಗ್ರೆಸ್ ಅಭ್ಯರ್ಥಿ ಸಾವು

ಜೈಪುರ (ಪಿಟಿಐ): ರಾಜಸ್ಥಾನದ ಕರಣ್‌ಪುರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಗುರ್‌ಮೀತ್ ಸಿಂಗ್ ಕೂನರ್ (75) ದೆಹಲಿಯ ಏಮ್ಸ್‌ನಲ್ಲಿ ನಿಧನರಾದರು ಎಂದು ಪಕ್ಷದ ಮುಖಂಡರು ಬುಧವಾರ ತಿಳಿಸಿದ್ದಾರೆ.

ಮೂರು ಬಾರಿ ಶಾಸಕರಾಗಿದ್ದ ಕೂನರ್ ಅವರನ್ನು ನ. 12 ರಂದು ದೆಹಲಿಯ ಏಮ್ಸ್‌ಗೆ ದಾಖಲಿಸಲಾಗಿತ್ತು. ಅಧಿಕ ರಕ್ತದೊತ್ತಡದಿಂದ ಬಳಲುತ್ತಿದ್ದರು. ಮೂತ್ರಪಿಂಡದ ಕಾಯಿಲೆಯಿಂದ ನಿಧನರಾದರು ಎಂದು ವೈದ್ಯರು ಹೇಳಿದ್ದಾರೆ.

1951ರ ಜನ ಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 52 ಪ್ರಕಾರ, ಮಾನ್ಯತೆ ಪಡೆದ ರಾಜ್ಯ ಅಥವಾ ರಾಷ್ಟ್ರೀಯ ಪಕ್ಷದಿಂದ ಕಣಕ್ಕಿಳಿಸಲ್ಪಟ್ಟ ಅಭ್ಯರ್ಥಿಯು ಮತದಾನಕ್ಕೆ ಮುಂಚಿತವಾಗಿ ನಿಧನರಾದರೆ, ಆ ಸ್ಥಾನದ ಮತದಾನವನ್ನು ಮುಂದೂಡಲಾಗುತ್ತದೆ. ಅಭ್ಯರ್ಥಿಯು ನಿಧನರಾದ ಏಳು ದಿನಗಳ ಒಳಗೆ ಇನ್ನೊಬ್ಬ ಅಭ್ಯರ್ಥಿಯನ್ನು ನಾಮನಿರ್ದೇಶನ ಮಾಡಬೇಕು ಎಂದು ಮಾನ್ಯತೆ ಪಡೆದ ರಾಜಕೀಯ ಪಕ್ಷಕ್ಕೆ ಚುನಾವಣಾ ಆಯೋಗ ಸೂಚಿಸುವುದು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಾಜಸ್ಥಾನದ ಚುನಾವಣಾ ಕಚೇರಿಯ ಅಧಿಕಾರಿ ಪ್ರಕಾರ, ಅಭ್ಯರ್ಥಿಯ ನಿಧನದಿಂದಾಗಿ ಕರಣಪುರ ಸ್ಥಾನದ ಚುನಾವಣೆಯನ್ನು ಮುಂದೂಡಲಾಗುವುದು. ಮತದಾನದ ಹೊಸ ದಿನಾಂಕವನ್ನು ಚುನಾವಣಾ ಆಯೋಗವು ತಿಳಿಸುತ್ತದೆ ಎಂದು ಅವರು ಹೇಳಿದ್ದಾರೆ.

1998ರಲ್ಲಿ ಕರಣ್‌ಪುರ ಕ್ಷೇತ್ರದಿಂದ ಅವರು ಆಯ್ಕೆಯಾಗಿದ್ದರು. 2008ರಲ್ಲಿ ಇದೇ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದು, ಗೆಲುವು ಸಾಧಿಸಿದ್ದರು. 2018ರಲ್ಲಿ ಕರಣಪುರ ಕ್ಷೇತ್ರದಿಂದ ಕೂನರ್ ಅವರನ್ನು ಕಣಕ್ಕಿಳಿಸಿತ್ತು, ಅವರು ಗೆಲುವು ಸಾಧಿಸಿದ್ದರು.



ರೋಡ್ ಶೋ.. ರಾಜಸ್ಥಾನದ ಅಜ್ಮೀರ್ ನಲ್ಲಿ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಬುಧವಾರ ರೋಡ್ ಶೋ ನಡೆಸಿದರು –ಪಿಟಿಐ ಚಿತ್ರ

ಚುನಾವಣಾ ಪ್ರಚಾರ ಅಂತ್ಯ

ರಾಯಪುರ (ಪಿಟಿಐ): ನವೆಂಬರ್ 17 ರಂದು ನಡೆಯಲಿರುವ ಛತ್ತೀಸಗಢ ಚುನಾವಣೆಯ ಎರಡನೇ ಹಂತ ಮತ್ತು ಮಧ್ಯಪ್ರದೇಶ ಚುನಾವಣೆಯ ಮತದಾನಕ್ಕಾಗಿ ಪ್ರಚಾರವು ಬುಧವಾರ ಸಂಜೆ ಕೊನೆಗೊಂಡಿತು.

ಛತ್ತೀಸಗಢದ 90 ವಿಧಾನಸಭಾ ಕ್ಷೇತ್ರಗಳ ಪೈಕಿ 22 ಜಿಲ್ಲೆಗಳ 70 ಕ್ಷೇತ್ರಗಳಿಗೆ ಎರಡನೇ ಹಂತದ ಮತದಾನ ಶುಕ್ರವಾರ ನಡೆಯಲಿದೆ.

ಪ್ರಧಾನಿ ನರೇಂದ್ರ ಮೋದಿ 4 ರ‍್ಯಾಲಿಗಳಲ್ಲಿ ಪಾಲ್ಗೊಂಡಿದ್ದರು. ಭ್ರಷ್ಟಾಚಾರ, ವಿಶೇಷವಾಗಿ ಮಹದೇವ್ ಬೆಟ್ಟಿಂಗ್ ಅಪ್ಲಿಕೇಶನ್ ಹಗರಣ, ನೇಮಕಾತಿ ಹಗರಣ ಮತ್ತು ನಕ್ಸಲ್‌ವಾದದ ಬಗ್ಗೆ ಮುಖ್ಯಮಂತ್ರಿ ಬಘೇಲ್ ನೇತೃತ್ವದ ಸರ್ಕಾರವನ್ನು ಗುರಿಯಾಗಿಸಿಕೊಂಡು ವಾಗ್ದಾಳಿ ನಡೆಸಿದರು.

ಕೇಂದ್ರ ಸಚಿವರಾದ ಅಮಿತ್ ಶಾ, ರಾಜನಾಥ್ ಸಿಂಗ್ ಮತ್ತು ಸ್ಮೃತಿ ಇರಾನಿ, ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಮತ್ತು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಬಿಜೆಪಿ ಪರವಾಗಿ ಪ್ರಚಾರ ನಡೆಸಿದರು. ಆಡಳಿತಾರೂಢ ಕಾಂಗ್ರೆಸ್ ತುಷ್ಟೀಕರಣ ರಾಜಕೀಯದಲ್ಲಿ ತೊಡಗಿದೆ ಎಂದು ಆರೋಪಿಸಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಾಯಕರಾದ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಮುಖ್ಯಮಂತ್ರಿ ಬಘೇಲ್ ಪ್ರಚಾರ ನಡೆಸಿದರು.

12,533 ಮಂದಿ ಕಣದಲ್ಲಿ: ಮಧ್ಯಪ್ರದೇಶದಲ್ಲಿ 230 ಸದಸ್ಯ ಸ್ಥಾನಗಳ ವಿಧಾನಸಭೆಗೆ 17ರಂದು ನಡೆಯಲಿರುವ ಚುನಾವಣೆಯಲ್ಲಿ 2,533 ಮಂದಿ ಕಣದಲ್ಲಿದ್ದಾರೆ.

2,88,25,607 ಪುರುಷರು, 2,72,33,945 ಮಹಿಳೆಯರು ಮತ್ತು 1,373 ತೃತೀಯ ಲಿಂಗಿಗಳು ಸೇರಿದಂತೆ ಒಟ್ಟು 5,60,60,925 ಮತದಾರರು ಮತ ಚಲಾಯಿಸಲಿದ್ದಾರೆ. 2049 ಮತಗಟ್ಟೆಗಳಲ್ಲಿ ಬೆಳಿಗ್ಗೆ 7ರಿಂದ ಸಂಜೆ 6ರವರೆಗೆ ಮತದಾನ ನಡೆಯಲಿದೆ.

ನಾಯಿ ಕಡಿತ–ಪ್ರತಿ ಹಲ್ಲಿನ ಗುರುತಿಗೆ ₹10 ಸಾವಿರ ಪರಿಹಾರ: ಹೈಕೋರ್ಟ್

ಚಂಡೀಗಢ (ಪಿಟಿಐ): ಬಿಡಾಡಿ ಪ್ರಾಣಿಗಳ ದಾಳಿಯ ಸಂತ್ರಸ್ತರಿಗೆ ಪರಿಹಾರ ನೀಡುವುದು ಸರ್ಕಾರದ ಜವಾಬ್ದಾರಿ ಎಂದು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಹೇಳಿದೆ.

ನಾಯಿ ಕಡಿತ ಪ್ರಕರಣದಲ್ಲಿ, ಸಂತ್ರಸ್ತರಿಗೆ ಆಗುವ ಗಾಯದಲ್ಲಿ ಪ್ರತಿ ಹಲ್ಲಿನ ಗುರುತಿಗೆ ₹ 10,000 ಆರ್ಥಿಕ ನೆರವು ನೀಡಬೇಕು. ನಾಯಿ ಕಡಿತದ ಗಾಯದಿಂದಾಗಿ ಮಾಂಸವು ಹೊರಗೆ ಬಂದಿದ್ದ ಸಂದರ್ಭದಲ್ಲಿ 0.2 ಸೆಂ.ಮೀ. ಗಾಯಕ್ಕೆ ಕನಿಷ್ಠ ₹ 20 ಸಾವಿರ ಪರಿಹಾರ ನೀಡಬೇಕು ಎಂದು ಸ್ಪಷ್ಟಪಡಿಸಿದೆ.

ನ್ಯಾಯಮೂರ್ತಿ ವಿನೋದ್ ಎಸ್. ಭಾರದ್ವಾಜ್ ಅವರಿದ್ದ ಪೀಠವು, ಬಿಡಾಡಿ ಪ್ರಾಣಿ ದಾಳಿಯ ಸಂತ್ರಸ್ತರು ಅಥವಾ ಅವರ ಕುಟುಂಬ ಸದಸ್ಯರಿಗೆ ಪರಿಹಾರಕ್ಕೆ ಸಂಬಂಧಿಸಿದ 193 ಅರ್ಜಿಗಳನ್ನು ವಿಲೇವಾರಿ ಮಾಡಿದ ಬಳಿಕ ಈ ತೀರ್ಪು ನೀಡಿದೆ.

ಪ್ರಾಣಿಗಳ (ಬೀದಿ, ಕಾಡು, ಸಾಕು ಪ್ರಾಣಿ) ದಾಳಿಯಿಂದ ವರದಿಯಾದ ಯಾವುದೇ ಘಟನೆ ಅಥವಾ ಅಪಘಾತದ ಬಗ್ಗೆ ದೂರು ಸ್ವೀಕೃತಿ ಕುರಿತು ಪೊಲೀಸರು ಅನುಸರಿಸ-ಬೇಕಾದ ಮಾರ್ಗಸೂಚಿಗಳನ್ನು ಸಹ ನ್ಯಾಯಾಲಯ ಹೊರಡಿಸಿದೆ.

‘ಬಿಡಾಡಿ ಅಥವಾ ಕಾಡು ಪ್ರಾಣಿಗಳಿಂದ ಉಂಟಾಗುವ ಅಪಘಾತದ ಬಗ್ಗೆ ಮಾಹಿತಿ ಪಡೆದ ನಂತರ, ಪೊಲೀಸ್ ಠಾಣೆಯ ಠಾಣಾಧಿಕಾರಿ (ಎಸ್‌ಎಚ್‌ಒ) ವಿಳಂಬ ಮಾಡದೆ ದೈನಂದಿನ ಡೈರಿ ವರದಿ ದಾಖಲಿಸಬೇಕು. ಪೊಲೀಸ್ ಅಧಿಕಾರಿಯು ಸಾಕ್ಷಿಗಳ ಹೇಳಿಕೆಗಳನ್ನು ದಾಖಲಿಸಬೇಕು. ವರದಿಯ ಪ್ರತಿಯನ್ನು ಸಂಬಂಧಪಟ್ಟವರಿಗೆ ಕಳುಹಿಸಬೇಕು’ ಎಂದು ನ್ಯಾಯಾಲಯ ತಿಳಿಸಿದೆ.

ಈ ನಿಟ್ಟಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಸೂಚನೆಗಳನ್ನು ನೀಡುವಂತೆ ನ್ಯಾಯಪೀಠ ಪಂಜಾಬ್ ಮತ್ತು ಹರಿಯಾಣದ ಪೊಲೀಸ್ ಮಹಾ-ನಿರ್ದೇಶಕರಿಗೆ ನಿರ್ದೇಶನ ನೀಡಿತು.

ಬಿಡಾಡಿ ದನಗಳು ಅಥವಾ ಪ್ರಾಣಿಗಳಿಂದ ಉಂಟಾದ ಘಟನೆಗೆ ಸಂಬಂಧಿಸಿದಂತೆ ಪಾವತಿ ಸಬೇಕಾದ ಪರಿಹಾರ ಮೊತ್ತವನ್ನು ನಿರ್ಧರಿಸಲು ಆಯಾ ಜಿಲ್ಲೆಗಳ ಜಿಲ್ಲಾಧಿ ಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿ ಸುವಂತೆ ನ್ಯಾಯಾಲಯವು ಪಂಜಾಬ್, ಹರಿಯಾಣ ಮತ್ತು ಚಂಡೀಗಢ ಆಡಳಿತಕ್ಕೆ ನಿರ್ದೇಶನ ನೀಡಿದೆ.

ಕೇಂದ್ರೀಯ ನೇರ ತೆರಿಗೆ ಮಂಡಳಿ ಅಧ್ಯಕ್ಷ ಗುಪ್ತಾ ಹೇಳಿಕೆ

ಚುನಾವಣೆ: ನಗದು ವಶ ಹೆಚ್ಚಳ

ನವದೆಹಲಿ (ಪಿಟಿಐ); ಪಂಚ ರಾಜ್ಯಗಳ ವಿಧಾನಸಭಾ ಚುನಾವಣೆಗೆ ಮುಂಚಿತವಾಗಿ, ಆದಾಯ ತೆರಿಗೆ ಇಲಾಖೆಯು ದಾಖಲೆ ಇಲ್ಲದ ಕೋಟ್ಯಂತರ ಹಣವನ್ನು ವಶಪಡಿಸಿಕೊಂಡಿದೆ ಎಂದು ಕೇಂದ್ರೀಯ ನೇರ ತೆರಿಗೆ ಮಂಡಳಿ (ಸಿಬಿಡಿಟಿ) ಅಧ್ಯಕ್ಷ ನಿತಿನ್ ಗುಪ್ತಾ ಅವರು ಬುಧವಾರ ತಿಳಿಸಿದ್ದಾರೆ.

ಚುನಾವಣೆಗೆ ಮುಂಚಿತವಾಗಿ, ಐಟಿ ಇಲಾಖೆ ಸೇರಿದಂತೆ ಜಾರಿ ಸಂಸ್ಥೆಗಳು ಕಣ್ಗಾವಲು ಹೆಚ್ಚಿಸಿವೆ. ಈ ಉದ್ದೇಶಕ್ಕಾಗಿ ರಚಿಸಲಾದ ಟೋಲ್ ಫ್ರೀ ಸಂಖ್ಯೆಗಳಲ್ಲಿ ದಾಖಲೆಯಿಲ್ಲದ ನಗದು ಮತ್ತು ಆಭರಣಗಳ ಬಗ್ಗೆ ಮಾಹಿತಿ ಪಡೆದಿವೆ ಎಂದು ಗುಪ್ತಾ ಹೇಳಿದರು.

2019ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ವಶಪಡಿಸಿಕೊಂಡಿದ್ದಕ್ಕಿಂತ ಹೆಚ್ಚಿನ ಹಣವನ್ನು ಈಗ ಚುನಾವಣೆ ನಡೆಯುವ ರಾಜ್ಯಗಳಿಂದ ವಶಪಡಿಸಿಕೊಳ್ಳಲಾಗಿದೆ ಎಂದು ಅವರು ತಿಳಿಸಿದರು.


ಮೂಲಗಳ ಪ್ರಕಾರ, ರಾಜಸ್ಥಾನದಲ್ಲಿ ಅಕ್ರಮ ನಗದು, ಮದ್ಯ, ಮಾದಕವಸ್ತು, ಚಿನ್ನ, ಬೆಳ್ಳಿ ಇತ್ಯಾದಿ ವಶಪಡಿಸಿಕೊಳ್ಳು-ವಲ್ಲಿ ಮೂರು ಪಟ್ಟು ಹೆಚ್ಚಳವಾಗಿದೆ. 2021 ರಲ್ಲಿ ₹322 ಕೋಟಿ ಮತ್ತು 2022 ರಲ್ಲಿ ₹347 ಕೋಟಿ, 2023ರ ಅಕ್ಟೋಬರ್ ವರೆಗೆ ₹ 1,021 ಕೋಟಿ ವಶಕ್ಕೆ ಪಡೆಯಲಾಗಿದೆ.

ವಿಡಿಯೊ ತನಿಖೆ ಯಾವಾಗ: ಭೂಪೇಶ್ ಬಘೇಲ್ ಪ್ರಶ್ನೆ

ರಾಯಪುರ (ಪಿಟಿಐ): ಕೇಂದ್ರ ಸಚಿವ ನರೇಂದ್ರ ತೋಮರ್ ಅವರ ಪುತ್ರ ಹಣಕಾಸು ವ್ಯವಹಾರಗಳ ಕುರಿತು ಚರ್ಚಿಸುತ್ತಿರುವ ವಿಡಿಯೊ ಬಗ್ಗೆ ಯಾವಾಗ ತನಿಖೆ ಪ್ರಾರಂಭಿಸಲಾಗುವುದು ಎಂದು ಛತ್ತೀಸಗಢ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಬುಧವಾರ ಕೇಂದ್ರ ಸರ್ಕಾರವನ್ನು ಪ್ರಶ್ನಿಸಿದ್ದಾರೆ.

ತನ್ನನ್ನು ಕೆನಡಾದ ನಿವಾಸಿ ಎಂದು ಗುರುತಿಸಿಕೊಂಡ ವ್ಯಕ್ತಿ ಜತೆ ತೋಮರ್ ಪುತ್ರ ದೇವೇಂದ್ರ ತೋಮರ್ ಮಾತುಕತೆ ನಡೆಸುತ್ತಿರುವ ವಿಡಿಯೊವನ್ನು ಬಘೇಲ್ ಎಕ್ಸ್‌ನಲ್ಲಿ ಹಂಚಿಕೊಂಡಿದ್ದಾರೆ. ಈ ಬಗ್ಗೆ ಯಾವ ಸಂಸ್ಥೆ ತನಿಖೆ ನಡೆಸುತ್ತದೆ? ದಾಳಿಗಳು ಯಾವಾಗ ನಡೆಯಲಿವೆ? ಮಾಧ್ಯಮಗಳಲ್ಲಿ ಗಂಟೆಗಟ್ಟಲೆ ಚರ್ಚೆಗಳು ಯಾವಾಗ ನಡೆಯಲಿವೆ? ಎಂದು ಬಘೇಲ್ ಕೇಳಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,443
ಇಂದಿನ ಅಂತ್ಯ	19,675
▲	232
ದಿನದ ಗರಿಷ್ಠ	19,693

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹595
12 ಮೊಟ್ಟೆಗೆ	₹80
ಮೈಸೂರು	
100 ಮೊಟ್ಟೆಗೆ	₹595

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1580 (1550)
ಸೋಯಾ (ರಿಫೈನ್ಡ್)	₹975 (950)
ಸೂರ್ಯಕಾಂತಿ (ರಿಫೈನ್ಡ್)	₹975 (845)
ಪಾಮೋಲಿನ್	₹860 (838)

ವಿನಿಮಯ ದರ

$ ಡಾಲರ್	83.09
£ ಪೌಂಡ್	103.65
€ ಯುರೊ	90.36
¥ ಯೆನ್ (100ಕ್ಕೆ)	55

ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)

ದಪ್ಪ	₹4500-5500
ಮಧ್ಯಮ	₹3500-4500
ಸಣ್ಣ	₹2500-3500

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹222-475
ದ್ವಿತಳಿ (ಬಿ.ವಿ)	₹250-616

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹151.50
ಆರ್‌ಎಸ್‌ಎಸ್-5	₹147
ಗುಡ್ ಲಾಟ್	₹133

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		ಕಾರ್ಕಳ		ಕುಂದಾಪುರ	
ಕೋಕ	15000-27500	ಹಳತು	30000-48500	ಹಳೆಚಾಲಿ	43000-46000
ಹೊಸತು	27500-36500	ಕುಮಟ		ಹೊಸಚಾಲಿ	36000-39000
ಹಳತು	43500-48500	ಚಿಪ್ಪು	25899-34309	ಪುತ್ತೂರು	
ಚನ್ನಗಿರಿ		ಕೋಕ	16809-32599	ಹೊಸತು	27000-36500
ರಾಶಿ	46309-47505	ಫ್ಯಾಕ್ಟರಿ	10169-25129	ಶಿವಮೊಗ್ಗ	
ಹೊನ್ನಾವರ		ಹಳೆಚಾಲಿ	37509-39799	ರಾಶಿ	41366-46950
ಹಳೆಚಾಲಿ	37000-39000	ಹೊಸಚಾಲಿ	31099-34001		

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form





ಸವಿನೆನಪು
ನಿಮ್ಮ ಜೊತೆಗೆ ಕಳೆದ ದಿನಗಳು ಹಿಂತಿರುಗಿ ಬಾರದಿದ್ದರು, ನೀವು ನಡೆದ ದಾರಿಯಲ್ಲೇ ಸದಾ ಕಾಲವೂ ನಡೆಯುತ್ತಿರುವೆವು.
ಜಿ.ರಾಮಯ್ಯ
ಮರಣ: 16-11-1996
ಮಾಜಿ ಮಹಾನಗರ ಪಾಲಿಕೆ ಸದಸ್ಯರು, ಮತ್ತಿಕೆರೆ
ವೆಂಕಟಮ್ಮ
ಮರಣ: 05-02-2014
ಸದಾ ನಿಮ್ಮ ಸ್ಮರಣೆಯಲ್ಲಿರುವ
ಶ್ರೀಮತಿ ರಾಧಮ್ಮ, ಶ್ರೀ ಶ್ರೀನಿವಾಸಯ್ಯ, (ಮಾಜಿ ಬಿಬಿಎಂಪಿ ಸದಸ್ಯರು) ಶ್ರೀಮತಿ ಶೈಲಾಜಾ, ಶ್ರೀ ಜಯರಾಮ್, ಶ್ರೀಮತಿ ಸರಸ್ವತಿ, ಶ್ರೀ ವೈ.ಜಿ.ಕೇಶವ್ ಶ್ರೀಮತಿ ನಾಗರತ್ನ, ಶ್ರೀ ನಾಗರಾಜ ಮತ್ತು ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

3ನೇ ವರ್ಷದ ಚಿರಸ್ಮರಣೆ



ಶ್ರೀಮತಿ ಅಕ್ಕಯ್ಯಮ್ಮ
ಬಿ.ಸಿ.ಗೋಪಾಲಕೃಷ್ಣರವರ ಧರ್ಮಪತ್ನಿ, ಕಾಟನ್‌ಪೇಟೆ, ಬೆಂಗಳೂರು.
ನಿಧನ: 15-11-2020
ನೀವು ನಮ್ಮನ್ನಗಲಿ 3 ವರ್ಷಗಳು ಕಳೆದರೂ ನಿಮ್ಮ ಪ್ರೀತಿ, ಆದರ್ಶ, ಆಶೀರ್ವಾದವೇ ನಮಗೆ ದಾರಿದೀಪ, ಸದಾ ನಿಮ್ಮ ನೆನಪಿನಲ್ಲಿರುವ..
ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಚರಣ್‌ಗ್ರೂಪ್ಸ್, ದಾಸನಪುರ, ಬೆಂಗಳೂರು.

ವೈಕುಂಠ ಸಮಾರಾಧನೆ



ಶ್ರೀ ಎನ್.ಕೆ. ವಾಸುದೇವರೆಡ್ಡಿ
ಮಾಲೀಕರು- ಶ್ರೀ ಮಹೇಶ್ವರಿ ಗ್ರೂಪ್ ದೊಡ್ಡನೆಕ್ಕುಂದಿ, ಬೆಂಗಳೂರು
ಇವರು ದಿನಾಂಕ 03.11.2023 ರ ಶುಕ್ರವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ವೈಕುಂಠ ಸಮಾರಾಧನೆಯನ್ನು ದಿ: 16.11.2023 ರ ಗುರುವಾರ ನಮ್ಮ ಸ್ವಗೃಹ "ಶ್ರೀ ಮಹೇಶ್ವರಿ ನಿಲಯ" ದೊಡ್ಡನೆಕ್ಕುಂದಿ, ಬೆಂಗಳೂರು ಇಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತರು: ಶ್ರೀಮತಿ ಪಿ.ನಾಗವೇಣಿ ಮತ್ತು ಮಕ್ಕಳು, ಶ್ರೀ ಎನ್.ಕೆ. ವಿಶ್ವನಾಥರೆಡ್ಡಿ ಮತ್ತು ಕುಟುಂಬಸ್ಥರು.


ರಷ್ಯಾದಿಂದ ಆಮದು ಶೇ 64ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಭಾರತವು ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಅಕ್ಟೋಬರ್ ಅವಧಿಯಲ್ಲಿ ರಷ್ಯಾದಿಂದ ₹3.01 ಲಕ್ಷ ಕೋಟಿ ಮೌಲ್ಯದ ಸರಕುಗಳನ್ನು ಆಮದು ಮಾಡಿಕೊಂಡಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಗೆ ಹೋಲಿಸಿದರೆ (₹1.83 ಲಕ್ಷ ಕೋಟಿ) ಆಮದು ಶೇ 64ರಷ್ಟು ಹೆಚ್ಚಾಗಿದೆ ಎಂದು ವಾಣಿಜ್ಯ ಸಚಿವಾಲಯ ಮಾಹಿತಿ ನೀಡಿದೆ.

ಕಚ್ಚಾ ತೈಲ ಮತ್ತು ರಸಗೊಬ್ಬರ ಆಮದು ಹೆಚ್ಚಾಗಿರುವುದೇ ಒಟ್ಟಾರೆ ಆಮದು ಹೆಚ್ಚಳಕ್ಕೆ ಕಾರಣ. ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಅಕ್ಟೋಬರ್ ಅವಧಿಯಲ್ಲಿ ಭಾರತಕ್ಕೆ ಆಮದು ಮಾಡುವ ದೇಶಗಳ ಸಾಲಿನಲ್ಲಿ ರಷ್ಯಾ 2ನೇ ಸ್ಥಾನ ಪಡೆದುಕೊಂಡಿದೆ ಎಂದು ಸಚಿವಾಲಯ ಹೇಳಿದೆ.

ರಷ್ಯಾ–ಉಕ್ರೇನ್ ಸಂಘರ್ಷ ಆರಂಭ ಆಗುವ ಮುನ್ನ ಭಾರತವು ರಷ್ಯಾದಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುತ್ತಿದ್ದ ಪ್ರಮಾಣವು ಶೇ 1ರಷ್ಟು ಇತ್ತು.

ಆಮದು ವಹಿವಾಟು (ಲಕ್ಷ ಕೋಟಿಗಳಲ್ಲಿ)



ಆ ನಂತರ ಭಾರತವು ರಷ್ಯಾದಿಂದ ಆಮದು ಮಾಡಿಕೊಳ್ಳುವ ಕಚ್ಚಾ ತೈಲದ ಪ್ರಮಾಣವು ಶೇ 40ಕ್ಕೆ ಏರಿಕೆ ಕಂಡಿದೆ.

ಚೀನಾ ಮೊದಲ ಸ್ಥಾನದಲ್ಲಿದೆ. ಚೀನಾದಿಂದ ಆಮದು ₹ 5 ಲಕ್ಷ ಕೋಟಿಯಿಂದ ₹4.98 ಲಕ್ಷ ಕೋಟಿಗೆ ಅಲ್ಪ ಇಳಿಕೆ ಕಂಡಿದೆ ಎಂದು ಸಚಿವಾಲಯ ತಿಳಿಸಿದೆ. ಅಮೆರಿಕದಿಂದ ಆಮದು ಶೇ 16ರಷ್ಟು, ಯುನೈಟೆಡ್ ಅರಬ್ ಎಮಿರೈಟ್ಸ್‌ನಿಂದ ಆಮದು ಶೇ 21ರಷ್ಟು ಇಳಿಕೆ ಆಗಿದೆ.

ಹಬ್ಬದ ಬೇಡಿಕೆ: ಅಕ್ಟೋಬರ್‌ನಲ್ಲಿ ಚಿನ್ನ ಆಮದು ಶೇ 95.5ರಷ್ಟು ಹೆಚ್ಚಳ

ಏರಿಕೆ ಕಂಡ ವ್ಯಾಪಾರ ಕೊರತೆ

ನವದೆಹಲಿ (ಪಿಟಿಐ): ಭಾರತದ ವ್ಯಾಪಾರ ಕೊರತೆಯು 2022ರ ಅಕ್ಟೋಬರ್‌ನಲ್ಲಿ ₹2.18 ಲಕ್ಷ ಕೋಟಿಯಷ್ಟು ಇದ್ದಿದ್ದು 2023ರ ಅಕ್ಟೋಬರ್‌ನಲ್ಲಿ ₹ 2.61 ಲಕ್ಷ ಕೋಟಿಗೆ ಏರಿಕೆ ಆಗಿದೆ.

ಆಮದು ಮತ್ತು ರಫ್ತು ವಹಿವಾಟಿನ ನಡುವಣ ವ್ಯತ್ಯಾಸವನ್ನು ವ್ಯಾಪಾರ ಕೊರತೆ ಎಂದು ಕರೆಯಲಾಗುತ್ತದೆ. ಅಕ್ಟೋಬರ್‌ನಲ್ಲಿ ರಫ್ತಿಗಿಂತಲೂ ಆಮದು ಪ್ರಮಾಣ ಹೆಚ್ಚಾಗಿರುವುದೇ ಇದಕ್ಕೆ ಕಾರಣ.

ಅಕ್ಟೋಬರ್‌ನಲ್ಲಿ ಆಮದು ಪ್ರಮಾಣ ಹೆಚ್ಚಾಗಿದೆ. ಇದರಿಂದಾಗಿ ವ್ಯಾಪಾರ ಕೊರತೆಯು ಗರಿಷ್ಠ ಮಟ್ಟಕ್ಕೆ ತಲುಪಿದೆ ಎಂದು ವಾಣಿಜ್ಯ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಎಲ್. ಸತ್ಯ ಶ್ರೀನಿವಾಸ್ ತಿಳಿಸಿದ್ದಾರೆ. ಆದರೆ, ಏಪ್ರಿಲ್–ಅಕ್ಟೋಬರ್ ಅವಧಿಯಲ್ಲಿ ವ್ಯಾಪಾರ ಕೊರತೆಯು ₹13.86 ಲಕ್ಷ ಕೋಟಿಯಿಂದ ₹12.20 ಲಕ್ಷ ಕೋಟಿಗೆ ಇಳಿಕೆ ಕಂಡಿದೆ.

ರಫ್ತು ವಹಿವಾಟು ಅಕ್ಟೋಬರ್‌ನಲ್ಲಿ ಶೇ 6.21ರಷ್ಟು ಹೆಚ್ಚಾಗಿ ₹2.78 ಲಕ್ಷ ಕೋಟಿಗೆ ತಲುಪಿದೆ. ಆಮದು ವಹಿವಾಟು ಶೇ 12.3ರಷ್ಟು ಏರಿಕೆ ಕಂಡು ₹5.39 ಲಕ್ಷ ಕೋಟಿಗೆ ತಲುಪಿದೆ ಎಂದು ಸಚಿವಾಲಯ ಹೇಳಿದೆ.

ಚಿನ್ನದ ಆಮದು ಹೆಚ್ಚಾಗಿರುವುದೇ ಆಮದು ವಹಿವಾಟು ಹೆಚ್ಚಳಕ್ಕೆ ಕಾರಣ.



ವಿದೇಶಿ ವ್ಯಾಪಾರ

₹20.33 ಲಕ್ಷ ಕೋಟಿ
2023ರ ಏಪ್ರಿಲ್–ಅಕ್ಟೋಬರ್‌ನಲ್ಲಿ ರಫ್ತು

₹32.53 ಲಕ್ಷ ಕೋಟಿ
2022ರ ಏಪ್ರಿಲ್–ಅಕ್ಟೋಬರ್‌ನಲ್ಲಿ ಆಮದು

ಸೇವೆಗಳ ರಫ್ತು ಹೆಚ್ಚಳ ನಿರೀಕ್ಷೆ

ಅಕ್ಟೋಬರ್‌ನಲ್ಲಿ ಸೇವೆಗಳ ರಫ್ತು ವಹಿವಾಟು ₹2.38 ಲಕ್ಷ ಕೋಟಿಗೆ ತಲುಪುವ ನಿರೀಕ್ಷೆಯನ್ನು ವಾಣಿಜ್ಯ ಸಚಿವಾಲಯ ಮಾಡಿದೆ. ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಸೇವೆಗಳ ರಫ್ತು ಮೌಲ್ಯವು ₹2.09 ಲಕ್ಷ ಕೋಟಿಯಷ್ಟು ಇತ್ತು.

ಆಮದು ವಹಿವಾಟು ₹1.12 ಲಕ್ಷ ಕೋಟಿಯಿಂದ ₹1.18 ಲಕ್ಷ ಕೋಟಿಗೆ ಏರಿಕೆ ಆಗುವ ಅಂದಾಜು ಮಾಡಲಾಗಿದೆ. ಏಪ್ರಿಲ್–ಅಕ್ಟೋಬರ್‌ನಲ್ಲಿ ₹ 16 ಲಕ್ಷ ಕೋಟಿ ಮೌಲ್ಯದ ಸೇವೆಗಳನ್ನು ರಫ್ತು ಮಾಡಿರುವ ಅಂದಾಜು ಮಾಡಲಾಗಿದೆ. 2022ರ ಏಪ್ರಿಲ್–ಸೆಪ್ಟೆಂಬರ್‌ನಲ್ಲಿ ₹15 ಲಕ್ಷ ಕೋಟಿ ಮೌಲ್ಯದ ವಹಿವಾಟು ನಡೆದಿತ್ತು.

ಅಕ್ಟೋಬರ್‌ನಲ್ಲಿ ಚಿನ್ನದ ಆಮದು ಶೇ 95.5ರಷ್ಟು ಏರಿಕೆ ಕಂಡಿದ್ದು ಮೌಲ್ಯದ ಲೆಕ್ಕದಲ್ಲಿ ₹60,009 ಕೋಟಿಯಷ್ಟು ಆಗಿದೆ. ಕಚ್ಚಾ ತೈಲ ಆಮದು ಕೂಡಾ ಶೇ 8ರಷ್ಟು ಏರಿಕೆ ಕಂಡು ₹1.46 ಲಕ್ಷ ಕೋಟಿಗೆ ತಲುಪಿದೆ.

ಜಾಗತಿಕ ರಾಜಕೀಯ ಬಿಕ್ಕಟ್ಟಿನಿಂದಾಗಿ ರಫ್ತು ವಹಿವಾಟಿಗೆ ಅಡ್ಡಿಯಾಗುತ್ತಿದೆ. ಹಣದುಬ್ಬರ ಮತ್ತು ಜಾಗತಿಕ ಆರ್ಥಿಕತೆಯ ಮಂದಗತಿಯ ಬೆಳವಣಿಗೆಯೂ ದೇಶದ ರಫ್ತು ಮೇಲೆ ನಕಾರಾತ್ಮಕ ಪ್ರಭಾವ ಬೀರುತ್ತಿವೆ ಎಂದು ವಾಣಿಜ್ಯ ಕಾರ್ಯದರ್ಶಿ ಸುನಿಲ್ ಭರ್ತ್‌ವಾಲ್ ಹೇಳಿದ್ದಾರೆ.

ರಫ್ತಿನಲ್ಲಿ ಇರುವ 30 ವಲಯಗಳಲ್ಲಿ 22 ವಲಯಗಳು ಸಕಾರಾತ್ಮಕ ಬೆಳವಣಿಗೆ ಕಂಡಿವೆ. ಕಬ್ಬಿಣದ ಅದಿರು, ಮಾಂಸ, ಡೇರಿ, ಔಷಧ, ಎಲೆಕ್ಟ್ರಾನಿಕ್ ಸರಕುಗಳು, ಪ್ಲಾಸ್ಟಿಕ್ ಮತ್ತು ಎಂಜಿನಿಯರಿಂಗ್ ವಸ್ತುಗಳ ರಫ್ತು ಹೆಚ್ಚಾಗಿದೆ ಎಂದು ಸಚಿವಾಲಯ ಹೇಳಿದೆ.

ಸೆನ್ಸೆಕ್ಸ್, ನಿಫ್ಟಿ ಶೇ 1ಕ್ಕೂ ಹೆಚ್ಚು ಗಳಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳು ಬುಧವಾರ ವಹಿವಾಟಿನಲ್ಲಿ ಶೇ 1ಕ್ಕೂ ಹೆಚ್ಚಿನ ಏರಿಕೆ ಕಂಡವು. ಐ.ಟಿ, ಬ್ಯಾಂಕಿಂಗ್, ತೈಲ ಮತ್ತು ಅನಿಲ ವಲಯದ ಷೇರುಗಳನ್ನು ಹೂಡಿಕೆದಾರರು ಹೆಚ್ಚಾಗಿ ಖರೀದಿ ನಡೆಸಿದ್ದರಿಂದ ಈ ಏರಿಕೆ ಸಾಧ್ಯವಾಯಿತು.

ಅಮೆರಿಕದಲ್ಲಿ ಹಣದುಬ್ಬರವು ಸೆಪ್ಟೆಂಬರ್‌ನಲ್ಲಿ ಶೇ 3.7ರಷ್ಟು ಇದ್ದಿದ್ದು ಅಕ್ಟೋಬರ್‌ನಲ್ಲಿ ಶೇ 3.2ಕ್ಕೆ ಇಳಿಕೆ ಕಂಡಿದೆ. ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿದರ ಏರಿಕೆ ಪ್ರವೃತ್ತಿಗೆ ಅಂತ್ಯ ಹಾಡುವ ಭರವಸೆಯನ್ನು ಇದು ನೀಡಿದೆ. ಹೀಗಾಗಿ ಜಾಗತಿಕ ಷೇರುಪೇಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆಯುವಂತೆ ಮಾಡಿತು. ಇದು ಭಾರತದಲ್ಲಿಯೂ ಸೂಚ್ಯಂಕಗಳ ಏರಿಕೆಗೆ ಪ್ರಮುಖ ಕಾರಣ ಆಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 742 ಅಂಶ ಏರಿಕೆ ಕಂಡು ನಾಲ್ಕು ವಾರಗಳ ಗರಿಷ್ಠ ಮಟ್ಟವಾದ 65,676 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 232 ಅಂಶ ಏರಿಕೆ ಕಂಡು 19,675 ಅಂಶಗಳಿಗೆ ತಲುಪಿತು.



ಅಮೆರಿಕ ಮತ್ತು ಬ್ರಿಟನ್‌ನಲ್ಲಿ ಹಣದುಬ್ಬರ ಪ್ರಮಾಣವು ನಿರೀಕ್ಷೆಯನ್ನೂ ಮೀರಿ ಇಳಿಕೆ ಕಂಡಿದೆ. ಬಡ್ಡಿದರ ಏರಿಕೆ ಪ್ರವೃತ್ತಿ ಅಂತ್ಯವಾಗುವ ಆಶಾವಾದವನ್ನು ಇದು ನೀಡಿದೆ. ಅಮೆರಿಕದ ಬಾಂಡ್ ಮೇಲಿನ ಲಾಭವೂ ಕಡಿಮೆ ಆಗುತ್ತಿದೆ. ಈ ಬೆಳವಣಿಗೆಗಳು ಜಾಗತಿಕ ಷೇರುಪೇಟೆಗಳಲ್ಲಿ ಉತ್ತಮ ಚಟುವಟಿಕೆ ನಡೆಯುವಂತೆ ಮಾಡಿವೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಈ ಬೆಳವಣಿಗೆಗಳು ವಿದೇಶಿ ಸಾಂಸ್ಥಿಕ ಬಂಡವಾಳ (ಎಫ್‌ಐಐ) ಒಳಹರಿವಿಗೆ ಕಾರಣ ಆಗಬಹುದು. ಭಾರತದಲ್ಲಿ ಸದ್ಯ ತ್ರೈಮಾಸಿಕ ಫಲಿತಾಂಶವು ಉತ್ತಮವಾಗಿದೆ. ಹಬ್ಬದ ಬೇಡಿಕೆ ಚೇತರಿಕೆ ಕಂಡಿದೆ. ದೇಶದಲ್ಲಿನ ಈ ಬೆಳವಣಿಗಗಳು ಸಹ ಸೂಚ್ಯಂಕಗಳ ಓಟಕ್ಕೆ ನೆರವಾದವು ಎಂದು ತಿಳಿಸಿದ್ದಾರೆ.

ಬ್ರೆಂಟ್ ಕಚ್ಚಾ ತೈಲ ದರ ಶೇ 0.78ರಷ್ಟು ಇಳಿಕೆ ಕಂಡು ಬ್ಯಾರಲ್‌ಗೆ 81.83 ಡಾಲರ್‌ಗೆ ತಲುಪಿತು. ಏಷ್ಯಾದಲ್ಲಿ ಸೋಲ್, ಟೋಕಿಯೊ, ಶಾಂಘೈ ಮತ್ತು ಹಾಂಗ್‌ಕಾಂಗ್ ಷೇರುಪೇಟೆಗಳು ಸಕಾರಾತ್ಮಕವಾಗಿ ವಹಿವಾಟು ನಡೆಸಿವೆ. ಯುರೋಪ್‌ನ ಮಾರುಕಟ್ಟೆಗಳಲ್ಲಿಯೂ ಸೂಚ್ಯಂಕಗಳು ಏರಿಕೆ ಕಂಡಿವೆ.

ಸಂಪತ್ತು ₹3.29 ಲಕ್ಷ ಕೋಟಿ ವೃದ್ಧಿ

ನವದೆಹಲಿ: ಮುಂಬೈ ಷೇರುಪೇಟೆಯಲ್ಲಿ ನಡೆದ ಸಕಾರಾತ್ಮಕ ವಹಿವಾಟಿನಿಂದ ಹೂಡಿಕೆದಾರರ ಸಂಪತ್ತು ಒಂದೆ ದಿನ ₹3.29 ಲಕ್ಷ ಕೋಟಿಯಷ್ಟು ಏರಿಕೆ ಕಂಡಿತು. ಷೇರುಪೇಟೆಯ ಒಟ್ಟು ಬಂಡವಾಳ ಮೌಲ್ಯವು ₹325.4 ಲಕ್ಷ ಕೋಟಿಗೆ ತಲುಪಿತು.

₹1 ಲಕ್ಷ ಕೋಟಿ ಹೂಡಿಕೆ ಮಾಡಲಿದೆ ಒಎನ್‌ಜಿಸಿ

ನವದೆಹಲಿ (ಪಿಟಿಐ): ತೈಲ ಮತ್ತು ನೈಸರ್ಗಿ ಅನಿಲ ನಿಗಮವು (ಒಎನ್‌ಜಿಸಿ) ಎರಡು ಪೆಟ್ರೋಕೆಮಿಕಲ್ ಘಟಕಗಳನ್ನು ಸ್ಥಾಪಿಸಲು ₹ 1 ಲಕ್ಷ ಕೋಟಿ ಹೂಡಿಕೆ ಮಾಡುವ ಯೋಜನೆ ಹೊಂದಿದೆ ಎಂದು ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕ ದೇಬ್ ಅಧಿಕಾರಿ ತಿಳಿಸಿದ್ದಾರೆ.

ಕಚ್ಚಾ ತೈಲವನ್ನು ನೇರವಾಗಿ ರಾಸಾಯನಿಕ ಉತ್ಪನ್ನಗಳನ್ನಾಗಿ ಪರಿವರ್ತಿಸಲು ಈ ಘಟಕಗಳನ್ನು ಸ್ಥಾಪಿಸುವ ಉದ್ದೇಶ ಹೊಂದಲಾಗಿದೆ. ಇಂಧನ ಪರಿವರ್ತನೆ ಹಾದಿಯ ಭಾಗವಾಗಿ ಈ ಹೆಜ್ಜೆ ಇಡಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

ಸಾಂಪ್ರದಾಯಿಕ ಇಂಧನ ಬಳಕೆ ಕಡಿಮೆ ಮಾಡಲು ಜಾಗತಿಕ ಮಟ್ಟದಲ್ಲಿ ಹಲವು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಇದೇ ವೇಳೆ ಕಚ್ಚಾ ತೈಲವನ್ನು ಬೇರೆ ರೀತಿಯಲ್ಲಿ ಬಳಸಲು ಇರುವ ಮಾರ್ಗಗಳ ಕಡೆಗೂ ಗಮನ ಹರಿಸಲಾಗುತ್ತಿದೆ. ಈ ಹಾದಿಯಲ್ಲಿ ಒಎನ್‌ಜಿಸಿ ಈ ಯೋಜನೆ ರೂಪಿಸಿದೆ.

ಕಚ್ಚಾ ತೈಲದಿಂದ ಪೆಟ್ರೋಕೆಮಿಕಲ್ ಮತ್ತು ರಾಸಾಯನಿಕ ಉತ್ಪನ್ನಗಳನ್ನು ತಯಾರಿಸಲಾಗುತ್ತದೆ. ಸೋಪು, ಫೈಬರ್, ಪಾಲಿಥೇನ್ ತಯಾರಿಕೆಯಲ್ಲಿ ಹೆಚ್ಚಾಗಿ ಬಳಸಲಾಗುತ್ತದೆ.

ರಾಸಾಯನಿಕ ಮತ್ತು ಪೆಟ್ರೋಕೆಮಿಕಲ್ ತಯಾರಿಕೆಯನ್ನು 2030ರ ವೇಳೆಗೆ ಈಗಿರುವ 42 ಲಕ್ಷ ಟನ್‌ಗಳಿಂದ 85–90 ಲಕ್ಷ ಟನ್‌ಗಳವರೆಗೆ ಹೆಚ್ಚಿಸುವ ಯೋಜನೆ ಹೊಂದಲಾಗಿದೆ ಎಂದು ಅವರು ಹೇಳಿದ್ದಾರೆ. 2030ರ ವೇಳೆಗೆ ನವೀಕರಿಸಬಲ್ಲ ಇಂಧನ ತಯಾರಿಕೆಯ ಸಾಮರ್ಥ್ಯವನ್ನು 10 ಗಿಗಾವಾಟ್‌ಗೆ ಹೆಚ್ಚಿಸುವ ಗುರಿಯನ್ನು ಒಎನ್‌ಜಿಸಿ ಇಟ್ಟುಕೊಂಡಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Teachers/ Professors

ಶಿಕ್ಷಕರು ಬೇಕಾಗಿದ್ದಾರೆ
ಸಂತ ಪ್ಯಾಟ್ರಿಕ್ಸ್ ಪ್ರೌಢಶಾಲೆ
ಬ್ರಿಗೇಡ್ ರಸ್ತೆ, ಬೆಂಗಳೂರು–25
1 ಬಿ.ಎ, ಬಿ.ಪಿ.ಇಡಿ (ಪಿಇಟಿ) ದೈಹಿಕ ಶಿಕ್ಷಣ ಒಂದು (1)
ನಿವೃತ್ತ ಹುದ್ದೆಗೆ ನೇಮಕಾತಿ ಇಂಗ್ಲೀಷ್ ಮಾಧ್ಯಮ.
ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂ.ಸಿ8(3) ಖಾ.ಹು.ಭ.ಇ–/ 1052422/ 2023–24 ದಿನಾಂಕ: 03.10.2023 ಆದೇಶದ ಮೂಲಕ ಈ ಹುದ್ದೆಗಳ ಭರ್ತಿಗೆ ಅನುಮತಿಸಿರುತ್ತಾರೆ. ಈ ಹುದ್ದೆಗೆ ಅರ್ಜಿಯನ್ನು ಸಲ್ಲಿಸುವ ಅಭ್ಯರ್ಥಿಗಳು ಅರ್ಜಿಯ ಒಂದು ಪ್ರತಿಯನ್ನು ಉಪನಿರ್ದೇಶಕರು ಶಾಲಾಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಬೆಂಗಳೂರು ದಕ್ಷಿಣ ಇವರಿಗೆ ಹಾಗೂ ಇನ್ನೊಂದು ಪ್ರತಿಯನ್ನು ಸಂತ ಪ್ಯಾಟ್ರಿಕ್ಸ್ ಪ್ರೌಢಶಾಲೆ ಬ್ರಿಗೇಡ್ ರಸ್ತೆ, ಬೆಂಗಳೂರು– 560025. ಇವರಿಗೆ ತಮ್ಮ ವಿದ್ಯಾರ್ಹತೆಯ ಎಲ್ಲಾ ಮೂಲ ದಾಖಲಾತಿಗಳನ್ನು ದೃಢೀಕರಿಸಿದ ಜೆರಾಕ್ಸ್ ಪ್ರತಿಯೊಂದಿಗೆ ಸಲ್ಲಿಸತಕ್ಕದ್ದು.
ಈ ಜಾಹೀರಾತು ಪ್ರಕಟವಾದ ನಂತರದಲ್ಲಿ 21 ದಿನಗಳೊಳಗಾಗಿ ಅರ್ಜಿ ಸಲ್ಲಿಸತಕ್ಕದ್ದು.
ಸಂದರ್ಶಿಸುವ ದಿನಾಂಕವನ್ನು ಮುಂದೆ ತಿಳಿಸಲಾಗುವುದು.
ಮೊ: 9742935684

ಶ್ರೀ ಶಕ್ತಿ ಹೆಲ್ತ್ ಕೇರಿನಲ್ಲಿ ಯುವಕ ಯುವತಿಯರು ಬೇಕಾಗಿದ್ದಾರೆ. ಆಶಾ ವರ್ಕರ್ ಮತ್ತು ಹೆಲ್ಪರ್ ಕೆಲಸಕೆ. ವಿದ್ಯಾರ್ಹತೆ SSLC/ PUC ಮತ್ತು ಪದವಿ ಆದವರು. ವೇತನ ತಿಂಗಳಿಗೆ 20000/- ರಿಂದ 25000/-. ಸುಮಾರು 500 ಜನಕ್ಕೆ ಕೆಲಸ ಖಾಲಿ ಇದೆ ಬೆಂಗಳೂರು. ಸಂಪರ್ಕಿಸಿ: 7349494852.

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ,TVS, ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ,ಡಿಗ್ರಿ, ITIನವರುಗಳು 17,000- 65,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266 /6366430366

ಭವಿಷ್ಯ

Astrology

ಓಂ ಶ್ರೀ.ಮಹಾಗಣಪತಿ ಜೋತಿಷ್ಯಾಲಯ, ಮಹಾರಾಷ್ಟ್ರದ ಪ್ರಖ್ಯಾತ ಜೋತಿಷ್ಯರು, ಕನ್ನಡ,ಹಿಂದಿ, ಮರಾಠಿ ಭಾಷೆಯಲ್ಲಿ ಭವಿಷ್ಯವನ್ನು ಹೇಳುತ್ತಾರೆ, ಸ್ತ್ರೀ/ ಪುರುಷ ವಶೀಕರಣ,ಕೆಲವೇ ದಿನಗಳಲ್ಲಿ ಪರಿಹಾರ, ನಿಮ್ಮ ಹಲವಾರು ಸಮಸ್ಯೆಗಳಿಗೆ ಪರಿಹಾರ,ಕೆಲಸ ಆಗದಿದ್ದಲ್ಲಿ ಹಣ ವಾಪಸ್ಸ. ಗಣೇಶರಾವ್ ಶಾಸ್ತ್ರಿಜಿ: 9226506660/ 9960147770

ಪ್ರವಾಸ

Travel

ಸುಸಜ್ಜಿತ ಪ್ರವಾಸಗಳು: 25.12.2023 18.01.2024 ರಿಂದ 7 ದಿನಗಳ ಶ್ರೀಶೈಲ,ಮಂತ್ರಾಲಯ ಹೈದರಾಬಾದ್,ಅಹೋಬಿಲಂ. 24.12.2023 18.01.2024 ರಿಂದ 7 ದಿನಗಳ ನವಗ್ರಹ ಸಹಿತ ದಕ್ಷಿಣಭಾರತ. 21.01.2024 05.02.2024 ರಿಂದ 10 ದಿನಗಳ ಮಧ್ಯಪ್ರದೇಶ. 17.01.2024 03.02.2024 ರಿಂದ 11/17 ದಿನಗಳ ...

25.11.2023 ರಿಂದ 3 ದಿನಗಳು ...

Package 27.11.2023 ಮಾತು 11.12.2023 ರಿಯಯಿತಿ ದರದಲ್ಲಿ 6 ದಿನಗಳು ಕಾಶಿ ಗಯಾ ಅಲಹಾಬದ್ ಅಯೋಧ್ಯ(ಕೆಲವೇ ಸೀಟುಗಳಿವೆ) ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9739847429/ 9845560219

Pilgrimage Tours

ಪ್ರಜಾವಾಣಿ ಕ್ಲಾಸಿಫೈಡ್ಸ್
ಶಿಕ್ಷಣ
ವಿವರಗಳಿಗಾಗಿ ಸಂಪರ್ಕಿಸಿ:
+91 9886213331
+91 9901641752
+91 9845114560
+91 9900428036
+91 9731810277

KISHORA VIDYA BHAVANA
Chintamani, Chikkaballapur District.
Over 50 years old reputed School requires
RESIDENTIAL PRINCIPAL
Post Graduate Candidates having brilliant academic record and over 15 years teaching experience and 5 years of administrative experience are preferred. They should be proficient in English with sound knowledge of state curriculum.
Benefits and Remuneration: befitting the experience and qualification.
Apply to:
Secretary, Kishora Vidya Bhavana, Chintamani - 563125
OR kishoravidyabhavana@gmail.com
Applications end on 30th November 2023

General

PUBLIC NOTICE

PUBLIC NOTICE
ESTATE NOT FOR RESALE
Notice is hereby given to public that The Alageswar Estates Limited, having its Registered Office at New No. 41, Chockalingapuram 1st Street, Rayavaram, Pudukkottai, Tamil Nadu - 622506 with CIN U01131TN1943PLC000158 and Estate office at Alageswar Post,Koppa, Jayapura, Chikkamagaluru District, Karnataka-577148, is owning the Coffee and Tea Estate known as Alageswar Estates owning around 1,400 acres and the same is NOT FOR RESALE.
It is believed that some unscrupulous persons are misrepresenting, without authority, to the public and negotiating to sell the said estate ignoring the existing ownership, investments and encumbrance and the possession with the investing Directors who are owing the majority interest in the company shares and the estate.
Public are hereby informed that, any person dealing with any Director or other persons/agents are doing so at their own risk and liability and such agreements or arrangements will not be binding on the company or the existing investor purchaser, directors.
For, ALAGESWAR ESTATES LIMITED
GOUTHAM CHAND,
INVESTOR, PURCHASER & DIRECTOR

ಮುಂಬೈ ಧಾರಣೆ

ಶೇಂಗಾ

15-11-2023

ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1590 (1560)
ಒಂದು ವಾರದ ಡೆಲಿವರಿ	1585 (1555)
ಸೋಯಾ ಕಚ್ಚಾ	950 (900)
ಪಾಮ್ ವಾರದ ಡೆಲಿವರಿ	858 (836)
ಸೂರ್ಯಕಾಂತಿ ಎಣ್ಣೆ ಕಚ್ಚಾ	915 (880)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	60,300 (59,600)
ಬೆಳ್ಳಿ ಕೆ.ಜಿ	72,250 (69,400)

ಆವರಣದಲ್ಲಿ ಸೋಮವಾರದ ಧಾರಣೆ

ಚಿನ್ನದ ದರ ₹410, ಬೆಳ್ಳಿ ₹1700 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ಚಿನ್ನ 10 ಗ್ರಾಂಗೆ ₹410 ಏರಿಕೆಯಾಗಿ ₹61,210ಕ್ಕೆ ತಲುಪಿತು.

ಬೆಳ್ಳಿ ಧಾರಣೆ ಕೆ.ಜಿಗೆ ₹1,700 ಹೆಚ್ಚಳವಾಗಿ ₹75 ಸಾವಿರದಂತೆ ಮಾರಾಟವಾಯಿತು. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ಏರಿಕೆ ಆಗಿದ್ದರಿಂದ ದೇಶಿಯ ಮಾರುಕಟ್ಟೆಯಲ್ಲೂ ಬೆಲೆ ಏರಿಕೆಯಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.


ಸಗಟು ಹಣದುಬ್ಬರ ಅಲ್ಪ ಹೆಚ್ಚಳ

ಸತತ 7ನೇ ತಿಂಗಳಿನಲ್ಲಿಯೂ ಇಳಿಕೆಯಾದ ಡಬ್ಲ್ಯುಪಿಐ

ನವದೆಹಲಿ (ಪಿಟಿಐ): ಸಗಟು ಹಣದುಬ್ಬರವು ಸತತ ಏಳನೇ ತಿಂಗಳಿನಲ್ಲಿಯೂ ಶೂನ್ಯಕ್ಕಿಂತ ಕಡಿಮೆ ಮಟ್ಟದಲ್ಲಿಯೇ ದಾಖಲಾಗಿದೆ. ಅಕ್ಟೋಬರ್‌ನಲ್ಲಿ ಶೇ (–) 0.52ರಷ್ಟು ಆಗಿದೆ. ಆದರೆ, ಸೆಪ್ಟೆಂಬರ್‌ಗೆ ಹೋಲಿಸಿದರೆ ಶೇ (–) 0.26 ತುಸು ಹೆಚ್ಚಾಗಿದೆ. ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಸಗಟು ಹಣದುಬ್ಬರವು ಶೇ 8.67ರಷ್ಟು ಇತ್ತು.

ಸಗಟು ದರ ಸೂಚ್ಯಂಕದ (ಡಬ್ಲ್ಯುಪಿಐ) ಆಧಾರದ ಮೇಲೆ ಲೆಕ್ಕ ಹಾಕುವ ಹಣದುಬ್ಬರವು ಏಪ್ರಿಲ್‌ನಿಂದಲೂ ಇಳಿಮುಖವಾಗಿದೆ. ಆಹಾರ ವಸ್ತುಗಳ ಬೆಲೆ ಕಡಿಮೆ ಆಗಿರುವುದೇ ಇದಕ್ಕೆ ಮುಖ್ಯ ಕಾರಣ. ಆದರೆ, ಬೇಳೆಕಾಳು ಮತ್ತು ಭತ್ತದ ದರ ಹೆಚ್ಚಾಗಿರುವುದರಿಂದ ಅಲ್ಪ ಏರಿಕೆ ಕಂಡುಬಂದಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ತಿಳಿಸಿದೆ.

ಕೆಲವು ತರಕಾರಿಗಳ ಬೆಲೆ ಏರಿಕೆ ಮತ್ತು ಆಹಾರ ವಸ್ತುಗಳ ದರ ಹೆಚ್ಚಾಗುತ್ತಿರುವುದರಿಂದ ಅಲ್ಪಾವಧಿಯಲ್ಲಿ ಸಗಟು ಹಣದುಬ್ಬರವು ಏರಿಕೆ ಆಗುವ ಸಾಧ್ಯತೆ ಇದೆ ಎಂದು ತಜ್ಞರು ಹೇಳಿದ್ದಾರೆ.



ಆಹಾರ ಉತ್ಪನ್ನಗಳು, ರಾಸಾಯನಿಕ, ರಾಸಾಯನಿಕ ಉತ್ಪನ್ನಗಳು, ವಿದ್ಯುತ್, ಜವಳಿ, ಲೋಹ, ಪೇಪರ್ ಮತ್ತು ಪೇಪರ್ ಉತ್ಪನ್ನಗಳು ಇತ್ಯಾದಿ ಬೆಲೆ ಇಳಿಕೆ ಆಗಿರುವುದರಿಂದ ಅಕ್ಟೋಬರ್‌ನಲ್ಲಿ ಸಗಟು ಹಣದುಬ್ಬರವು ಶೂನ್ಯಕ್ಕಿಂತ ಕಡಿಮೆ ಮಟ್ಟದಲ್ಲಿ ದಾಖಲಾಗಿದೆ.

ಆಹಾರ ವಸ್ತುಗಳ ದರವು ಸೆಪ್ಟೆಂಬರ್‌ನಲ್ಲಿ ಶೇ 3.35ರಷ್ಟು ಇದ್ದಿದ್ದು ಅಕ್ಟೋಬರ್‌ನಲ್ಲಿ ಶೇ 2.53ಕ್ಕೆ ಇಳಿಕೆ ಕಂಡಿದೆ. ತರಕಾರಿ ಮತ್ತು ಆಲೂಗಡ್ಡೆ ದರವು ಶೇ (–) 29.27 ರಿಂದ ಶೇ (–) 21.04ಕ್ಕೆ ಇಳಿಕೆ ಆಗಿದೆ. ಈರುಳ್ಳಿ ದರವು ಅಕ್ಟೋಬರ್‌ನಲ್ಲಿ ಶೇ 62.60ರಷ್ಟು ಗರಿಷ್ಠ ಮಟ್ಟದಲ್ಲಿ ಇದೆ.

ಬೇಳೆಕಾಳು ಮತ್ತು ಭತ್ತದ ದರವು ಕ್ರಮವಾಗಿ ಶೇ 19.43 ಮತ್ತು ಶೇ 9.39ರಷ್ಟು ಇದೆ. ತಯಾರಿಕಾ ವಸ್ತುಗಳ ದರವು ಶೇ (–)1.34 ರಿಂದ ಶೇ (–)1.13ಕ್ಕೆ ಇಳಿಕೆ ಆಗಿದೆ.

ರೂಪಾಯಿ ಬಹುತೇಕ ಸ್ಥಿರವಾಗಿದೆ. ಇಂಧನ ವೆಚ್ಚವು ನಿರ್ವಹಿಸಬಹುದಾದ ಮಟ್ಟದಲ್ಲಿ ಇರುವುದು ಮತ್ತು ಇಂಧನ ದರ ನಿಯಂತ್ರಿಸಲು ಸರ್ಕಾರ ಅನುಸರಿಸುತ್ತಿರುವ ಕ್ರಮಗಳಿಂದಾಗಿ ಹಣದುಬ್ಬರವು ಸದ್ಯ ನಿಯಂತ್ರಣದಲ್ಲಿದೆ ಎಂದು ಬರ್ಕ್ಲೇಸ್‌ನ ವ್ಯವಸ್ಥಾಪಕ ನಿರ್ದೇಶಕ ರಾಹುಲ್ ಬಜೋರಿಯಾ ಹೇಳಿದ್ದಾರೆ.

ಸರಕುಗಳ ದರವು ಕಡಿಮೆ ಮಟ್ಟದಲ್ಲಿ ಇರಲಿದೆ ಎನ್ನುವ ನಿರೀಕ್ಷೆಯೊಂದಿಗೆ ಪ್ರಸಕ್ತ ಹಣಕಾಸು ವರ್ಷದ ಉಳಿದ ತಿಂಗಳುಗಳಲ್ಲಿಯೂ ಸಗಟು ಹಣದುಬ್ಬರವು ಶೇ 3ಕ್ಕಿಂತಲೂ ಕೆಳ ಮಟ್ಟದಲ್ಲಿ ಇರುವ ಅಂದಾಜು ಮಾಡಲಾಗಿದೆ ಎಂದು ಐಸಿಆರ್‌ಎ ಹೇಳಿದೆ.

ಮುಖ್ಯಾಂಶಗಳು

- ತರಕಾರಿ, ಆಹಾರ ವಸ್ತುಗಳ ದರ ಇಳಿಕೆ
- ಬೇಳೆಕಾಳು, ಭತ್ತದ ದರ ಏರಿಕೆ

ಸಂಕ್ಷಿಪ್ತ ಸುದ್ದಿ

ನ.22ಕ್ಕೆ ಟಾಟಾ ಟೆಕ್ನಾಲಜೀಸ್ ಐಪಿಒ

ನವದೆಹಲಿ (ಪಿಟಿಐ): ಟಾಟಾ ಟೆಕ್ನಾಲಜೀಸ್ ಕಂಪನಿಯು ತನ್ನ ಷೇರುಗಳನ್ನು ಸಾರ್ವಜನಿಕ ಖರೀದಿಗೆ ಮುಕ್ತಗೊಳಿಸುವ (ಆರಂಭಿಕ ಷೇರು ಮಾರಾಟ– ಐಪಿಒ) ಮೂಲಕ ನವೆಂಬರ್ 22ರಂದು ಷೇರುಪೇಟೆ ಪ್ರವೇಶಿಸಲಿದೆ.

ನವೆಂಬರ್ 22 ರಿಂದ 24ರವರೆಗೆ ಷೇರುಗಳನ್ನು ಖರೀದಿಸಲು ಅವಕಾಶ ಇರಲಿದೆ. ಐಪಿಒ ಮೂಲಕ 6 ಕೋಟಿ ಷೇರುಗಳನ್ನು ಮಾರಾಟ ಮಾಡಲಾಗುವುದು ಎಂದು ಟಾಟಾ ಮೋಟರ್ಸ್ ಕಂಪನಿಯು ಷೇರುಪೇಟೆಗೆ ತಿಳಿಸಿದೆ.

₹3 ಸಾವಿರ ಕೋಟಿ ಸಂಗ್ರಹಕ್ಕೆ ಅದಾನಿ ಎನರ್ಜಿ ಸಿದ್ಧತೆ

ನವದೆಹಲಿ (ಪಿಟಿಐ): ಅದಾನಿ ಎನರ್ಜಿ ಸಲ್ಯೂಷನ್ಸ್ ಕಂಪನಿಯು ಬಾಂಡ್‌ಗಳನ್ನು ಮಾರಾಟ ಮಾಡುವ ಮೂಲಕ ₹3 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಲು ಮುಂದಾಗಿದೆ.

ಬಾಂಡ್‌ಗಳನ್ನು ಖಾಸಗಿ ವಿತರಣೆಯ ಮೂಲಕ ಮಾರಾಟ ಮಾಡುವ ಯೋಜನೆ ಹೊಂದಲಾಗಿದೆ. ಬಾಂಡ್ ವಿತರಣೆ ಮಾಡುವ ಸಂಬಂಧ ಸಿದ್ಧತೆ ನಡೆಸಲಾಗುತ್ತಿದೆ ಎಂದು ಕಂಪನಿಯ ಸಿಎಫ್‌ಒ ರೋಹಿತ್ ಸೋನಿ ಹೇಳಿದ್ದಾರೆ.

ಹೆಚ್ಚುವರಿಯಾಗಿ ₹ 8,300 ಕೋಟಿ ಬಂಡವಾಳ ಸಂಗ್ರಹಿಸಲು ಉದ್ದೇಶಿಸಿದ್ದು, ಈ ಸಂಬಂಧ ಕಾರ್ಯಯೋಜನೆ ರೂಪಿಸಲಾಗುತ್ತಿದೆ ಎಂದೂ ಅವರು ತಿಳಿಸಿದ್ದಾರೆ.

ಸಹರಾ ಗ್ರೂಪ್ ಮುಖ್ಯಸ್ಥ ಸುಬ್ರತಾ ರಾಯ್ ನಿಧನ

ಲಖನೌ (ಪಿಟಿಐ): ಸಹರಾ ಗ್ರೂಪ್ ಮುಖ್ಯಸ್ಥ ಸುಬ್ರತಾ ರಾಯ್ (75) ಅವರು ಹೃದಯ ಮತ್ತು ಉಸಿರಾಟಕ್ಕೆ ಸಂಬಂಧಿಸಿದ ತೊಂದರೆಯಿಂದಾಗಿ ಮಂಗಳವಾರ ಮುಂಬೈನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ ಎಂದು ಕಂಪನಿ ತಿಳಿಸಿದೆ.



ಸುಬ್ರತಾ ರಾಯ್

ದೀರ್ಘಕಾಲದಿಂದ ಅನಾರೋಗ್ಯಕ್ಕೆ ಒಳಗಾಗಿದ್ದ ಅವರನ್ನು ಭಾನುವಾರ ಮುಂಬೈನ ಕೋಕಿಲಾಬೆನ್ ಧೀರೂಬಾಯಿ ಅಂಬಾನಿ ಆಸ್ಪತ್ರೆ ಹಾಗೂ ವೈದ್ಯಕೀಯ ಸಂಶೋಧನಾ ಸಂಸ್ಥೆಗೆ ದಾಖಲಿಸಲಾಯಿತು. ಆದರೆ ರಕ್ತದೊತ್ತಡ ಮತ್ತು ಮಧುಮೇಹದಿಂದ ಬಳಲುತ್ತಿದ್ದ ಅವರು ಉಸಿರಾಟ ಮತ್ತು ಹೃದಯ ಸಂಬಂಧಿ ಸಮಸ್ಯೆಗಳಿಂದಾಗಿ ಮಂಗಳವಾರ ರಾತ್ರಿ 10.30ರ ವೇಳೆಗೆ ಆಸ್ಪತ್ರೆಯಲ್ಲಿ ನಿಧನ ಹೊಂದಿದರು ಎಂದು ಹೇಳಿದೆ.

ಹಂಚಿಕೆಯಾಗದ ₹25 ಸಾವಿರ ಕೋಟಿ: ಸುಬ್ರತಾ ರಾಯ್ ನಿಧನದ ನಂತರ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಖಾತೆಯಲ್ಲಿ ಇರುವ ₹25 ಸಾವಿರ ಕೋಟಿಗೂ ಅಧಿಕ ಮೊತ್ತದ ಹಂಚಿಕೆಯಾಗದ ಹಣ ಗಮನ ಸೆಳೆದಿವೆ. ವಿವಿಧ ಪ್ರಕರಣಗಳಿಗೆ ಸಂಬಂಧಿಸಿದಂತೆ ಹೂಡಿಕೆದಾರರರಿಗೆ ವಿತರಣೆ ಮಾಡಬೇಕಿರುವ ಹಣ ಇದಾಗಿದೆ.

ಬಜಾಜ್ ಫೈನಾನ್ಸ್ ಸಾಲ ನೀಡಿಕೆಗೆ ಆರ್‌ಬಿಐ ನಿರ್ಬಂಧ

ಮುಂಬೈ (ಪಿಟಿಐ): ಇ–ಕಾಮ್ ಮತ್ತು ಇನ್‌ಸ್ಟಾ ಇಎಂಐ ಕಾರ್ಡ್ ಮೂಲಕ ಸಾಲ ಮಂಜೂರು ಮತ್ತು ವಿತರಣೆ ಮಾಡುವುದನ್ನು ತಕ್ಷಣದಿಂದ ನಿಲ್ಲಿಸುವಂತೆ ಬಜಾಜ್ ಫೈನಾನ್ಸ್ ಕಂಪನಿಗೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿರ್ದೇಶನ ನೀಡಿದೆ.

ಡಿಜಿಟಲ್ ವ್ಯವಸ್ಥೆಯ ಮೂಲಕ ಸಾಲ ನೀಡಲು ಇರುವ ಮಾರ್ಗಸೂಚಿಗಳನ್ನು ಪಾಲಿಸದೇ ಇರುವ ಕಾರಣಕ್ಕಾಗಿ ಈ ಕ್ರಮ ಕೈಗೊಂಡಿರುವುದಾಗಿ ಬುಧವಾರ ಪ್ರಕಟಣೆಯಲ್ಲಿ ತಿಳಿಸಿದೆ.

ಇ–ಕಾಮ್ ಮತ್ತು ಇನ್‌ಸ್ಟಾ ಇಎಂಐ ಕಾರ್ಡ್ ಮೂಲಕ ಸಾಲ ನೀಡುವಾಗ ಸಾಲದ ಬಗ್ಗೆ ಮುಖ್ಯವಾದ ಮಾಹಿತಿ ಒಳಗೊಂಡಿರುವ ಪುಟವನ್ನು (ಉದಾ: ಸಾಲದಾತರ ವಿವರ, ಸಾಲದ ಅವಧಿ ಇತ್ಯಾದಿ) ಸಾಲ ಪಡೆದವರಿಗೆ ನೀಡದೇ ಇರುವುದು,ಬೇರೆ ರೂಪದ ಡಿಜಿಟಲ್ ಸಾಲ ಮಂಜೂರು ಮಾಡುವಾಗ ಸಾಲಕ್ಕೆ ಸಂಬಂಧಿಸಿದ ಮುಖ್ಯವಾದ ಮಾಹಿತಿ ಕೊರತೆ ಇರುವುದನ್ನು ಗಮನದಲ್ಲಿಟ್ಟುಕೊಂಡು ನಿರ್ದೇಶನ ನೀಡಿರುವುದಾಗಿ ಹೇಳಿದೆ.

ಫೈನಲ್‌ಗೆ ಲಗ್ಗೆಯಿಟ್ಟ ರೋಹಿತ್ ಪಡೆ • ವಿರಾಟ್, ಶ್ರೇಯಸ್ ಶತಕ • ಸೆಮಿಯಲ್ಲಿ ಶಮಿ ಸಪ್ತ ವಿಕೆಟ್ ಸಾಧನೆ • ನ್ಯೂಜಿಲೆಂಡ್ ವೀರೋಚಿತ ಹೋರಾಟ

ಭಾರತದ ವಿಶ್ವಕಪ್ ವಿಜಯಕ್ಕೆ ಇನ್ನೊಂದೇ ಹೆಜ್ಜೆ ಬಾಕಿ



ವಿರಾಟ್ ಕೊಹ್ಲಿ ಬ್ಯಾಟಿಂಗ್ ಸೊಬಗು –ಪಿಟಿಐ ಚಿತ್ರ

ವಿಕೆಟ್ ಪಡೆದ ಸಂಭ್ರಮದಲ್ಲಿ ಮೊಹಮ್ಮದ್ ಶಮಿ –ಪಿಟಿಐ ಚಿತ್ರ

ಪ್ರಜಾವಾಣಿ ವಾರ್ತೆ

ಮುಂಬೈ: ಭಾರತ ಕ್ರಿಕೆಟ್ ತಂಡವು 12 ವರ್ಷಗಳ ನಂತರ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಫೈನಲ್‌ಗೆ ಲಗ್ಗೆ ಇಟ್ಟಿತು.

ರೋಹಿತ್ ಶರ್ಮಾ ನಾಯಕತ್ವದ ತಂಡವು ವಾಂಖೆಡೆ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಸೆಮಿಫೈನಲ್‌ನಲ್ಲಿ 70 ರನ್‌ಗಳಿಂದ ವೀರೋಚಿತ ಹೋರಾಟ ಪ್ರದರ್ಶಿಸಿದ 'ಹಾಲಿ ರನ್ನರ್ಸ್ ಅಪ್' ನ್ಯೂಜಿಲೆಂಡ್ ವಿರುದ್ಧ ಜಯಭೇರಿ ಬಾರಿಸಿತು. ಇದರೊಂದಿಗೆ ಮೂರನೇ ಬಾರಿ (1983 ಹಾಗೂ 2011ರಲ್ಲಿ ಜಯಿಸಿತ್ತು) ವಿಶ್ವಕಪ್ ಗೆಲ್ಲುವ ಭಾರತದ ಕನಸು ನನಸಾಗಲು ಇನ್ನೊಂದು ಹೆಜ್ಜೆ ಬಾಕಿ ಇದೆ. ಕಳೆದ ಹತ್ತು ವರ್ಷಗಳಿಂದ ಎದುರಿಸುತ್ತಿರುವ ಐಸಿಸಿ ಪ್ರಶಸ್ತಿ ಬರವನ್ನು ನೀಗಿಸುವ ಅವಕಾಶವೂ ಈಗ ಕೂಡಿಬಂದಿದೆ.

ಏಕದಿನ ಕ್ರಿಕೆಟ್‌ನಲ್ಲಿ ವಿಶ್ವದಾಖಲೆಯ 50ನೇ ಶತಕ ಗಳಿಸಿದ ವಿರಾಟ್ ಕೊಹ್ಲಿ, ಈ ಟೂರ್ನಿಯಲ್ಲಿ ಸತತ ಎರಡನೇ ಶತಕ ಹೊಡೆದ ಶ್ರೇಯಸ್ ಅಯ್ಯರ್ ಮತ್ತು ತಮ್ಮ ಅಮೋಘ ಬೌಲಿಂಗ್ ಮಾಡಿದ ಮೊಹಮ್ಮದ್ ಶಮಿ (57ಕ್ಕೆ7) ಅವರ ಪ್ರಖರ ಆಟದ ಮುಂದೆ ಕಿವೀಸ್ ಬಳಗ ಸೋಲೊಪ್ಪಿಕೊಂಡಿತು.

ನಾಲ್ಕು ವರ್ಷಗಳ ಹಿಂದೆ ಇಂಗ್ಲೆಂಡ್‌ನಲ್ಲಿ ನಡೆದಿದ್ದ ವಿಶ್ವಕಪ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಕಿವೀಸ್ ಎದುರು ಸೋತಿದ್ದ ಭಾರತ ಇಲ್ಲಿ ಮುಯ್ಯಿ ತೀರಿಸಿಕೊಂಡಿತು.

ಆತಿಥೇಯ ತಂಡವು ನೀಡಿದ್ದ 398 ರನ್‌ಗಳ ಬೃಹತ್ ಗುರಿ ಬೆನ್ನಟ್ಟಿದ ಕಿವೀಸ್ ಬಳಗಕ್ಕೆ 48.5 ಓವರ್‌ಗಳಲ್ಲಿ 327 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಶತಕ ಗಳಿಸಿದ ಡೆರಿಲ್ ಮಿಚೆಲ್ ಮತ್ತು ನಾಯಕ ಕೇನ್ ವಿಲಿಯಮ್ಸನ್ (69; 73ಎ) ಮೂರನೇ ವಿಕೆಟ್ ಜೊತೆಯಾಟದಲ್ಲಿ 181 ರನ್ ಸೇರಿಸಿದರು.

ಮಿಚೆಲ್ ಒಬ್ಬರೇ ತಂಡದ ಗೆಲುವಿಗಾಗಿ ಸ್ನಾಯುಸೆಳೆತದ ನೋವಿನಲ್ಲಿಯೂ ಹೋರಾಟ ಮಾಡಿದರು. ಆದರೆ ಫಲ ಸಿಗಲಿಲ್ಲ.

ಇದೇ 19ರಂದು ಅಹಮದಾಬಾದಿನ ಮೊಟೇರಾದಲ್ಲಿರುವ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿರುವ ಫೈನಲ್‌ನಲ್ಲಿ ಆಡಲಿದೆ. ಗುರುವಾರ ಕೋಲ್ಕತ್ತದಲ್ಲಿ ನಡೆಯುವ ಸೆಮಿಫೈನಲ್ ನಲ್ಲಿ ಜಯಿಸುವ ತಂಡವು ಭಾರತವನ್ನು ಎದುರಿಸಲಿದೆ.

ರೋಹಿತ್–ಗಿಲ್ ಆರಂಭ: ಭಾರತ ತಂಡವು ಈ ಬಾರಿ ಲೀಗ್ ಹಂತದಲ್ಲಿ ಅಗ್ರಸ್ಥಾನ ಗಳಿಸಲು ರೋಹಿತ್ ಶರ್ಮಾ ಮತ್ತು ಶುಭಮನ್ ಗಿಲ್ ಅವರು ನೀಡಿರುವ ಉತ್ತಮ ಆರಂಭವೂ ಕಾರಣವಾಗಿದೆ.

ಇಲ್ಲಿಯೂ ಟಾಸ್ ಗೆದ್ದ ರೋಹಿತ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ಅಲ್ಲದೇ ಗಿಲ್ ಜೊತೆಗೆ ಮೊದಲ ವಿಕೆಟ್‌ಗೆ 71 ರನ್ ಗಳಿಸಿ ಉತ್ತಮ ಆರಂಭ ನೀಡಿದರು. ಈ ಅಡಿಪಾಯದ ಮೇಲೆ ಕೊಹ್ಲಿ (117; 113ಎ) ಮತ್ತು ಶ್ರೇಯಸ್ ಅಯ್ಯರ್ (105; 70ಎ, 4X4, 6X8) ರನ್ ಸೌಧ ಕಟ್ಟಿದರು.

ನಾಲ್ಕು ಸಿಕ್ಸರ್ ಮತ್ತು ನಾಲ್ಕು ಬೌಂಡರಿ ಹೊಡೆದ ರೋಹಿತ್ ತಮ್ಮ ಅರ್ಧಶತಕಕ್ಕೆ ಮೂರು ರನ್‌ಗಳ ಅಗತ್ಯವಿದ್ದಾಗ ಔಟಾದರು. ಇನಿಂಗ್ಸ್ ಕಟ್ಟುವ ಹೊಣೆಯನ್ನು ಗಿಲ್ ತಮ್ಮ ಮೇಲೆಳೆದುಕೊಂಡರು. ಅವರಿಗೆ ವಿರಾಟ್ ಜೊತೆ ನೀಡಿದರು. ಆದರೆ, ಅವರಿಗೆ ಇಲ್ಲಿ ಶತಕ ಗಳಿಸುವ ಅದೃಷ್ಟ ಇರಲಿಲ್ಲ. 23ನೇ ಓವರ್‌ನಲ್ಲಿ ಸ್ನಾಯುಸೆಳೆತ ಅನುಭವಿಸಿದ ಗಿಲ್ ವಿಶ್ರಾಂತಿಗೆ ತೆರಳಿದರು. ಆಗ ಅವರು 79 ರನ್ ಗಳಿಸಿದ್ದರು. ತಂಡದ ಮೊತ್ತವು 1 ವಿಕೆಟ್‌ಗೆ 164 ರನ್‌ಗಳಾಗಿತ್ತು.

ಇನಿಂಗ್ಸ್‌ನ ಕೊನೆಯ ಓವರ್‌ನಲ್ಲಿ ನಾಲ್ಕು ಎಸೆತಗಳು ಬಾಕಿಯಿದ್ದಾಗ ಕ್ರೀಸ್‌ಗೆ ಮರಳಿ ಒಂದು ರನ್ ಗಳಿಸಿದರು. ಅದಕ್ಕೂ ಮುನ್ನ ಕ್ರೀಸ್‌ನಲ್ಲಿ ಮುಂಬೈಕರ್ ಶ್ರೇಯಸ್ ಅಯ್ಯರ್ ಮತ್ತು ಕೊಹ್ಲಿ ವಿಜೃಂಭಿಸಿದ್ದರು. ಆಗ ತಂಡವು 4 ಕ್ಕೆ 382 ರನ್ ಗಳಿಸಿತ್ತು!



ಶ್ರೇಯಸ್ ಅಯ್ಯರ್

ಕೊಹ್ಲಿ–ಶ್ರೇಯಸ್ ಅಬ್ಬರ: ಎರಡನೇ ವಿಕೆಟ್ ಜೊತೆಯಾಟದಲ್ಲಿ ವಿರಾಟ್ ಮತ್ತು ಶ್ರೇಯಸ್ 163 ರನ್ ಸೇರಿಸಿದರು. ಇದರಿಂದಾಗಿ ತಂಡದ ಮೊತ್ತವು 300ರ ಗಡಿ ದಾಟಿತು. ಇದರಲ್ಲಿ ಶ್ರೇಯಸ್ ಸಿಕ್ಸರ್, ಬೌಂಡರಿ ಗಳಿಕೆಗೆ ಹೆಚ್ಚು ಒತ್ತು ಕೊಟ್ಟರು.

ಇನ್ನೊಂದೆಡೆ ಕೊಹ್ಲಿ 106 ಎಸೆತಗಳಲ್ಲಿ ಶತಕ ಸಂಭ್ರಮ ಆಚರಿಸಿದರು. ಗಣ್ಯರ ಗ್ಯಾಲರಿಯಲ್ಲಿದ್ದ ಪತ್ನಿ, ಬಾಲಿವುಡ್ ತಾರೆ ಅನುಷ್ಕಾ ಶರ್ಮಾ ಅವರು 'ಫ್ಲೈಯಿಂಗ್ ಕಿಸ್' ತೇಲಿಬಿಟ್ಟರು. ದಿಗ್ಗಜ ಸಚಿನ್ ತೆಂಡೂಲ್ಕರ್ ಸೇರಿದಂತೆ ಹಲವು ಹಿರಿಯ ಆಟಗಾರರು ಎದ್ದು ನಿಂತು ಚಪ್ಪಾಳೆ ತಟ್ಟಿ ಅಭಿನಂದಿಸಿದರು.

ಇದರ ನಂತರ ಅವರು ತಮ್ಮ ಆಟಕ್ಕೆ ವೇಗ ನೀಡಿದರು. ಶ್ರೇಯಸ್ ತಮ್ಮ ತವರಿನ ಅಂಗಳದಲ್ಲಿ ಶತಕ ಪೂರೈಸಲು 67 ಎಸೆತ ತೆಗೆದುಕೊಂಡರು.

ಕನ್ನಡಿಗ ರಾಹುಲ್ ಮಿಂಚು: ಈ ಟೂರ್ನಿಯಲ್ಲಿ ವಿಕೆಟ್ ಕೀಪಿಂಗ್ ಹೊಣೆಯನ್ನು ಸಮರ್ಥವಾಗಿ ನಿಭಾಯಿಸುತ್ತಿರುವ ಕೆ.ಎಲ್. ರಾಹುಲ್ ಸೆಮಿಫೈನಲ್‌ನಲ್ಲಿಯೂ ಮಿಂಚಿದರು. ಅಲ್ಲದೇ ಬ್ಯಾಟಿಂಗ್‌ನಲ್ಲಿಯೂ ಗಮನ ಸೆಳೆದರು.

ನ್ಯೂಜಿಲೆಂಡ್ ಎದುರಿನ ಪಂದ್ಯದಲ್ಲಿ ಅವರು ನಾಲ್ಕು ಕ್ಯಾಚ್‌ಗಳನ್ನು ಪಡೆದರು. ಭಾರತವು ದೊಡ್ಡ ಮೊತ್ತ ಗಳಿಸಲು ರಾಹುಲ್ ಕಾಣಿಕೆಯೂ ಇತ್ತು. ಅವರು 20 ಎಸೆತಗಳಲ್ಲಿ 39 ರನ್ ಗಳಿಸಿದರು.

ಸ್ಕೋರ್ ಕಾರ್ಡ್

ಭಾರತ: 4ಕ್ಕೆ397 (50 ಓವರುಗಳಲ್ಲಿ)

ರೋಹಿತ್ ಸಿ ವಿಲಿಯಮ್ಸನ್ ಬಿ ಸೌಥಿ 47 (29ಎ, 4x4, 6x4)
ಗಿಲ್ ಔಟಾಗದೇ 80 (66ಎ, 4x8, 6x3)
ಕೊಹ್ಲಿ ಸಿ ಕಾನ್ವೆ ಬಿ ಸೌಥಿ 117 (113ಎ, 4x9, 6x2)
ಶ್ರೇಯಸ್ ಸಿ ಮಿಚೆಲ್ ಬಿ ಬೌಲ್ಟ್ 105 (70ಎ, 4x4, 6x8)
ರಾಹುಲ್ ಔಟಾಗದೇ 39 (20ಎ, 4x5, 6x2)
ಸೂರ್ಯ ಸಿ ಫಿಲಿಪ್ಸ್ ಬಿ ಸೌಥಿ 1 (2ಎ)

ಇತರೆ: 8 (ಬೈ 1, ಲೆಗ್‌ಬೈ 1, ವೈಡ್ 6)

ವಿಕೆಟ್ ಪತನ: 1–71 (ರೋಹಿತ್ ಶರ್ಮಾ; 8.2), 1–164 (22.4), 2–327 (ವಿರಾಟ್ ಕೊಹ್ಲಿ; 43.6), 3–381 (ಶ್ರೇಯಸ್ ಅಯ್ಯರ್; 48.5), 4–382 (ಸೂರ್ಯಕುಮಾರ್ ಯಾದವ್, 49.1)

ಬೌಲಿಂಗ್: ಟ್ರೆಂಟ್ ಬೌಲ್ಟ್ 10–0–86–1, ಟಿಮ್ ಸೌಥಿ 10–0–100–3, ಮಿಚೆಲ್ ಸ್ಯಾಂಟನರ್ 10–1–51–0, ಲಾಕಿ ಫರ್ಗ್ಯುಸನ್ 8–0–65–0, ರಚಿನ್ ರವೀಂದ್ರ 7–0–60–0, ಗ್ಲೆನ್ ಫಿಲಿಪ್ಸ್ 5–0–33–0.

ನ್ಯೂಜಿಲೆಂಡ್: 327 (48.5 ಓವರುಗಳಲ್ಲಿ)

ಕಾನ್ವೆ ಸಿ ರಾಹುಲ್ ಬಿ ಶಮಿ 13 (15ಎ, 4x3)
ರಚಿನ್ ಸಿ ರಾಹುಲ್ ಬಿ ಶಮಿ 13 (22ಎ, 4x3)
ವಿಲಿಯಮ್ಸನ್ ಸಿ ಯಾದವ್ ಬಿ ಶಮಿ 69 (73ಎ, 4x8, 6x1)
ಮಿಚೆಲ್ ಸಿ ಜಡೇಜ ಬಿ ಶಮಿ 134 (119ಎ, 4x9, 6x7)
ಲೇಥಮ್ ಎಲ್‌ಬಿಡಬ್ಲ್ಯು ಬಿ ಶಮಿ 0 (2ಎ)
ಗ್ಲೆನ್ ಫಿಲಿಪ್ಸ್ ಸಿ ಜಡೇಜ ಬಿ ಬೂಮ್ರಾ 41 (33, 4x4, 6x2)
ಚಾಪ್‌ಮನ್ ಸಿ ಜಡೇಜ ಬಿ ಕುಲದೀಪ್ 2 (5ಎ)
ಸ್ಯಾಂಟನರ್ ಸಿ ರೋಹಿತ್ ಬಿ ಸಿರಾಜ್ 8 (10ಎ)
ಸೌಥಿ ಸಿ ರಾಹುಲ್ ಬಿ ಶಮಿ 9 (10ಎ, 4x1)
ಬೌಲ್ಟ್ ಔಟಾಗದೇ 2 (2ಎ)
ಫರ್ಗ್ಯುಸನ್ ಸಿ ರಾಹುಲ್ ಬಿ ಶಮಿ 6 (3ಎ, 6x1)

ಇತರೆ: 30 (ಬೈ 5, ಲೈಗ್‌ಬೈ 5, ನೋಬಾಲ್ 1, ವೈಡ್ 19)

ವಿಕೆಟ್ ಪತನ: 1–30 (ಡೆವಾನ್ ಕಾನ್ವೆ; 5.1), 2–39 (ರಚಿನ್ ರವೀಂದ್ರ; 7.4), 3–220 (ವಿಲಿಯಮ್ಸನ್; 32.2), 4–220 (ಟಾಮ್ ಲೇಥಮ್; 32.4), 5-295 (ಗ್ಲೆನ್ ಫಿಲಿಪ್ಸ್; 42.5), 6–298 (ಮಾರ್ಕ್ ಚಾಪ್‌ಮನ್, 43.5), 7–306 (ಡೇರಿಲ್ ಮಿಚೆಲ್, 45.2), 8–319 (ಮಿಚೆಲ್ ಸ್ಯಾಂಟನರ್, 47.5), 9–321 (ಟಿಮ್ ಸೌಥಿ; 48.2), 10–327 (ಫರ್ಗ್ಯುಸನ್ 48.5)

ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 10–1–64–1, ಮೊಹಮ್ಮದ್ ಸಿರಾಜ್ 9–0–78–1, ಮೊಹಮ್ಮದ್ ಶಮಿ 9.5–0–57–7, ರವೀಂದ್ರ ಜಡೇಜ 10–0–63–0, ಕುಲದೀಪ್ ಯಾದವ್ 10-0-55-1

ಪಂದ್ಯಶ್ರೇಷ್ಠ: ಮೊಹಮ್ಮದ್ ಶಮಿ

ಫಲಿತಾಂಶ: ಭಾರತಕ್ಕೆ 70 ರನ್ ಜಯ, ಫೈನಲ್ ಪ್ರವೇಶ

ಅಗ್ರ ಐವರು

ಬ್ಯಾಟಿಂಗ್

ವಿರಾಟ್ ಕೊಹ್ಲಿ (ಭಾರತ)	711
ಕ್ವಿಂಟನ್ ಡಿ ಕಾಕ್ (ದಕ್ಷಿಣ ಆಫ್ರಿಕಾ)	591
ರಚಿನ್ ರವೀಂದ್ರ (ನ್ಯೂಜಿಲೆಂಡ್)	578
ಡೇರಿಲ್ ಮಿಚೆಲ್ (ನ್ಯೂಜಿಲೆಂಡ್)	552
ರೋಹಿತ್ ಶರ್ಮಾ (ಭಾರತ)	550

ಬೌಲಿಂಗ್

ಮೊಹಮ್ಮದ್ ಶಮಿ (ಭಾರತ)	23
ಆ್ಯಡಮ್ ಜಂಪಾ (ಆಸ್ಟ್ರೇಲಿಯಾ)	22
ದಿಲ್ಶಾನ್ ಮಧುಶಂಕ (ಶ್ರೀಲಂಕಾ)	21
ಜಸ್‌ಪ್ರೀತ್ ಬೂಮ್ರಾ (ಭಾರತ)	18
ಜೆರಾಲ್ಡ್ ಕೋಜಿ (ದಕ್ಷಿಣ ಆಫ್ರಿಕಾ)	18

ಮೊಹಮ್ಮದ್ ಶಮಿ ವೇಗದ 50 ವಿಕೆಟ್ ದಾಖಲೆ

ಭಾರತದ ಮೊಹಮ್ಮದ್ ಶಮಿ ವಿಶ್ವಕಪ್ ಕ್ರಿಕೆಟ್‌ನಲ್ಲಿ ಅತಿ ವೇಗವಾಗಿ 50 ವಿಕೆಟ್‌ಗಳನ್ನು ಗಳಿಸಿದ ಸಾಧನೆಯನ್ನು ಮಾಡಿದರು.

ಅಲ್ಲದೇ ಪ್ರಸಕ್ತ ವಿಶ್ವಕಪ್ ಟೂರ್ನಿಯಲ್ಲಿ ಮೂರನೇ ಬಾರಿ ಐದು ವಿಕೆಟ್‌ಗಳ ಗೊಂಚಲು ಗಳಿಸಿದರು.

ಶಮಿ ಅವರು ವಿಶ್ವಕಪ್ ಕ್ರಿಕೆಟ್ ಟೂರ್ನಿಗಳಲ್ಲಿ 50 ವಿಕೆಟ್ ಗಳಿಸಲು 795 ಎಸೆತಗಳನ್ನು ಪ್ರಯೋಗಿಸಿದ್ದಾರೆ. ಇದರೊಂದಿಗೆ ಅವರು ಆಸ್ಟ್ರೇಲಿಯಾದ ಮಿಚೆಲ್ ಸ್ಟಾರ್ಕ್ (941) ದಾಖಲೆ ಮೀರಿದರು.

ಶ್ರೀಲಂಕಾದ ಲಸಿತ್ ಮಾಲಿಂಗ (1187 ಎಸೆತ), ಆಸ್ಟ್ರೇಲಿಯಾದ ಗ್ಲೆನ್ ಮೆಕ್‌ಗ್ರಾ (1540) ಮತ್ತು ನ್ಯೂಜಿಲೆಂಡ್ ಟ್ರೆಂಟ್ ಬೌಲ್ಟ್ (1543) ನಂತರದ ಸ್ಥಾನಗಳಲ್ಲಿದ್ದಾರೆ.

ಸೆಮಿಫೈನಲ್‌ನಲ್ಲಿ ನ್ಯೂಜಿಲೆಂಡ್ ತಂಡದ ಅಗ್ರ ಐವರು ಬ್ಯಾಟರ್‌ಗಳ ವಿಕೆಟ್‌ಗಳನ್ನು ಗಳಿಸಿದರು. ಆರಂಭಿಕ ಜೋಡಿ ದೊಡ್ಡ ಮೊತ್ತ ಗಳಿಸಲು ಅವರು ಬಿಡಲಿಲ್ಲ. ಮಧ್ಯದಲ್ಲಿ ಮಿಚೆಲ್ ಮತ್ತು ವಿಲಿಯಮ್ಸನ್ ಅವರು ದೊಡ್ಡ ಜೊತೆಯಾಟವಾಡಿದರು. ಅವರಿಬ್ಬರ ವಿಕೆಟ್‌ಗಳನ್ನೂ ಗಳಿಸಿದರು. ಟಾಮ್ ಲಥಾಮ್ ಅವರು ಖಾತೆ ತೆರೆಯಲು ಕೂಡ ಶಮಿ ಬಿಡಲಿಲ್ಲ.

ವಿಶ್ವಕಪ್ ಆವೃತ್ತಿಯೊಂದರಲ್ಲಿ ಹೆಚ್ಚು ರನ್ ಗಳಿಸಿದವರು

ರನ್	ಇನ್ನಿಂಗ್ಸ್	ಆಟಗಾರ	ದೇಶ	ವರ್ಷ
711	10	ವಿರಾಟ್ ಕೊಹ್ಲಿ	ಭಾರತ	2023
673	11	ಸಚಿನ್ ತೆಂಡೂಲ್ಕರ್	ಭಾರತ	2003
659	10	ಮ್ಯಾಥ್ಯೂ ಹೇಡನ್	ಆಸ್ಟ್ರೇಲಿಯಾ	2007
648	9	ರೋಹಿತ್ ಶರ್ಮಾ	ಭಾರತ	2019
647	10	ಡೇವಿಡ್ ವಾರ್ನರ್	ಆಸ್ಟ್ರೇಲಿಯಾ	2019

ಏಕದಿನ ಕ್ರಿಕೆಟ್‌ನಲ್ಲಿ ಗರಿಷ್ಠ ರನ್ ಗಳಿಸಿದವರು

ಆಟಗಾರ	ದೇಶ	ಪಂದ್ಯ	ಇನ್ನಿಂಗ್ಸ್	ರನ್	ಸರಾಸರಿ
ಸಚಿನ್ ತೆಂಡೂಲ್ಕರ್	ಭಾರತ	463	452	18,426	44.83
ಕುಮಾರ ಸಂಗಕ್ಕಾರ	ಶ್ರೀಲಂಕಾ	404	380	14,234	41.98
ವಿರಾಟ್ ಕೊಹ್ಲಿ	ಭಾರತ	291	279	13,794	58.69
ರಿಕಿ ಪಾಂಟಿಂಗ್	ಆಸ್ಟ್ರೇಲಿಯಾ	375	365	13,704	42.03
ಸನತ್ ಜಯಸೂರ್ಯ	ಶ್ರೀಲಂಕಾ	445	433	13,430	32.36

ಕೊಹ್ಲಿ 'ವಿರಾಟ್ ಆಟಗಾರ'ನಾಗಿ ಬೆಳೆದಿದ್ದು ಸಂತಸ: ಸಚಿನ್

ಮುಂಬೈ (ಪಿಟಿಐ): ಏಕದಿನ ಪಂದ್ಯಗಳಲ್ಲಿ 50ನೇ ಶತಕ ಬಾರಿಸಿ ತಮ್ಮ ದಾಖಲೆ ಮುರಿದ ವಿರಾಟ್ ಕೊಹ್ಲಿ ಅವರಿಗೆ ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಅವರು ಬುಧವಾರ ಹೃದಯಸ್ಪರ್ಶಿ ಅಭಿನಂದನಾ ಸಂದೇಶ ಕಳುಹಿಸಿದ್ದಾರೆ.

ತಮ್ಮಿಬ್ಬರ ನಡುವಣ ಮೊದಲ ಭೇಟಿಯನ್ನು ಅವರು ಸ್ವಾರಸ್ಯಕರವಾಗಿ ನೆನಪಿಸಿದ್ದಾರೆ. ಆಗಿನ್ನೂ ಹೊಸಬರಾಗಿದ್ದ ವಿರಾಟ್‌ಗೆ ಅಂದಿನ ತಂಡದ ಕೆಲವು ಆಟಗಾರರು ಸಚಿನ್ ಕಾಲು ಹಿಡಿಯುವಂತೆ 'ಸೂಚಿಸಿದ್ದರು'.

'ತಂಡದ ಡ್ರೆಸಿಂಗ್ ರೂಮ್‌ನಲ್ಲಿ ವಿರಾಟ್‌ಗೆ ಕೆಲ ಸಹ ಆಟಗಾರರು ಪ್ರಾಂಕ್ ಮಾಡಿದ್ದರು. ನನಗೆ ನಗು ತಡೆಯಲಾಗಲಿಲ್ಲ' ಎಂದು ಸಚಿನ್ ಹೇಳಿದ್ದಾರೆ. 'ಆದರೆ ಬದ್ಧತೆ ಮತ್ತು ಕೌಶಲದಿಂದ ನೀನು ಅತಿ ಬೇಗನೇ ನನ್ನ ಹೃದಯ ಗೆದ್ದೆ. ಯುವ ಆಟಗಾರ ಈಗ 'ವಿರಾಟ್ ಆಟಗಾರ'ನಾಗಿ ಬೆಳೆದಿರುವುದು ನನಗೆ ಅತೀವ ಸಂತಸ ಮೂಡಿಸಿದೆ' ಎಂದು ತೆಂಡೂಲ್ಕರ್ 'ಎಕ್ಸ್'ನಲ್ಲಿ ಬರೆದಿದ್ದಾರೆ.

'ಭಾರತದ ಆಟಗಾರನೇ ನನ್ನ ದಾಖಲೆ ಮುರಿದಿದ್ದಕ್ಕಿಂತ ದೊಡ್ಡ ಸಂತಸ ಬೇರೆ ಇರಲಾರದು. ಅದೂ– ದೊಡ್ಡ ವೇದಿಕೆ (ವಿಶ್ವಕಪ್ ಸೆಮಿಫೈನಲ್) ಯಲ್ಲಿ ಮತ್ತು ನನ್ನ ತವರು ಮೈದಾನದಲ್ಲಿ ಆಗಿರುವುದು ನನ್ನ ಸಂತಸವನ್ನು ಇಮ್ಮಡಿಸಿದೆ' ಎಂದು ಬರೆದಿದ್ದಾರೆ.

ತೆಂಡೂಲ್ಕರ್ ಅವರನ್ನು ಹಿಂದೆ ಹಾಕಿರುವುದು ತಮ್ಮ ಪಾಲಿಗೆ ಕನಸು ನನಸಾದಂತೆ ಎಂದು ಕೊಹ್ಲಿ ಸಹ ಪ್ರತಿಕ್ರಿಯಿಸಿದ್ದಾರೆ. 'ಮತ್ತೊಬ್ಬ ಮಹಾನ್ ಆಟಗಾರ ನನ್ನನ್ನು ಅಭಿನಂದಿಸಿದ್ದಾರೆ. ಕನಸಿನ ಅನುಭವ ಆಗುತ್ತಿದೆ' ಎಂದು ಅವರು ಹೇಳಿದ್ದಾರೆ.

'ಅಣ್ಣ ಸಚಿನ್ ಸ್ಟ್ಯಾಂಡ್‌ನಲ್ಲಿದ್ದರು. ಆ ಭಾವನೆಯನ್ನು ಮಾತುಗಳಲ್ಲಿ ಹಿಡಿದಿಡಲಾಗದು. ನನ್ನ ಜೀವನಸಂಗಾತಿ, ನನ್ನ ಹೀರೊ ಎಲ್ಲರೂ ಅಲ್ಲಿದ್ದರು. ಅಭಿಮಾನಿಗಳೂ ವಾಂಖೆಡೆಯಲ್ಲಿದ್ದರು' ಎಂದು ಇನಿಂಗ್ಸ್ ಬ್ರೇಕ್ ನಡುವೆ ಅವರು ಹೇಳಿದರು.



ವಿರಾಟ್ ಕೊಹ್ಲಿ 50ನೇ ಶತಕ ದಾಖಲಿಸುತ್ತಿದ್ದಂತೆ ಎದ್ದುನಿಂತು ಅಭಿನಂದಿಸಿದ ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ –ಪಿಟಿಐ ಚಿತ್ರ

ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ವಿರಾಟ್ ಕೊಹ್ಲಿ ಸಾಧನೆ

	ಏಕದಿನ ಕ್ರಿಕೆಟ್	ಟೆಸ್ಟ್	ಟಿ20
ಪಂದ್ಯ	291	111	115
ರನ್	13,794	8,676	4,008
ಗರಿಷ್ಠ	183	254*	122*
ಸರಾಸರಿ	58.70	49.29	52.73
ಶತಕ	50	29	1
ಅರ್ಧಶತಕ	71	29	37
ಪದಾರ್ಪಣೆ ಪಂದ್ಯ	18 ಆಗಸ್ಟ್ 2008 (ಶ್ರೀಲಂಕಾ ವಿರುದ್ಧ)	20 ಜೂನ್ 2011 (ವೆಸ್ಟ್‌ಇಂಡೀಸ್ ವಿರುದ್ಧ)	12 ಜೂನ್ 2010 (ಜಿಂಬಾಬ್ವೆ ವಿರುದ್ಧ)

ಸಂಕ್ಷಿಪ್ತ ಸುದ್ದಿ

ದೀಪಾವಳಿಗೆ ನ್ಯೂಯಾರ್ಕ್‌ನ ಶಾಲೆಗಳಿಗೆ ರಜೆ

ನ್ಯೂಯಾರ್ಕ್ (ಪಿಟಿಐ): ಅಮೆರಿಕದ ಅತಿ ದೊಡ್ಡ ನಗರವಾಗಿರುವ ನ್ಯೂಯಾರ್ಕ್‌ನಲ್ಲಿ ದೀಪಾವಳಿ ಹಬ್ಬದಂದು ಶಾಲೆಗಳಿಗೆ ಸಾರ್ವತ್ರಿಕ ರಜೆ ನೀಡುವ ಐತಿಹಾಸಿಕ ಮಸೂದೆಗೆ ಗವರ್ನರ್ ಕ್ಯಾಥಿ ಹೋಚುಲ್ ಅವರು ಅಂಕಿತ ಹಾಕಿದ್ದಾರೆ.

'ನ್ಯೂಯಾರ್ಕ್ ನಗರದಲ್ಲಿ ವಿವಿಧ ಧರ್ಮದ ಜನರು ನೆಲೆಸಿದ್ದಾರೆ. ವೈವಿಧ್ಯಮಯ ಸಂಸ್ಕೃತಿಯನ್ನು ಗುರುತಿಸುವ ಸಲುವಾಗಿ ನಾವು ಇಂತಹ ಮಹತ್ವದ ನಿರ್ಧಾರ ಕೈಗೊಂಡಿದ್ದೇವೆ' ಎಂದು ಹೋಚುಲ್ ಅವರು ಹೇಳಿದ್ದಾರೆ.

'ನ್ಯೂಯಾರ್ಕ್ ನಗರದ ಎಲ್ಲಾ ಶಾಲೆಗಳಿಗೂ ಪ್ರತಿ ವರ್ಷ ದೀಪಾವಳಿ ದಿನದಂದು ರಜೆ ನೀಡಬೇಕೆಂದು ಮಸೂದೆಯಲ್ಲಿ ಕೋರಲಾಗಿತ್ತು' ಎಂದು ಅವರು ತಿಳಿಸಿದ್ದಾರೆ.

ದೀಪಾವಳಿ ದಿನದಂದು ಶಾಲೆಗಳಿಗೆ ರಜೆ ನೀಡಬೇಕೆಂದು ಕೋರಿ ಮಸೂದೆ ಮಂಡಿಸಿದ್ದ ಭಾರತ ಮೂಲದ ನ್ಯೂಯಾರ್ಕ್ ಸಂಸದೆ ಜೆನ್ನಿಫರ್ ರಾಜಕುಮಾರ್ ಅವರು, ಇದಕ್ಕಾಗಿ ಸಾಕಷ್ಟು ಶ್ರಮಪಟ್ಟಿದ್ದರು.

ಬಾಂಗ್ಲಾ: ಜನವರಿ 7ರಂದು ಚುನಾವಣೆ

ಢಾಕಾ (ಪಿಟಿಐ): ಬಾಂಗ್ಲಾದೇಶದಲ್ಲಿ ಸಾರ್ವತ್ರಿಕ ಚುನಾವಣೆಯು ಜನವರಿ 7ರಂದು ನಡೆಯಲಿದೆ ಎಂದು ಮುಖ್ಯಚುನಾವಣಾ ಆಯುಕ್ತರು ಬುಧವಾರ ಘೋಷಿಸಿದ್ದಾರೆ.

ಹಂಗಾಮಿ ಸರ್ಕಾರವು ಪಾರದರ್ಶಕವಾಗಿ ಚುನಾವಣೆ ನಡೆಸಬೇಕೆಂದು ಆಗ್ರಹಿಸಿ ವಿರೋಧ ಪಕ್ಷ ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿ (ಬಿಎನ್‌ಪಿ) ಮತ್ತು ಅದರ ಮಿತ್ರಪಕ್ಷಗಳು ಪ್ರತಿಭಟನೆ ತೀವ್ರ-ಗೊಳಿಸಿರುವುದರ ನಡುವೆಯೇ ಈ ಘೋಷಣೆ ಹೊರಬಿದ್ದಿದೆ.

ಉಕ್ರೇನ್‌ನಿಂದ ಮರಳಿದ್ದ ವೈದ್ಯಕೀಯ ವಿದ್ಯಾರ್ಥಿಗಳಿಗೆ ಪರ್ಯಾಯ ವ್ಯವಸ್ಥೆ

ಉಜ್ಬೇಕಿಸ್ತಾನದಲ್ಲಿ ಶಿಕ್ಷಣ ಮುಂದುವರಿಕೆ

ಸಮರ್ಕಂಡ್ (ಉಜ್ಬೇಕಿಸ್ತಾನ) (ಪಿಟಿಐ): ಯುದ್ಧಪೀಡಿತ ಉಕ್ರೇನಿನಿಂದ 2021ರಲ್ಲಿ ವಾಪಸಾಗಿದ್ದ ಭಾರತದ ಸಾವಿರಕ್ಕೂ ಹೆಚ್ಚು ಮಂದಿ ಎಂಬಿಬಿಎಸ್ ವಿದ್ಯಾರ್ಥಿಗಳು, ಉಜ್ಬೇಕಿಸ್ತಾನದ ಪ್ರಮುಖ ವೈದ್ಯಕೀಯ ವಿಶ್ವವಿದ್ಯಾಲಯಗಳಲ್ಲಿ ತಮ್ಮ ಅಧ್ಯಯನ ಮುಂದುವರಿಸಿದ್ದಾರೆ. ತಮ್ಮ ಶೈಕ್ಷಣಿಕ ಬದುಕು ಮುಗಿದೇ ಹೋಯಿತೆಂದು ಆತಂಕಪಟ್ಟಿದ್ದ ವಿದ್ಯಾರ್ಥಿಗಳು ಈಗ ಸಮರ್ಕಂಡ್ ರಾಜ್ಯ ವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ ಹೊಸ ಶೈಕ್ಷಣಿಕ ಬದುಕು ಆರಂಭಿಸಿದ್ದಾರೆ.

ಉಕ್ರೇನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಈ ವಿದ್ಯಾರ್ಥಿಗಳಿಗೆ ತಮ್ಮಲ್ಲಿ ಶಿಕ್ಷಣ ಮುಂದುವರಿಸಲು ಅವಕಾಶ ಕಲ್ಪಿಸುವಂತೆ ಸಮರ್ಕಂಡ್ ವಿ.ವಿ.ಯನ್ನು ಸಂಪರ್ಕಿಸಿತ್ತು. ಉಕ್ರೇನ್‌ನಿಂದ ಸ್ಥಳಾಂತರವಾದ ಭಾರತೀಯ ವಿದ್ಯಾರ್ಥಿಗಳಲ್ಲಿ 1,000ಕ್ಕೂ ಹೆಚ್ಚು ಮಂದಿಗೆ ಇಲ್ಲಿ ಶಿಕ್ಷಣ ಪುನರಾರಂಭಿಸಲು ವಿ.ವಿ ಅವಕಾಶ ನೀಡಿದೆ.

ಉಕ್ರೇನ್‌ನಿಂದ ಸ್ಥಳಾಂತರಗೊಂಡಿದ್ದ ಕರ್ನಾಟಕದ ವಿದ್ಯಾರ್ಥಿನಿ ದೀಪಿಕಾ ಕೈದಾಳ ಜಯರಾಮಯ್ಯ ಅವರು ಸದ್ಯ ಸಮರ್ಕಂಡ್‌ನಲ್ಲಿ ವೈದ್ಯಕೀಯ ಶಿಕ್ಷಣ ಮುಂದುವರಿಸಿದ್ದಾರೆ. 'ಯುದ್ಧದ ಬಗ್ಗೆ ಇತಿಹಾಸದ ಪುಸ್ತಕಗಳಲ್ಲಿ ಮಾತ್ರ ಓದಿದ್ದೆ. ಯುದ್ಧದ ಪರಿಸ್ಥಿತಿಯನ್ನು ಖುದ್ದಾಗಿ ನೋಡುತ್ತೇನೆ ಎಂದು ಯಾವತ್ತೂ ಊಹಿಸಿರಲಿಲ್ಲ. ಉಕ್ರೇನ್‌ಗೆ ವಾಪಸಾಗುವ ಆಯ್ಕೆ ಇಲ್ಲವೆನ್ನುವುದು ಸ್ಪಷ್ಟವಾದ ನಂತರ, ಉಜ್ಬೇಕಿಸ್ತಾನದಲ್ಲಿ ನನ್ನ ವೈದ್ಯಕೀಯ ಶಿಕ್ಷಣದ ಪಯಣ ಪುನರಾರಂಭಿಸಲು ನಿರ್ಧರಿಸಿದೆ' ಎಂದು ಹೇಳಿದ್ದಾರೆ.

ರಷ್ಯಾ ದಾಳಿ ಮಾಡಿದಾಗ ಉಕ್ರೇನ್‌ನಲ್ಲಿ ಕಟ್ಟಡವೊಂದರ ನೆಲ-ಮಾಳಿಗೆಯಲ್ಲಿ ಒಂದು ರಾತ್ರಿ ಕಳೆದು, 'ಆಪರೇಷನ್ ಗಂಗಾ' ಕಾರ್ಯಾಚರಣೆ-ಯಲ್ಲಿ ಭಾರತಕ್ಕೆ ವಾಪಸಾಗಿದ್ದ ಬಿಹಾರದ ಬೇಗುಸರಾಯ್‌ನ ಅಮಿತ್ ಕೂಡ ಸಮರ್ಕಂಡ್‌ನಲ್ಲಿ ವೈದ್ಯಕೀಯ ಶಿಕ್ಷಣ ಮುಂದುವರಿಸಿದ್ದಾರೆ.

'ದೇಶಕ್ಕೆ ಮರಳಿದ ನಂತರ ವೈದ್ಯಕೀಯ ಶಿಕ್ಷಣ ಮುಂದುವರಿಸುವ ಬಗ್ಗೆ ಅನಿಶ್ಚಿತತೆ ಮುಂದುವರಿದಿತ್ತು. ಉಕ್ರೇನ್‌ನಲ್ಲಿ ಈಗಾಗಲೇ ಮೂರು ವರ್ಷ ಶಿಕ್ಷಣ ಮುಗಿಸಿದ್ದೆ. ಮತ್ತೆ ಅದನ್ನೇ ಇಲ್ಲಿ ಹೊಸದಾಗಿ ಅಥವಾ ಬೇರೆ ಯಾವುದಾದರೂ ಕೋರ್ಸ್ ಓದುವುದು ನನಗೆ ಇಷ್ಟವಿರ-ಲಿಲ್ಲ. ಕೊನೆಗೆ ಉಜ್ಬೇಕಿಸ್ತಾನಕ್ಕೆ ಬರಲು ನಿರ್ಧರಿಸಿದೆ. ಇಲ್ಲಿ ಜೀವನ ವೆಚ್ಚವು ಉಕ್ರೇನ್‌ಗಿಂತ ಹೆಚ್ಚಿದೆ. ಆದರೂ ಇಲ್ಲಿ ಶಿಕ್ಷಣ ಮುಂದುವರಿಸಿರುವುದು ಖುಷಿ ನೀಡಿದೆ' ಎಂದು ಅಮಿತ್ 'ಪಿಟಿಐ' ಸುದ್ದಿಸಂಸ್ಥೆಗೆ ತಿಳಿಸಿದರು.

'ಯುದ್ಧದಿಂದ ಸಂತ್ರಸ್ತರಾದ ವಿದ್ಯಾರ್ಥಿಗಳಿಗೆ ನಮ್ಮ ವಿಶ್ವ ವಿದ್ಯಾಲಯಕ್ಕೆ ವರ್ಗಾವಣೆ ಸೌಲಭ್ಯ ನೀಡುವಂತೆ ಭಾರತೀಯ ರಾಯಭಾರ ಕಚೇರಿ ಸಂಪರ್ಕಿಸಿತ್ತು. ಈ ಬಗ್ಗೆ ಪರಿಶೀಲಿಸಿದ ನಂತರ ವರ್ಗಾವಣೆ ಮತ್ತು ನೋಂದಣಿಗೆ ಅನುಕೂಲವಾಗುವಂತೆ ವಿಶೇಷ ವ್ಯವಸ್ಥೆ ಮತ್ತು ತಂಡ ರಚಿಸಿದೆವು. ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಒಂದು ಸೆಮಿಸ್ಟರ್ ಹಿಂದಕ್ಕೆ ಪ್ರವೇಶ ಕಲ್ಪಿಸಿ, ಬೋಧನೆಗೆ ಸಮಸ್ಯೆಯೂ ಆಗದಂತೆ 30 ಮಂದಿ ಭಾರತೀಯ ಅಧ್ಯಾಪಕರನ್ನು ನೇಮಿಸಿದ್ದೇವೆ' ಎಂದು ಸಮರ್ಕಂಡ್ ರಾಜ್ಯ ವೈದ್ಯಕೀಯ ವಿಶ್ವವಿದ್ಯಾಲಯದ ಕುಲಪತಿ ಡಾ.ಜಾಫರ್ ಅಮಿನೋವ್ ಹೇಳಿದ್ದಾರೆ.

ಉಕ್ರೇನ್‌ನಲ್ಲಿದ್ದಾರೆ 2 ಸಾವಿರ ಭಾರತೀಯ ವಿದ್ಯಾರ್ಥಿಗಳು

2021ರ ಫೆಬ್ರುವರಿಯಲ್ಲಿ ರಷ್ಯಾದ ಆಕ್ರಮಣ ಪ್ರಾರಂಭವಾದಾಗ ಉಕ್ರೇನ್‌ನಲ್ಲಿ ಸುಮಾರು 19,000 ಭಾರತೀಯ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದರು. ಉಕ್ರೇನ್‌ನಲ್ಲಿ ಸಿಲುಕಿದ್ದ ಭಾರತೀಯರನ್ನು ಮರಳಿ ಕರೆತರಲು ಭಾರತ ಸರ್ಕಾರವು 'ಆಪರೇಷನ್ ಗಂಗಾ' ಕಾರ್ಯಾಚರಣೆ ಕೈಗೊಂಡು, 18,282 ಭಾರತೀಯರನ್ನು ಸ್ಥಳಾಂತರಿಸಿತ್ತು.

ಅಂದಾಜಿನ ಪ್ರಕಾರ, ಸುಮಾರು 2,000 ಭಾರತೀಯ ವಿದ್ಯಾರ್ಥಿಗಳು ಉಕ್ರೇನ್‌ಗೆ ಹಿಂತಿರುಗಿದ್ದು, ಅವರಲ್ಲಿ ಹೆಚ್ಚಿನವರು ಉಕ್ರೇನ್‌ನ ಪಶ್ಚಿಮ ಭಾಗದಲ್ಲಿ ನೆಲೆಸಿದ್ದಾರೆ. ಉಕ್ರೇನ್‌ನಿಂದ ಸ್ಥಳಾಂತಗೊಂಡಿದ್ದ ಭಾರತೀಯ ವೈದ್ಯಕೀಯ ವಿದ್ಯಾರ್ಥಿಗಳಲ್ಲಿ ಹಲವು ಮಂದಿ ಯಾವುದೇ ಆಯ್ಕೆಗಳಿಲ್ಲದೇ ಅರ್ಧಕ್ಕೆ ಶಿಕ್ಷಣ ಕೈಬಿಟ್ಟಿದ್ದಾರೆ. ಉಳಿದವರು ತಮ್ಮ ಅಧ್ಯಯನ ಮುಂದುವರಿಸಲು ಬೇರೆ ದೇಶಗಳ ವಿಶ್ವವಿದ್ಯಾಲಯಗಳಿಗೆ ವರ್ಗಾವಣೆ ಪಡೆದಿದ್ದು, ಅವರಲ್ಲಿ ಅನೇಕ ವಿದ್ಯಾರ್ಥಿಗಳು ರಷ್ಯಾ, ಸರ್ಬಿಯಾ ಮತ್ತು ಇತರ ಯುರೋಪಿಯನ್ ದೇಶಗಳಿಗೆ ಹೋಗಿದ್ದಾರೆ.

ಮಿಜೋರಾಂ ಪ್ರವೇಶಿಸಿದ ಮ್ಯಾನ್ಮಾರ್‌ನ ಜನ

ಪ್ರಜಾವಾಣಿ ವಾರ್ತೆ

ಗುವಾಹಟಿ: ನೆರೆಯ ಮ್ಯಾನ್ಮಾರ್‌ನಲ್ಲಿ ಮಿಲಿಟರಿ ಹಾಗೂ ಬಂಡಾಯ ಗುಂಪುಗಳ ನಡುವೆ ಗುಂಡಿನ ಕಾಳಗ ಜೋರಾಗಿದ್ದು, ಸೋಮವಾರದಿಂದ ಈ ವರೆಗೆ 6 ಸಾವಿರಕ್ಕೂ ಅಧಿಕ ನಾಗರಿಕರು ಹಾಗೂ 45 ಮಿಲಿಟರಿ ಸಿಬ್ಬಂದಿ ಮಿಜೋರಾಂಗೆ ಓಡಿಬಂದಿದ್ದಾರೆ.

ಗಡಿಗೆ ಹೊಂದಿಕೊಂಡಿರುವ ಚಂಫೈ ಜಿಲ್ಲೆಯ ಜೋಕವ್‌ಥಾರ್ ಮತ್ತು ಬುಲ್ಫೆಕ್‌ಜ್ವಾಲ್ ಗ್ರಾಮಗಳಲ್ಲಿ ಮ್ಯಾನ್ಮರ್ ಪ್ರಜೆಗಳಿಗೆ ಆಶ್ರಯ ಒದಗಿಸಲಾಗಿದೆ.

'ಮ್ಯಾನ್ಮಾರ್ ಮಿಲಿಟರಿಯ 45 ಸಿಬ್ಬಂದಿ ಪೊಲೀಸರ ಮುಂದೆ ಶರಣಾದ ನಂತರ ಅವರನ್ನು ಅಸ್ಸಾಂ ರೈಫಲ್ಸ್‌ಗೆ ಒಪ್ಪಿಸಲಾಗಿದೆ' ಎಂದು ಮಿಜೋರಾಂ ಐಜಿಪಿ (ಕೇಂದ್ರಸ್ಥಾನ) ಲಾಲ್‌ಬಿಯಾಖ್ತಾಂಗ್ ಖಿಯಾಂಗ್ತೆ ಅವರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಮ್ಯಾನ್ಮಾರ್‌ನಲ್ಲಿ ನಡೆದ ಗುಂಡಿನ ಕಾಳಗದಲ್ಲಿ ಕನಿಷ್ಠ 20 ನಾಗರಿಕರು ಗಾಯಗೊಂಡಿದ್ದಾರೆ. ಈ ಪೈಕಿ, ಚಂಫೈನಲ್ಲಿ ಗಾಯಾಳುಯೊಬ್ಬರು ಮೃತಪಟ್ಟಿದ್ದಾರೆ. ಎಂಟು ಜನರನ್ನು ಐಜ್ವಾಲ್‌ನ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಹೇಳಿದ್ದಾರೆ.

'ಗುಂಡಿನ ಕಾಳಗ ಮುಂದುವರಿದಿರುವ ಕಾರಣ, ರಾಜ್ಯದೊಳಗೆ ಬರುವವರ ಸಂಖ್ಯೆ ಮತ್ತಷ್ಟು ಹೆಚ್ಚುವ ಸಾಧ್ಯತೆ ಇದೆ' ಎಂದೂ ಅವರು ಹೇಳಿದ್ದಾರೆ.

ಭಾರತ–ಮ್ಯಾನ್ಮಾರ್ ನಡುವಿನ 1,643 ಕಿ.ಮೀ. ಉದ್ದದ ಗಡಿ ಕಾಯುವ ಕಾರ್ಯವನ್ನು ಅಸ್ಸಾಂ ರೈಫಲ್ಸ್ ನಿರ್ವಹಿಸುತ್ತಿದೆ.

ಪ್ರಜಾಪ್ರಭುತ್ವ ಪರ ಹೋರಾಡುವ ಚಿನ್‌ಲ್ಯಾಂಡ್ ರಕ್ಷಣಾ ಪಡೆ (ಸಿಡಿಎಫ್) ಮತ್ತು ಮ್ಯಾನ್ಮಾರ್ ಮಿಲಿಟರಿ ನಡುವೆ ಕಾಳಗ ನಡೆಯುತ್ತಿದೆ.



ಈಡನ್ ಗಾರ್ಡನ್‌ನಲ್ಲಿ ಸೆಮಿಫೈನಲ್ ಇಂದು: ಬವುಮಾ ಬಳಗಕ್ಕೆ ಆಸ್ಟ್ರೇಲಿಯಾ ಸವಾಲು: ಮ್ಯಾಕ್ಸ್‌ವೆಲ್ ಮೇಲೆ ಕಣ್ಣು

ಚೋಕರ್ಸ್‌ ಪಟ್ಟ ಕಳಚುವುದೇ ದಕ್ಷಿಣ ಆಫ್ರಿಕಾ?



ದಕ್ಷಿಣ ಆಫ್ರಿಕಾದ ತೆಂಬಾ ಬವುಮಾ ಮತ್ತು ಕ್ವಿಂಟನ್ ಡಿ ಕಾಕ್ –ಪಿಟಿಐ ಚಿತ್ರ

ಪ್ರಜಾವಾಣಿ ವಾರ್ತೆ

ಕೋಲ್ಕತ್ತ: ದಕ್ಷಿಣ ಆಫ್ರಿಕಾ ತಂಡಕ್ಕೆ 'ಚೋಕರ್ಸ್' ಪಟ್ಟ ಕಳಚಿ ಬೀಸಾಕುವ ಮತ್ತೊಂದು ಅವಕಾಶ ಈಗ ಬಂದಿದೆ.

ಈ ಹಿಂದಿನ ಕೆಲವು ಕ್ರಿಕೆಟ್ ವಿಶ್ವಕಪ್ ಟೂರ್ನಿಗಳಲ್ಲಿ ಲೀಗ್ ಹಂತದಲ್ಲಿ ಅಮೋಘ ಆಟವಾಡಿ, ನಾಲ್ಕು ಬಾರಿ ಸೆಮಿಫೈನಲ್‌ಗಳಲ್ಲಿ ಸೋತು ಹೊರಬಿದ್ದ ಕಾರಣಕ್ಕೆ ಈ ತಂಡಕ್ಕೆ ಚೋಕರ್ಸ್ ಪಟ್ಟ ಬಂದಿದೆ. ಆ ನಾಲ್ಕು ಸೆಮಿಫೈನಲ್‌ಗಳಲ್ಲಿ ಎರಡು ಬಾರಿ ಆಸ್ಟ್ರೇಲಿಯಾ ಎದುರೇ ನಿರಾಶೆ ಅನುಭವಿಸಿತ್ತು. 1999ರಲ್ಲಿ ಲಾನ್ಸ್ ಕ್ಲೂಸ್ನರ್ ಅವರ ಅಮೋಘ ಆಟದ ಫಲವಾಗಿ ತಂಡವು ಗೆಲುವು ಸಾಧಿಸುವ ಅವಕಾಶ ವಿತ್ತು. ಆದರೆ ಆ ಪಂದ್ಯ ಟೈ ಆಗಿ, ಆಸ್ಟ್ರೇಲಿಯಾ ಉತ್ತಮ ರನ್‌ರೇಟ್ ಆಧಾರದಲ್ಲಿ ಫೈನಲ್ ಪ್ರವೇಶಿಸಿತು.



ಆದರೆ ಈಡನ್ ಗಾರ್ಡನ್ಸ್‌ನಲ್ಲಿ ಗುರುವಾರ ನಡೆಯಲಿರುವ ಈ ಬಾರಿಯ ಟೂರ್ನಿಯ ಎರಡನೇ ಸೆಮಿಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ತಂಡವು ತನ್ನ ಹಳೆಯ 'ವೈರಿ' ಆಸ್ಟ್ರೇಲಿಯಾ ಎದುರು ಆಡಲಿದೆ.

ಐದು ಬಾರಿಯ ಚಾಂಪಿಯನ್ ಆಸ್ಟ್ರೇಲಿಯಾ ತಂಡವನ್ನು ತೆಂಬಾ ಬವುಮಾ ಬಳಗವು ಮಣಿಸಬೇಕಾದರೆ ತನ್ನ ಸಂಪೂರ್ಣ ಸಾಮರ್ಥ್ಯವನ್ನು ಪಣಕ್ಕೊಡ್ಡಬೇಕಿದೆ.

ಲೀಗ್ ಹಂತದಲ್ಲಿ ರನ್‌ಗಳ ಹೊಳೆಯನ್ನೇ ಹರಿಸಿರುವ ದಕ್ಷಿಣ ಆಫ್ರಿಕಾ ಬಳಗವು ನೆದರ್ಲೆಂಡ್ಸ್ ಎದುರೂ ಸೋತಿತ್ತು. ಭಾರತದ ಎದುರು ಕೂಡ ಮಣಿದಿತ್ತು. ಆದರೆ ಒಂಬತ್ತರ ಪೈಕಿ ಏಳು ಪಂದ್ಯಗಳಲ್ಲಿ ಜಯಿಸಿತ್ತು. ಅದರಲ್ಲಿ ಆಸ್ಟ್ರೇಲಿಯಾದ ವಿರುದ್ಧದ ಪಂದ್ಯದಲ್ಲಿ ಗೆದ್ದಿತ್ತು.

ಆರಂಭಿಕ ಬ್ಯಾಟರ್ ಕ್ವಿಂಟನ್ ಡಿ ಕಾಕ್ ನಾಲ್ಕು ಶತಕ ಹೊಡೆದಿದ್ದಾರೆ. ಒಟ್ಟು 591 ರನ್ ಗಳಿಸಿದ್ದಾರೆ. ರೆಸಿ ವ್ಯಾನ್ ಡರ್ ಡಸೆ (442 ರನ್) ಮತ್ತು ಏಡನ್ ಮರ್ಕರಮ್ (396 ರನ್) ಅವರೂ ಉತ್ತಮ ಫಾರ್ಮ್‌ನಲ್ಲಿದ್ದಾರೆ.

ಲೀಗ್‌ನಲ್ಲಿ ದಕ್ಷಿಣ ಆಫ್ರಿಕಾ ಎದುರು ಸೋತ ನಂತರ ಪುಟಿದೆದ್ದಿರುವ ಆಸ್ಟ್ರೇಲಿಯಾ ತಂಡವು ಸತತ ಏಳು ಪಂದ್ಯಗಳನ್ನು ಗೆದ್ದಿದೆ. ಅದರಲ್ಲಿ ಸ್ಪಿನ್ನರ್ ಆ್ಯಡಂ ಜಂಪಾ ಅವರ ಪಾತ್ರ ಪ್ರಮುಖವಾಗಿದೆ. ಇದೀಗ ಜಂಪಾ ಮುಂದೆ ದಕ್ಷಿಣ ಆಫ್ರಿಕಾದ ಬ್ಯಾಟರ್‌ಗಳನ್ನು ಕಟ್ಟಿಹಾಕುವ ಸವಾಲು ಇದೆ. ಪ್ಯಾಟ್ ಕಮಿನ್ಸ್, ಜೋಷ್ ಹ್ಯಾಜಲ್‌ವುಡ್ ಹಾಗೂ ಸೀನ್ ಅಬಾಟ್ ಅವರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಬೌಲಿಂಗ್ ಮಾಡಿದರೆ ತಂಡದ ಜಯದ ಹಾದಿ ಸುಲಭವಾಗಲಿದೆ.

ಆಸ್ಟ್ರೇಲಿಯಾದ ಬ್ಯಾಟರ್‌ಗಳು ಅಮೋಘ ಲಯದಲ್ಲಿದ್ದಾರೆ. ಡೇವಿಡ್ ವಾರ್ನರ್, ಮಿಚೆಲ್ ಮಾರ್ಷ್ ಮತ್ತು ದ್ವಿಶತಕ ಬಾರಿಸಿ ಜಗದ ಗಮನ ಸೆಳೆದಿರುವ ಗ್ಲೆನ್ ಮ್ಯಾಕ್ಸ್‌ವೆಲ್ ಈ ತಂಡದ ಬ್ಯಾಟಿಂಗ್ ವಿಭಾಗದ ಶಕ್ತಿಯಾಗಿದ್ದಾರೆ.

ಸ್ನಾಯುಸೆಳೆತದ ಸಮಸ್ಯೆಯಿಂದ ಚೇತರಿಸಿಕೊಂಡಿರುವ ಮ್ಯಾಕ್ಸ್‌ವೆಲ್ ತಂಡಕ್ಕೆ ಮರಳಿದ್ದಾರೆ. ಸೆಮಿಫೈನಲ್‌ನಲ್ಲಿ ಕಣಕ್ಕಿಳಿಯಲಿದ್ದಾರೆ. ಅಫ್ಗಾನಿಸ್ತಾನದ ಎದುರಿನ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವು 91ಕ್ಕೆ 7 ವಿಕೆಟ್ ಕಳೆದುಕೊಂಡಿದ್ದ ಸಂದರ್ಭದಲ್ಲಿ ಸ್ನಾಯುಸೆಳೆತ ಮತ್ತು ಬೆನ್ನುನೋವಿನಲ್ಲಿಯೂ ಮ್ಯಾಕ್ಸ್‌ವೆಲ್ ದ್ವಿಶತಕ ಗಳಿಸಿ ತಂಡವನ್ನು ಗೆಲುವಿನ ದಡ ಸೇರಿಸಿ ಐತಿಹಾಸಿಕ ದಾಖಲೆ ಬರೆದಿದ್ದರು.

ದಕ್ಷಿಣ ಆಫ್ರಿಕಾ ಬೌಲರ್‌ಗಳಾದ ಲುಂಗಿ ಗಿಡಿ, ಮಾರ್ಕೊ ಯಾನ್ಸನ್, ಸ್ಪಿನ್ನರ್ ಕೇಶವ್ ಮಹಾರಾಜ್ ಮತ್ತು ಕಗಿಸೊ ರಬಾಡ ಅವರ ಮುಂದೆ ಮ್ಯಾಕ್ಸ್‌ವೆಲ್ ಅವರನ್ನು ಕಟ್ಟಿಹಾಕುವ ವಿಶೇಷ ಸವಾಲು ಇದೆ. ಒಟ್ಟಿನಲ್ಲಿ ಉಭಯ ತಂಡಗಳೂ ಸಮಬಲ ಹೊಂದಿವೆ. ಆದ್ದರಿಂದ ರೋಚಕ ಹೋರಾಟದ ನಿರೀಕ್ಷೆ ಗರಿಗೆದರಿದೆ.

ಬಲಾಬಲ (ವಿಶ್ವಕಪ್)

ಪಂದ್ಯ 7 | ಟೈ 1

ದ.ಆಫ್ರಿಕಾ ಜಯ	ಆಸ್ಟ್ರೇಲಿಯಾ ಗೆಲುವು
3	3

ಮುಖಾಮುಖಿ (ಏಕದಿನ)

ಪಂದ್ಯ 109 | ಟೈ 3

ಆಸ್ಟ್ರೇಲಿಯಾ ಗೆಲುವು	ದ.ಆಫ್ರಿಕಾ ಜಯ
50	55

ಫಲಿತಾಂಶವಿಲ್ಲ 1



ಆಸ್ಟ್ರೇಲಿಯಾ ತಂಡದ ಮಾರ್ನಸ್ ಲಾಬುಷೇನ್ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್

ದ.ಆಫ್ರಿಕಾ ಸೆಮಿಫೈನಲ್ ಸೋಲುಗಳು (ವಿಶ್ವಕಪ್)

ವರ್ಷ	ಎದುರಾಳಿ
1992	ಇಂಗ್ಲೆಂಡ್‌ಗೆ 19 ರನ್ ಜಯ
1999	ಟೈ, ಉತ್ತಮ ರನ್‌ರೇಟ್ ಆಧಾರದಲ್ಲಿ ಫೈನಲ್‌ಗೆ ಆಸ್ಟ್ರೇಲಿಯಾ
2007	ಆಸ್ಟ್ರೇಲಿಯಾಕ್ಕೆ 7 ವಿಕೆಟ್‌ಗಳ ಜಯ
2015	ನ್ಯೂಜಿಲೆಂಡ್‌ಗೆ 4 ವಿಕೆಟ್‌ಗಳ ಗೆಲುವು

ಆಸ್ಟ್ರೇಲಿಯಾ ಸಾಧನೆ (ವಿಶ್ವಕಪ್)

ವರ್ಷ	ಫಲಿತಾಂಶ
1975	ರನ್ನರ್ಸ್ ಅಪ್
1979	ಗುಂಪು ಹಂತ
1983	ಗುಂಪು ಹಂತ
1987	ಚಾಂಪಿಯನ್
1992	ಗುಂಪು ಹಂತ
1996	ರನ್ನರ್ಸ್ ಅಪ್
1999	ಚಾಂಪಿಯನ್
2003	ಚಾಂಪಿಯನ್
2007	ಚಾಂಪಿಯನ್
2011	ಕ್ವಾರ್ಟರ್‌ಫೈನಲ್
2015	ಚಾಂಪಿಯನ್
2019	ಸೆಮಿಫೈನಲ್
2023*	ಸೆಮಿಫೈನಲ್

ತಂಡಗಳು

ದಕ್ಷಿಣ ಆಫ್ರಿಕಾ: ತೆಂಬಾ ಬವುಮಾ (ನಾಯಕ), ಜೆರಾಲ್ಡ್ ಕೋಜಿ, ಕ್ವಿಂಟನ್ ಡಿ ಕಾಕ್ (ವಿಕೆಟ್‌ಕೀಪರ್), ರೀಜಾ ಹೆನ್ರಿಕ್ಸ್, ಮಾರ್ಕೊ ಯಾನ್ಸನ್, ಹೆನ್ರಿಚ್ ಕ್ಲಾಸನ್ (ವಿಕೆಟ್‌ಕೀಪರ್), ಆ್ಯಂಡಿಲೆ ಪಿಶುವಾಯೊ, ಕೇಶವ್ ಮಹಾರಾಜ್, ಏಡನ್ ಮರ್ಕರಂ, ಡೇವಿಡ್ ಮಿಲ್ಲರ್, ಲುಂಗಿ ಗಿಡಿ, ಕಗಿಸೊ ರಬಾಡ, ತಬ್ರೇಜ್ ಶಮ್ಸಿ, ರಸಿ ವ್ಯಾನ್ ಡೆರ್ ಡಸೆ, ಲಿಜಾದ್ ವಿಲಿಯಮ್ಸ್.

ಅಂಪೈರ್ಸ್‌: ರಿಚರ್ಡ್ ಕೆಟಲ್‌ಬರೋ, ನಿತಿನ್ ಮೆನನ್, ಕ್ರಿಸ್ ಗಫಾನಿ (ಮೂರನೇ ಅಂಪೈರ್), ಮೈಕೆಲ್ ಗಾಫ್ (ನಾಲ್ಕನೇ ಅಂಪೈರ್), ಜಾವಗಲ್ ಶ್ರೀನಾಥ್ (ಪಂದ್ಯ ರೆಫರಿ).

ಆಸ್ಟ್ರೇಲಿಯಾ: ಪ್ಯಾಟ್ ಕಮಿನ್ಸ್ (ನಾಯಕ), ಸ್ಟೀವ್ ಸ್ಮಿತ್, ಅಲೆಕ್ಸ್ ಕ್ಯಾರಿ (ವಿಕೆಟ್ ಕೀಪರ್), ಜೋಶ್ ಇಂಗ್ಲಿಷ್ (ವಿಕೆಟ್‌ಕೀಪರ್), ಸೀನ್ ಅಬಾಟ್, ಆ್ಯಷ್ಟನ್ ಆಗರ್, ಕ್ಯಾಮರಾನ್ ಗ್ರೀನ್ , ಜೋಶ್ ಹ್ಯಾಜಲ್‌ವುಡ್, ಟ್ರಾವಿಸ್ ಹೆಡ್, ಮಿಚೆಲ್ ಮಾರ್ಷ್, ಗ್ಲೆನ್ ಮ್ಯಾಕ್ಸ್‌ವೆಲ್, ಮಾರ್ಕಸ್ ಸ್ಟೋಯಿನಿಸ್, ಡೇವಿಡ್ ವಾರ್ನರ್, ಆ್ಯಡಂ ಜಂಪಾ, ಮಿಚೆಲ್ ಸ್ಟಾರ್ಕ್.

ಪಂದ್ಯ ಆರಂಭ: ಮಧ್ಯಾಹ್ನ 2
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್

ಜಪಾನ್ ಓಪನ್: ಪ್ರಣಯ್ ಮುನ್ನಡೆ

ಕುಮಾಮೊಟೊ, ಜಪಾನ್ (ಪಿಟಿಐ): ಭಾರತದ ಬ್ಯಾಡ್ಮಿಂಟನ್‌ಪಟು ಎಚ್‌. ಎಸ್. ಪ್ರಣಯ್ ಬುಧವಾರ ಜಪಾನ್ ಮಾಸ್ಟರ್ಸ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಎರಡನೇ ಸುತ್ತಿಗೆ ಮುನ್ನಡೆದಿದ್ದಾರೆ. ಆದರೆ, ಲಕ್ಷ್ಮ ಸೇನ್ ಮತ್ತು ಪ್ರಿಯಾಂಶು ರಾಜಾವತ್ ಅವರು ಆರಂಭಿಕ ಸುತ್ತಿನಲ್ಲೇ ನಿರ್ಗಮಿಸಿದರು.

ಏಷ್ಯನ್ ಕ್ರೀಡಾಕೂಟದ ಕಂಚಿನ ಪದಕದ ಹಾದಿಯಲ್ಲಿ ಬೆನ್ನುನೋವಿಗೆ ಒಳಗಾಗಿದ್ದ 31 ವರ್ಷದ ಪ್ರಣಯ್ ನಂತರ ವಿಶ್ರಾಂತಿ ಪಡೆದಿದ್ದರು. ಹೀಗಾಗಿ, ಕಳೆದ ತಿಂಗಳು ನಡೆದ ಡೆನ್ಮಾರ್ಕ್ ಓಪನ್ ಮತ್ತು ಫ್ರಾನ್ಸ್ ಓಪನ್ ಟೂರ್ನಿಯಿಂದ ಹಿಂದೆ ಸರಿದಿದ್ದರು.

ಬೆನ್ನುನೋವಿನಿಂದ ಚೇತರಿಸಿಕೊಂಡ ಬಳಿಕ ಮತ್ತೆ ಕಣಕ್ಕೆ ಇಳಿದ ಅವರು 22-20, 19-21, 21-17ರಿಂದ ಹಾಂಗ್‌ಕಾಂಗ್‌ನ ಲೀ ಚೆಯುಕ್ ಯಿಯು ಅವರನ್ನು ಮಣಿಸಿದರು.

64 ನಿಮಿಷಗಳ ಮ್ಯಾರಥಾನ್‌ನಲ್ಲಿ ಪ್ರಬಲ ಸ್ಪರ್ಧೆಯ ನಡುವೆ ಮೊದಲ ಗೇಮ್‌ನಲ್ಲಿ ಮೇಲುಗೈ ಸಾಧಿಸಿದ ಪ್ರಣಯ್, ಎರಡನೇ ಗೇಮ್‌ನಲ್ಲಿ ಮುಗ್ಗರಿಸಿದರು. ಆದರೆ, ನಿರ್ಣಾಯಕ ಗೇಮ್‌ನಲ್ಲಿ ಮತ್ತೆ ಪುಟಿದೆದ್ದು ಜಯ ಸಾಧಿಸಿದರು.

ಪ್ರಸಕ್ತ ವರ್ಷದ ಕೆನಡಾ ಓಪನ್ ಚಾಂಪಿಯನ್ ಆಗಿದ್ದ ಲಕ್ಷ್ಯಸೇನ್ ಇಲ್ಲಿ ನಿರಾಸೆ ಅನುಭವಿಸಿದರು. ಅವರು 17-21, 10-21ರಿಂದ ಜಪಾನ್‌ನ ಕೊಡೈ ನಾರೋಕಾ ಅವರಿಗೆ ಶರಣಾದರು. ಪ್ರಿಯಾಂಶು ಅವರು 15-21 12-21ರಿಂದ ಚೈನಾ ತೈಪೆಯ ಲಿನ್ ಚುನ್-ಯಿ ಅವರ ವಿರುದ್ಧ ಪರಾಭವಗೊಂಡರು.

ಪುರುಷರ ಡಬಲ್ಸ್‌ನ ವಿಶ್ವದ ಐದನೇ ರ‍್ಯಾಂಕ್‌ನ ಸಾತ್ವಿಕ್‌ಸಾಯಿ ರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿಯು ಮಂಗಳವಾರ ಆರಂಭಿಕ ಸುತ್ತಿನಲ್ಲೇ ನಿರ್ಗಮಿಸಿತು. ಅವರು 21-16, 18-21, 16-21ರಿಂದ 21ನೇ ಕ್ರಮಾಂಕದ ಲು ಚಿಂಗ್ ಯಾವೋ ಮತ್ತು ಯಾಂಗ್ ಪೊ ಹಾನ್ (ಚೀನಾ ತೈಪೆ) ಅವರಿಗೆ ಶರಣಾದರು.

ಫುಟ್‌ಬಾಲ್: ಅರ್ಹತಾ ಸುತ್ತಿನ ಪಂದ್ಯ ಭಾರತಕ್ಕೆ ಇಂದು ಕುವೈತ್ ಎದುರಾಳಿ

ಕುವೈತ್ ಸಿಟಿ: ಭಾರತ ತಂಡದವರು 2026ನೇ ಫೀಫಾ ವಿಶ್ವಕಪ್ ಕ್ವಾಲಿಫೈಯರ್ಸ್ ಎರಡನೇ ಸುತ್ತಿನ 'ಎ' ಗುಂಪಿನ ಪಂದ್ಯದಲ್ಲಿ ಪ್ರಬಲ ಕುವೈತ್ ತಂಡವನ್ನು ಗುರುವಾರ ಎದುರಿಸಲಿದೆ. ಜಬೇರ್ ಅಲ್ ಅಹ್ಮದ್ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಈ ಪಂದ್ಯ ನಡೆಯಲಿದೆ.

ಭಾರತ, ಕುವೈತ್ ಜೊತೆ ಕತಾರ್ ಮತ್ತು ಅಫ್ಗಾನಿಸ್ತಾನ ತಂಡಗಳು 'ಎ' ಗುಂಪಿನಲ್ಲಿವೆ. ಗುಂಪಿನಲ್ಲಿ ಮೊದಲ ಎರಡು ಸ್ಥಾನ ಪಡೆಯುವ ತಂಡಗಳು ಮೂರನೇ ಕ್ವಾಲಿಫೈಯಿಂಗ್ ಸುತ್ತಿಗೆ ಮುನ್ನಡೆಯಲಿವೆ. ಜೊತೆಗೆ ಎಎಫ್‌ಸಿ ಏಷ್ಯನ್ ಕಪ್ ಟೂರ್ನಿಗೆ ನೇರ ಪ್ರವೇಶ ಪಡೆಯಲಿವೆ.

ಕಳೆದ ಜೂನ್ ಮತ್ತು ಜುಲೈ ತಿಂಗಳಲ್ಲಿ ಇಂಟರ್‌ಕಾಂಟಿನೆಂಟಲ್ ಕಪ್ ಮತ್ತು ಸ್ಯಾಫ್ ಚಾಂಪಿಯನ್‌ಷಿಪ್‌ನಲ್ಲಿ ತೋರಿದ್ದ ಉತ್ತಮ ಪ್ರದರ್ಶನವನ್ನು ಭಾರತ ನಂತರದ ದಿನಗಳಲ್ಲಿ ಮುಂದುವರಿಸಲು ಆಗಿಲ್ಲ. ಇಗೊರ್ ಸ್ಟಿಮಾಚ್ ತರಬೇತಿಯ ತಂಡ ಆರು ಪಂದ್ಯಗಳಲ್ಲಿ ಗೆಲುವನ್ನು ಕಾಣಲು ವಿಫಲವಾಗಿದೆ.

ವಿಶ್ವಕಪ್ ಅರ್ಹತಾ ಟೂರ್ನಿಯ ಎರಡನೇ ಸುತ್ತಿನಲ್ಲಿ 36 ತಂಡಗಳು ಕಣದಲ್ಲಿದ್ದು 9 ಗುಂಪುಗಳಲ್ಲಿವೆ. ತಂಡಗಳು ರೌಂಡ್‌ರಾಬಿನ್ ಮಾದರಿಯಲ್ಲಿ ತವರಿನಲ್ಲಿ ಮತ್ತು ಹೊರಗೆ ಪಂದ್ಯಗಳನ್ನು ಆಡಬೇಕಾಗುತ್ತದೆ.



ಪಾಕ್ ತಂಡದ ನಾಯಕ ಬಾಬರ್ ರಾಜೀನಾಮೆ



ಲಾಹೋರ್ (ಎಎಫ್‌ಪಿ): ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ತಂಡದ ಕಳಪೆ ಪ್ರದರ್ಶನದ ಹಿನ್ನೆಲೆಯಲ್ಲಿ ಪಾಕಿಸ್ತಾನ ಕ್ರಿಕೆಟ್ ತಂಡದ ಮೂರೂ ಮಾದರಿಯ ನಾಯಕ ಸ್ಥಾನಕ್ಕೆ ಬಾಬರ್ ಆಜಂ ರಾಜೀನಾಮೆ ನೀಡಿದ್ದಾರೆ. ಆದರೆ ತಂಡದಲ್ಲಿ ಆಟಗಾರನಾಗಿ ಮುಂದುವರಿಯುವುದಾಗಿ ಅವರು ಬುಧವಾರ ತಿಳಿಸಿದ್ದಾರೆ.

'ಪಾಕಿಸ್ತಾನ ಕ್ರಿಕೆಟ್ ತಂಡದ ಮೂರೂ ಮಾದರಿಯ ನಾಯಕ ಸ್ಥಾನಕ್ಕೆ ಇಂದು ರಾಜೀನಾಮೆ ಸಲ್ಲಿಸುತ್ತಿದ್ದೇನೆ. ಇದು ಕಠಿಣ ನಿರ್ಧಾರ. ಆದರೆ ಈ ನಿರ್ಧಾರ ತೆಗೆದುಕೊಳ್ಳಲು ಇದು ಸಕಾಲ' ಎಂದು ಅವರು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಬರೆದಿದ್ದಾರೆ. ಪಾಕಿಸ್ತಾನ ತಂಡ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಐದನೇ ಸ್ಥಾನ ಪಡೆದಿತ್ತು. 9 ಪಂದ್ಯಗಳಲ್ಲಿ ಐದರಲ್ಲಿ ಸೋತಿತ್ತು. ಅಫ್ಗಾನಿಸ್ತಾನ ಎದುರೂ ಸೋತಿದ್ದರಿಂದ ಬಾಬರ್ ನಾಯಕತ್ವ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ಒತ್ತಾಯಗಳು ಕೇಳಿಬಂದಿದ್ದವು.

'ಎಲ್ಲ ಮೂರೂ ಮಾದರಿಗಳಲ್ಲಿ ಆಟಗಾರನಾಗಿ ಮುಂದುವರಿಯುತ್ತೇನೆ. ಹೊಸ ನಾಯಕನಿಗೆ ಮತ್ತು ತಂಡಕ್ಕೆ ನನ್ನ ಅನುಭವ ಬಳಸಿ ಎಲ್ಲ ರೀತಿಯ ಬೆಂಬಲ ನೀಡುತ್ತೇನೆ. ನನ್ನ ಮೇಲೆ ನಂಬಿಕೆಯಿಟ್ಟು ಹೊಣೆ-ವಹಿಸಿದ್ದಕ್ಕೆ ಪಾಕಿಸ್ತಾನ ಕ್ರಿಕೆಟ್ ಮಂಡಳಿಗೆ ಕೃತಜ್ಞತೆ ಸಲ್ಲಿಸುತ್ತೇನೆ' ಎಂದು ಬಾಬರ್ ಬರೆದಿದ್ದಾರೆ.

ಬಾಬರ್ ನಾಯಕತ್ವದಲ್ಲಿ ಪಾಕ್ ತಂಡ ಏಕದಿನ ಮಾದರಿಯಲ್ಲಿ ಅಗ್ರಸ್ಥಾನಕ್ಕೇರಿತ್ತು. ಅವರೂ ಬ್ಯಾಟರ್‌ಗಳ ಪಟ್ಟಿಯಲ್ಲಿ ಮೊದಲ ಸ್ಥಾನಕ್ಕೇರಿದ್ದರು.

ಫುಟ್‌ಬಾಲ್ ಅಕಾಡೆಮಿಗೆ 21ರಂದು ಚಾಲನೆ

ನವದೆಹಲಿ (ಪಿಟಿಐ): ಪ್ರತಿಭೆ ಗಳನ್ನು ಪ್ರೋತ್ಸಾಹಿಸುವ ಭಾಗವಾಗಿ ಆರಂಭಿಸಲಾಗುತ್ತಿರುವ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್– ವಿಶ್ವ ಫುಟ್‌ಬಾಲ್ ಸಂಸ್ಥೆ (ಫೀಫಾ) ಅಕಾಡೆಮಿಯನ್ನು ಇದೇ 21ರಂದು ಭುವನೇಶ್ವರದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಖ್ಯಾತ ಫುಟ್‌ಬಾಲ್ ತರಬೇತುದಾರ ಆರ್ಸೇನ್ ವೆಂಗರ್ ಅವರು ಉದ್ಘಾಟಿಸುವರು.

ಫೀಫಾದ ಫುಟ್‌ಬಾಲ್ ಅಭಿವೃದ್ಧಿ ಯೋಜನೆಯ ಮುಖ್ಯಸ್ಥರಾಗಿರುವ ವೆಂಗರ್ ಅವರು ನವೆಂಬರ್ 19 ರಿಂದ 23ರವರೆಗೆ ಭಾರತದಲ್ಲಿ ಇರಲಿದ್ದು, ಐಎಸ್‌ಎಲ್, ಐ ಲೀಗ್ ಕ್ಲಬ್‌ಗಳ ಜೊತೆ ದೇಶದಲ್ಲಿ ಫುಟ್‌ಬಾಲ್ ಅಭಿವೃದ್ಧಿಯಲ್ಲಿ ನಿರತರಾಗಿರುವ ಅಕಾಡೆಮಿಗಳನ್ನು ಭೇಟಿಯಾಗಲಿದ್ದಾರೆ ಎಂದು ಎಐಎಫ್‌ಎಫ್ ಅಧ್ಯಕ್ಷ ಕಲ್ಯಾಣ್ ಚೌಬೆ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ವೆಂಗರ್ ಅವರು 1996ರಿಂದ 2018ರವರೆಗೆ ಅರ್ಸೆನಲ್ ತಂಡದ ಮ್ಯಾನೇಜರ್ ಆಗಿದ್ದರು. ಈ ಅವಧಿಯಲ್ಲಿ ಕ್ಲಬ್ ಮೂರು ಸಲ ಪ್ರೀಮಿಯರ್ ಲೀಗ್ ಪ್ರಶಸ್ತಿಗಳ ಜೊತೆ ಏಳು ಸಲ ಎಫ್‌ಎ ಕಪ್ ಪ್ರಶಸ್ತಿಗಳನ್ನು ಗೆದ್ದುಕೊಂಡಿತ್ತು. 49 ಪಂದ್ಯಗಳಲ್ಲಿ ಆ ತಂಡ ಅಜೇಯವಾಗಿ ಉಳಿದಿತ್ತು.

ಕೊಡಗು ತಂಡಕ್ಕೆ ಸುಲಭ ಗೆಲುವು

ಬೆಂಗಳೂರು: ಶ್ಲೋಕ್ ತಿವಾರಿ (5 ಗೋಲು) ಮತ್ತು ಹೈವಾನ್ಬಾ ದಖರ್ (3 ಗೋಲು) ಅವರ ಆಟದ ನೆರವಿನಿಂದ ಕೊಡಗು ಎಫ್‌ಸಿ ತಂಡವು ಬುಧವಾರ ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್‌ನ ಪಂದ್ಯದಲ್ಲಿ 9–0 ಯಿಂದ ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ ತಂಡವನ್ನು ಸುಲಭವಾಗಿ ಮಣಿಸಿತು.

ಮತ್ತೊಂದು ಪಂದ್ಯದಲ್ಲಿ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು 5–0ಯಿಂದ ಯಂಗ್ ಚಾಲೆಂಜರ್ಸ್ ಎಫ್‌ಸಿ ತಂಡವನ್ನು ಸೋಲಿಸಿತು.





1210.2023